ಹುಬ್ಬಳ್ಳಿ
ಮಂಗಳವಾರ, 28 ಏಪ್ರಿಲ್ 2026
ಸಂಪುಟ 16, ಸಂಚಿಕೆ 34, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಶಾರಿಕ್‌ಗೆ 10 ವರ್ಷ ಕಠಿಣ ಶಿಕ್ಷೆ | 02 · ಅತಿ ಎತ್ತರದ ಬುದ್ಧನ ಪ್ರತಿಮೆ | 02 · ಭಾರತೀಯ ಸಂಸ್ಕೃತಿ-ಸಿದ್ಧಾಂತಗಳ ಮೌಲ್ಯ ಕಲಿಸಿ | 02

ಬೆಂಗಳೂರಿನ ಇಂದಿನ ಸಭೆಗೆ ಆಕ್ರೋಶ | ಆಯುಕ್ತರಿಗೆ ಮನವಿ

ಉಮರ್ ಖಾಲಿದ್ ಬೆಂಬಲಕ್ಕೆ ವಿರೋಧ

ಬೆಂಗಳೂರು: ದಿಲ್ಲಿ ಗಲಭೆಗೆ ಸಂಚು ರೂಪಿಸಿದ ಆರೋಪದಲ್ಲಿ ತಿಹಾರ್ ಜೈಲಿನಲ್ಲಿರುವ ಜೆಎನ್‌ಯು ಮಾಜಿ ವಿದ್ಯಾರ್ಥಿ ಉಮರ್ ಖಾಲಿದ್ ಹೆಸರಿನಲ್ಲಿ ನಡೆಯುತ್ತಿರುವ ಕಾರ್ಯಕ್ರಮಕ್ಕೆ ಯಾವುದೇ ಕಾರಣಕ್ಕೂ ಅನುಮತಿ ನೀಡಬಾರದು ಎಂದು ಬಿಜೆಪಿ ಒತ್ತಾಯಿಸಿದೆ.

ದೊಮ್ಮಲೂರಿನ ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್ (ಬಿಐಸಿ)ನಲ್ಲಿ ಮಂಗಳವಾರ (ಏ.28) ನಿಗದಿಯಾಗಿರುವ ಉಮರ್ ಖಾಲಿದ್ ಆ್ಯಂಡ್ ಹಿಸ್ ವರ್ಲ್ಡ್ ಪುಸ್ತಕದ ಸಂವಾದಕ್ಕೆ ಅನುಮತಿ



ನೀಡಬಾರದು ಎಂದು ಬಿಜೆಪಿ ಆಗ್ರಹಿಸಿದೆ. ಪೌರತ್ವ ತಿದ್ದುಪಡಿ ವಿಚಾರದಲ್ಲಿ ನಡೆದ ಪ್ರತಿಭಟನೆ ಹಿಂಸಾರೂಪ ಪಡೆಯಲು ಕಾರಣನಾಗಿದ್ದ ಈ ವ್ಯಕ್ತಿಯ ಹೆಸರಿಲ್ಲಿ ನಡೆಯುತ್ತಿರುವ ಕಾರ್ಯಕ್ರಮಕ್ಕೆ ನೀಡಿರುವ ಅನುಮತಿ ವಾಪಸ್ ಪಡೆಯಬೇಕು ಎಂದು ಮನವಿ ಮಾಡಿದ್ದಾರೆ.

ಈ ಕಾರ್ಯಕ್ರಮಕ್ಕೆ ಅನುಮತಿ ನೀಡದಂತೆ ಸೋಮವಾರ ಬಿಜೆಪಿ ನಿಯೋಗ ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಅವರಿಗೆ ಮನವಿ ಮಾಡಿದೆ. ಜೆಎನ್‌ಯು ಮಾಜಿ ವಿದ್ಯಾರ್ಥಿ ನಾಯಕನಾಗಿದ್ದ ಉಮರ್ ಖಾಲಿದ್, 2020ರ ದೆಹಲಿ ದಂಗೆ ಪ್ರಕರಣದಲ್ಲಿ ಯುಎಪಿಎ ಕಾಯ್ದೆಯಲ್ಲಿ ತಿಹಾರ್ ಜೈಲಿನಲ್ಲಿದ್ದಾನೆ. ಈತನ ವಿರುದ್ಧ ಅನೇಕ ಗಂಭೀರ ಆರೋಪಗಳನ್ನು ಎದುರಿಸುತ್ತಿದ್ದಾನೆ ಎಂದು ಬಿಜೆಪಿ ದೂರಿದೆ. ಈ ಕಾರ್ಯಕ್ರಮವೂ ಏ.28ರ ಸಂಜೆ 6 ರಿಂದ 8ರ ತನಕ ನಡೆಯಲಿದೆ. ನಟ ಪ್ರಕಾಶ್‌ರಾಜ್, ಇತಿಹಾಸಕಾರ ರಾಮಚಂದ್ರ ಗುಹಾ, ಪ್ರೊ. ಜಾನಕಿ ನಾಯರ್ ಸೇರಿದಂತೆ ಹಲವು ಮುಖಂಡರು ಚರ್ಚೆ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ದಿಲ್ಲಿ ಗಲಭೆಗೆ ಸಂಬಂಧಿಸಿದಂತೆ ದೊಡ್ಡ ಮಟ್ಟದ ಸಂಚು ರೂಪಿಸಿದ ಆರೋಪ ಎದುರಿಸುತ್ತಿರುವ ಜೆಎನ್‌ಯು ಮಾಜಿ ವಿದ್ಯಾರ್ಥಿ ಉಮರ್ ಖಾಲಿದ್ ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿ ಯನ್ನು ದಿಲ್ಲಿ ನ್ಯಾಯಾಲಯವು ವಜಾಗೊಳಿಸಿತ್ತು. ಪ್ರಕರಣವೊಂದರಲ್ಲಿ ನ್ಯಾಯಾಲಯವು ಈ ಹಿಂದೆ ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಉಮರ್ ಖಾಲಿದ್ ಅವರು ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ಹೆಚ್ಚುವರಿ ಸೆಷನ್ಸ್ ಜಡ್ಜ್, ಅರ್ಜಿಯಲ್ಲಿ ಯಾವುದೇ ಬಲವಾದ ಆಧಾರಗಳಿಲ್ಲ ಎಂದು ತಿರಸ್ಕರಿಸಿದ್ದಾರೆ.



ಪ್ರತಿಭಟನೆ ಎಚ್ಚರಿಕೆ: ಪಿ.ಸಿ. ಮೋಹನ್

ಉಮರ್ ಖಾಲಿದ್ ಆ್ಯಂಡ್ ಹಿಸ್ ವರ್ಲ್ಡ್ ಪುಸ್ತಕ ಕುರಿತ ಕಾರ್ಯಕ್ರಮಕ್ಕೆ ಅನುಮತಿ ಕೊಟ್ಟರೆ ಬೃಹತ್ ಪ್ರತಿಭಟನೆ ಮಾಡುತ್ತೇವೆ ಎಂದು ಕೇಂದ್ರ ಬಿಜೆಪಿ ಸಂಸದ ಪಿ.ಸಿ. ಮೋಹನ್ ತಿಳಿಸಿದ್ದಾರೆ. ಉಮರ್ 2020ರ ದಿಲ್ಲಿ ದಂಗೆಯ ಪ್ರಮುಖ ಆರೋಪಿ. ಇಂದಿನವರೆಗೂ ಉಮರ್‌ಗೆ ನ್ಯಾಯಾಲಯ ಜಾಮೀನು ಕೊಟ್ಟಿಲ್ಲ. ಆತ ದೇಶದ್ರೋಹಿ ಆಗಿದ್ದು ಅವನ ಕುರಿತಾದ ಪುಸ್ತಕ ಬಿಡುಗಡೆ ಮಾಡ್ತಿದ್ದಾರೆ. ಶಾಂತಿಯುತ ಸ್ಥಳವಾಗಿರುವ ಬೆಂಗಳೂರಿನಲ್ಲಿ ಇದಕ್ಕೆ ಅವಕಾಶ ಕೊಡಬಾರದು. ಬೇರೆ ಯಾವ ರಾಜ್ಯದಲ್ಲೂ ಈ ಕಾರ್ಯಕ್ರಮಕ್ಕೆ ಅನುಮತಿ ನೀಡಲ್ಲ. ಇಲ್ಲಿ ಕಾಂಗ್ರೆಸ್ ಸರ್ಕಾರ ಇರುವುದರಿಂದ ಅನುಮತಿ ಸಿಕ್ಕಿದೆ. ಪರೋಕ್ಷವಾಗಿ ಕಾಂಗ್ರೆಸ್ ಬೆಂಬಲದಿಂದಲೇ ಈ ಕಾರ್ಯಕ್ರಮ ನಡೆಯುತ್ತಿದೆ. ಹೀಗಾಗಿ ಅನುಮತಿ ಕೊಟ್ಟರೆ ನಾವು ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

ಪ್ರಮುಖ ಆರೋಪ

ಪೌರತ್ವ ತಿದ್ದುಪಡಿ ಕಾಯ್ದೆ ಮತ್ತು ರಾಷ್ಟ್ರೀಯ ನಾಗರಿಕ ನೋಂದಣಿ ವಿರುದ್ಧದ ಪ್ರತಿಭಟನೆಗಳ ಸಂದರ್ಭದಲ್ಲಿ ದಿಲ್ಲಿಯಲ್ಲಿ ಹಿಂಸಾಚಾರಕ್ಕೆ ಸಂಚು ರೂಪಿಸಿದ ಆರೋಪ ಉಮರ್ ಖಾಲಿದ್ ಮೇಲಿದೆ. ಸೆಪ್ಟೆಂಬರ್ 2020 ರಿಂದ ಉಮರ್ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಭಾರತ-ಕಿವೀಸ್ ಮುಕ್ತ ಒಪ್ಪಂದ



ಹೊಸದಿಲ್ಲಿ: ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಬಹುಕಾಲದಿಂದ ನಿರೀಕ್ಷಿತ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಸೋಮವಾರ ಅಧಿಕೃತವಾಗಿ ಸಹಿ ಹಾಕಲಾಗಿದ್ದು, ಎರಡೂ ದೇಶಗಳ ಆರ್ಥಿಕ ಸಂಬಂಧಗಳಲ್ಲಿ ಹೊಸ ಅಧ್ಯಾಯ ಆರಂಭವಾಗಿದೆ.

ವಿವರ ಪುಟ 2

ಕಿರುಸುದ್ದಿ

ವಿಮಾನ-ರೈಲ್ವೆ ನಿಲ್ದಾಣ ನಡುವೆ ಬಸ್ ವ್ಯವಸ್ಥೆ

ಹುಬ್ಬಳ್ಳಿ: ಪ್ರಯಾಣಿಕ ಬೇಡಿಕೆ ಹಾಗೂ ಅನುಕೂಲತೆ ಸಲುವಾಗಿ ವಿಮಾನ ನಿಲ್ದಾಣದಿಂದ ರೈಲ್ವೆ ನಿಲ್ದಾಣದ ನಡುವೆ ಸಾರಿಗೆ ಬಸ್ ಸೌಲಭ್ಯ ಏ.28ರಿಂದ ಆರಂಭಿಸಲಾಗುತ್ತಿದ್ದು, ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗ್ ಎಂ. ಚಾಲನೆ ನೀಡಲಿದ್ದಾರೆ. ವಿಮಾನಗಳ ಆಗಮನದ ವೇಳೆಗೆ ಅನುಗುಣವಾಗಿ ಕಾರ್ಯಾಚರಣೆಗೊಳಿಸಲಾಗುತ್ತಿದ್ದು, ಪ್ರತಿದಿನ ಬೆಳಗ್ಗೆ 8.5ಕ್ಕೆ, 11.45, ಸಂಜೆ 5.5, 6.35, ಹಾಗೂ ರಾತ್ರಿ 7.10, 8.5 ಮತ್ತು 8. 50 ಗಂಟೆಗೆ ಬಸ್ ಸಂಚಾರ ಇರಲಿದೆ. ನಗರ ಸಾರಿಗೆ ಸಂಪರ್ಕ ಇನ್ನಷ್ಟು ಬಲಪಡಿಸುವ ಉದ್ದೇಶ ಹೊಂದಲಾಗಿದೆ. ಪ್ರಾಯೋಗಿಕವಾಗಿ ಆರಂಭಗೊಳ್ಳುತ್ತಿದ್ದು, ನಗರ ಸಾರಿಗೆ ವಿಭಾಗೀಯ ನಿಯಂತ್ರಣಾಧಿಕಾರಿಗಳಾದ ಎಂ.ಸಿದ್ದಲಿಂಗೇಶ, ವಿಭಾಗೀಯ ಸಾರಿಗೆ ಅಧಿಕಾರಿ ಎಸ್.ಆರ್.ಮಾಟೋಳಿ, ವಿಭಾಗೀಯ ತಾಂತ್ರಿಕ ಶಿಲ್ಪಿ ಪ್ರವೀಣ ಈಡೂರ ಹಾಗೂ ಹುಬ್ಬಳ್ಳಿ ನಗರ ಸಾರಿಗೆ ಘಟಕ ವ್ಯವಸ್ಥಾಪ ವಿನಾಯಕ ಸಾಲಿಮಠ ಸಂಸ್ಥೆ ಅಧಿಕಾರಿಗಳು ಉಪಸ್ಥಿತರಿರುವರು ಎಂದು ಪ್ರಕಟಣೆಗೆ ತಿಳಿಸಿದ್ದಾರೆ.

ದ್ಯಾಮವ್ವದೇವಿ, ದುರ್ಗಾದೇವಿ ಜಾತ್ರಾಮಹೋತ್ಸವ

ಹುಬ್ಬಳ್ಳಿ: ಇಲ್ಲಿನ ಉಣಕಲ್ ಗ್ರಾಮದಲ್ಲಿನ ಗ್ರಾಮ ದೇವತೆಯರ ಜಾತ್ರೆ ಈಗಾಗಲೇ ಆರಂಭವಾಗಿದ್ದು, ಮೇ 1ರವರೆಗೆ ನಡೆಯಲಿದೆ ಎಂದು ದ್ಯಾಮವ್ವದೇವಿ ಹಾಗೂ ದುರ್ಗಾದೇವಿ ದೇವಸ್ಥಾನ ಟ್ರಸ್ಟ್ ಕಮಿಟಿ ಗಂಗಾಧರ ದೊಡವಾಡ ಹೇಳಿದರು.

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕಳೆದ 10 ವರ್ಷದ ಬಳಿಕ ಜಾತ್ರೆ ನಡೆಯುತ್ತಿದೆ. ದ್ಯಾಮವ್ವ ದೇವಸ್ಥಾನ ಸುಮಾರು 75ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ಗೋಪುರ ಸಹಿತ ನಿರ್ಮಿಸಲಾಗಿದೆ. ಉಭಯ ದೇವತೆಯರ ನೂತನ ಮೂರ್ತಿ ತಯಾರಿಸಲಾಗಿದೆ ಎಂದರು.

ಏ.28 ಮತ್ತು 29ರಂದು ಚೌಕಿ ಮನೆಯಲ್ಲಿ ಗ್ರಾಮದೇವತೆಯರ ನಿರಂತರ ಪೂಜೆ ಜರುಗುವುದು. ಏ.30ರಂದು ಡಂಬಳದ ವೇದಮೂರ್ತಿ ಗುರುಶಾಂತಯ್ಯ ಹಿರೇಮಠ ಶಾಸ್ತ್ರೀಗಳು ನೂತನ ದೇವಸ್ಥಾನದಲ್ಲಿ ವಾಸ್ತುಶಾಂತಿ, ಹೋಮ-ಹವನ, ಪೂಜಾ ಕಾರ್ಯಕ್ರಮ ನಡೆಯಲಿವೆ. ಅಂದು ಹೊನ್ನಾಟ (ಭಂಡಾರದ) ಮೆರವಣಿಗೆ ಮೂಲಕ ದೇವಿ ಮೂರ್ತಿ ಚೌಕಿ ಮನೆಯಿಂದ ದೇವಸ್ಥಾನಕ್ಕೆ ಕತ್ತಲಿನಲ್ಲಿ ಕರೆತರಲಾಗುವುದು ಎಂದರು.ಮೇ 1ರಂದು ಸುಳ್ಳದ ಪಂಚಗ್ರಹ ಹಿರೇಮಠದ ಶಿವ ಸಿದ್ಧರಾಮ ಶಿವಯೋಗಿ ಶಿವಾಚಾರ್ಯ ಶ್ರೀಗಳು ಗ್ರಾಮ ದೇವತೆಯರ ಪ್ರಾಣ ಪ್ರತಿಷ್ಠಾಪನೆ ಗ್ರಾಮದ ಗುರು ಹಿರಿಯರ ಸಮ್ಮುಖದಲ್ಲಿ ನೆರವೇರಿಸಲಿದ್ದಾರೆ. ಅಂದು ಉಡಿ ತುಂಬುವ ಕಾರ್ಯಕ್ರಮ ನಡೆಯಲಿದ್ದು, ಪ್ರತಿದಿನ ಮಧ್ಯಾಹ್ನ 1ಕ್ಕೆ ಮಹಾಪ್ರಸಾದ ನಡೆಯಲಿದೆ. ವೇದಮೂರ್ತಿ ಗುರುಸಿದ್ದಯ್ಯ ಹಿರೇಮಠ, ಗುರುಸ್ವಾಮಿ ಹಿರೇಮಠ ಉಪಸ್ಥಿತಿ ಇರುವರು ಎಂದು ತಿಳಿಸಿದರು.

ಏ.28 ಮತ್ತು 29 ರಂದು ದೇವಸ್ಥಾನದ ಬಯಲಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಭಕ್ತಿ ಹಾಡು, ನೃತ್ಯ, ಲಾವಣಿ ಪದ ಮುಂತಾದ ಜಾನಪದ ಮೇಳಗಳಿಂದ ಮನರಂಜನೆ ನಡೆಯಲಿದೆ ಎಂದರು.

ಟ್ರಸ್ಟ್ ಕಮಿಟಿ ಚೇರಮನ್ ಪರಪ್ಪ ಮೆಣಸಿನಕಾಯಿ, ಗುರುನಾಥ ಸೂರ್ಯವಂಶಿ, ಹನುಮಂತಪ್ಪ ಸೂರ್ಯವಂಶಿ, ಕಿರಣ ಹದ್ದಿ, ಬಸವರಾಜ ಹದ್ದಿ, ರಾಘವೇಂದ್ರ ಎಂ., ರಾಜಣ್ಣ ಇದ್ದರು.

ಮಹಿಳಾ ಮೀಸಲಾತಿ ಜಾರಿಗೆ ಆಗ್ರಹ

ಧಾರವಾಡ: ಮಹಿಳಾ ಮೀಸಲಾತಿ ಕಾಯ್ದೆ ತಕ್ಷಣ ಜಾರಿಗೆ ತರುವಂತೆ ಒತ್ತಾಯಿಸಿ ಹುಬ್ಬಳ್ಳಿ-ಧಾರವಾಡ ಮಹಾನಗರ ಜಿಲ್ಲಾ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ನಗರದ ಜಿಲ್ಲಾಧಿಕಾರಿ ಕಚೇರಿ ಎದುರಿಗೆ ಸೋಮವಾರ ಪ್ರತಿಭಟನೆ ನಡೆಸಿದರು.

ಸುಮಾರು ಒಂದು ಗಂಟೆಗೂ ಅಧಿಕ ಹೊತ್ತು ಪ್ರತಿಭಟಿಸಿದ ಕಾರ್ಯಕರ್ತರು, ಕೇಂದ್ರ ಸರ್ಕಾರ ಕ್ಷೇತ್ರ ವಿಂಗಡನೆ ನೆಪವೊಡ್ಡದೆ, ತತಕ್ಷಣವೇ ಮಹಿಳಾ ಮೀಸಲು ಕಾಯ್ದೆ ಜಾರಿಗೆ ತರಬೇಕು ಎಂದು ಘೋಷಣೆ ಕೂಗಿದರು.

ಶೇ.33ರಷ್ಟು ಮಹಿಳಾ ಮೀಸಲಾತಿ ಕಾಯ್ದೆಯನ್ನು ಜಾರಿಗೆ ತರಲು ಮೀನಮೇಷ ಎಣಿಸುತ್ತಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಮಹಿಳಾ ವಿರೋಧಿ ನೀತಿ ತೀವ್ರವಾಗಿ ಖಂಡಿಸಿದರು. ಮಹಿಳಾ ಮೀಸಲಾತಿ ಹುಟ್ಟು ಹಾಕಿದ್ದು ಕಾಂಗ್ರೆಸ್ ಪಕ್ಷ. ಗ್ರಾಮದ ಪಂಚಾಯತ ನಲ್ಲಿ ಚುನಾವಣೆಯಲ್ಲಿ ಮಹಿಳೆಯರು ಅಧಿಕಾರ ನೀಡಿದ್ದು ಕಾಂಗ್ರೆಸ್. ಬಿಜೆಪಿ ಏನು ಮಾಡಿಲ್ಲ ಎಂದು ದೂರಿದರು. ಜಿಲ್ಲಾಧ್ಯಕ್ಷ ಗೌರಮ್ಮ ಬಲೋಗಿ, ಸ್ವತಂತ್ರ ದೇಶಕ್ಕೆ ಮೊದಲ ಮಹಿಳಾ ಪ್ರಧಾನಿ ಮಾಡಿದ್ದು ಕಾಂಗ್ರೆಸ್ ಪಕ್ಷ. ಕೇಂದ್ರ ಸರ್ಕಾರದ ದ್ವಂದ್ವ ನೀತಿಯಿಂದಾಗಿ ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆ ಸೋತಿದೆ ಎಂದರು.ಪ್ರತಿಭಟನೆಯಲ್ಲಿ ಸರಸ್ವತಿ ಬೆಂಗೇರಿ, ಮಾದೇವಿ ಬ್ಯಾಳಿ, ನೀಲಮ್ಮ ಹುಂಬಿ, ಸುಜಾತಾ ಹೆಬ್ಬಳ್ಳಿ, ಶಾರದಾ ನಿಗದಿ ಇದ್ದರು.



ಧಾರವಾಡ: ತಾಲೂಕು ಪಂಚಾಯತಿ ವ್ಯಾಪ್ತಿ ಒಂಭತ್ತು ದಿವ್ಯಾಂಗರಿಗೆ ಕಾರ್ಮಿಕ ಇಲಾಖೆ ಸಚಿವ ಸಂತೋಷ ಲಾಡ್ ಬ್ಯಾಟರಿ ಚಾಲಿತ ಮೋಟರ್ ಬೈಕ್ ವಿತರಣೆ ಮಾಡಿದರು. ಶಾಸಕ ಎನ್.ಎಚ್.ಕೋನರಡ್ಡಿ, ಜಿಲ್ಲಾಧಿಕಾರಿ ಸ್ನೇಹಲ್ ಆರ್, ತಾಪಂ ಆಡಳಿತ ಅಧಿಕಾರಿ ಮಲ್ಲಿಕಾರ್ಜುನ ತೊದಲಬಾಗಿ, ಇಒ ಗಂಗಾಧರ ಕಂದಕೂರ, ಇತರೆ ಮುಖಂಡರು ಇದ್ದರು.

ಗ್ರಾಮದೇವತೆ ದೇವಸ್ಥಾನ ಉದ್ಘಾಟನೆ

ನವಲಗುಂದ: ತಾಲೂಕಿನ ಕರ್ಲವಾಡ ಗ್ರಾಮದ ಗ್ರಾಮ ದೇವತೆ ದೇವಸ್ಥಾನ ಉದ್ಘಾಟನೆ ಹಾಗೂ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಡಾ.ಪ್ರಸನ್ನ ರೇಣುಕ ವೀರ ಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಭಗವತ್ಪಾದಂಗಳವರು, ಬಾಳೆಹೊನ್ನೂರು ಇವರ ಕೃಪಾಶೀರ್ವಾದ ಹಾಗೂ ದಿವ್ಯಸಾನಿಧ್ಯದಲ್ಲಿ ಕಾರ್ಯಕ್ರಮ ಜರುಗುವುದು.ಅಭಿನವ ಮೃತ್ಯುಂಜಯ ಶ್ರೀಗಳು, ದೇವಮಂದಿರ ಮಹಾಮಠ, ಮಣಕವಾಡ ಇವರಿಂದ ಪ್ರತಿನಿತ್ಯ ಸಂಜೆ 7ಕ್ಕೆ ಆಧ್ಯಾತ್ಮಿಕ ಪ್ರವಚನ ನಡೆಯುವುದು. ಏ.28ರಂದು ದೇವತೆ ಮೂರ್ತಿಗಳ ಹಾಗೂ ಉತ್ತದ ಮೂರ್ತಿಯ ಭವ್ಯ ಮೆರವಣಿಗೆ ಭಂಡಾರೋತ್ಸವ ಹಾಗೂ ಸುಮಂಗಲಿಯರಿಂದ ಕುಂಭಮೇಳ ಜರುದುವುದು. ಏ.29ರಂದು ಗ್ರಾಮದ ಪ್ರಮುಖ ಬೀದಿಗಳಲ್ಲಿ ದೇವತೆಗಳ ಮೆರವಣಿಗೆ ಹಾಗೂ ಭಂಡಾರೋತ್ಸವ ನಡೆಯುವುದು. ಏ.30ರಂದು ಗ್ರಾಮ ದೇವತೆಗಳ ಶಯನವಾಸ ಹಾಗೂ ಪುಷ್ಪಹಾಸ ನಂತರ ತತ್ವಪದ ಭಜನಾ ಕಾರ್ಯಕ್ರಮ ಜರುಗುವುದು. ಮೇ 1ರಂದು ಗ್ರಾಮ ದೇವತಾ ಮೂರ್ತಿಗಳ ಮಹಾರುದ್ರಾಭಿಷೇಕ, ದುರ್ಗಾ ಸೂಕ್ತ ಅಷ್ಟೋತ್ತರ ಪೂರ್ಣಾಹುತಿ, ವಿವಿಧ ಹೋಮಗಳು, ಪ್ರಾಣ ಪ್ರತಿಷ್ಠಾಪನೆ, ಶಿವಸಿದ್ಧರಾಮೇಶ್ವರ ಶಿವಾಚಾರ್ಯ ಶ್ರೀಗಳು ಪಂಚಗ್ರಹ ಹಿರೇಮಠ, ಸುಳ್ಳ ಹಾಗೂ ಹೂಲಿ ಅವರ ಅಮೃತ ಹಸ್ತದಿಂದ ಜರುಗುವುದು. ಉಡಿ ತುಂಬದ ಕಾರ್ಯಕ್ರಮ, ಅಪ್ಪಾಜಿ ಮೆಲೋಡಿಸ್ ಕುಡಗುಂಬ ತಂಡದಿಂದ ಆದ್ದೂರಿ ಸಂಗೀತ ಸುಧೆ ಕಾರ್ಯಕ್ರಮ ಜರುಗುವುದು. ಮೇ 2ಕ್ಕೆ ದೇವತೆಗಳ ಮೂರ್ತಿ ದರ್ಶನ. ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಗ್ರಾಮಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹುಬ್ಬಳ್ಳಿ: ಸಿದ್ಧಾರೂಢ ಸ್ವಾಮಿ ಮಠಕ್ಕೆ ಸಚಿವ ದಿನೇಶ ಗುಂಡೂರಾವ್ ಭೇಟಿ ನೀಡಿ ಉಭಯಶ್ರೀಗಳ ದರ್ಶನ ಪಡೆದರು. ಈ ವೇಳೆ ಟ್ರಸ್ಟ್ ಕಮಿಟಿ ವತಿಯಿಂದ ಅವರಿಗೆ ಸನ್ಮಾನಿಸಲಾಯಿತು.

ಅಧಿಕಾರಿಗಳಿಗೆ ಸಚಿವ ಸಂತೋಷ ಲಾಡ್ ಸೂಚನೆ

ರೈತರಿಗೆ ಸಮಸ್ಯೆಯಾಗದಂತೆ ಕ್ರಮ ವಹಿಸಿ

ಧಾರವಾಡ: ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಸೋಮವಾರ ನಡೆದ ಕೆಡಿಪಿ ಸಭೆಯಲ್ಲಿ ರೈತರಿಂದ ಖರೀದಿಸಿದ ಹೆಸರು ಉತ್ಪನ್ನದ ಗುಣಮಟ್ಟ, ಖಾಲಿ ಚೀಲಗಳ ಕೊರತೆ ವಿಷಯಕ್ಕೆ ಜನಪ್ರತಿನಿಧಿಗಳು ಅಧಿಕಾರಿಗಳನ್ನು ತೀವ್ರ ತರಾಟೆ ತೆಗೆದುಕೊಂಡರು.

ರೈತರಿಗೆ ಅನ್ಯಾಯ: ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಮೊದಲು ಹೆಸರು ಖರೀದಿಸಿ ನಂತರ ಕಳಪೆಯ ನೆಪವೊಡ್ಡಿ ತಿರಸ್ಕರಿಸಿದ ಅಧಿಕಾರಿಗಳ ನಡೆಗೆ ಆಕ್ಷೇಪ ವ್ಯಕ್ತಪಡಿಸಿದ ಶಾಸಕ ಕೋನರೆಡ್ಡಿ, ಸರಿಯಾಗಿ ತಪಾಸಣೆ ಮಾಡದೆ, ರೈತರನ್ನು ಅಲೆದಾಡಿಸಿದಕ್ಕೆ ಕಿರಿಕಾರಿದರು.

ಅಧಿಕಾರಿಗಳಿಗೆ ಎಚ್ಚರಿಕೆ: ಮೊದಲು ಖರೀದಿಸಿ, ಈಗ ಗುಣಮಟ್ಟದ ನೆಪ ಹೇಳಿ 81 ರೈತರಿಗೆ ಅನ್ಯಾಯ ಮಾಡುವುದು ಸರಿಯಲ್ಲ. ರೈತರಿಗೆ ಹಣ ವಿಳಂಬವಾದರೆ, ಅಧಿಕಾರಿಗಳ ವೇತನದಲ್ಲಿ ಕಡಿತಗೊಳಿಸಿ, ರೈತರಿಗೆ ನೀಡಬೇಕಾದಿತೆಂದು ಕೋನರೆಡ್ಡಿ ಅಧಿಕಾರಿಗಳಿಗೆ ಎಚ್ಚರಿಸಿದರು.

ಖಾಲಿ ಚೀಲಗಳ ಕೊರತೆ: ರೈತರು ಮಾರುಕಟ್ಟೆಗೆ ಬಳೆ ತಂದಾಗ ಖಾಲಿ ಚೀಲಗಳಿಲ್ಲದ ಕುರಿತು ಆಕ್ರೋಶ ವ್ಯಕ್ತಪಡಿಸಿದ ಶಾಸಕ ಎಂ.ಆರ್.ಪಾಟೀಲ ಹಾಗೂ ಕೋನರೆಡ್ಡಿ, ಮೊದಲ ಸಿದ್ಧತೆ ಮಾಡಿಕೊಳ್ಳದ ಅಧಿಕಾರಿಗಳ ನಿರ್ಲಕ್ಷ್ಯ ಪ್ರಶ್ನಿಸಿ, ತರಾಟೆ ತೆಗೆದುಕೊಂಡ ಘಟನೆ ನಡೆಯಿತು.

ಚೀಲಗಳಿಗೆ ಪ್ರಸ್ತಾವನೆ: ಶಾಸಕರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಎಪಿಎಂಸಿ ಅಧಿಕಾರಿ, ಜಿಲ್ಲೆಗೆ 14 ಲಕ್ಷ ಖಾಲಿ ಚೀಲಗಳ ಅಗತ್ಯವಿದೆ. ಸದ್ಯ 30 ಸಾವಿರ ಸಂಗ್ರಹವಿದೆ ಎಂದಾಗ ಜಿಲ್ಲಾಧಿಕಾರಿ 80 ಸಾವಿರ ಬಂದಿವೆ. ಹೆಚ್ಚುವರಿ ಚೀಲಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾಗಿ ಸಭೆಗೆ ಮಾಹಿತಿ ನೀಡಿದರು.

ಅಧಿಕಾರಿಗಳಿಗೆ ಸೂಚನೆ: ಅಧಿಕಾರಿಗಳಿಗೆ ಸೂಚನೆ ನೀಡಿದ ಸಚಿವ ಸಂತೋಷ ಲಾಡ್, ತಕ್ಷಣವೇ ಎಲ್ಲ ಖರೀದಿ ಕೇಂದ್ರಗಳಿಗೆ ಭೇಟಿ ನೀಡಿ ಸಮಸ್ಯೆ ಪರಿಹರಿಸಿ. ರೈತರಿಗೆ ತೊಂದರೆ ಆಗದಂತೆ ಸುಗಮ ಖರೀದಿ ಪ್ರಕ್ರಿಯೆ ಖಚಿತಪಡಿಸಿಕೊಳ್ಳಲು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸಂಗ್ರಹಣ ಸಾಮರ್ಥ್ಯ, ದಿನಕ್ಕೆ ವಾಹನಗಳ ಓಡಾಟ, ಕುಂದುಕೊರತೆ, ಮೂಲಭೂತ ಸೌಕರ್ಯಗಳು ಸೇರಿದಂತೆ ಎಪಿಎಂಸಿ ಸಮಗ್ರ ಅಭಿವೃದ್ಧಿಗಾಗಿ ನೀಲನಕ್ಷೆ ರೂಪಿಸಿ ವರದಿ ಸಲ್ಲಿಸುವಂತೆ ಲಾಡ್ ಆದೇಶ ಮಾಡಿದರು.

ಬೇಸಿಗೆಯಲ್ಲಿ ಉದ್ಭವಿಸುವ ಕುಡಿಯುವ ನೀರಿನ ಅಭಾವ ನೀಗಿಸಲು ಜಿಲ್ಲೆಗೆ ರೂ. 1 ಕೋಟಿ ಅನುದಾನ ಬಂದಿದ್ದು, ಜಿಲ್ಲೆಯ ಕುಂದಗೋಳ, ನವಲಗುಂದ ಹಾಗೂ ಹುಬ್ಬಳ್ಳಿ ಗ್ರಾಮೀಣ ಕೆರೆಗಳನ್ನು ತುಂಬಿಸಲು ಬಳಸುವುದಾಗಿ ಅಧಿಕಾರಿ ಜಗದೀಶ ತಿಳಿಸಿದರು.

ಜಿಲ್ಲೆಯ 467 ಶುದ್ಧ ಕುಡಿಯುವ ನೀರಿನ ಘಟಕ ಪೈಕಿ 320 ಸುಸ್ಥಿತಿಯಲ್ಲಿದ್ದು, ಜನರಿಗೆ ನೀರು ಪೂರೈಸುತ್ತಿವೆಂಬ ಅಧಿಕಾರಿ ಜಗದೀಶ ಮಾತಿಗೆ ಪ್ರತಿಕ್ರಿಯಿಸಿದ ಲಾಡ್, ದುರಸ್ಥಿತಿಯಲ್ಲಿರುವ 147 ಘಟಕ ಶೀಘ್ರವೇ ಸರಿಪಡಿಸುವಂತೆ ಸೂಚನೆ ನೀಡಿದರು.



ಮಹೇಶ ಆಧುನಿಕ ಬಸವಣ್ಣ!

ಸಭೆಯಲ್ಲಿ ಅಂತರ್ಜಾತಿ ವಿವಾಹ ಪ್ರಸ್ತಾಪಿಸಿದ ಶಾಸಕ ಮಹೇಶ ಟೆಂಗಿನಕಾಯಿ, ಅಂತರ್ಜಾತಿ ವಿವಾಹ ಪ್ರೋತ್ಸಾಹಧನ ದಂಪತಿಗೆ ತಲುಪಿದೆಯೇ? ಎಂಬ ಪ್ರಶ್ನೆಗೆ ಉತ್ತರಿಸಿದ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ, ಒಂದು ಸಾವಿರ ಅರ್ಜಿಗಳು ನೋಂದಣಿ ಆಗಿದ್ದು, ಈ ಪೈಕಿ 350 ಜೋಡಿಗಳಿಗೆ ಪ್ರೋತ್ಸಾಹಧನ ನೀಡಿದೆ. 390 ಎಸ್ಸಿ, 260 ಎಸ್ಟಿ ಸೇರಿ 650 ಜೋಡಿಗಳ ದಾಖಲಾತಿಗಳ ಪರಿಶೀಲನೆ ಹಂತದಲ್ಲಿವೆ. ರೂ.10 ಕೋಟಿ ಬಾಕಿ ಇದೆಂಬ ಉತ್ತರಕ್ಕೆ ಟೆಂಗಿನಕಾಯಿ ರೂ.17 ಕೋಟಿ ಬಾಕಿ ಇದೆ ಅಂದಾಗ ಪ್ರತಿಕ್ರಿಸಿದ ವಿಪ ಸದಸ್ಯ ಎಫ್.ಎಚ್. ಜಕ್ಕಪ್ಪನವರ, ಮಹೇಶ ಟೆಂಗಿನಕಾಯಿ ಆಧುನಿಕ ಬಸವಣ್ಣ. ಅಂತರ್ಜಾತಿ ವಿವಾಹಗಳ ಪಟ್ಟಿ ನೀಡಿದರೆ, ಅನುದಾನ ತರಿಸಿಕೊಡುವುದಾಗಿ ಜಕ್ಕಪ್ಪನವರ ಅಧಿಕಾರಿಗಳಿಗೆ ಸಲಹೆ ನೀಡಿದರು.

ಉಳಿದಂತೆ ಸಭೆಯಲ್ಲಿ ಮಹಿಳಾ-ಮಕ್ಕಳ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ, ಪಶು ಸಂಗೋಪನೆ, ಕೃಷಿ, ತೋಟಗಾರಿಕೆ, ಹೆಸ್ಕಾಂ, ಸಮಾಜ ಕಲ್ಯಾಣ ಸೇರಿ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಗೆ ಅನುಪಾಲನಾ ವರದಿ ಒಪ್ಪಿಸಿದರು.

ಸಭೆಯಲ್ಲಿ ಶಾಸಕರಾದ ಎಫ್.ಎಚ್.ಜಕ್ಕಪ್ಪನವರ, ಮಹೇಶ ಟೆಂಗಿನಕಾಯಿ, ಎಂ.ಆರ್.ಪಾಟೀಲ, ಜಿಲ್ಲಾಧಿಕಾರಿ ಸ್ನೇಹಲ್ ಆರ್, ಜಿಲ್ಲಾ ಪೊಲೀಸ್ ಅಧೀಕ್ಷಕ ಗುಂಜನ್ ಆರ್ಯ, ಪೊಲೀಸ್ ಆಯುಕ್ತ ಎನ್.ಶಶಿಕುಮಾರ್ ಸೇರಿ ಅನೇಕರು ಇದ್ದರು.

ಲಸಿಕಾ ಕೇಂದ್ರ-ಲ್ಯಾಬ್ ಉದ್ಘಾಟನೆ

ಧಾರವಾಡ: ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ದೃಷ್ಟಿಯಿಂದ ಸರ್ಕಾರ ಸುಸಜ್ಜಿತ ಆರೋಗ್ಯ ಕೇಂದ್ರಗಳು ತೆರೆಯುವುದರ ಜೊತೆಗೆ ಜನಪರ ಯೋಜನೆ ಜಾರಿಗೊಳಿಸಿವೆ ಎಂದು ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಹೇಳಿದರು.

ನಗರದ ಜಿಲ್ಲಾ ಆರೋಗ್ಯ-ಕುಟುಂಬ ಕಲ್ಯಾಣಾಧಿಕಾರಿ ಕಚೇರಿ ಆವರಣದಲ್ಲಿ ಸೋಮವಾರ ಲಸಿಕಾ ಕೇಂದ್ರ ಮತ್ತು ಜಿಲ್ಲಾಸ್ಪತ್ರೆ ಆವರಣದಲ್ಲಿ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯ ಉದ್ಘಾಟಿಸಿದ ಅವರು, ಉತ್ತಮ ಸೇವೆ ನೀಡಲು ತಿಳಿಸಿದರು.

ಸಾರ್ವಜನಿಕರಿಗೆ ಅಗತ್ಯ ಔಷಧಿಗಳು ದಾಸ್ತಾನು ಇದ್ದು, ಯಾವುದೇ ಆರೋಗ್ಯ ಕೇಂದ್ರಗಳಲ್ಲಿ ಔಷಧಿ ಕೊರತೆ ಉಂಟಾಗದಂತೆ ಕ್ರಮವಹಿಸಿದ್ದು, ಬೇಡಿಕೆ ಬಂದಲ್ಲಿ ತಕ್ಷಣ ಔಷಧಿ ಸರಬರಾಜು ಕಾರ್ಯ ಮಾಡಲಾಗುತ್ತಿದೆ ಎಂದರು.

ಆರೋಗ್ಯ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಹಿನ್ನಲೆ ಶಿಫ್ಟ್ ಆಧಾರದಡಿ ಕೆಲಸ ಮಾಡಲು ಸೂಚಿಸಿದೆ. 225 ತಜ್ಞ ವೈದ್ಯರು, ವೈದ್ಯರನ್ನು ನೇಮಕಕ್ಕೂ ಚಾಲನೆ ನೀಡಿದೆ. ಖಾಲಿ ಇರುವ ಹುದ್ದೆಗಳ ಭರ್ತಿಗೂ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾಗಿ ತಿಳಿಸಿದರು.

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಮಾತನಾಡಿ, ದೇಶದ ಆರೋಗ್ಯ ಕ್ಷೇತ್ರದಲ್ಲಿ ಹೊಸ ಉಪಕರಣ, ಸಂಶೋಧನೆ ಮತ್ತು ಜನರಿಗೆ ಅಗತ್ಯವಿರುವ ಔಷಧಿ ಗಳನ್ನು ಪೂರೈಸುವಲ್ಲಿ ಭಾರತ ಸರ್ಕಾರವೂ ಹೆಚ್ಚಿನ ಆದ್ಯತೆ ನೀಡಿದೆ ಎಂದು ಮಾಹಿತಿ ನೀಡಿದರು. ಲಸಿಕಾ ದಾಸ್ತಾನು ಸೌಲಭ್ಯ ಕಟ್ಟಡಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಕಟ್ಟಲಾಗುತ್ತಿದೆ. ಲಸಿಕೆಗಳನ್ನು ಸುಸಜ್ಜಿತ ಮತ್ತು ಸೌಲಭ್ಯವಿರುವ ಕಟ್ಟಡದಲ್ಲಿ ದಾಸ್ತಾನು ಮಾಡಬೇಕಿದೆ. ಹೀಗಾಗಿ ಕಟ್ಟಡ ನಿರ್ಮಿಸುತ್ತಿದೆ ಎಂದರು.

ಸಚಿವ ಸಂತೋಷ ಲಾಡ್ ಮಾತನಾಡಿ, ಜಿಲ್ಲೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಮತ್ತು ಉನ್ನತ ದರ್ಜೆಯ ಚಿಕಿತ್ಸೆ ಜೊತೆ ಔಷಧಿ ದೊರಕುವಂತೆ ಕ್ರಮ ವಹಿಸಿದೆ ಎಂದ ಅವರು, ಆಸ್ಪತ್ರೆಗಳ ಮೂಲ ಸೌಕರ್ಯಗಳಿಗೂ ಒತ್ತು ನೀಡಿದೆ ಎಂದರು.

ಶಾಸಕ ಅರವಿಂದ ಬೆಲ್ಲದ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಎನ್.ಎಚ್. ಕೊನರೆಡ್ಡಿ, ಎಫ್.ಎಚ್.ಜಕ್ಕಪ್ಪನವರ, ಮೇಯರ್ ಜ್ಯೋತಿ ಪಾಟೀಲ, ಜಿಲ್ಲಾಧಿಕಾರಿ ಆರ್ ಸ್ನೇಹಲ್, ಡಿಎಚ್ಒ ಡಾ. ಎಸ್.ಎಂ.ಹೊನಕೇರಿ, ಡಾ.ಸುಜಾತಾ ಹಸುವಿಮಠ ಇದ್ದರು.



ಶಿವಳ್ಳಿ ಕುಟುಂಬದ ಸೇವೆ ಶ್ಲಾಘನೀಯ: ಶಿವಾನಂದ

ಕುಂದಗೋಳ: ತಾಲೂಕಿನ ಜನತೆಗೆ ಸಮಾಜಮುಖಿ ಕಲ್ಯಾಣ ಕಾರ್ಯ ನಿರಂತರವಾಗಿ ಕೈಗೊಂಡು ಮಾದರಿಯಾಗಿದ್ದ ದಿ.ಸಿ.ಎಸ್. ಶಿವಳ್ಳಿ ಅವರ ಸೇವಾ ಪರಂಪರೆ ಅವರ ಸಹೋದರ ಷಣ್ಮುಖ ಶಿವಳ್ಳಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ ಎಂದು ಹಿರೇಮಠದ ಶಿತಿಕಂಠೇಶ್ವರ ಶ್ರೀಗಳು ಹೇಳಿದರು.

ತಾಲೂಕಿನ ಯರಗುಪ್ಪಿ ಗ್ರಾಮದಲ್ಲಿ ದಿ.ಸಿ.ಎಸ್. ಶಿವಳ್ಳಿ ಅವರ ಸ್ಮರಣಾರ್ಥ ಷಣ್ಮುಖ ಶಿವಳ್ಳಿ ಅವರ ನೇತೃತ್ವದಲ್ಲಿ ಆಯೋಜಿಸಲಾದ ಹಿಂದೂ ಧರ್ಮದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಚಿವ ಶಿವಾನಂದ ಪಾಟೀಲ ಮಾತನಾಡಿ, ಮದುವೆ ಜೀವನದ ಪ್ರಮುಖ ಘಟ್ಟವಾಗಿದ್ದು, ಇಂದಿನ ದಿನಗಳಲ್ಲಿ ಬಡವರಿಗೆ ಬಂಗಾರದ ತಾಳಿ ಕಟ್ಟುವುದು ಕಷ್ಟಕರವಾಗಿದೆ. ಇಂತಹ ಸಂದರ್ಭದಲ್ಲಿ ತಾಳಿ ಹಾಗೂ ವಸ್ತ್ರಗಳನ್ನು ಒದಗಿಸಿ ಸಾಮೂಹಿಕ ವಿವಾಹಗಳನ್ನು ನೆರವೇರಿಸುತ್ತಿರುವ ಶಿವಳ್ಳಿ ಕುಟುಂಬದ ಸೇವೆ ಶ್ಲಾಘನೀಯ ಎಂದರು.

ಕೆಪಿಸಿಸಿ ಕಾರ್ಯದರ್ಶಿ ಷಣ್ಮುಖ ಶಿವಳ್ಳಿ ಮಾತನಾಡಿ, ಬಡ ಕುಟುಂಬದಿಂದ ಬಂದ ದಿ.ಸಿ.ಎಸ್. ಶಿವಳ್ಳಿ ಅವರನ್ನು ಜನರು ಮೂರು ಬಾರಿ ಶಾಸಕ ಹಾಗೂ ಸಚಿವರನ್ನಾಗಿ ಆಯ್ಕೆ ಮಾಡಿದ ಋಣ ತೀರಿಸಲು 1999ರಿಂದ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಸಲಾಗುತ್ತಿದೆ. ಈಗ ಕುಟುಂಬದವರು ಅದನ್ನು ಮುಂದುವರಿಸುತ್ತಿದ್ದು, ಜನರ ಆಶೀರ್ವಾದ ಸದಾ ಇರಲಿ ಎಂದರು.

ಮುಕ್ತಿ ಮಂದಿರದ ವಿಮಲ ರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಶ್ರೀಗಳು, ಹಿರೇಮಠದ ಶಿತಿಕಂಠೇಶ್ವರ ಶ್ರೀಗಳು, ಮುಳ್ಳೊಳ್ಳಿ ಶಿವಯೋಗಿ ಶ್ರೀಗಳು, ಶಿವಾನಂದ ಮಠದ ಶಿವಾನಂದ ಶ್ರೀಗಳು, ಕಲ್ಯಾಣಪುರದ ಅಭಿನವ ಬಸವಣ್ಣಜ್ಜನವರು ಹಾಗೂ ಹಜರತ್ ಸೈಯದ್ ತಾಜುದ್ದಿನ್ ಖಾದ್ರಿ ಸಾನ್ನಿಧ್ಯ ವಹಿಸಿದ್ದರು.

ವಿಪ ಸದಸ್ಯ ಎಫ್.ಎಚ್. ಜಕ್ಕಪ್ಪನವರ, ಕುಸುಮಾವತಿ ಶಿವಳ್ಳಿ, ಅರವಿಂದ ಕಟಗಿ, ಸತೀಶ ಕೊಬ್ಬಯ್ಯನವರ, ಅರ್ಜುನ ನಾಡಗೇರಿ, ಶಿವಾನಂದ ಪೂಜಾರ, ಜಗದೀಶ ಉಪ್ಪಿನ, ಹಾಲಪ್ಪ ತಡಹಾಳ, ಸಲಿಂ ಕ್ಯಾಲಕೊಂಡ, ತಹಶೀಲ್ದಾರ್ ರಾಜು ಮಾವರಕರ, ಬಿಇಒ ಮಹಾದೇವಿ ಮಡ್ಲೇರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಗೋ ಮಾತಾ ಗೌರವ ದಿನ ಮರೆಯಬೇಡಿ

ಹುಬ್ಬಳ್ಳಿ: ಗೋಮಾತೆಯ ಗೌರವ ಅಭಿಯಾನದ ಅಂಗವಾಗಿ ಗೋ ಮಾತಾ ಗೌರವ ದಿನ ಮರೆಯಬೇಡಿ, ನೆನಪಿಡಿ ಎಂದು ಸೋಮವಾರ ಮಹಿಳಾ ಸದಸ್ಯರು ನಗರದಲ್ಲಿ ತಹಶೀಲ್ದಾರ್ ಮೂಲಕ ರಾಷ್ಟ್ರಪತಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ರಾಷ್ಟ್ರ ಹಾಗೂ ಭಾರತೀಯ ಹಿತ ದೃಷ್ಟಿಯಿಂದ ಸಂವಿಧಾನ ವ್ಯಾಪ್ತಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಗೋಗಳನ್ನು ಪ್ರಾರ್ಥಿಸುವ ಮೂಲಕ ಇಡೀ ಭಾರತೀಯ ಸ್ಥಳೀಯ ಗೋ ತಳಿಗೆ ರಾಷ್ಟ್ರೀಯ ಗೌರವವನ್ನು ಒದಗಿಸಬೇಕು ಎಂದು ಆಗ್ರಹಿಸಿದರು.

ಭಾರತದಲ್ಲಿ ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು, ನಿರ್ಮೂಲನೆ ಮಾಡಬೇಕು, ಹಸುವಿನ ರಾಷ್ಟ್ರ ಮಾತೆ, ರಾಷ್ಟ್ರೀಯ ದೇವತೆ, ರಾಷ್ಟ್ರೀಯ ಪೂಜೆ, ರಾಷ್ಟ್ರೀಯ ಪರಂಪರೆ ಸ್ಥಾನ ಮಾನ ನೀಡಬೇಕು. ಗೋಸೇವೆಗಾಗಿ ಕೇಂದ್ರೀಯ ಕಾನೂನು ಜಾರಿಗೆ ತರಬೇಕು ಹಾಗೂ ಗೋಸೇವೆಗಾಗಿ ಕೇಂದ್ರೀಯ ಸಚಿವಾಲಯವನ್ನು ಸ್ಥಾಪಿಸಬೇಕು. ಗೋಚಾರ ಮಂಡಳಿಯನ್ನು ರಚಿಸಬೇಕು, ಮೇವು ಭದ್ರತಾ ನೀತಿಯನ್ನು ಅಂತಿಮಗೊಳಿಸಬೇಕು. ಗೋವು ಆಧಾರಿತ ಕೃಷಿಯನ್ನು ಖಚಿತಪಡಿಸಿಕೊಳ್ಳಬೇಕು ಹಾಗೂ ವೇದ ಲಕ್ಷಣ ಗೋವಂಶದ ಜಾನುವಾರುಗಳಿಂದ ಪಡೆದ ಪಂಚಗವ ಉತ್ಪನ್ನಗಳ ಉತ್ಪಾದನೆ ಹಾಗೂ ಮಾರುಕಟ್ಟೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಪ್ರಮೋದ ಆಚಾರ್ಯ, ವಿಶ್ವನಾಥ ಭೂತನೂರ, ಪೂರ್ಣಿಮಾ ಕೆ., ಬಸವರಾಜ, ಮಾಹಾಂತೇಶ ಟಿ., ರೋಹಿಣಿ ಬಿ., ಇದ್ದರು.



ಕಾಂಗ್ರೆಸ್‌ನಿಂದ ಮಹಿಳಾ ಮಸೂದೆಗೆ ಸೋಲು: ಅಮರಶೆಟ್ಟಿ

ಧಾರವಾಡ: ಪ್ರಧಾನಿ ನರೇಂದ್ರ ಮೋದಿ ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ನೀಡುವ ಯಶಸ್ವಿ ಪ್ರಯತ್ನಕ್ಕೆ ವಿಪಕ್ಷಗಳಿಂದಲೇ ಸೋಲಾಗಿದೆ. ಇದು ಮಹಿಳಾ ಸಮುದಾಯಕ್ಕೆ ಮಾಡಿರುವ ಅಪಮಾನ ಎಂದು ಬಿಜೆಪಿ ಸವಿತಾ ಅಮರಶೆಟ್ಟಿ ಹೇಳಿದರು.



ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್‌ನ ರಾಹುಲ್ ಗಾಂಧಿ ಮಹಿಳಾ ಪರ ಮೊಸಳೆ ಕಣ್ಣೀರು ಹಾಕುವುದು ನಾಚಿಕೆಗೇಡು. ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳ ಮಹಿಳಾ ವಿರೋಧಿ ಧೋರಣೆ ಅನಾವರಣಗೊಂಡಿದ್ದಾಗಿ ತಿಳಿಸಿದರು.

ಅಭಿವೃದ್ಧಿಶೀಲ ರಾಷ್ಟ್ರದ ಪ್ರಯತ್ನದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಚಿಂತನೆಗೆ ವಿಪಕ್ಷಗಳು ಧಕ್ಕೆ ತಂದಿವೆ. ಮಹಿಳಾ ಮೀಸಲಾತಿ ಪರವಾಗಿ ಇರುವುದಾಗಿ ಹೇಳಿದ ವಿಪಕ್ಷಗಳ ಅಸಲಿ ಮುಖ ಸಂಸತ್ತಿನಲ್ಲಿ ಕಳಚಿದೆ. ನಾರೀಶಕ್ತಿಗೆ ಸೋಲಾಗಿರುವುದಕ್ಕೆ ಬೇಸರಿಸಿದರು. ಶೇ.33ರಷ್ಟು ಮಹಿಳಾ ಮೀಸಲಾತಿ ದೇಶದ ಎಲ್ಲ ಮಹಿಳೆಯರ ಹಕ್ಕು. ಇದನ್ನು ಪಡೆಯಲು ಹೋರಾಟ ನಿರಂತರವಾಗಿ ನಡೆಯಲಿದೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲ ಮಹಿಳಾ ಸಂಘಟನೆಗಳು ತಮ್ಮ ಪಕ್ಷಬೇಧ ಮರೆತು ಹೋರಾಟಬೇಕು ಎಂದು ಕರೆ ನೀಡಿದರು. ಓರ್ವ ಸಂಸದ ಒಂದು ಕ್ಷೇತ್ರದ 49 ಲಕ್ಷ ಮತದಾರರನ್ನು ಪ್ರತಿನಿಧಿಸುವುದು ಹೇಗೆ? ಹೀಗಾಗಿ ಕ್ಷೇತ್ರ ಮರು ವಿಂಗಡನೆಗೂ ಹಾಗೂ ಮಹಿಳಾ ಬಿಲ್ ಜಾರಿಗೂ ತಳಕು ಹಾಕದೆ, ತಕ್ಷಣವೇ ಮಹಿಳಾ ಮಸೂದೆ ಜಾರಿಗೊಳಿಸುವಂತೆ ಒತ್ತಾಯ ಮಾಡಿದರು. ಪ್ರಮೀಳಾ ಜಕ್ಕಣ್ಣವರ, ಪ್ರೇಮಾ ನಡುವಿನಮನಿ, ಲೀಲಾವತಿ ಮಿಣಜಗಿ, ನೇಹಾ ಬುದ್ನಿ, ಉಷಾ ಗದಗಿಮಠ, ಪ್ರಿಯದರ್ಶಿನಿ ಅಂಗಡಿ, ಕಾವ್ಯಾ ಪಾಟೀಲ, ಯಲ್ಲವ್ವ ಜಾಧವ, ಸಂಗೀತಾ ಬಡವಣ್ಣವರ, ಸಾವಿತ್ರಿ ಅಮರಾಪೂರ ಇದ್ದರು.

ಯೋಗೀಶಗೌಡರ ಹತ್ಯೆ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷದ ನಾಯಕರು ಮತ್ತೊಬ್ಬರ ಏಳ್ಗೆ ಸಹಿಸಿದೆ ವಿನಾಕಾರಣ ಆರೋಪ ಮಾಡುವುದು ಸರಿಯಲ್ಲ. ಈ ಪ್ರಕರಣದಲ್ಲಿ ನ್ಯಾಯಾಲಯ ತೀರ್ಪು ಸಹ ನೀಡಿದೆ. ಷಡ್ಯಂತ್ರದಿಂದ ಸಿಲುಕಿಸಲಾಗಿದೆ ಎಂದು ಬೇರೊಬ್ಬರನ್ನು ದೂಷಿಸುವುದು ಸರಿಯಲ್ಲ. ಷಡ್ಯಂತ್ರ ಸಾಬೀತುಪಡಿಸಿದ ನಂತರ ಮಾತನಾಡಬೇಕು.

■ ಸವಿತಾ ಅಮರಶೆಟ್ಟಿ, ಬಿಜೆಪಿ ನಾಯಕಿ

ಏಜೆಂಟಿಕ್ ಎಐ ಹ್ಯಾಕ್‌ಥಾನ್‌ಗೆ ಚಾಲನೆ



ಹುಬ್ಬಳ್ಳಿ: ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ ವತಿಯಿಂದ ಎರಡು ದಿನಗಳ ಕಾಲ ನಡೆಯುತ್ತಿರು ಅಂತರ ಕಾಲೇಜ್ ಏಜೆಂಟಿಕ್ ಎಐ ಹ್ಯಾಕ್‌ಥಾನ್-2026ಗೆ ಚಾಲನೆ ದೊರೆಯಿತು.

ಎನ್‌ವಿಡಿಯಾ ಸಂಸ್ಥೆ ತಂತ್ರಜ್ಞಾನ ನಾಯಕ ಬಾಲಾಜಿ ಹೊಳೂರು ಮಾತನಾಡಿ, ಬುದ್ಧಿವಂತ ಯಂತ್ರಗಳಲ್ಲಿ ಏಜೆಂಟಿಕ್ ಎಐ: ಗ್ರಹಿಕೆಯಿಂದ ಸ್ವಯಂ ಕ್ರಿಯೆಗೆ ಎಂಬ ವಿಷಯದ ಕುರಿತು ಮಾತನಾಡಿದರು.

ಎಐ ಮತ್ತು ಸುಧಾರಿತ ದೃಶ್ಯ ತಂತ್ರಜ್ಞಾನಗಳ ಮೂಲಕ ಯಂತ್ರಗಳು ವಾಸ್ತವಿಕ ಪರಿಸರಗಳಲ್ಲಿ ಸ್ವಯಂವಾಗಿ ಗ್ರಹಿಸಲು, ವಿಶ್ಲೇಷಿಸಲು ಮತ್ತು ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿರುವ ಬಗ್ಗೆ ತಿಳಿಸಿದರು.

ಕಾರ್ಯಕ್ರಮದ ಮೊದಲ ದಿನದಲ್ಲಿ ಏಜೆಂಟಿಕ್ ಎಐ ಕುರಿತು ಕೈಗಾರಿಕಾ ಆಧಾರಿತ ಕಾರ್ಯಾಗಾರ ನಡೆಯಿತು. ಇದರಲ್ಲಿ ಆಧುನಿಕ ಎಐ ಫ್ರೇಮ್‌ವರ್ಕ್, ಆರ್‌ಎಜಿ ವ್ಯವಸ್ಥೆ ಮತ್ತು ಮಲ್ಟಿ-ಏಜೆಂಟ್ ಆರ್ಕಿಟೆಕ್ಚರ್‌ಗಳ ಕುರಿತು ಭಾಗವಹಿಸಿದವರಿಗೆ ಪ್ರಾಯೋಗಿಕ ತರಬೇತಿ ನೀಡಲಾಯಿತು. ಈ ಕಾರ್ಯಾಗಾರವು ಹ್ಯಾಕ್‌ಥಾನ್ ಸವಾಲುಗಳಿಗೆ ಭದ್ರವಾದ ನೆಲೆ ನಿರ್ಮಿಸಿತು.

ಈ ಹ್ಯಾಕ್‌ಥಾನ್‌ಗೆ ಕರ್ನಾಟಕ ಮತ್ತು ಮಹಾರಾಷ್ಟ್ರದ ವಿವಿಧ ಕಾಲೇಜುಗಳಿಂದ 20ಕ್ಕೂ ಹೆಚ್ಚು ಕಾಲೇಜ್‌ಗಳಿಂದ 135ಕ್ಕೂ ಹೆಚ್ಚು ತಂಡಗಳು ನೋಂದಾಯಿಸಿಕೊಂಡಿದ್ದು, ಅದರಲ್ಲಿ 25 ತಂಡಗಳನ್ನು ಅಂತಿಮ ಸುತ್ತಿಗೆ ಆಯ್ಕೆ ಮಾಡಲಾಗಿದೆ.

ಸಂಸ್ಕೃತ ಭಾಷೆ ಬಳಸಿ: ಡಾ. ಹುಕ್ಕೇರಿ

ಹುಬ್ಬಳ್ಳಿ: ಸಂಸ್ಕೃತ ಭಾರತಿಯಿಂದ ಇಲ್ಲಿನ ವಿಶ್ವೇಶ್ವರ ನಗರ ಮತ್ತು ಸುತ್ತಮುತ್ತಲಿನ ಭಾಗದ ಮಕ್ಕಳಿಗಾಗಿ ಹತ್ತು ದಿನದ ಸರಳ ಸಂಸ್ಕೃತ ಶಿಬಿರದ ಸಮಾರೋಪ ಸಮಾರಂಭ ನಡೆಯಿತು.

ಡಾ. ಹುಕ್ಕೇರಿ ಮಾತನಾಡಿ, ಸಂಸ್ಕೃತ ಭಾಷೆ ಬಳಸುವುದರಿಂದ ಮೆದುಳಿನ ವಿಕಾಸವಾಗುತ್ತದೆ ಮತ್ತು ಸಂಸ್ಕೃತ ಭಾಷೆಯ ಗ್ರಂಥಗಳಲ್ಲಿ ಅಪಾರ ಜ್ಞಾನ ಭಂಡಾರ ಅಡಗಿದ್ದು ಅದನ್ನು ಗಳಿಸಿದಲ್ಲಿ ಮಾನವ ಕಲ್ಯಾಣದ ಕಾರ್ಯದಲ್ಲಿ ಅಪಾರ ಕೊಡುಗೆ ನೀಡಬಹುದು. ಆಯುರ್ವೇದದಲ್ಲಿ ಬಹಳಷ್ಟು ಕ್ಲಿಷ್ಟ ರೋಗಗಳಲ್ಲಿ ಔಷಧ ಮತ್ತು ಚಿಕಿತ್ಸಾ ವಿಧಾನಗಳನ್ನು ಕಲಿಯುವ ಅವಕಾಶಗಳು ಒದಗಿ ಬರುತ್ತವೆ. ಆದ್ದರಿಂದ ಮಕ್ಕಳು ಇಂಥ ಶಿಬಿರಗಳಿಂದ ಪ್ರೇರಣೆ ಪಡೆದು ಸಂಸ್ಕೃತ ಭಾಷೆ ಕಲಿಯುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು ಎಂದರು.

ಸಂಸ್ಕೃತ ಭಾರತಿಯ ತನುಜಾ ಪಾಟೀಲ ಮಾತನಾಡಿದರು. ಪೂರ್ಣಿಮಾ ದುಶಿ, ಜ್ಯೋತಿ ಸೋಲಂಕಿ, ದಿವ್ಯಾ ರಾವ್, ಸುಷ್ಮಾ ದೂಶಿ ಮತ್ತು ನಿರ್ಮಲಾ ಈ ಹತ್ತು ದಿನದ ಶಿಬಿರದಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದರು.





ಅಳ್ನಾವರ: ಗೋ ಸೇವಾ ಅಭಿಯಾನದ ಅಂಗವಾಗಿ ಗೋ ಸಂರಕ್ಷಣೆಗೆ ಒತ್ತಾಯಿಸಿ ಹಿಂದೂ ಪರ ಸಂಘಟನೆ ಮೆರವಣಿಗೆ ಮೂಲಕ ತಹಶೀಲದಾರರ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದರು. ಮಧ್ಯ ಮಾರಾಟ ಅಂಗಡಿ ನಿಗದಿತ ಸಮಯಕ್ಕೆ ಮುಚ್ಚಿಸಲು ಒತ್ತಾಯಿಸಿದರು. ಮಹಾದೇವ ಸಾಗರೇಕರ, ಪುಂಡಲೀಕ ಪಾರ್ದಿ, ಲಖನ ಬರಗುಂಡಿ, ರಾಜು ಕರ್ಲೇಕರ, ಚನ್ನಬಸಯ್ಯ ಚರಂತಿಮಠ, ಎಸ್.ಡಿ.ದೇಗಾಂವಿಮಠ, ಉದಯ ಶಿಬ್ರಿಕೇರಿ, ಪರಶುರಾಮ ಕಾಕತಕರ ಮತ್ತಿತರ ನೂರಾರು ಸಂಘಟಕರು ಭಾಗವಹಿಸಿದ್ದರು.

ಡಾ.ಎಚ್.ಸಿ. ಪಾಟೀಲಗೆ ಪ್ರಶಸ್ತಿ

ಕುಂದಗೋಳ: ಪಟ್ಟಣದ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಮುಖ್ಯ ಪಶುವೈದ್ಯಾಧಿಕಾರಿಯಾಗಿ (ಆಡಳಿತ) ಸೇವೆ ಸಲ್ಲಿಸುತ್ತಿರುವ ಡಾ.ಎಚ್.ಸಿ.ಪಾಟೀಲ 2026ನೇ ಸಾಲಿನ ವಿಭಾಗ ಮಟ್ಟದ ಅತ್ಯುತ್ತಮ ಪಶುವೈದ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ವಿಶ್ವ ಪಶುವೈದ್ಯಕೀಯ ದಿನಾಚರಣೆ ಅಂಗವಾಗಿ ಇತ್ತೀಚೆಗೆ ಬೆಳಗಾವಿಯಲ್ಲಿ ಆಯೋಜಿಸಲಾದ ಸಮಾರಂಭದಲ್ಲಿ ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ, ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪ್ರಶಸ್ತಿ ಪ್ರದಾನ ಮಾಡಿದರು.



ಹುಬ್ಬಳ್ಳಿ
ಮಂಗಳವಾರ, 28 ಏಪ್ರಿಲ್ 2026
ಸಂಪುಟ 16, ಸಂಚಿಕೆ 34, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಫುಡ್ ಪಾಯ್ಸನ್ ಶಂಕೆ: ನಾಲ್ವರ ಬಲಿ | 0೭ ಜಲಸಂಧಿ ಮುಕ್ತಕ್ಕೆ ಇರಾನ್ ಪ್ರಸ್ತಾವನೆ | 0೭ ಹೀಟ್‌ಸ್ಟ್ರೋಕ್ ನಿರ್ವಹಣಾ ಘಟಕ ಕಡ್ಡಾಯ | 0೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಉತ್ತರೆ

ದಿನದ ಮಾತು

ತಮ್ಮನ್ನು ತಾವೇ ಮೇಧಾವಿಗಳೆಂದುಕೊಳ್ಳುವವರು ಬಹುಬೇಗ ನಾಶವಾಗುತ್ತಾರೆ.
▲ಮಹಾವೀರ

ಉಳುಮೆಗೂ ಸಾಗಾಟಕ್ಕೂ ಹೆಸರುವಾಸಿಯಾದ ಖಿಲಾರಿ ದನಗಳು

ಧರಣಿ ಮಂಡಲ

• ಕೆ.ಎನ್. ಶೈಲೇಶ್ ಹೊಳ್ಳ

• ಪುಟ ೬

ಕಿರುಸುದ್ದಿ

ಜನಿವಾರ ಪ್ರಕರಣ: ಕೃಪಾನಿಧಿ ಕಾಲೇಜಿನ ಸಿಇಟಿ ಕೇಂದ್ರ ರದ್ದು

• **ಬೆಂಗಳೂರು:** ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ವೇಳೆ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಡಿವಾಳದಲ್ಲಿರುವ ಕೃಪಾನಿಧಿ ಕಾಲೇಜಿನಲ್ಲಿ ಇನ್ನು ಮುಂದೆ ಸರ್ಕಾರಿ ಪರೀಕ್ಷೆಗಳು ನಡೆಸದಂತೆ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ತಿಳಿಸಿದರು.

• ಪುಟ ೫

7 ಆಪ್ ಸಂಸದರ ಬಿಜೆಪಿ ವಿಲೀನಕ್ಕೆ ಅಧ್ಯಕ್ಷರ ಒಪ್ಪಿಗೆ

• **ಹೊಸದಿಲ್ಲಿ:** ಆಮ್ ಆದ್ಮಿ ಪಕ್ಷ(ಆಪ್) ತೊರೆದ ರಾಘವ್ ಚಡ್ಡಾ ಮತ್ತು ಇತರ ಆರು ಸಂಸದರನ್ನು ಬಿಜೆಪಿಯೊಂದಿಗೆ ವಿಲೀನಗೊಳಿಸಲು ರಾಜ್ಯಸಭೆ ಅಧ್ಯಕ್ಷ ಸಿ.ಪಿ. ರಾಧಾಕೃಷ್ಣನ್ ಅವರು ಅನುಮೋದನೆ ನೀಡಿದ್ದಾರೆ. ಈ ಮೂಲಕ ರಾಜ್ಯಸಭೆಯಲ್ಲಿ ಎಎಪಿ ಸದಸ್ಯರ ಬಲ 3ಕ್ಕೆ ಕುಸಿದಿದೆ. ಬಿಜೆಪಿ ಬಲ 113ಕ್ಕೆ ಏರಿಕೆಯಾಗಿದೆ.

• ಪುಟ ೭

ಲಡಾಖ್‌ನಲ್ಲಿ 5 ಹೊಸ ಜಿಲ್ಲೆಗಳ ರಚನೆಗೆ ಅಸ್ತು

• ಪುಟ ೭

ಪ.ಬಂಗಾಳದಲ್ಲಿ ಬಿಜೆಪಿಗೆ ಅಧಿಕಾರ ಖಚಿತ: ಮೋದಿ

• ಪುಟ ೭

ವೆಬ್‌ಸೈಟ್‌ನಲ್ಲಿ ಸಿಇಟಿ ಕೀ ಉತ್ತರ ಲಭ್ಯ

• ಪುಟ ೫

ಪಾಕ್‌ನಲ್ಲಿ ಉಗ್ರ ಹಫೀಜ್ ನಿಕಟವರ್ತಿ ಶೇಖ್ ವಧೆ

• ಪುಟ ೭



ಅಣುಶಕ್ತಿಯಲ್ಲಿ ಭಾರತ ಸಾಧನೆ

• ಪುಟ ೭

ಸುದ್ದಿ ಸಮಗ್ರ

ಉಭಯ ರಾಷ್ಟ್ರಗಳ ಎಫ್‌ಟಿಎಗೆ ಸಹಿ | ರಫ್ತುಗಳಿಗೆ ಇಲ್ಲ ಸುಂಕ

ಭಾರತ-ಕಿವೀಸ್ ಮುಕ್ತ

• **ಹೊಸದಿಲ್ಲಿ:** ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಬಹುಕಾಲದಿಂದ ನಿರೀಕ್ಷಿತ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಸೋಮವಾರ ಅಧಿಕೃತವಾಗಿ ಸಹಿ ಹಾಕಲಾಗಿದ್ದು, ಎರಡೂ ದೇಶಗಳ ಆರ್ಥಿಕ ಸಂಬಂಧಗಳಲ್ಲಿ ಹೊಸ ಅಧ್ಯಾಯ ಆರಂಭವಾಗಿದೆ.

ನಮ್ಮ ಈ ಪೀಳಿಗೆಯ ಅತ್ಯಂತ ಮಹತ್ವದ ಒಪ್ಪಂದವೆಂದು ಕರೆಯಲಾಗುತ್ತಿರುವ ಈ ಒಪ್ಪಂದದಲ್ಲಿ ಭಾರತೀಯ ಉತ್ಪನ್ನಗಳಿಗೆ ನ್ಯೂಜಿಲೆಂಡ್ ಮಾರುಕಟ್ಟೆಯಲ್ಲಿ ಶೇ.100 ಸುಂಕಮುಕ್ತ ಪ್ರವೇಶ ಸಿಗಲಿದ್ದು, ವ್ಯಾಪಾರ, ಹೂಡಿಕೆ, ಉದ್ಯೋಗ ಹಾಗೂ ಸೇವಾ ಕ್ಷೇತ್ರಗಳಲ್ಲಿ ಮಹತ್ತರ ಬದಲಾವಣೆ ತರಲಿದೆ.

ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹಾಗೂ ನ್ಯೂಜಿಲೆಂಡ್ ವ್ಯಾಪಾರ ಮತ್ತು ಹೂಡಿಕೆ ಸಚಿವ ಟಾಡ್ ಮೆಕ್‌ಲೇ ನಡುವೆ ಈ ಒಪ್ಪಂದಕ್ಕೆ ಸಹಿ ಹಾಕಲಾಗಿದ್ದು, ಅಲ್ಲಿನ



ಸಂಸತ್ತಿನ ಅನುಮೋದನೆಯ ನಂತರ ಈ ವರ್ಷದ ಅಂತ್ಯದೊಳಗೆ ಜಾರಿಗೆ ಬರುವ ನಿರೀಕ್ಷೆ ವ್ಯಕ್ತವಾಗಿದೆ.

ಈ ಮಹತ್ವದ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, 'ಇದು ಭಾರತ ಜಾಗತಿಕ ಆರ್ಥಿಕ ವೇದಿಕೆಯಲ್ಲಿ ಇನ್ನಷ್ಟು ಗಾಢವಾಗಿ ಸೇರಿಕೊಳ್ಳುವತ್ತದ ಐತಿಹಾಸಿಕ ಹೆಜ್ಜೆ. ರೈತರು, ಯುವಕರು, ಮಹಿಳೆಯರು, ಎಂಎಸ್‌ಎಂಇಗಳು, ಉದ್ಯಮಿಗಳು ಮತ್ತು ವಿದ್ಯಾರ್ಥಿಗಳಿಗೆ ಹೊಸ ಅವಕಾಶಗಳ ದಾರಿ ತೆರೆದಿದೆ' ಎಂದು ಹೇಳಿದ್ದಾರೆ. ಇದೇ ವೇಳೆ ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್, 'ಈ ಒಪ್ಪಂದವು ನಮ್ಮ ರಫ್ತುಗಾರರಿಗೆ 1.4 ಬಿಲಿಯನ್ ಜನಸಂಖ್ಯೆಯ ಮಾರುಕಟ್ಟೆಗೆ ಅಪೂರ್ವ ಪ್ರವೇಶ ಒದಗಿಸುತ್ತದೆ' ಎಂದು ಒಪ್ಪಂದದ ಮಹತ್ವವನ್ನು ಒತ್ತಿ ಹೇಳಿದ್ದಾರೆ.

➡ಪುಟ ೪



- ಈ ಪೀಳಿಗೆಯ ಅತಿದೊಡ್ಡ ಒಪ್ಪಂದ ಎಂದ ಪಿಯೂಷ್ ಗೋಯಲ್
- ಇಪ್ಪತ್ತು ಬಿಲಿಯನ್ ಹೂಡಿಕೆ ಭರವಸೆ

- ಭಾರತೀಯ ಉತ್ಪನ್ನಗಳಿಗೆ ನ್ಯೂಜಿಲೆಂಡ್‌ಮಾರುಕಟ್ಟೆಯಲ್ಲಿ ಶೇ.100 ಸುಂಕಮುಕ್ತ ಪ್ರವೇಶ
- ಮುಂದಿನ 5 ವರ್ಷಗಳಲ್ಲಿ ದ್ವಿಪಕ್ಷೀಯ ವ್ಯಾಪಾರವನ್ನು 5 ಬಿಲಿಯನ್‌ಗೆ ಹೆಚ್ಚಿಸುವ ಗುರಿ
- ನ್ಯೂಜಿಲೆಂಡ್‌ನಿಂದ ಭಾರತಕ್ಕೆ 15 ವರ್ಷಗಳಲ್ಲಿ 20 ಬಿಲಿಯನ್ ಎಫ್‌ಡಿಐ ಹೂಡಿಕೆ ಭರವಸೆ
- ಉಡುಪು, ಚರ್ಮ, ಪಾದರಕ್ಷೆ, ರತ್ನಾಭರಣ, ಎಂಜಿನಿಯರಿಂಗ್ ವಸ್ತುಗಳಿಗೆ ದೊಡ್ಡ ಲಾಭ
- ಕಾರ್ಮಿಕಾಧಾರಿತ ಕೈಗಾರಿಕೆಗಳಿಗೆ ಸ್ಪರ್ಧಾತ್ಮಕತೆ, ಉದ್ಯೋಗಾವಕಾಶ ಹೆಚ್ಚಳ

> ಇದು ಭಾರತ ಜಾಗತಿಕ ಆರ್ಥಿಕ ಸಂಪರ್ಕವನ್ನು ಮತ್ತಷ್ಟು ಗಾಢಗೊಳಿಸುವ ಐತಿಹಾಸಿಕ ಮೈಲಿಗಲ್ಲು. ಈ ಒಪ್ಪಂದ ರೈತರು, ಯುವಕರು, ಮಹಿಳೆಯರು, ಉದ್ಯಮಿಗಳು ಹಾಗೂ ಎಂಎಸ್‌ಎಂಇಗಳಿಗೆ ಹೊಸ ಅವಕಾಶಗಳನ್ನು ತೆರೆದಿಡುತ್ತದೆ.
> ■ ನರೇಂದ್ರ ಮೋದಿ, ಪ್ರಧಾನಿ

> ಈ ಒಪ್ಪಂದವು ನಮ್ಮ ರಫ್ತುದಾರರಿಗೆ 1.4 ಬಿಲಿಯನ್ ಜನಸಂಖ್ಯೆಯ ಮಾರುಕಟ್ಟೆಗೆ ಅಪೂರ್ವ ಪ್ರವೇಶ ಒದಗಿಸುತ್ತದೆ.
> ■ ಕ್ರಿಸ್ಟೋಫರ್ ಲಕ್ಸನ್, ನ್ಯೂಜಿಲೆಂಡ್ ಪ್ರಧಾನಿ

ರಫ್ತುಗಳಿಗೆ ಶೇ.100 ಸುಂಕಮುಕ್ತ ಪ್ರವೇಶ



ಒಪ್ಪಂದದಲ್ಲಿ ಭಾರತದಿಂದ ನ್ಯೂಜಿಲೆಂಡ್‌ಗೆ ಸಾಗುವ ಎಲ್ಲಾ ಪ್ರಮುಖ ಉತ್ಪನ್ನಗಳಿಗೆ ಅಂದರೆ, ಉಡುಪು, ಚರ್ಮ ಉತ್ಪನ್ನಗಳು, ಪಾದರಕ್ಷೆಗಳು, ರತ್ನಾಭರಣ, ಎಂಜಿನಿಯರಿಂಗ್ ವಸ್ತುಗಳು ಮತ್ತು ಸಂಸ್ಕರಿತ ಆಹಾರಗಳಿಗೆ ಶೇ.100 ಸುಂಕಮುಕ್ತ ಪ್ರವೇಶ ದೊರೆಯಲಿದೆ. ಇದುವರೆಗೆ ಕೆಲವು ಉತ್ಪನ್ನಗಳಿಗೆ ಶೇ.10ರವರೆಗೆ ಸುಂಕ ವಿಧಿಸಲಾಗುತ್ತಿತ್ತು.ಇದರಿಂದ ವಿಶೇಷವಾಗಿ ಕಾರ್ಮಿಕಾಧಾರಿತ ಕೈಗಾರಿಕೆಗಳಿಗೆ ಜಾಗತಿಕ ಸ್ಪರ್ಧಾತ್ಮಕತೆ ಹೆಚ್ಚಾಗಿ, ಉದ್ಯೋಗ ಸೃಷ್ಟಿಗೆ ಉತ್ತೇಜನ ಸಿಗಲಿದೆ.

ಸಂವೇದನಾಶೀಲ ಕ್ಷೇತ್ರಗಳಿಗೆ ರಕ್ಷಣಾ ವಲಯ

ದೇಶೀಯ ರೈತರು ಮತ್ತು ಸಣ್ಣ ಉದ್ಯಮಗಳ ಹಿತಾಸಕ್ತಿ ಕಾಪಾಡಲು, ಭಾರತವು ಹಾಲು ಉತ್ಪನ್ನಗಳು, ಸಕ್ಕರೆ, ಕೆಲವು ಕೃಷಿ ಉತ್ಪನ್ನಗಳು, ಲೋಹಗಳು ಸೇರಿದಂತೆ ಹಲವು ಸಂವೇದನಾಶೀಲ ವಸ್ತುಗಳನ್ನು ಈ ಒಪ್ಪಂದದ ವ್ಯಾಪ್ತಿಯಿಂದ ಹೊರಗಿಟ್ಟಿದೆ. ಇದರ ಜತೆಗೆ ಸೇಬು, ಕಿವಿ ಹಣ್ಣು, ಮನೂಕಾ ಜೇನು ಮೊದಲಾದ ಉತ್ಪನ್ನಗಳಿಗೆ ಪ್ರಮಾಣಿತ ಆಮದು ನಿಯಮಗಳು ಹಾಗೂ ಕನಿಷ್ಠ ಬೆಲೆ ವ್ಯವಸ್ಥೆಗಳನ್ನು ಜಾರಿಗೆ ತರುವ ಮೂಲಕ ದೇಶೀಯ ಉತ್ಪಾದಕರಿಗೆ ರಕ್ಷಣೆ ಒದಗಿಸಲಾಗಿದೆ.

ಮಂಗಳೂರಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ | ಎನ್‌ಐಎ ಕೋರ್ಟ್ ತೀರ್ಪು

ಶಾರಿಕ್‌ಗೆ 10 ವರ್ಷ ಕಠಿಣ ಜೈಲು ಶಿಕ್ಷೆ

• **ಬೆಂಗಳೂರು:** ಕರಾವಳಿ ನಗರಿ ಮಂಗಳೂರನ್ನು ಬೆಚ್ಚಿಬೀಳಿಸಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ ಮೊಹಮ್ಮದ್ ಶಾರಿಕ್‌ನನ್ನು ದೋಷಿ ಎಂದು ಘೋಷಿಸಿರುವ ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯವು, 10 ವರ್ಷ ಕಠಿಣ ಕಾರಾಗೃಹ ಶಿಕ್ಷೆ



ವಿಧಿಸಿ ಹಾಗೂ 94 ಸಾವಿರ ರೂ. ದಂಡ ವಿಧಿಸಿ ಮಹತ್ವದ ತೀರ್ಪು ನೀಡಿದೆ.

2022ರ ನವೆಂಬರ್ 19ರಂದು ಮಂಗಳೂರಿನ ಕಂಕನಾಡಿ ರೈಲ್ವೆ ನಿಲ್ದಾಣದ ಸಮೀಪವಿರುವ ನಾಗುರಿ ಎಂಬಲ್ಲಿ ಚಲಿಸುತ್ತಿದ್ದ ಆಟೋ ರಿಕ್ಷಾದಲ್ಲಿ ಭೀಕರ ಸ್ಫೋಟ ಸಂಭವಿಸಿತ್ತು. ಇದು ವ್ಯವಸ್ಥಿತವಾಗಿ ರೂಪಿಸಲಾಗಿದ್ದ ಐಇಡಿ ಬಾಂಬ್ ಸ್ಫೋಟವಾಗಿತ್ತು. ಆರೋಪಿ ಶಾರಿಕ್ ಬಾಂಬ್ ಹೊತ್ತು ಸಾಗಿಸುತ್ತಿದ್ದಾಗಲೇ ಅದು ಆಕಸ್ಮಿಕವಾಗಿ ಸ್ಫೋಟಗೊಂಡಿದ್ದರಿಂದ ಅಂದು ಭಾರಿ ಅನಾಹುತವೊಂದು ತಪ್ಪಿದಂತಾಗಿತ್ತು. ಈ ಘಟನೆಯಲ್ಲಿ ಶಾರಿಕ್ ಮತ್ತು ಆಟೋ ಚಾಲಕ ಪುರುಷೋತ್ತಮ ಪೂಜಾರಿ ಇಬ್ಬರೂ ಗಂಭೀರವಾಗಿ ಗಾಯಗೊಂಡಿದ್ದರು.

ಕಠಿಣ ತೀರ್ಪು: ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ಎನ್‌ಐಎ ವಿಶೇಷ ನ್ಯಾಯಾಲಯವು, ಆರೋಪಿ ವಿರುದ್ಧದ ಸಾಕ್ಷ್ಯಗಳನ್ನು ಪುರಸ್ಕರಿಸಿತು.

➡ಪುಟ ೪

ಇನ್ನೂ ಕಠಿಣ ಶಿಕ್ಷೆ ವಿಧಿಸಬೇಕಿತ್ತು: ಸಂತ್ರಸ್ತ ಆಟೋ ಚಾಲಕ

ತೀರ್ಪಿನ ಕುರಿತು ಪ್ರತಿಕ್ರಿಯಿಸಿರುವ ಸಂತ್ರಸ್ತ ಆಟೋ ಚಾಲಕ ಪುರುಷೋತ್ತಮ ಪೂಜಾರಿ ಅವರು, ಮೊಹಮ್ಮದ್ ಶಾರಿಕ್‌ಗೆ ಕಠಿಣ ಶಿಕ್ಷೆ ವಿಧಿಸಿರುವುದು ಸರಿಯಾದ ನಿರ್ಧಾರ. ಆತ ಮಾಡಿದ ತಪ್ಪಿಗೆ ನಾನು ದೈಹಿಕ ವಾಗಿ, ಮಾನಸಿಕವಾಗಿ ಶಿಕ್ಷೆ ಅನುಭವಿಸುತ್ತಿದ್ದೇನೆ. ಆತ ಜೀವಮಾನದಲ್ಲಿ ಜೈಲಿಂದ ಹೊರಗೆ ಬರಬಾರದು. ಮುಂದೆ ಯಾರೂ ಸಹ ಇಂತಹ ಕೃತ್ಯ ಮಾಡಲು ಧೈರ್ಯ ಮಾಡಬಾರದೆಂದು ತಮ್ಮ ನೋವನ್ನು ವ್ಯಕ್ತಪಡಿಸಿದ್ದಾರೆ.



ತನಿಖೆ ವೇಳೆ ಬಯಲಾದ ಸಂಚು

ಘಟನೆಯ ಬಳಿಕ ಪೊಲೀಸರು ತನಿಖೆ ಆರಂಭಿಸಿದಾಗ ಸುಟ್ಟುಹೋಗಿದ್ದ ಪ್ರೆಶರ್ ಕುಕ್ಕರ್ ಪತ್ತೆಯಾಗಿತ್ತು. ಅದರೊಳಗೆ ಡಿಟೋನೇಟರ್, ಸರ್ಕ್ಯೂಟ್ ಮತ್ತು ಬ್ಯಾಟರಿಗಳನ್ನು ಅಳವಡಿಸಿರುವುದು ಕಂಡುಬಂದಿದ್ದು, ಇದೊಂದು ಆತ್ಮಾಹುತಿ ಬಾಂಬ್ ದಾಳಿಯ ಪ್ರಯತ್ನವಾಗಿತ್ತು ಎಂಬುದು ಸ್ಪಷ್ಟವಾಗಿತ್ತು. ಶಾರಿಕ್ ತನ್ನ ಅಸಲಿ ಗುರುತು ಮುಚ್ಚಿಡಲು ಹುಬ್ಬಳ್ಳಿಯ ಪ್ರೇಮರಾಜ್ ಎಂಬವರ ಹೆಸರಿನ ನಕಲಿ ಆಧಾರ್ ಕಾರ್ಡ್ ಬಳಸುತ್ತಿದ್ದನು. ಅಲ್ಲದೆ, ಮೈಸೂರಿನಲ್ಲಿ ಬಾಡಿಗೆ ಮನೆ ಪಡೆದು ಅಲ್ಲಿಯೇ ಬಾಂಬ್ ತಯಾರಿಕೆಗೆ ಬೇಕಾದ ಕಚ್ಚಾ ವಸ್ತುಗಳನ್ನು ಅಳವಡಿಸಿದ್ದ ಎಂಬುದು ತನಿಖೆಯಲ್ಲಿ ಸಾಬೀತಾಗಿತ್ತು.

➡ಪುಟ ೪

---

888 ಅಡಿ ಎತ್ತರದ ಮೂರ್ತಿ ನಿರ್ಮಾಣ ಯೋಜನೆಗೆ ಸಿದ್ದರಾಮಯ್ಯ ಚಾಲನೆ

ಪಂಚಶೀಲ ಬೆಟ್ಟದಲ್ಲಿ ಅತಿ ಎತ್ತರದ ಬುದ್ಧನ ಪ್ರತಿಮೆ



• **ಬೆಂಗಳೂರು:** ವಿಶ್ವ ಬೌದ್ಧ ಮಹಾ ಸಮ್ಮೇಳನ ಸಮಿತಿ, ಉಪಾಸಿಕ ಅ್ಯಂಡ್ ಉಪಾಸಕ ಚಾರಿಟಬಲ್ ಟ್ರಸ್ಟ್ ಹಾಗೂ ಇಂಟರ್‌ನ್ಯಾಷನಲ್ ಬುದ್ದಿಸ್ಟ್ ಮಾಂಕ್ಸ್ ಚಾರಿಟಬಲ್ ಟ್ರಸ್ಟ್, ಚಾಮರಾಜನಗರದ ಉತ್ತವಳ್ಳಿಯ ಪಂಚಶೀಲ ಬೆಟ್ಟದ ನಳಂದ ಜ್ಞಾನ ಮತ್ತು ಅಧ್ಯಯನ ಕೇಂದ್ರವು ಸದಾಶಿವ ನಗರದ ನಾಗಸೇನಾ ಬುದ್ಧ ವಿಹಾರದಲ್ಲಿ ಆಯೋಜಿಸಿದ್ದ ವಿಶ್ವ ಬೌದ್ಧ ಮಹಾ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು.

ಇದೇ ವೇಳೆ ಚಾಮರಾಜನಗರ ಜಿಲ್ಲೆಯಲ್ಲಿ ಸ್ಥಾಪನೆಗೊಳ್ಳಲಿರುವ 888 ಅಡಿ ಎತ್ತರದ ಭಗವಾನ್ ಬುದ್ಧರ ಮೂರ್ತಿ ನಿರ್ಮಾಣ ಯೋಜನೆಗೆ ಚಾಲನೆ ನೀಡಿ, ಪಂಚಶೀಲ ಪಾದಯಾತ್ರೆಯ ಪ್ರಾರಂಭೋತ್ಸವವನ್ನು ಉದ್ಘಾಟಿಸಿದರು. ಬುದ್ಧರ ಮೂರ್ತಿಯ ಮಾದರಿಯನ್ನು ಅನಾವರಣಗೊಳಿಸಿದರು.

ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಮಾತನಾಡಿ, ಚಾಮರಾಜನಗರ ಜಿಲ್ಲೆಯಲ್ಲಿ ಭಗವಾನ್ ಬುದ್ಧನ ಪ್ರತಿಮೆ ಸ್ಥಾಪನೆಯಾಗುತ್ತಿರುವುದು ಸಂಸತದ ವಿಚಾರ. ಇದು ಜಗತ್ತಿನಲ್ಲೇ ಅತಿ ಎತ್ತರದ ಬುದ್ಧ ಪ್ರತಿಮೆ ಎಂದು ಭಾವಿಸಲಾಗಿದೆ.

➡ಪುಟ ೪

ಮದ್ರಾಸ್ ಹೈಕೋರ್ಟ್ ಮುಖ್ಯ ನ್ಯಾ.ಎಸ್.ಎ. ಧರ್ಮಾಧಿಕಾರಿ ಕರೆ

ಭಾರತೀಯ ಸಂಸ್ಕೃತಿ-ಸಿದ್ಧಾಂತಗಳ ಮೌಲ್ಯ ಕಲಿಸಿ

• **ಹೊಸದಿಲ್ಲಿ:** ನಮ್ಮ ಮೂಲ ಸಂಸ್ಕೃತಿ ಪರಂಪರೆಗಳ ಪರಿಚಯವೇ ಇಲ್ಲದಂತಿರುವ ರಾಷ್ಟ್ರೀಯ ಕಾನೂನು ವಿವಿ ವಿದ್ಯಾರ್ಥಿಗಳಿಗೆ, ಭಾರತೀಯ ಸಂಸ್ಕೃತಿ- ಸಿದ್ಧಾಂತಗಳ ಮೌಲ್ಯಗಳು, ಮನುಸ್ಮೃತಿ, ಅರ್ಥಶಾಸ್ತ್ರಗಳನ್ನೂ ಕಲಿಸಬೇಕು ಎಂದು ಮದ್ರಾಸ್ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಎಸ್.ಎ. ಧರ್ಮಾಧಿಕಾರಿ ಕರೆ ನೀಡಿದ್ದಾರೆ.



ಆತ್ಮಾವಲೋಕನಕ್ಕಾಗಿ ಕಲಿಕೆ: ನಮ್ಮ ಕರ್ತವ್ಯ-ಕರ್ಮಗಳ ನಿಭಾಯಿಸುವುದಕ್ಕಾಗಿಯೇ ನಾವು ಈ ಮಹಾನ್ ರಾಷ್ಟ್ರದಲ್ಲಿ ಮಾನವರಾಗಿ ಜನಿಸಿದ್ದೇವೆ. ವಿದ್ಯಾರ್ಥಿಗಳ ಚಿಂತನೆಯಲ್ಲಿ ಸ್ಥಿರತೆ ಮತ್ತು ಪ್ರೌಢತೆ ಮೂಡಿಸಲಷ್ಟೇ ಅಲ್ಲ, ನಮ್ಮ ಕರ್ತವ್ಯ ಹಾಗೂ ಕರ್ಮಗಳ ಬಗ್ಗೆ ಅಸಾಧಾರಣ ಪ್ರಜ್ಞೆಯನ್ನು ಒಳಗೊಂಡಿರುವ ಮಹಾನ್ ಭಾರತೀಯ ಸಂಸ್ಕೃತಿ ಬಗ್ಗೆ ವಿದ್ಯಾರ್ಥಿಗಳಲ್ಲಿ ಆತ್ಮಾವಲೋಕನವಾಗಬೇಕು, ಇದಕ್ಕಾಗಿ ಜೈನ-ಬೌದ್ಧ ಧರ್ಮಗಳ ಸಿದ್ಧಾಂತಗಳು, ಮನುಸ್ಮೃತಿ, ಅರ್ಥಶಾಸ್ತ್ರ ಮತ್ತು ಮೂಲಗ್ರಂಥಗಳ ನಡುವಣ ಸಹಬಾಂಧವ್ಯವನ್ನು ಕಾನೂನು ವಿದ್ಯಾರ್ಥಿಗಳಿಗೆ ಕಲಿಸಬೇಕು ಮತ್ತು ಇವು ಎಲ್ಲಾ ಕಾನೂನು ವಿದ್ಯಾರ್ಥಿಗಳಿಗೆ ಗೊತ್ತಿರಬೇಕೆಂದು ನ್ಯಾಯಮೂರ್ತಿ ಧರ್ಮಾಧಿಕಾರಿ ಪ್ರತಿಪಾದಿಸಿದರು.

➡ಪುಟ ೪

ಕಾನೂನು ಕುರುಡಲ್ಲ

ಕಾನೂನು ಕುರುಡಲ್ಲ, ಬದಲಾಗಿ ಪ್ರತಿಯೊಂದನ್ನೂ ನೋಡುತ್ತೆ. ಕುರುಡು ನಿಷ್ಪಕ್ಷಪಾತ ನ್ಯಾಯ ಬದಲು ಸಮಾಜದಲ್ಲಿನ ಅಸಮಾನತೆ ವಿರುದ್ಧ ಸೂಕ್ಷ್ಮ ಸಂವೇದನೆ, ಜಾಗೃತಿಯನ್ನು ಕಾನೂನು ಪ್ರತಿಪಾದಿಸುತ್ತದೆ. ಈ ನಿಟ್ಟಿನಲ್ಲಿ ಸುಪ್ರೀಂಕೋರ್ಟ್‌ನಲ್ಲಿ ಹಿಂದಿದ್ದ ಕಣ್ಣಿಗೆ ಕರಿಬಟ್ಟೆ ಕಟ್ಟಿದ ನ್ಯಾಯದೇವತೆ ಪ್ರತಿಮೆ ಕಿತ್ತು, ಆ ಜಾಗದಲ್ಲಿ ಕಣ್ತೆರೆದ ಸ್ಥಿತಿಯಲ್ಲಿರುವ ನ್ಯಾಯದೇವತೆ ಮೂರ್ತಿ ಅಳವಡಿಸಿರುವುದು ಬಹಳ ಅರ್ಥಗರ್ಭಿತ ಎಂದರು.

➡ಪುಟ ೪

ಮೋದಿ ಮೇಲೂ ದಾಳಿ ಬಯಸುತ್ತಿದೆಯೇ ಕೈ?

• **ಹೊಸದಿಲ್ಲಿ:** ಅಮೆರಿಕದಲ್ಲಿ ನಡೆದ ಗುಂಡಿನ ದಾಳಿ ಘಟನೆಯನ್ನು ಉಲ್ಲೇಖಿಸಿ ಮಹಾರಾಷ್ಟ್ರ ಕಾಂಗ್ರೆಸ್ ಶಾಸಕ ವಿಜಯ್ ವಾಡೆಟ್ಟಿವಾರ್ ನೀಡಿದ ಹೇಳಿಕೆ ಭಾರೀ ವಿವಾದಕ್ಕೆ ಕಾರಣವಾಗಿದೆ. ಈ ಹೇಳಿಕೆಯನ್ನು ಮುಂದಿಟ್ಟುಕೊಂಡು ಬಿಜೆಪಿ, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ದಾಳಿ ನಡೆಯಬೇಕೆಂಬ ಮನೋಭಾವ ಕಾಂಗ್ರೆಸ್‌ನಲ್ಲಿ ಮೂಡಿದೆ ಎಂದು ಗಂಭೀರ ಆರೋಪ ಮಾಡಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಾಲ್ಗೊಂಡಿದ್ದ ವೈಟ್ ಹೌಸ್ ವರದಿಗಾರರ ಔತಣಕೂಟದ ವೇಳೆ ನಡೆದ ಗುಂಡಿನ ದಾಳಿ ನಂತರ ಈ ವಿವಾದ ಉಂಟಾಗಿದೆ.

➡ಪುಟ ೪



ಮಹಾರಾಷ್ಟ್ರ ಕಾಂಗ್ರೆಸ್ ಶಾಸಕನ ವಿವಾದಾತ್ಮಕ ಹೇಳಿಕೆ

ಎನ್‌ಐಎ ಕಸ್ಟಡಿಗೆ ಎಲ್‌ಇಟಿ ಉಗ್ರರು

ಇಬ್ಬರು ಪಾಕಿಗಳು ಸೇರಿ ಐವರ ಸೆರೆ

• **ಹೊಸದಿಲ್ಲಿ:** ಅಂತಾರಾಜ್ಯ ಲಷ್ಕರ್-ಎ-ತೊಯ್ಬಾ(ಎಲ್‌ಇಟಿ) ಭಯೋತ್ಪಾದಕ ಘಟಕದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ವಹಿಸಿಕೊಂಡಿದ್ದು,



ಇಬ್ಬರು ಪಾಕಿಸ್ತಾನಿ ಪ್ರಜೆಗಳು ಸೇರಿ ಐವರು ಭಯೋತ್ಪಾದಕರನ್ನು ವಶಕ್ಕೆ ಪಡೆದಿದೆ. ಜಮ್ಮು-ಕಾಶ್ಮೀರ ಪೊಲೀಸರ ಮಹತ್ವದ ಕಾರ್ಯಾಚರಣೆಯಲ್ಲಿ ಐವರು ಎಲ್‌ಇಟಿ ಉಗ್ರರನ್ನು, ವಿಶೇಷವಾಗಿ 16 ವರ್ಷಗಳಿಂದ ದೇಶಭ್ರಷ್ಟನಾಗಿದ್ದ ಅಬ್ದುಲ್ಲಾ ಅಲಿಯಾಸ್ ಅಬು ಹುರೇರಾನನ್ನು ಏ.7ರಂದು ಬಂಧಿಸಲಾಗಿತ್ತು. ಎನ್‌ಐಎ, ಪ್ರಕರಣವನ್ನು ವಿಚಾರಣೆಗೆ ವಹಿಸಿಕೊಂಡ ನಂತರ, ಶಂಕಿತರನ್ನು ಜಮ್ಮುವಿನ ವಿಶೇಷ ಎನ್‌ಐಎ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿ, ನ್ಯಾಯಾಲಯವು ಪಾಕಿಸ್ತಾನಿ ಪ್ರಜೆಗಳಾದ ಹುರೇರಾ ಮತ್ತು ಖುಬೈಬ್‌ನನ್ನು 2 ದಿನ, ಸ್ಥಳೀಯ ಉಗ್ರರನ್ನು 15 ದಿನಗಳ ಅವಧಿಗೆ ಸೋಮವಾರ ಎನ್‌ಐಎ ಕಸ್ಟಡಿಗೆ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

➡ಪುಟ ೪

3,259 ತಾಯಂದಿರಿಂದ ದಾನ | 7,17,048 ಲೀಟರ್ ಎದೆ ಹಾಲು ಸಂಗ್ರಹ

3,283 ಶಿಶುಗಳಿಗೆ ಎದೆಹಾಲು ಅಮೃತಧಾರೆ

▸ ನಂದಿನಿ ಎನ್.

• **ಬೆಂಗಳೂರು:** ತಾಯಿಯ ಎದೆಹಾಲಿನಿಂದ ವಂಚಿತರಾಗುವ ಶಿಶುಗಳಿಗೆ ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆಯ ತಾಯಂದಿರ ಎದೆ ಹಾಲಿನ ಬ್ಯಾಂಕ್ ಅಮೃತಧಾರೆಯಾಗಿದೆ.

ದಿಗಂತ ವಿಶೇಷ

ಮೂರ್ನಾಲ್ಕು ವರ್ಷಗಳಿಂದ ಶಿಶು ಮರಣ ಪ್ರಮಾಣ ತಗ್ಗಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. 2022ರ ಮಾ.8ರಿಂದ ಈವರೆಗೆ 3,259 ತಾಯಂದಿರ ದಾನದಿಂದ 7,17,048 ಲೀಟರ್ ಎದೆ ಹಾಲು ಸಂಗ್ರಹವಾಗಿದೆ.

ರಾಜ್ಯದಲ್ಲಿ ಮೊದಲ ಬಾರಿಗೆ ತಾಯಂದಿರ ಎದೆ ಹಾಲಿನ ಬ್ಯಾಂಕ್ ಅಮೃತಧಾರೆ ಸ್ಥಾಪಿಸುವ ಮೂಲಕ ನವಜಾತ ಶಿಶುಗಳ ಅಪೌಷ್ಟಿಕತೆ ದೂರ ಮಾಡುತ್ತಿದ್ದು, ತಾಯಿಯ ಎದೆ ಹಾಲಿನಲ್ಲಿ ಲವಣಾಂಶ, ಪ್ರೋಟೀನ್, ಶಕ್ಕರಪಿಷ್ಟ, ಫ್ಯಾಟ್, ಪ್ರತಿರೋಧಕ ಶಕ್ತಿ ಹೆಚ್ಚಿಸುವ ಜೀವಕಣ ಅತ್ಯಧಿಕವಾಗಿದ್ದು, ಇದು ಶಿಶುವಿನ ಬೆಳವಣಿಗೆಗೆ ಅಗತ್ಯವಾಗಿ ಬೇಕಾಗಿದೆ. ಹುಟ್ಟಿದಾಗಿನಿಂದ ಶಿಶುವಿಗೆ ಆರು ತಿಂಗಳವರೆಗೆ ತಾಯಿ ಹಾಲನ್ನು ಬಿಟ್ಟು ಬೇರೆ ಏನನ್ನೂ ನೀಡಬಾರದು ಎನ್ನುತ್ತಾರೆ ವೈದ್ಯರು. ಅದಕ್ಕಾಗಿ ಇಂತಹ ತಾಯಿ ಹಾಲು ವಂಚಿತ ಮಕ್ಕಳಿಗೆ ಈ ಹಾಲು ವರದಾನವಾಗಿದೆ.

➡ಪುಟ ೪



- ಹಾಲು ದಾನ ಮಾಡಿದ ತಾಯಂದಿರು - 3,259
- ಸಂಗ್ರಹವಾದ ಒಟ್ಟು ಹಾಲು - 7,17,048 ಲೀ.
- ಪ್ರಯೋಜನ ಪಡೆದ ಶಿಶುಗಳು - 3,283
- ಅವಧಿಪೂರ್ವ ಶಿಶುಗಳು - 1,136
- ಪೂರ್ಣಾವಧಿ ಶಿಶುಗಳು - 2,147

> ಅಗತ್ಯಕ್ಕಿಂತ ಹೆಚ್ಚು ಎದೆಹಾಲು ಹೊಂದಿರುವ ತಾಯಂದಿರೆಲ್ಲ ಹಾಲನ್ನು ದಾನ ಮಾಡಲು ಸಾಧ್ಯವಾಗುವುದಿಲ್ಲ. ಎಚ್‌ಐವಿ ಸೋಂಕು, ಜ್ವರ ಅಥವಾ ಇನ್ನಿತರ ಗಂಭೀರ ಸಮಸ್ಯೆಗೆ ಒಳಗಾಗಿದ್ದರೆ ಹಾಲನ್ನು ದಾನವಾಗಿ ಕೊಡುವಂತಿಲ್ಲ. ತಜ್ಞರಿಂದ ಪರೀಕ್ಷೆಗೆ ಒಳಗಾದ ಬಳಿಕವಷ್ಟೆ ಇನ್ನೊಂದು ಶಿಶುವಿಗೆ ಹಾಲನ್ನು ನೀಡಬಹುದು.
> ■ ಡಾ.ಸಂತೋಷ್ ಡಿ., ಸ್ಥಾನಿಕ ವೈದ್ಯಾಧಿಕಾರಿ, ವಾಣಿವಿಲಾಸ ಆಸ್ಪತ್ರೆ

ವಾರಕ್ಕೊಮ್ಮೆ ಮಾತ್ರ ಪೂರೈಕೆ | ಇಚ್ಛೆಯ ಆಯ್ಕೆಗಿಲ್ಲ ಅವಕಾಶ

ಮೈಸೂರು ಸಿಲ್ಕು, ಎಲ್ಲಿಯೂ ಇಲ್ಲ ಶಿಲ್ಕು

▸ ವೀರಣ್ಣ ಬಳಿಗಾರ

• **ಬೆಂಗಳೂರು:** ಆಕರ್ಷಕ ಸೌಂದರ್ಯ, ಕಲಾತ್ಮಕ ವಿನ್ಯಾಸ, ಐಷಾರಾಮಿ ಗುಣಮಟ್ಟ, ದೀರ್ಘಕಾಲ ಬಾಳಿಕೆ ಬರುವ ಹಾಗೂ ಕರ್ನಾಟಕದ ಅಸ್ಮಿತೆಯಾಗಿರುವಂತಹ ಮೈಸೂರು ರೇಷ್ಮೆ ಸೀರೆಗಳಿಗೆ ಭಾರೀ ಬೇಡಿಕೆ ಇದೆ. ಆದರೆ, ಗ್ರಾಹಕರ ಬೇಡಿಕೆಗೆ ತಕ್ಕಂತೆ ಸೀರೆಗಳು ಪೂರೈಕೆ ಆಗುತ್ತಿಲ್ಲ ಎಂಬುದು ಬೇಸರದ ಸಂಗತಿ.

ದಿಗಂತ ವಿಶೇಷ

ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ 14 ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ. ವಾರಕ್ಕೊಮ್ಮೆ ಒಂದು ಬಾರಿ ಮಾತ್ರ ಸೀರೆಗಳು ಬರುತ್ತವೆ. ಸೀರೆ ಆಯ್ಕೆ ಮಾಡಿಕೊಳ್ಳಲು ಅವಕಾಶವೇ ಇರುವುದಿಲ್ಲ, ಸಿಕ್ಕಿದ್ದನ್ನು ತೆಗೆದುಕೊಳ್ಳಬೇಕೆಂದು ಮಳಿಗೆ ಸಿಬ್ಬಂದಿ ಒತ್ತಡ ಹೇರುತ್ತಾರೆ ಎಂಬುದು ಗ್ರಾಹಕರು ಹೇಳುತ್ತಾರೆ.

ಐತಿಹಾಸಿಕ ಮೈಸೂರು ರೇಷ್ಮೆ ಸೀರೆಗೆ ಕರ್ನಾಟಕವಲ್ಲದೆ, ದೇಶ-ವಿದೇಶಗಳಲ್ಲೂ ಬೇಡಿಕೆ ಇದ್ದು ನಿತ್ಯ ಸಾವಿರಾರು ಮಂದಿ ಸೀರೆ ಖರೀದಿಗೆ ಪರದಾಡುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಪ್ರಭಾವ ಬಳಸಿದರೂ ಸಿಗುತ್ತಿಲ್ಲ. ಉತ್ತಮ ಗುಣಮಟ್ಟದ ರೇಷ್ಮೆ ಸೀರೆಗಳನ್ನು ಉತ್ಪಾದಿಸುವ ಕೆಎಸ್‌ಐಸಿಎಲ್ ವರ್ಷಕ್ಕೆ ಅಂದಾಜು 1.20 ಲಕ್ಷ ಸೀರೆ ಉತ್ಪಾದಿಸುತ್ತಿದೆ.

➡ಪುಟ ೪



₹3.50 ಲಕ್ಷವರೆಗೂ ದರ

ಕೆಎಸ್‌ಐಸಿಎಲ್ ಉತ್ಪಾದಿಸುವ ಮೈಸೂರು ಸಿಲ್ಕ್ ಸೀರೆಗಳ ದರ 19 ಸಾವಿರದಿಂದ ಆರಂಭಗೊಂಡು 3.50 ಲಕ್ಷದವರೆಗೂ ಇದೆ. ದುಬಾರಿ ರೇಷ್ಮೆ ಸೀರೆಗಳಿಗೂ ಬೇಡಿಕೆ ಇದೆ. ಅದರಲ್ಲಿ 20 ರಿಂದ 35 ಸಾವಿರ ರೂ. ವರೆಗಿನ ಸೀರೆಗಳಿಗೆ ಅತೀ ಹೆಚ್ಚು ಬೇಡಿಕೆ ಇದೆ. ಹಬ್ಬ ಮತ್ತು ವಿಶೇಷ ದಿನಗಳಂದು ಮಾತ್ರವಲ್ಲ ಯಾವಾಗಲೂ ಈ ಮೈಸೂರು ಸಿಲ್ಕ್‌ಸೀರೆಗಳಿಗೆ ಸರತಿ ಸಾಲಿನಲ್ಲಿ ನಿಂತು ಖರೀದಿಸುವಷ್ಟು ಬೇಡಿಕೆ ಇದೆ.

ಉದ್ಯೋಗಿಗಳ ಕೊರತೆ

ಸದ್ಯ ಕೆಎಸ್‌ಐಸಿಎಲ್ ವ್ಯಾಪ್ತಿಯ ಕಾರ್ಖಾನೆಯಲ್ಲಿ 260ಕ್ಕೂ ಹೆಚ್ಚು ವಿದ್ಯುತ್ ಮಗ್ಗಗಳು (ಪವರ್‌ಲೂಮ್) ಇವೆ. ದಿನವೊಂದಕ್ಕೆ 300ರಿಂದ 350 ಸೀರೆ ಅಷ್ಟೇ ಉತ್ಪಾದಿಸಲಾಗುತ್ತಿದೆ. ಪ್ರಸ್ತುತ 800ರಿಂದ 1,000 ಉದ್ಯೋಗಿಗಳು ಇದ್ದು, ಪ್ರತಿ ವರ್ಷ ಕನಿಷ್ಠ 10ರಿಂದ 15 ಕಾಯಂ ನೌಕರರು ನಿವೃತ್ತರಾಗುತ್ತಿದ್ದಾರೆ. ಬೇಡಿಕೆಗೆ ತಕ್ಕಷ್ಟು ರೇಷ್ಮೆ ಸೀರೆಗಳನ್ನು ಉತ್ಪಾದಿಸಲು ಸಾಧ್ಯವಾಗದಿರುವುದಕ್ಕೆ ಉದ್ಯೋಗಿಗಳ ಕೊರತೆಯೇ ಕಾರಣವಾಗಿದೆ.

➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,60,000**(2,60,000) ಅಪರಂಜಿ ಚಿನ್ನ: **1,53,710**(1,54,040) ಆಭರಣ ಚಿನ್ನ: **1,40,900**(1,41,200) ಚಿನ್ನ 10 ಗ್ರಾಂಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **77,303**(639↑) ಎನ್‌ಎಸ್‌ಇ **24,092**(194↑)

$1 = ₹94.26

ಶಾರಿಕ್‌ಗೆ 10 ವರ್ಷ ಕಠಿಣ ಜೈಲು ಶಿಕ್ಷೆ

ಪುಟ ೧➔ಐಪಿಸಿ ಸೆಕ್ಷನ್ 121ಎ ಅಡಿಯಲ್ಲಿ ಭಾರತ ಸರ್ಕಾರದ ವಿರುದ್ಧ ಯುದ್ಧ ಸಾರುವ ಸಂಚು, ಸೆಕ್ಷನ್ 122ರ ಅಡಿಯಲ್ಲಿ ಶಸ್ತ್ರಾಸ್ತ್ರ ಸಂಗ್ರಹಣೆ, ಯುಎಪಿಎ ಕಾಯ್ದೆಯ ವಿವಿಧ ಕಠಿಣ ಸೆಕ್ಷನ್‌ಗಳ ಅಡಿಯಲ್ಲಿ ಶಿಕ್ಷೆ ಪ್ರಕಟಿಸಿದೆ.

ನಾನು ಯಾವುದೇ ತಪ್ಪು ಮಾಡಿಲ್ಲ ಆರೋಪಿ ಸೈಯದ್: ಇನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡನೇ ಆರೋಪಿ, ನಾನು ಯಾವುದೇ ತಪ್ಪು ಮಾಡಿಲ್ಲ ಎಂದು ಕೋರ್ಟ್ ಮುಂದೆ ಹೇಳಿದ್ದಾನೆ. ಹೀಗಾಗಿ ಎ2 ಸೈಯದ್ ವಿರುದ್ಧ ಸಾಕ್ಷ್ಯ ವಿಚಾರಣೆ ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಲಿದೆ.


ತನಿಖೆ ವೇಳೆ ಬಯಲಾದ ಸಂಚು

ಪುಟ ೧➔ಪ್ರಕರಣದ ಗಾಂಭೀರ್ಯ ಅರಿತ ಕೇಂದ್ರ ಸರ್ಕಾರವು ತನಿಖೆಯನ್ನು ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ವಹಿಸಿತ್ತು. ಶಾರಿಕ್ ಐಸಿಸ್ ಉಗ್ರ ಸಂಘಟನೆಯಿಂದ ಪ್ರೇರಿತನಾಗಿ ರಾಜ್ಯಾದ್ಯಂತ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸಿದ್ದ ಲೋನ್ ವುಲ್ಫ್ ಎಂಬುದು ತನಿಖೆಯ ವೇಳೆ ಬಹಿರಂಗವಾಗಿತ್ತು. ಮಂಗಳೂರಿನ ಕದ್ರಿ ದೇವಸ್ಥಾನ ಅಥವಾ ಜನನಿಬಿಡ ಪ್ರದೇಶವೇ ಆತನ ಅಂದಿನ ಗುರಿಯಾಗಿತ್ತು ಎಂಬ ಶಂಕೆ ವ್ಯಕ್ತವಾಗಿತ್ತು.

ಶಿಕ್ಷೆ ಕಡಿಮೆ ಮಾಡುವಂತೆ ಶಾರಿಕ್ ಮನವಿ

ತನಗೆ ಚಿಕ್ಕ ವಯಸ್ಸಿನ ಸಹೋದರಿ ಇದ್ದಾಳೆ. ಕುಟುಂಬವನ್ನು ತಾನೇ ನಿರ್ವಹಿಸಬೇಕು. ಕಡಿಮೆ ಶಿಕ್ಷೆ ನೀಡುವಂತೆ ಅಪರಾಧಿ ಶಾರಿಕ್ ಮನವಿ ಮಾಡಿದ್ದ. ಈತನ ಮನವಿಯನ್ನು ಮಾನ್ಯ ಮಾಡಿದ್ದ ನ್ಯಾಯಾಲಯ ಭಾರತೀಯ ನ್ಯಾಯ ಸಂಹಿತೆ ಹಾಗೂ ಯುಎಪಿಎ ಕಾಯ್ದೆಗಳ ಸೆಕ್ಷನ್‌ನಲ್ಲಿ ಅಪರಾಧಿಗೆ 10 ವರ್ಷ ಕಠಿಣ ಸಜೆ ಪ್ರಕಟಿಸಿದೆ. ಇನ್ನು 2022ರಿಂದ ಜೈಲಿನಲ್ಲಿರುವ ಶಾರಿಕ್, ಈಗಾಗಲೇ ಮೂರುವರೆ ವರ್ಷ ಸಜೆ ಅನುಭವಿಸಿದ್ದಾನೆ. ಉಳಿದ ಏಳೂವರೆ ವರ್ಷ ಜೈಲಿನಲ್ಲಿ ಇರಬೇಕಿದೆ.

ರಾಮ ಬಾಣ



ವಿಶ್ವೇಶ್ವರ ಭಟ್ಟರಿಗೆ ಸೌರಭ ಪ್ರಶಸ್ತಿ

ಕುಮಟಾ: ಸೌರಭ, ಕುಮಟಾ ಇದರ 30ನೇ ವಾರ್ಷಿಕೋತ್ಸವದ ಅಂಗವಾಗಿ ಭಾನುವಾರ ಪಟ್ಟಣದ ಹವ್ಯಕ ಸಭಾ ಮಂಟಪದಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಅನುಸಂದಾನ ಮತ್ತು ರಾಷ್ಟ್ರೀಯ ಸೌರಭ ಸಮ್ಮಾನ ಪ್ರಶಸ್ತಿಯನ್ನು ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ಟ ಅವರಿಗೆ ಪ್ರದಾನ ಮಾಡಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ವಿಶ್ವೇಶ್ವರ ಭಟ್ಟ, ತನಗೆ ನೂರಾರು ಕಡೆಯಿಂದ ಸಾವಿರಾರು ಸನ್ಮಾನಗಳಾಗಿವೆ. ಆದರೆ, ನನ್ನ ಹುಟ್ಟೂರಿನಲ್ಲಿ ನೀಡಿರುವ ಈ ಸನ್ಮಾನ ನನ್ನ ಜೀವನದ



ಅವಿಸ್ಮರಣೀಯ ಕ್ಷಣದಲ್ಲಿ ಒಂದು ಎಂದು ಅವರು ಹೇಳಿದರು. ಇಂದಿನ ದಿನದಲ್ಲಿ ಪ್ರಶಸ್ತಿ ಕೊಡುವುದು, ತೆಗೆದುಕೊಳ್ಳುವುದರ ಕುರಿತು ಸಂದೇಹಗಳೆ ಹೆಚ್ಚಿರುತ್ತವೆ. ಒಬ್ಬನೆ ಸಾಧನೆ ಮಾಡಿದ್ದಾನೆ ಎಂದು ಕೊಂಡರೆ ಅದು ಮುರ್ಖತನ. ಆ ಸಾಧನೆಗ ನೂರಾರು ಜನರ ಕೊಡುಗೆ ಇರುತ್ತದೆ. ಹಾಗಾಗಿ ನಾನೇನಾದರೂ ಸಾಧನೆ ಮಾಡಿದ್ದರೆ ಅದಕ್ಕೆ ನೂರಾರು ಜನರ ಬೆಂಬಲದಿಂದ ಇದು ಸಾಧ್ಯವಾಗಿದೆ ಎಂದುಕೊಂಡಿದ್ದೇನೆ ಎನ್ನುತ್ತಾ ಹಿಂದಿನ ಎಲ್ಲಾ ಸಂಸ್ಥೆಗಳನ್ನು ಸ್ಮರಿಸಿದ ವಿಶ್ವೇಶ್ವರ ಭಟ್ಟ ಎಲ್ಲರಿಗೆ ವಂದನೆ ಸಲ್ಲಿಸಿದರು. ಅಧ್ಯಕ್ಷತೆಯನ್ನು ಸೌರಭದ ಅಧ್ಯಕ್ಷ ಶ್ರೀಕಾಂತ ಭಟ್ಟ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಮಾಜಿ ಸಂಸದ ಪ್ರತಾಪ್ ಸಿಂಹ, ಸೌರಭದ ಗೌರವ ಅಧ್ಯಕ್ಷ ಮೋಹನ ಹೆಗಡೆ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ಅರುಣ ಹೆಗಡೆ ಸನ್ಮಾನ ಪತ್ರ ವಾಚಿಸಿದರು. ಸೌರಭ ನಿರ್ದೇಶಕ ಗಣೇಶ ಜೋಶಿ ಕಾರ್ಯಕ್ರಮ ನಿರೂಪಿಸಿದ್ದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಭಾರತದ ವಿರುದ್ಧ ಭಯೋತ್ಪಾದನೆಯನ್ನು ಛೂ ಬಿಟ್ಟ, ಜಗತ್ತಿಗೆ ಭಯೋತ್ಪಾದನೆಯನ್ನು ರಫ್ತು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ ಪಾಕಿಸ್ತಾನವು ಈಗ ತಾನೆ ಅದರ ಉಪಟಳವನ್ನು ಎದುರಿಸುತ್ತಿದೆ - ಸಂಪಾದಕೀಯ ವಾಕ್ಯ

- ಬಿತ್ತಿದಂತೆ ಬೆಳೆ, ಬೇವು ಬಿತ್ತಿದರೆ ಮಾವು ಸಿಕ್ಕೀತೇ!

ದಿನ ಭವಿಷ್ಯ

ಮೇಷ ಗುರಿ ಸಾಧಿಸುವ ಛಲ ನಿಮ್ಮದು. ಕೋಪದಿಂದ ಎಗರಾಡುವ ಪ್ರಸಂಗ ಬಂದೀತು. ಇತರರನ್ನು ಅರಿತು ವ್ಯವಹರಿಸಲು ಪ್ರಯತ್ನಿಸಿ.

ವೃಷಭ ಅವಕಾಶಗಳು ನಿಮ್ಮ ಮುಂದಿವೆ. ಅವನ್ನು ಸದುಪಯೋಗ ಮಾಡುವ ಕಾರ್ಯ ನಿಮ್ಮದು. ಕಳೆದುದಕ್ಕೆ ಕೊರಗುತ್ತಾ ಉತ್ಸಾಹ ಕಳಕೊಳ್ಳದಿರಿ.

ಮಿಥುನ ನಿಮ್ಮ ಕೆರಿಯರ್‌ಗೆ ಆದ್ಯತೆ ಕೊಡಿ. ಹೊಣೆ ವಹಿಸಬೇಕಾದ ಸಮಯ ಬಂದಿದೆ. ಕಾಲಹರಣ ಮಾಡಬೇಡಿ. ಹಣದ ಕೊರತೆ ಕಾಡಬಹುದು.

ಕಟಕ ನಿಮ್ಮ ಬದುಕಲ್ಲಿ ಇತರರ ಹಸ್ತಕ್ಷೇಪ ಅಸಹನೆ ಮೂಡಿಸಲಿದೆ. ಆರ್ಥಿಕ ವ್ಯವಹಾರವೊಂದು ನೀವು ನಿರೀಕ್ಷಿಸಿದಂತೆ ಸಾಗದು. ಧನ ಹಾನಿ ಉಂಟಾದೀತು.

ಸಿಂಹ ಮನಸ್ಸು ಕೆಡಿಸುವ ಬೆಳವಣಿಗೆ. ಸಂಗಾತಿ ಜತೆ ಅಸಮಾಧಾನ. ವೃತ್ತಿಯಲ್ಲಿ ಎಡರುತೊಡರು ಎದುರಿಸುವಿರಿ. ಕೆಲವರ ಅಸಹಕಾರ ಉಂಟಾದೀತು.

ಕನ್ಯಾ ಇತರರ ಜತೆ ಹೆಜ್ಜೆಯಿಟ್ಟು ಸಾಗಿ. ನಿಮ್ಮದೇ ವಿಭಿನ್ನ ದಾರಿ ತುಳಿಯದಿರಿ. ಪರಸ್ಪರ ಸಹಕಾರ ಅಗತ್ಯ. ಕೆಲವು ಅಡ್ಡಿಗಳು ಗೋಚರಿಸಲಿವೆ.

ತುಲಾ ನಿಮ್ಮ ನಿರ್ವಹಣೆ ಇತರರ ಗಮನಕ್ಕೆ ಬರಲಿದೆ. ಕೌಟುಂಬಿಕ ಸೌಹಾರ್ದ. ಮಕ್ಕಳ ಸಾಧನೆಯಿಂದ ತೃಪ್ತಿ. ಆರ್ಥಿಕ ಅಡ್ಡಿ ನಿವಾರಣೆ.

ವೃಶ್ಚಿಕ ಕುಟುಂಬದ ವ್ಯವಹಾರಕ್ಕೆ ಹೆಚ್ಚು ಗಮನ ಕೊಡಿ. ನಿಮ್ಮ ಮೇಲೆ ಒತ್ತಡ ಹೆಚ್ಚಲಿದೆ. ಹೊಸ ವ್ಯವಹಾರ ಆರಂಭಿಸಿದವರಿಗೆ ತೃಪ್ತಿಕರ ಬೆಳವಣಿಗೆ.

ಧನು ವೃತ್ತಿಯಲ್ಲೂ ಖಾಸಗಿಯಾಗಿಯೂ ಉನ್ನತಿ. ದೊಡ್ಡ ಕಿರಿಕಿರಿಯೊಂದು ಅಂತ್ಯ. ಮನಸ್ಸಿಗೆ ನಿರಾಳತೆ. ಆರೋಗ್ಯ ಸುಸ್ಥಿರ.

ಮಕರ ಉತ್ಸಾಹದ ದಿನ. ಆದರೆ ಫಲ ನೀಡದ ಕಾರ್ಯಕ್ಕೆ ಎಳಸಬೇಡಿ. ಅಪರಿಚಿತರ ಜತೆ ಎಚ್ಚರದ ನಡೆಯಿರಲಿ. ಬೇಸ್ತು ಬೀಳುವ ಸಂಭವವಿದೆ.

ಕುಂಭ ನಿಮ್ಮ ಬದುಕು ಸರಿದಾರಿಯಲ್ಲಿ ಸಾಗುತ್ತಿದೆ ಎಂಬ ಭಾವ. ವಿಘ್ನಗಳು ನಿವಾರಣೆ. ದಂಪತಿಗಳಿಗೆ ಶುಭ ಬೆಳವಣಿಗೆ. ಆರ್ಥಿಕ ಕೊರತೆ ನೀಗಲಿದೆ.

ಮೀನ ಅವಸರದ ಹೆಜ್ಜೆ ಇಡಬೇಡಿ. ಯೋಚಿಸಿ ಕಾರ್ಯವೆಸಗಿ. ಕಾಣದ ಕೈಗಳು ನಿಮ್ಮ ವಿರುದ್ಧ ಕಾರ್ಯಾಚರಿಸುತ್ತಿವೆ. ಕೌಟುಂಬಿಕ ಸೌಹಾರ್ದ.

ರಾಹುಕಾಲ: 3.00 - 4.30
ಗುಳಿಕಕಾಲ: 12.00 - 1.30

ಅದೃಷ್ಟ ಸಂಖ್ಯೆ: 0,5,9,4

ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಭರವಸೆ

ವೈದ್ಯರ ನೇಮಕಾತಿ ಶೀಘ್ರ

ಹುಬ್ಬಳ್ಳಿ: ಆರ್ಥಿಕ ಇಲಾಖೆ ರಾಜ್ಯದಲ್ಲಿ 225 ವೈದ್ಯರ ನೇಮಕಾತಿ ಮಾಡಿಕೊಳ್ಳಲು ಅನುಮೋದನೆ ನೀಡಿದೆ. ಶೀಘ್ರದಲ್ಲಿ ಒಳ ಮೀಸಲಾತಿ ಅನ್ವಯ ನೇಮಕಾತಿ ಪ್ರಕ್ರಿಯೆ ನಡೆಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ ಗುಂಡೂರಾವ್ ಹೇಳಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲೂಕು ಆಸ್ಪತ್ರೆಗಳಿಗೆ ಮೂಲ ಸೌಲಭ್ಯ ಒದಗಿಸಿ ದಿನದ 24 ಗಂಟೆ ಕಾರ್ಯ ನಿರ್ವಹಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 1,300 ಶುಶ್ರೂಷಕರ ನೇಮಕ ಮಾಡಿಕೊಳ್ಳಲು ಅವಕಾಶವಿದೆ ಎಂದರು.

ಆರೋಗ್ಯದ ಮೇಲೆ ಬಿಸಿಲಿನ ತಾಪ ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ ರಾಜ್ಯ ಸರ್ಕಾರ ಅಗತ್ಯ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಹೀಟ್ ಸ್ಟ್ರೋಕ್ ಪ್ರಕರಣಗಳಿಗೆ ತುರ್ತು ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗಿದ್ದು, ಎಲ್ಲಾ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಕಾಯ್ದಿರಿಸಲಾಗಿದೆ ಎಂದರು. ಸರ್ಕಾರಿ ಆಸ್ಪತ್ರೆಗಳಲ್ಲಿ ಸರ್ಕಾರಿ ಔಷಧಗಳೇ ಸಿಗಬೇಕು ಎನ್ನುವ ಉದ್ದೇಶದಿಂದ ಈಗಿರುವ ಜೆನರಿಕ್ ಮಳಿಗೆಗಳನ್ನು ತೆರವುಗೊಳಿಸುವ ನಿರ್ಧಾರ ತೆಗೆದುಕೊಂಡಿದ್ದೇವೆ. ಈ ಕುರಿತು ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ನಾವು ಸಹ ನ್ಯಾಯಾಲಯದಲ್ಲಿ ಸಮರ್ಥನೆ ಮಾಡಿಕೊಳ್ಳುತ್ತಿದ್ದೇವೆ ಎಂದು ತಿಳಿಸಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ಸಮೀಪಿಸುತ್ತಿದೆ. ಸಚಿವ ಸಂಪುಟ ಪುನರ್ ರಚನೆಯಾಗಿ ಉಳಿದವರಿಗೂ ಅಲ್ಲಿ ಅವಕಾಶ ದೊರೆಯಬೇಕು. ಹೈಕಮಾಂಡ್ ಹಾಗೂ ಸಿಎಂ ಈ ಬಗ್ಗೆ ಶೀಘ್ರದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದರು.

ಹಿರಿಯ ಶಾಸಕರಿಗೆ ಅವಕಾಶ

ನಾವೊಬ್ಬರೆ ಕಾಯಂ ಸಚಿವರಾಗಬೇಕು ಎಂಬ ನಿಯಮ ಪಕ್ಷದಲ್ಲಿ ಇಲ್ಲ. ಸಾಕಷ್ಟು ಮಂದಿ ಹಿರಿಯರು, ಅನುಭವಿಗಳೂ ಇದ್ದಾರೆ. ಅವರಿಗೂ ಅವಕಾಶ ದೊರೆಯಬೇಕು ಎಂದರು. ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನವನ್ನು ಮುಕ್ತವಾಗಿ ಒಪ್ಪಿಕೊಳ್ಳುತ್ತೇವೆ. ನಾವೆಲ್ಲ ಪಕ್ಷದ ಶಿಸ್ತಿನ ಸಿಪಾಯಿಗಳಾಗಿದ್ದೇವೆ. ಸಚಿವ ಸ್ಥಾನ ಕಳೆದುಕೊಳ್ಳುವವರು ಅವಮಾನ ಎಂದು ಭಾವಿಸಬಾರದು. ಎಲ್ಲರಿಗೂ ಅವಕಾಶ ಸಿಗಬೇಕು ಎನ್ನುವ ದೊಡ್ಡತನ ಇಟ್ಟುಕೊಂಡಿರಬೇಕು ಎಂದರು.



ಆಂಬುಲೆನ್ಸ್ ಸೇವೆ ಸರ್ಕಾರದ ಜವಾಬ್ದಾರಿ

ಶಿಗ್ಗಾವಿ: ಖಾಸಗಿ ಒಡೆತನದಲ್ಲಿರುವ 108 ಆಂಬುಲೆನ್ಸ್ ಸೇವೆ ಸಂಪೂರ್ಣ ಜವಾಬ್ದಾರಿಯನ್ನು ರಾಜ್ಯ ಸರ್ಕಾರವೇ ನಿರ್ವಹಿಸಲಿದೆ. ಮುಂದಿನ ಒಂದು ತಿಂಗಳದಲ್ಲಿ ಆಧುನಿಕ ವ್ಯವಸ್ಥೆ ಮೂಲಕ ದೇಶದಲ್ಲಿಯೇ ಮಾದರಿಯಾಗುವ ಆಂಬುಲೆನ್ಸ್ ಸೇವೆಯನ್ನು ರಾಜ್ಯ ಸರ್ಕಾರ ಕಲ್ಪಿಸಲಿದೆ ಎಂದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ ಗುಂಡುರಾವ್ ತಿಳಿಸಿದರು.

ಬಡವರ ಪರ ಕೆಲಸ ಮಾಡಿ: ಡಿಕೆಶಿ

ಬೆಂಗಳೂರು: ಅಧಿಕಾರಿಗಳು ಬಡವರ ಪರವಾಗಿ ಕೆಲಸ ಮಾಡಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಕಿವಿಮಾತು ಹೇಳಿದರು.



ಬೆಂಗಳೂರಿನಲ್ಲಿ ಮಾತ ನಾಡಿ, ರಾಜಕಾರಣಿಗಳ ಕಾಲಾವಧಿ ಕೇವಲ 5 ವರ್ಷ. ನಾವು ಈ ಸ್ಥಾನಕ್ಕೆ ಬರಬೇಕು ಎಂದರೆ ಎಷ್ಟು ನೀರು ಕುಡಿದಿರುತ್ತೇವೆ, ಏನೇನು ಮಾಡಿರುತ್ತೇವೆ ಎನ್ನುವುದು ನಿಮಗೂ ಗೊತ್ತಿರುತ್ತದೆ. ನೀವು 25- 30 ವರ್ಷಕ್ಕೆ ಅಧಿಕಾರಿಗಳಾಗುತ್ತೀರಿ. ಅವರು, ಇವರು ಯಾರೇ ಬಂದರೂ ಜಾತಿ, ಪ್ರಭಾವ ಬಳಸಿಕೊಂಡು ಮುಂದುವರೆಯುವವರು ನೀವು. ರಾಜಕಾರಣ ನಮಗಿಂತ ನಿಮಗೇ ಚೆನ್ನಾಗಿ ಗೊತ್ತಿದೆ. ಯಾವ ಅಧಿಕಾರಿಗಳೂ ಕಡಿಮೆಯಿಲ್ಲ, ಕೆಲವೊಬ್ಬರು ದಡ್ಡರು ಇರಬಹುದು. ಹೇಗೆ ಪ್ರಭಾವ ಬಳಸಿಕೊಳ್ಳುವುದು ಎಂದು ಸುಮ್ಮನಿರಬಹುದು. ಆದರೂ ಅಧಿಕಾರಿಗಳು ಚಾಣಕ್ಯರಿದ್ದೀರಿ ಎಂದರು.

ಅಧಿಕಾರಿಗಳನ್ನು ದೇವರ ರೂಪದಲ್ಲಿ ಜನ ನೋಡುತ್ತಾರೆ ಎಂದು ಹೇಳಿದರು.

ಶೀಘ್ರ ಸಿಹಿ ಸುದ್ದಿ ನಿರೀಕ್ಷೆ

ಮೇ ಎರಡನೇ ಅಥವಾ ಮೂರನೇ ವಾರಕ್ಕೆ ಸಿಹಿಸುದ್ದಿ ಕೊಡುತ್ತೇವೆ ಎಂದು ಹೈಕಮಾಂಡ್ ನಾಯಕರು ಹೇಳಿದ್ದಾರೆ ಎಂದು ವಿಧಾನಸಭೆ ಮುಖ್ಯ ಸಚೇತಕ ಅಶೋಕ ಪಟ್ಟಣ ಹೇಳಿದರು. ಸೋಮವಾರ ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ನಾವು ಎವಲಿಗೆ ಹೋಗಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿದ್ದೇವೆ. ಮಲ್ಲಿಕಾರ್ಜುನ ಖರ್ಗೆಯವರೂ ನಮ್ಮ ಜೊತೆ ಮಾತನಾಡಿದ್ದಾರೆ ಎಂದರು. ಮತ್ತೊಂದು ಸಭೆ ಸೇರಲು ಶಾಸಕರು ಒತ್ತಾಯಿಸುತ್ತಿದ್ದಾರೆ. ಉಪಚುನಾವಣೆ ಫಲಿತಾಂಶದ ಬಳಿಕ 40 ಜನ ಮತ್ತೆ ಹೈಕಮಾಂಡ್ ನಾಯಕರ ಭೇಟಿಗೆ ಹೋಗುತ್ತೇವೆ' ಎಂದೂ ಹೇಳಿದರು.



ಮೋದಿ ಮೇಲೂ ದಾಳಿ ಬಯಸುತ್ತಿದೆಯೇ ಕೈ?

ಪುಟ ೧➔ವಾಷಿಂಗ್ಟನ್‌ನ ಹೋಟೆಲ್‌ನಲ್ಲಿ ನಡೆದ ಈ ಘಟನೆಯಲ್ಲಿ ಟ್ರಂಪ್ ಸೇರಿದಂತೆ ಪ್ರಮುಖರು ಸುರಕ್ಷಿತವಾಗಿ ಸ್ಥಳಾಂತರಗೊಂಡಿದ್ದರು. ಈ ಹಿನ್ನೆಲೆಯಲ್ಲಿ ಮಾತನಾಡಿದ ವಾಡೆಟ್ಟಿವಾರ್, 'ಯಾರು ಏನೇ ಮಾಡಿದರೂ ಅದರ ಫಲ ಅನುಭವಿಸಬೇಕಾಗುತ್ತದೆ' ಎಂಬ ಅರ್ಥದ ಹೇಳಿಕೆ ನೀಡಿರುವ ವಿಡಿಯೋವನ್ನು ಬಿಜೆಪಿ ಹಂಚಿಕೊಂಡಿದ್ದು, ಇದೇ ವಿಚಾರಕ್ಕೆ ತೀವ್ರ ರಾಜಕೀಯ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಬಿಜೆಪಿ ವಕ್ತಾರ ಶೇಹ್ಜಾದ್ ಪೂನಾವಾಲಾ, ಕಾಂಗ್ರೆಸ್ ರಾಜಕೀಯ ಟೀಕೆಯನ್ನು ಮೀರಿ ಹಿಂಸಾತ್ಮಕ ಘಟನೆಯನ್ನು ಸಮರ್ಥಿಸುವ ಮಟ್ಟಕ್ಕೆ ಕಾಂಗ್ರೆಸ್ ಪಕ್ಷ ಇಳಿದಿದೆ ಎಂದು ಆರೋಪಿಸಿದರು. 'ವಾಡೆಟ್ಟಿವಾರ್ ಹೇಳಿಕೆ ಮೂಲಕ ಟ್ರಂಪ್ ಮೇಲೆ ನಡೆದ ದಾಳಿಯನ್ನು ಸಮರ್ಥಿಸಿ, ಭಾರತದಲ್ಲಿಯೂ ಇಂತಹ ಮನೋಭಾವ ಇದೆ ಎಂದು ಹೇಳಿದ್ದಾರೆ. ಇದು ಪ್ರಧಾನಿ ಮೋದಿ ವಿರುದ್ಧ ಇಂತಹ ಘಟನೆ ನಡೆಯಲಿ ಎಂಬ ಆಶಯವನ್ನೇ ಸೂಚಿಸುತ್ತದೆ' ಎಂದು ಅವರು ಕಿಡಿಕಾರಿದರು. ಜತೆಗೆ ಈ ಹೇಳಿಕೆಯನ್ನು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಖಂಡಿಸಲಿ ಎಂದು ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಈ ಹೇಳಿಕೆಗಳಿಗೆ ಕ್ಷಮೆ ಕೇಳಬೇಕು ಎಂದು ಬಿಜೆಪಿ ಆಗ್ರಹಿಸಿದ್ದು, ಈ ಮೂಲಕ ಪಕ್ಷದ ನಿಜಸ್ವರೂಪ ಬಹಿರಂಗವಾಗಿದೆ ಎಂದು ಪೂನಾವಾಲಾ ಆರೋಪಿಸಿದರು.

ಇದೇ ವೇಳೆ ಮತ್ತೊಬ್ಬ ಬಿಜೆಪಿ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ ಕಾಂಗ್ರೆಸ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿ, 'ಪ್ರಜಾಪ್ರಭುತ್ವದ ಮೂಲಕ ಪ್ರಧಾನಿ ಮೋದಿ ಅವರನ್ನು ಸೋಲಿಸಲು ಸಾಧ್ಯವಾಗದ ಕಾಂಗ್ರೆಸ್, ಈಗ ಅವರ ವಿರುದ್ಧ ದಾಳಿ ನಡೆಯಲಿ ಎಂದು ಬಯಸುತ್ತಿದೆ' ಎಂದು ಸಾಮಾಜಿಕ ಜಾಲತಾಣದಲ್ಲಿ ಆರೋಪಿಸಿದ್ದಾರೆ.

ವಾಡಟ್ಟಿವಾರ್ ಹೇಳಿದ್ದೇನು?

ವಾಡೆಟ್ಟಿವಾರ್ ವಿಡಿಯೋದಲ್ಲಿ ಟ್ರಂಪ್ ಆಡಳಿತವು ಜಾಗತಿಕ ಶಾಂತಿಯನ್ನು ಅಸ್ಥಿರಗೊಳಿಸಿದೆ ಎಂದು ಆರೋಪಿಸಿ, ಅಮೆರಿಕದಲ್ಲಿ ಜನರು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿರುವುದನ್ನು ಉಲ್ಲೇಖಿಸಿದ್ದಾರೆ. ಭಾರತದಲ್ಲಿ ಇದೇ ರೀತಿಯ ಅಸಮಾಧಾನ ಇದ್ದರೂ ಜನರು ಹೊರಬರುತ್ತಿಲ್ಲ ಎಂಬ ಅಭಿಪ್ರಾಯವನ್ನೂ ಅವರು ವ್ಯಕ್ತಪಡಿಸಿದ್ದಾರೆ. 'ದೇಶದ ಸ್ಥಿತಿಗತಿ ಬಗ್ಗೆ ಅಸಮಾಧಾನ ಇದ್ದರೂ ಅದು ಬಹಿರಂಗವಾಗುತ್ತಿಲ್ಲ' ಎಂದೂ ಹೇಳಿದ್ದಾರೆ.

ಭಾರತ-ಕಿವೀಸ್ ಮುಕ್ತ

ಪುಟ ೧➔**ವ್ಯಾಪಾರ ಮತ್ತು ಹೂಡಿಕೆಗೆ ದೊಡ್ಡ ಉತ್ತೇಜನ:** ಈ ಒಪ್ಪಂದದ ಪ್ರಮುಖ ಅಂಶವಾಗಿ, ನ್ಯೂಜಿಲೆಂಡ್ ಮುಂದಿನ 15 ವರ್ಷಗಳಲ್ಲಿ ಭಾರತದಲ್ಲಿ ಸುಮಾರು 20 ಬಿಲಿಯನ್ ಅಮೆರಿಕನ್ ಡಾಲರ್ ನೇರ ವಿದೇಶಿ ಹೂಡಿಕೆ ಮಾಡಲು ಬದ್ಧತೆ ವ್ಯಕ್ತಪಡಿಸಿದೆ. ಕೃಷಿ, ಉತ್ಪಾದನೆ, ತಂತ್ರಜ್ಞಾನ ಮತ್ತು ನವೋದ್ಯಮ ಕ್ಷೇತ್ರಗಳಲ್ಲಿ ಈ ಹೂಡಿಕೆ ಮಹತ್ತರ ಪರಿಣಾಮ ಬೀರುವ ನಿರೀಕ್ಷೆ ಇದೆ.

ಇದರೊಂದಿಗೆ, ಎರಡೂ ದೇಶಗಳ ನಡುವೆ ಸರಕು ಮತ್ತು ಸೇವೆಗಳ ಒಟ್ಟು ದ್ವಿಪಕ್ಷೀಯ ವ್ಯಾಪಾರವನ್ನು ಮುಂದಿನ ಐದು ವರ್ಷಗಳಲ್ಲಿ 5 ಬಿಲಿಯನ್ ಡಾಲರ್‌ಗೆ ದ್ವಿಗುಣಗೊಳಿಸುವ ಗುರಿ ಹೊಂದಲಾಗಿದೆ. ವಾಣಿಜ್ಯ ಸಚಿವ ಪಿಯೂಷ್ ಗೋಯಲ್, 'ಈ ಒಪ್ಪಂದದಲ್ಲಿ ಪ್ರಮುಖವಾಗಿ ರಫ್ತುಗಳ ಬಲವರ್ಧನೆ, ಕೃಷಿ ಉತ್ಪಾದಕತೆ, ಹೂಡಿಕೆ, ಸೇವೆಗಳು ಮತ್ತು ಕೌಶಲ್ಯ ಅಭಿವೃದ್ಧಿಯಂತಹ ಪ್ರಮುಖ ಅಂಶಗಳಿವೆ' ಎಂದು ತಿಳಿಸಿದ್ದಾರೆ.

ಸೇವಾ ಕ್ಷೇತ್ರ ಮತ್ತು ವೀಸಾಗಳಲ್ಲಿ ಹೊಸ ದಾರಿ: ಸೇವಾ ಕ್ಷೇತ್ರದಲ್ಲಿ, ಐಟಿ, ಶಿಕ್ಷಣ, ಹಣಕಾಸು, ಪ್ರವಾಸೋದ್ಯಮ ಸೇರಿದಂತೆ ಸುಮಾರು 118 ಕ್ಷೇತ್ರಗಳಲ್ಲಿ ಭಾರತಕ್ಕೆ ಮಾರುಕಟ್ಟೆ ಪ್ರವೇಶ ಸಿಗಲಿದೆ. ಜತೆಗೆ, ಮೋಸ್ಟ್ ಫೇವರ್ಡ್ ನೇಶನ್ (ಎಂಎಫ್‌ಎನ್) ಸೌಲಭ್ಯವನ್ನು ಹಲವು ಕ್ಷೇತ್ರಗಳಲ್ಲಿ ನೀಡಲಾಗಿದೆ.

ತಾತ್ಕಾಲಿಕ ಉದ್ಯೋಗ ಮಾರ್ಗ: ಭಾರತೀಯ ಪರಿಣಿತರಿಗಾಗಿ 5,000 ವೀಸಾಗಳ ಕೋಟಾದೊಂದಿಗೆ ಹೊಸ ತಾತ್ಕಾಲಿಕ ಉದ್ಯೋಗ ಮಾರ್ಗವನ್ನು ನ್ಯೂಜಿಲೆಂಡ್ ತೆರೆದಿದೆ. ಐಟಿ, ಇಂಜಿನಿಯರಿಂಗ್, ಆರೋಗ್ಯ, ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡುವ ಅವಕಾಶಗಳು ಸಿಗಲಿವೆ. ಪ್ರಧಾನಿ ಮೋದಿ ಅವರು, 'ಈ ಒಪ್ಪಂದವು ಕೌಶಲ್ಯ, ಪ್ರತಿಭೆ ಮತ್ತು ಯುವಶಕ್ತಿಗೆ ಹೊಸ ದಿಕ್ಕು ನೀಡುತ್ತದೆ. ವಿದ್ಯಾರ್ಥಿಗಳು ಮತ್ತು ಪರಿಣಿತರಿಗಾಗಿ ವಿಶ್ವಮಟ್ಟದ ಅವಕಾಶಗಳನ್ನು ತೆರೆದಿಡುತ್ತದೆ,' ಎಂದು ಹೇಳಿದ್ದಾರೆ.

ಇಂಡೋ-ಪೆಸಿಫಿಕ್ ತಂತ್ರದಲ್ಲಿ ಪ್ರಮುಖ ಹೆಜ್ಜೆ: ಈ ಎಫ್‌ಟಿಎ ಭಾರತಕ್ಕೆ ಪೆಸಿಫಿಕ್ ಪ್ರದೇಶದ ಉನ್ನತ ಆದಾಯದ ಮಾರುಕಟ್ಟೆಗೆ ಪ್ರವೇಶ ನೀಡುವ ಮೂಲಕ ಅದರ ಇಂಡೋ-ಪೆಸಿಫಿಕ್ ಆರ್ಥಿಕ ತಂತ್ರವನ್ನು ಬಲಪಡಿಸುತ್ತದೆ. ಮತ್ತೊಂದೆಡೆ, ನ್ಯೂಜಿಲೆಂಡ್‌ಗೆ ವೇಗವಾಗಿ ಬೆಳೆಯುತ್ತಿರುವ ಭಾರತೀಯ ಮಾರುಕಟ್ಟೆಯಲ್ಲಿ ಸ್ಥಿರ ಪ್ರವೇಶ ಸಿಗುತ್ತದೆ.

> ಈ ಒಪ್ಪಂದದ ಕೇಂದ್ರಬಿಂದು ರಫ್ತು ಬಲವರ್ಧನೆ, ಕೃಷಿ ಉತ್ಪಾದಕತೆ, ಹೂಡಿಕೆ, ಸೇವೆಗಳು ಮತ್ತು ಕೌಶಲ್ಯ ಅಭಿವೃದ್ಧಿಯಾಗಿದೆ.
> ■ **ಪಿಯೂಷ್ ಗೋಯಲ್**, ವಾಣಿಜ್ಯ ಮತ್ತು ಕೈಗಾರಿಕಾ ಸಚಿವ

> ಎಫ್‌ಟಿಎ ವ್ಯಾಪಾರದಲ್ಲಿ ಅಡೆತಡೆಗಳನ್ನು ಕಡಿಮೆ ಮಾಡುತ್ತದೆ, ಸ್ಪಷ್ಟ ನಿಯಮಗಳನ್ನು ಒದಗಿಸುತ್ತದೆ ಮತ್ತು ವ್ಯಾಪಾರ ಸಂಬಂಧಗಳನ್ನು ಸುಲಭಗೊಳಿಸುತ್ತದೆ.
> ■ **ಟಾಡ್ ಮೆಕ್‌ಲೇ**, ನ್ಯೂಜಿಲೆಂಡ್ ವ್ಯಾಪಾರ ಮತ್ತು ಹೂಡಿಕೆ ಸಚಿವ

3,283 ಶಿಶುಗಳಿಗೆ ಎದೆಹಾಲು ಅಮೃತಧಾರೆ

ಪುಟ ೧➔2022ರ ಮಾ.8ರ ಮಹಿಳಾ ದಿನದಂದೇ ರಾಜ್ಯದಲ್ಲಿ ಮೊದಲ ಬಾರಿಗೆ ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ತಾಯಿ ಎದೆಹಾಲು ಬ್ಯಾಂಕ್ ಯೋಜನೆ ಆರಂಭಗೊಂಡಿದ್ದು, ಒಟ್ಟು 3,283 ನವಜಾತ ಶಿಶುಗಳು ಇದರ ಪ್ರಯೋಜನ ಪಡೆದಿವೆ. 1 ಕೋಟಿ ರೂ. ವೆಚ್ಚದಲ್ಲಿ ತಾಯಂದಿರ ಎದೆ ಹಾಲಿನ ಬ್ಯಾಂಕ್ ನಿರ್ಮಾಣ ಮಾಡಲಾಗಿದ್ದು, ಪ್ರತಿದಿನ 20 ರಿಂದ 30 ತಾಯಂದಿರು ಎದೆ ಹಾಲು ನೀಡುತ್ತಿದ್ದಾರೆ. ಈ ತಾಯಂದಿರ ಎದೆ ಹಾಲಿನ ಬ್ಯಾಂಕ್‌ಗೆ ಅಮೃತಧಾರೆ ಎಂದು ಹೆಸರಿಡಲಾಗಿದೆ.

ಹಾಲು ನೀಡುವ ಕ್ರಮ: ಕೆಲವು ಬಾಣಂತಿಯರಲ್ಲಿ ಎದೆ ಹಾಲು ಹೆಚ್ಚಿದ್ದು, ನೋವು ಅನುಭವಿಸುತ್ತಿರುತ್ತಾರೆ. ಅಂತಹವರು ವೈದ್ಯರ ಸಲಹೆಯಂತೆ ದಾನ ಮಾಡಲು ಬಯಸುತ್ತಾರೆ. ಅವರಿಗೆ ಆಪ್ತ ಸಮಾಲೋಚನೆ ನಡೆಸಿ, ಘಟಕಕ್ಕೆ ಕಳುಹಿಸಲಾಗುತ್ತದೆ. ಕೆ-ಶೀಟ್ ಸಹಿತ ಬರುವ ತಾಯಂದಿರ ಫೈಲ್ ಚೆಕ್ ಮಾಡಿ, ಸಂಪೂರ್ಣ ಆರೋಗ್ಯವಂತರು ಎಂದು ಖಾತ್ರಿಯಾದ ಬಳಿಕವೇ ಹಾಲು ಪಡೆಯಲಾಗುತ್ತದೆ. ತಾಯಿಗೆ ಸೆರೋಲಜಿ ಪರೀಕ್ಷೆಗಳಾದ ಎಚ್‌ಐವಿ, ಎಚ್‌ಬಿಎಸ್‌ಎಜಿ, ವಿಡಿಆರ್‌ಎಲ್, ಎಚ್‌ಸಿವಿ ಪರೀಕ್ಷೆ ಮಾಡಲಾಗುತ್ತವೆ. ಎಲ್ಲವೂ ನೆಗೆಟಿವ್ ಇರಬೇಕು. ಯಾವುದೇ ಸೋಂಕುಗಳಿದ್ದರೂ ಹಾಲನ್ನು ಪಡೆದುಕೊಳ್ಳಲಾಗುವುದಿಲ್ಲ. ಹೀಗೆ ಪಡೆದ ಹಾಲನ್ನು ಮೈನಸ್ 18-20 ಡಿಗ್ರಿ ಸೆಲ್ಸಿಯಸ್‌ನಲ್ಲಿ ಮೂರು ತಿಂಗಳು ಇಡಬಹುದು. ಅಷ್ಟರೊಳಗೆ ಪ್ಯಾಶ್ಚರೀಕರಣ ಮಾಡಿ, ಸಂಗ್ರಹಿಸಿದ ದಿನಾಂಕದಿಂದ 6 ತಿಂಗಳು ಶೇಖರಿಸಿಡಬಹುದು. ಪ್ಯಾಶ್ಚರೀಕರಣ ನಡೆದ ತಕ್ಷಣ ಕಲ್ಚರ್ ಟೆಸ್ಟ್‌ಗೆ ಕಳುಹಿಸಿ, ಈ ಹಾಲು ಶಿಶುಗಳಿಗೆ ಉಣಿಸಬಹುದು ಎಂದು ಪ್ರಯೋಗಾಲಯದಿಂದ ವರದಿ ಬಂದ ಬಳಿಕಷ್ಟೇ ವೈದ್ಯರ ಸಲಹೆ ಮೇರೆಗೆ ಹಾಲನ್ನು ಶಿಶುಗಳಿಗೆ ನೀಡಲಾಗುತ್ತದೆ.

ಎದೆಹಾಲು ಬ್ಯಾಂಕ್ ಸ್ಥಾಪನೆಗೆ ಸರ್ಕಾರ ಯೋಜನೆ: ಉತ್ತರ ಕರ್ನಾಟಕ ವಿಜಯಪುರದಲ್ಲಿ ಮೊದಲ ಸರ್ಕಾರಿ ಎದೆಹಾಲು ಬ್ಯಾಂಕ್ ವಿಜಯಪುರ ಸರ್ಕಾರಿ ಆಸ್ಪತ್ರೆಯಲ್ಲಿ ಸ್ಥಾಪನೆಯಾಗುತ್ತಿದೆ. ಜತೆಗೆ, ಬೆಂಗಳೂರು, ಬೆಳಗಾವಿ, ಕಲಬುರಗಿ ಮತ್ತು ಮೈಸೂರು ಈ ನಾಲ್ಕು ಕಂದಾಯ ವಿಭಾಗಗಳಲ್ಲಿ ತಾಯಿ ಎದೆಹಾಲು ಬ್ಯಾಂಕ್‌ಗಳನ್ನು ಸ್ಥಾಪಿಸಲು ಸರ್ಕಾರ ಯೋಜನೆ ರೂಪಿಸುತ್ತಿದೆ.

ಮೈಸೂರು ಸಿಲ್ಕು, ಎಲ್ಲಿಯೂ ಇಲ್ಲ ಶಿಲ್ಕು

ಪುಟ ೧➔ಆದರೆ ಉತ್ಪಾದಿಸಿದ ಎಲ್ಲಾ ಸೀರೆಗಳು ಮಾರುಕಟ್ಟೆಗೆ ಬರುತ್ತಿದ್ದಂತೆ ಮಾರಾಟವಾಗುತ್ತವೆ. ನಿಗಮವು ವಾರ್ಷಿಕ 400 ಕೋಟಿ ರೂ. ಲಾಭದಲ್ಲಿದೆ. ಆದರೂ ಬೇಡಿಕೆ ತಕ್ಕಷ್ಟು ಸೀರೆಗಳನ್ನು ತಲುಪಿಸುವಲ್ಲಿ ವಿಫಲವಾಗಿದೆ.

ಒಬ್ಬರಿಗೊಂದೇ ಸೀರೆ: ಇತ್ತೀಚೆಗೆ ಸಾಕಷ್ಟು ಮಂದಿ ನಕಲಿ ರೇಷ್ಮೆ ಖರೀದಿಸಿ ಮೋಸ ಹೋಗುತ್ತಿದ್ದು, ಇದರಿಂದ ಗ್ರಾಹಕರು ಸೀರೆ ಖರೀದಿಸಲು ಕೆಎಸ್‌ಐಸಿಎಲ್ ಮಳಿಗೆಗೆ ಬಂದು ದಿನವಿಡೀ ಸರದಿಯಲ್ಲಿ ನಿಂತು ಕಾದವರಿಗೆ ಸಿಗುವುದು ಬರೀ ಒಂದು ಸೀರೆ ಮಾತ್ರ. ಅಂದರೆ ಕೆಎಸ್‌ಐಸಿ ತನ್ನ ಸೀರೆಗಳಿಗೆ ಇರುವ ಬೇಡಿಕೆಗೆ ತಕ್ಕಂತೆ ಸೀರೆ ಉತ್ಪಾದನೆ ಆಗದೆ ಇರುವುದು ಕೃತಕ ಅಭಾವವೋ ಅಥವಾ ಮಾರಾಟದ ತಂತ್ರವೇ ಎಂದು ಗ್ರಾಹಕರು ಆರೋಪಿಸುತ್ತಿದ್ದಾರೆ.

ಉದ್ಯೋಗಿಗಳ ಕೊರತೆ

ಪುಟ ೧➔ಹೊಸದಾಗಿ ಬರುತ್ತಿರುವ ನೌಕರರಿಗೆ ಸರಿಯಾದ ತರಬೇತಿ ನೀಡಲು ಕನಿಷ್ಠ 3 ರಿಂದ 6 ತಿಂಗಳ ಕಾಲಾವಧಿ ಬೇಕಾಗುತ್ತಿದೆ. ಕೆಲವರು ಮೊದಲೇ ಸಿಲ್ಕ್ ಸೆಂಟರ್‌ನಿಂದ ತರಬೇತಿ ಪಡೆದು ಬಂದಿದ್ದರೂ ಪ್ರೊಬೇಷನರಿ ಅವಧಿ ಪೂರ್ಣಗೊಳಿಸಬೇಕಿದೆ. ಕೆಎಸ್‌ಐಸಿಎಲ್ ಸರ್ಕಾರಿ ಸಂಸ್ಥೆಯಾಗಿದ್ದು, ಗುಣಮಟ್ಟದ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ.

ಎನ್‌ಐಎ ಕಸ್ಟಡಿಗೆ ಎಲ್‌ಇಟಿ ಉಗ್ರರು

ಪುಟ ೧➔**ಮಾಸ್ಟರ್ ಮೈಂಡ್ ಹುರೇರ:** ಉಗ್ರ ಚಟುವಟಿಕೆಗಳ ಮಾಸ್ಟರ್ ಮೈಂಡ್ ಹುರೇರ, ಶ್ರೀನಗರದ ಸಮೀಪ ಹರ್ವಾನ್‌ನಲ್ಲಿ ಭಯೋತ್ಪಾದನಾ ಚಟುವಟಿಕೆಗಳಿಗೆ ಹಣಕಾಸಿನ ನೆರವು ನೀಡುತ್ತಿದ್ದ. ಅಲ್ಲದೇ ದಶಕಗಳ ಹಿಂದೆ ಜಮ್ಮು ಕಾಶ್ಮೀರದೊಳಗೆ ಅಕ್ರಮವಾಗಿ ನುಸುಳಿದ್ದ ಹುರೇರ, ಗಸ್ಸು, ವಾನಿಹೊಮ, ಚಾಟರ್‌ಹಮ ಮತ್ತು ಡೆನಿಹಮ ಇತ್ಯಾದಿ ಗ್ರಾಮಗಳಲ್ಲಿ ತಲೆಮರೆಸಿಕೊಂಡು ಉಗ್ರ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದ. ಹುರೇರಾ ಮತ್ತು ಮತ್ತೊರ್ವ ಪಾಕಿಸ್ತಾನಿ ಭಯೋತ್ಪಾದಕ ಉಸ್ಮಾನ್ ಅಲಿಯಾಸ್ ಖುಬೈಬ್‌ನನ್ನು ಶ್ರೀನಗರದ ಮೂವರು ನಿವಾಸಿಗಳೊಂದಿಗೆ ರಾಜ್ಯ ಮತ್ತು ಕೇಂದ್ರ ತಂಡದ ಜಂಟಿ ಪ್ರಯತ್ನದಲ್ಲಿ ಬಂಧಿಸಲಾಗಿತ್ತು. ಈ ಬಂಧನದಿಂದಾಗಿ ಭಯೋತ್ಪಾದಕ ಚಟುವಟಿಕೆಗಳಿಗೆ ಲಾಜಿಸ್ಟಿಕ್ಸ್ ಮತ್ತು ಧನಸಹಾಯವನ್ನು ಒದಗಿಸುವ ಅತ್ಯಾಧುನಿಕ ಜಾಲದ ಬೆಳಕಿಗೆ ಬಂದಿತ್ತು.

ಪಂಚಶೀಲ ಬೆಟ್ಟದಲ್ಲಿ ಅತಿ ಎತ್ತರದ ಬುದ್ಧನ ಪ್ರತಿಮೆ

ಪುಟ ೧➔ಇಷ್ಟು ಜನ ಬಂತೇಜಿಗಳು ಒಂದೆಡೆ ಸೇರಿರುವುದು ಧರ್ಮದ ಬೆಳವಣಿಗೆಗೆ ಉತ್ತಮ ಹೆಜ್ಜೆ ಎಂದು ಹೇಳಿದರು. ಹಿಂದು ಧಾರ್ಮಿಕ ದತ್ತಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ, ವಿಶ್ವ ಭಾರತ ಮಹಾಸಭಾದ ಅಧ್ಯಕ್ಷ ಮಲ್ಲಿಕಾರ್ಜುನ್ ಛಾಲ್ಕೆ, ರಾಜ್ಯ ಘಟಕದ ಉಪಾಧ್ಯಕ್ಷ ಎಂ.ಸಿ.ಶಿವರಾಜ್, ಮಂಡ್ಯ ಜಿಲ್ಲಾ ಕಾರ್ಯದರ್ಶಿ ಎಸ್.ಸಿ. ನಾರಾಯಣಸ್ವಾಮಿ, ಮೂಡ್ನಕೂಡು ಚಿನ್ನಸ್ವಾಮಿ, ಪೀಪಲ್ಸ್ ಪಾರ್ಟಿ ಅಧ್ಯಕ್ಷ ಡಾ. ವೆಂಕಟಸ್ವಾಮಿ, ಗೌತಮ ಬಂತೇಜಿ ಪಾಲ್ಗೊಂಡಿದ್ದರು.

ಭಾರತೀಯ ಸಂಸ್ಕೃತಿ-ಸಿದ್ಧಾಂತಗಳ ಮೌಲ್ಯ ಕಲಿಸಿ

ಪುಟ ೧➔**ಹಣ ಗಳಿಕೆ ಗುರಿ ದುರದೃಷ್ಟಕರ:** ದೇಶದ ರಾಷ್ಟ್ರೀಯ ಕಾನೂನು ವಿವಿಗಳು ಅದ್ಭುತ ಪ್ರತಿಭೆಗಳನ್ನು ಸೃಷ್ಟಿಸುತ್ತಿವೆ. ಈ ಪ್ರತಿಭೆಗಳು ತಮ್ಮ ಸಮಕಾಲೀನರಿಂದ ಮುಂಚೂಣಿಯಲ್ಲಿರುವುದೂ ಹೌದು. ಆದರೆ, ತಾವು ಆದಷ್ಟು ಕ್ಷಿಪ್ರಗತಿಯಲ್ಲಿ ಮಿಲಿಯಾಧಿಪತಿಗಳಾಗಬೇಕೆಂಬುದೇ ಈ ಪ್ರತಿಭೆಗಳ ಅಂತಿಮ ಗುರಿಯಾಗಿರುವುದು ಮಾತ್ರ ತೀರಾ ದುರದೃಷ್ಟಕರ. ಈ ಪದವೀಧರರು ತಮ್ಮ ಮೂಲ ಸಂಸ್ಕೃತಿ ಮತ್ತು ಸೈದ್ಧಾಂತಿಕ ನೆಲೆಗಟ್ಟಿನೊಂದಿಗಿನ ಸಂಪರ್ಕ ಕಡಿದುಕೊಂಡಂತಿರುವುದು ದುರದೃಷ್ಟಕರ ಎಂದು ಕಾರ್ಯಕ್ರಮವೊಂದರಲ್ಲಿ ನ್ಯಾಯಮೂರ್ತಿ ವಿಷಾದಿಸಿದ್ದಾರೆ.

ಕಾನೂನು ಅಸ್ಮಿತೆಯ ಮರುಸ್ಥಾಪನೆ: ಸಂವಿಧಾನದ ವಿವಿಧ ಭಾಗಗಳಲ್ಲಿ ಪ್ರತಿಫಲಿಸುವ ಭಾರತೀಯ ಇತಿಹಾಸ ಮತ್ತು ಮೂಲಗ್ರಂಥಗಳನ್ನು ಪಠ್ಯಕ್ರಮಕ್ಕೆ ಜೋಡಿಸಬೇಕು ಮತ್ತು ಯುವ ಕಾನೂನು ವಿದ್ಯಾರ್ಥಿಗಳಿಗೆ ಇದನ್ನು ಬೋಧಿಸಬೇಕು. ಮುಖ್ಯವಾಗಿ ದೇಶದ ಪ್ರಮುಖ ರಾಷ್ಟ್ರೀಯ ಕಾನೂನು ವಿವಿಗಳಲ್ಲಿ ಅಧ್ಯಯನನಿರತ ವಿದ್ಯಾರ್ಥಿಗಳಿಗೆ ಕಲಿಸಬೇಕು.

ನ್ಯಾಯಾಂಗ ವ್ಯವಸ್ಥೆಯ ಭಾರತೀಯಕರಣವೆಂದರೆ ಕೇವಲ ಕಾನೂನು ಸುಧಾರಣೆಯಷ್ಟೇ ಅಲ್ಲ, ಬದಲಾಗಿ ಭಾರತದ ಕಾನೂನು ಅಸ್ಮಿತೆಯನ್ನು ಎತ್ತಿಹಿಡಿದು ಮರುಸ್ಥಾಪಿಸುವುದಾಗಿದೆ. ನ್ಯಾಯಾಂಗ ವ್ಯವಸ್ಥೆಯ ಭಾರತೀಯತೆಯು ನ್ಯಾಯದಾನವನ್ನು ಹೆಚ್ಚು ಸುಗಮಗೊಳಿಸುವುದು, ಸಾಂಸ್ಕೃತಿಕವಾಗಿ ಪ್ರಸ್ತುತ ಮತ್ತು ಭಾರತೀಯ ಸಮಾಜದ ಅಗತ್ಯಗಳನ್ನು ನಿಜಕ್ಕೂ ಪ್ರತಿಫಲಿಸಲಿದೆ ಎಂದರು. ಅಳಿದುಳಿದ ವಸಾಹತುಶಾಹಿ ಪರಂಪರೆಯು ನಾವು ನಮ್ಮದೇ ಆದ ಸ್ಪಷ್ಟ ನ್ಯಾಯಾಂಗ ವ್ಯವಸ್ಥೆಯನ್ನು ಹೊಂದುವಲ್ಲಿ ಮಬ್ಬಾಗಿ ಪರಿಣಮಿಸಿದೆ ಎಂದು ಆರೋಪಿಸಿದ ನ್ಯಾಯಮೂರ್ತಿ ಧರ್ಮಾಧಿಕಾರಿ, ಈ ಮುಸುಕನ್ನು ನಿವಾರಿಸಲು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಭಾರತದ ಅಗತ್ಯಗಳಿಗೆ ಪೂರಕವಾಗಿ ಪುನರ್‌ರಚನೆ: ಕಾನೂನು ಯಥಾವತ್ ಕಲಿಕೆಯಾಗಕೂಡದು. ಕಾನೂನಿನ ಪಾತ್ರವೇನು ಎಂಬುದನ್ನು ಅವಲೋಕಿಸಿಕೊಂಡು, ಭಾರತದ ಅಗತ್ಯಗಳಿಗೆ ಪೂರಕವಾಗಿ ಅದನ್ನು ಪುನರ್ ರಚಿಸಬೇಕು. ಭಾರತದಲ್ಲಿ ಪಾಶ್ಚಾತ್ಯ ಕಾನೂನಿನ ಪ್ರಭಾವದ ಬಗ್ಗೆ ಮರು ಚಿಂತನೆ ಮತ್ತು ಪುನರ್ ರಚನೆಯೆಂದರೆ, ಗತಕಾಲದಲ್ಲಿದ್ದುದನ್ನು ಅಳಿಸಿಹಾಕುವುದೆಂದು ಅರ್ಥವಲ್ಲ, ಬದಲಾಗಿ ಕಾನೂನು ಸಂಸ್ಥೆಗಳ ಚಿಂತನೆಯನ್ನು ವಸಾಹತುಶಾಹಿಯಿಂದ ಮುಕ್ತಗೊಳಿಸುವುದಾಗಿದೆ. ಸ್ವಾತಂತ್ರ್ಯಾನಂತರವೂ ಬಹುತೇಕ ಕಾನೂನು ನಿಯಮಾವಳಿಗಳು, ಚಿಂತನೆಗಳು ಭಾರತೀಯ ವಸ್ತುನಿಷ್ಠತೆ ಬದಲು ಬ್ರಿಟಿಷ್ ಪ್ರಭಾವವನ್ನೇ ಪ್ರತಿಬಿಂಬಿಸುತ್ತಿರುವುದು ತೀರಾ ದುರದೃಷ್ಟಕರ ಎಂದು ಹೇಳಿದರು.

ಅರಾಜಕ ಇಂಗ್ಲಿಷ್‌ನಲ್ಲಿ ನ್ಯಾಯದಾನ ವ್ಯರ್ಥ: ಪ್ರಸ್ತುತ ಕಾನೂನು ವ್ಯವಸ್ಥೆ ತೀರಾ ಜಟಿಲವಾಗಿದೆ ಮತ್ತು ಸುಗಮವಾಗಿ ಲಭಿಸುವಂಥದ್ದಲ್ಲ. ಇನ್ನು ಬಹುತೇಕ ಕಾನೂನುಗಳು ಅರಾಜಕ ಇಂಗ್ಲಿಷ್‌ನಲ್ಲಿದ್ದು ಇವು ಕಕ್ಷಿದಾರನಿಗೆ ಸುಲಭವಾಗಿ ಅರ್ಥವಾಗಲ್ಲ, ಕಕ್ಷಿದಾರನಿಗೆ ಕೋರ್ಟ್ ಭಾಷೆ ಅರ್ಥವಾಗಲ್ಲವೆಂದರೆ ನ್ಯಾಯದಾನವು ವಸಾಹತುಶಾಹಿ ಗೇಟ್ ಹಿಂದೆ ಬೀಗ ಜಡಿದ ಸ್ಥಿತಿಯಲ್ಲಿದೆ ಎಂದರ್ಥ. ಇದು ಪ್ರಸಕ್ತ ಕಾನೂನು ವ್ಯವಸ್ಥೆಗೆ ಸಂಬಂಧಿತ ಪ್ರಮುಖ ಸಮಸ್ಯೆಗಳಲ್ಲೊಂದು.

ಮಹತ್ವದ ಉಪಕ್ರಮ: ನ್ಯಾಯಾಧೀಶರನ್ನು ಮೈಲಾರ್ಡ್ ಎಂದು ಅಥವಾ ಲೇಡಿಶಿಪ್ ಗಳೆಂದು ಸಂಬೋಧಿಸುವುದು ಕೂಡ ವಸಾಹತುಶಾಹಿ ಕಾಲದ ವ್ಯವಸ್ಥೆಯನ್ನೇ ಪ್ರತಿಬಿಂಬಿಸುತ್ತದೆ. ವಸಾಹತುಶಾಹಿ ಕಾಲದಲ್ಲಿ ಸಾಮಾನ್ಯ ಜನರ ಪಾಲಿಗೆ ನ್ಯಾಯದಾನವೆಂಬುದು ಹಕ್ಕಾಗಿರಲಿಲ್ಲ, ಬದಲಾಗಿ ನ್ಯಾಯಕ್ಕಾಗಿ ಮೈಲಾರ್ಡ್‌ಗಳಲ್ಲಿ ಗೋಗರೆವ ದಯನೀಯ ಸ್ಥಿತಿಯಿತ್ತು. ಐಪಿಸಿ, ಸಿಆರ್‌ಪಿಸಿ ಮತ್ತು ಭಾರತೀಯ ಸಾಕ್ಷ್ಯ ಸಂಹಿತೆಗಳನ್ನು ಈಚೆಗೆ ಭಾರತೀಯ ನ್ಯಾಯಸಂಹಿತಾ, ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ, ಭಾರತೀಯ ಸಾಕ್ಷ್ಯ ಅಧಿನಿಯಮ್ ಎಂಬುದಾಗಿ ಪುನರ್‌ರಚಿಸಿರುವುದು ತೀರಾ ದಿಟ್ಟ ಮತ್ತು ಮಹತ್ವದ ಉಪಕ್ರಮವೆಂದು ನ್ಯಾಯಮೂರ್ತಿ ಧರ್ಮಾಧಿಕಾರಿ ಪ್ರಶಂಸಿಸಿದರು.

ನ್ಯಾಯದಾನ ಚಿಂತನೆ ಶ್ರೇಷ್ಠ: ದಂಡನಾ ಚಿಂತನೆಯಿಂದ ನ್ಯಾಯದಾನ ಚಿಂತನೆಗೆ ಹೊರಳುವುದು, ವಸಾಹತುಶಾಹಿ ಕಾಲದ ಕ್ರಿಮಿನಲ್ ಕಾನೂನುಗಳ ರದ್ದುಪಡಿಸಿದ ಹೊಸ ಮೂರು ಕಾನೂನುಗಳ ಮೂಲೋದ್ದೇಶವಾಗಿದೆ. ಸುಪ್ರೀಂ ಕೋರ್ಟ್‌ನ ವಿಧಿಕ್ ಅನುವಾದ್ ಸಾಫ್ಟ್‌ವೇರ್ ಕೂಡ ಕಾನೂನು ವ್ಯವಸ್ಥೆಯ ಭಾರತೀಕರಣ ನಿಟ್ಟಿನಲ್ಲಿ ನಿರ್ಣಾಯಕ ಹೆಜ್ಜೆಯಾಗಿದೆ. ನ್ಯಾಯಾಂಗ ವಿಧಿವಿಧಾನ ಅಥವಾ ನಿಯಮಾವಳಿಗಳಲ್ಲಿ ಪ್ರಾದೇಶಿಕ ಭಾಷಾ ಬಳಕೆಗೆ ಉತ್ತೇಜನ ಸಹಿತ ನ್ಯಾಯಾಲಯಗಳನ್ನು ಕಕ್ಷಿದಾರಸ್ನೇಹಿಯಾಗಿ ಪರಿವರ್ತಿಸುವುದು ಅಥವಾ ಕಾನೂನು ಸೇವೆಗಳು ಜನಸಾಮಾನ್ಯರಿಗೆ ಸುಗಮವಾಗಿ ಲಭಿಸುವಂತೆ ಮಾಡುವುದು ಕೂಡ ವಿಧಿಕ್ ಅನುವಾದ್ ಸಾಫ್ಟ್‌ವೇರ್ ಮೂಲೋದ್ದೇಶವಾಗಿದೆ. ಭೋಪಾಲ್‌ನ ನ್ಯಾಷನಲ್ ಲಾ ಇನ್‌ಸ್ಟಿಟ್ಯೂಟ್ ವಿವಿಯಲ್ಲಿ ನಡೆದ 2 ಎನ್‌ಎಲ್‌ಐಯುಎಸ್‌ಬಿಎ ಕಾನೂನು ಸಮಾವೇಶದಲ್ಲಿ ನ್ಯಾಯಮೂರ್ತಿ ಧರ್ಮಾಧಿಕಾರಿ ಪಾಲ್ಗೊಂಡರು.

ಕಾನೂನು ಕುರುಡಲ್ಲ

ಪುಟ ೧➔ಭಾರತದಲ್ಲಿಂದು ಸಾಂವಿಧಾನಿಕ ಸಿದ್ಧಾಂತಗಳಿಗೆ ಅನುಗುಣವಾಗಿ ನ್ಯಾಯದಾನವಾಗುತ್ತದೆಯೇ ವಿನಾ ಅಧಿಕಾರ ಬಲ ಅಥವಾ ಒತ್ತಡದಿಂದಲ್ಲ ಎಂಬುದರ ಸಂಕೇತವಾಗಿ, ಪ್ರತಿಮೆಯ ಎಡ ಕೈಯ್ಯಲ್ಲಿದ್ದ ಖಡ್ಗವನ್ನು ಕಳಚಲಾಗಿದೆ. ನ್ಯಾಯೋಚಿತತೆ, ಸಮಾನತೆ ಮತ್ತು ಪಾರದರ್ಶಿತ್ವದ ಆಧಾರದಲ್ಲಿ ನ್ಯಾಯದಾನವಾಗುತ್ತೆ ಎಂಬುದನ್ನು ಸಾಂಕೇತಿಸಲು ಪ್ರತಿಮೆಯ ಕಣ್ಣುಗಳು ತೆರೆದುಕೊಂಡಿವೆ ಮತ್ತು ಹಸ್ತದಲ್ಲಿ ಸಂವಿಧಾನದ ಪ್ರತಿಯಿದೆ ಎಂದು ನ್ಯಾಯಮೂರ್ತಿ ಧರ್ಮಾಧಿಕಾರಿ ವಿಶ್ಲೇಷಿಸಿದರು.

ಸಿಂಧನೂರು ಯುವಕನಿಗೆ ಮೋದಿ ಅಚ್ಚರಿ ಕೊಡುಗೆ!

ಸಿಂಧನೂರು: ದೇಶದ ಪ್ರಧಾನ ಮಂತ್ರಿಗಳೆಂದರೆ ಸದಾ ಬಿಡುವಿಲ್ಲದ ಕೆಲಸಗಳಲ್ಲಿ ಮಗ್ನರಾಗಿರುತ್ತಾರೆ. ಆದರೆ, ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಕಾನಿಹಾಳ ಗ್ರಾಮದ ಸಾಮಾನ್ಯ ಯುವಕನೊಬ್ಬ ಪ್ರೀತಿಯಿಂದ ಕಳುಹಿಸಿದ ಮದುವೆ ಆಮಂತ್ರಣ ಪತ್ರಿಕೆಗೆ ಪ್ರಧಾನಿ ಮೋದಿ ವಿಶೇಷವಾಗಿ ಸ್ಪಂದಿಸಿದ್ದಾರೆ.



ನವಜೋಡಿಗೆ ಹಾರೈಸಿ ಪತ್ರ ಕಳುಹಿಸುವ ಮೂಲಕ ಪ್ರಧಾನಿಯವರು ಸಿಂಧನೂರು ತಾಲೂಕಿನ ಕಾನಿಹಾಳ ಗ್ರಾಮದ ದಂಪತಿಯ ಸಂಭ್ರಮವನ್ನು ಇಮ್ಮಡಿಗೊಳಿಸಿದ್ದಾರೆ. ಸಿಂಧನೂರು ತಾಲೂಕಿನ ಕಾನಿಹಾಳ ಗ್ರಾಮದ ನಿವಾಸಿ ರಾಜೇಶ ನಾಯಕ ಎಂಬುವವರ ವಿವಾಹವು ಸವಿತಾ ಎಂಬ ಯುವತಿಯೊಂದಿಗೆ ಇದೇ ಏಪ್ರಿಲ್ 13ರಂದು ನೆರವೇರಿತ್ತು. ತಮ್ಮ ಬದುಕಿನ ಈ ದೊಡ್ಡ ಸಂಭ್ರಮಕ್ಕೆ ಪ್ರಧಾನಿ ಮೋದಿಯವರನ್ನೂ ಆಹ್ವಾನಿಸಬೇಕೆಂದು ಆಸೆ ಪಟ್ಟಿದ್ದ ರಾಜೇಶ, ಪ್ರಧಾನಿ ಕಚೇರಿಗೆ ಮದುವೆಯ ಆಹ್ವಾನ ಪತ್ರಿಕೆಯನ್ನು ಪೋಸ್ಟ್ ಮಾಡಿದ್ದರು. ಒಬ್ಬ ಸಾಮಾನ್ಯರಿಗೂ ಮೋದಿ ಪತ್ರದ ಮೂಲಕ ನವಜೋಡಿಗೆ ಸಂದೇಶವನ್ನು ರವಾನಿಸಿದ್ದಾರೆ.

ರಾಜೇಶ ನಾಯಕ ಅವರಿಗೆ ಪತ್ರ ಬರೆದಿರುವ ಪ್ರಧಾನಿ ಮೋದಿ, ನಿಮ್ಮ ವಿವಾಹ ಮಹೋತ್ಸವಕ್ಕೆ ನನ್ನನ್ನು ಆಹ್ವಾನಿಸಿದ್ದಕ್ಕಾಗಿ ಹೃತ್ಪೂರ್ವಕ ಧನ್ಯವಾದಗಳು, ಜೀವನದ ಹೊಸ ಹಂತಕ್ಕೆ ಕಾಲಿಡುತ್ತಿರುವ ನಿಮಗೆ, ಸವಿತಾ ಅವರಿಗೆ ಸುಂದರ ಭವಿಷ್ಯಕ್ಕಾಗಿ ಶುಭ ಆಶೀರ್ವಾದಗಳು. ನಿಮ್ಮಿಬ್ಬರ ಹೃದಯ ಮತ್ತು ಮನಸ್ಸುಗಳು ಒಂದಾಗಿರಲಿ. ಜೀವನದ ಏರಿಳಿತಗಳಲ್ಲಿ ಪರಸ್ಪರ ಕೈಹಿಡಿದು ಸಾಗಿ, ಜವಾಬ್ದಾರಿಗಳನ್ನು ಪ್ರೀತಿಯಿಂದ ನಿಭಾಯಿಸಿ, ಪರಸ್ಪರರ ದೋಷಗಳನ್ನು ಒಪ್ಪಿಕೊಂಡು, ಗುಣಗಳನ್ನು ಗೌರವಿಸುತ್ತಾ ಆದರ್ಶ ದಂಪತಿ ಗಳಾಗಿ ಬಾಳಿ, ನಿಮ್ಮ ದಾಂಪತ್ಯ ಸುಖಮಯವಾಗಿರಲಿ ಎಂದು ಆತ್ಮೀಯವಾಗಿ ಹಾರೈಸಿದ್ದಾರೆ.

ಯುವಕನ ಸಂತಸ

ದೇಶದ ಪ್ರಧಾನಿಯವರಿಂದ ಪತ್ರ ಬಂದಿರುವುದಕ್ಕೆ ರಾಜೇಶ ನಾಯಕ ಬೆರಗಾಗಿದ್ದಾರೆ. ನಮ್ಮ ಮದುವೆಗೆ ಕೆಲವು ವಾರಗಳ ಮೊದಲು ಪ್ರಧಾನಿ ಮೋದಿಯವರಿಗೆ ಆಹ್ವಾನ ಪತ್ರಿಕೆ ಕಳುಹಿಸಿದ್ದೆ. ಅವರ ಕಡೆಯಿಂದ ಕನಿಷ್ಠ ಉತ್ತರವಾದರೂ ಬರಬಹುದು ಎಂಬ ಸಣ್ಣ ನಿರೀಕ್ಷೆ ಇತ್ತು. ಆದರೆ, ಅಷ್ಟೇನೂ ಭರವಸೆ ಇರಲಿಲ್ಲ. ಈಗ ಸ್ವತಃ ಪ್ರಧಾನಿಯವರೇ ಪತ್ರ ಬರೆದು ಹಾರೈಸಿರುವುದು ನಂಬಲಾಗದ ಸಂಗತಿ. ಅಷ್ಟೊಂದು ದೊಡ್ಡ ಹುದ್ದೆಯಲ್ಲಿದ್ದರೂ ದೇಶದ ಸಾಮಾನ್ಯ ಪ್ರಜೆಯ ಪತ್ರವನ್ನೂ ಅವರು ಪರಿಗಣಿಸುತ್ತಾರೆ ಎಂಬುದು ನಿಜಕ್ಕೂ ಅದ್ಭುತ ಎಂದು ರಾಜೇಶ ನಾಯಕ ಕೃತಜ್ಞತೆ ಸಲ್ಲಿಸಿದ್ದಾರೆ.

ಚಿಕ್ಕಮಗಳೂರಿನಲ್ಲಿ ಮಳೆರಾಯ



ಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ಸೋಮವಾರ ಚಿಕ್ಕಮಗಳೂರಿನಲ್ಲಿ ಸುರಿದ ಮಳೆಗೆ ತಂಪಿನ ವಾತಾವರಣ ನಿರ್ಮಾಣವಾಗಿತ್ತು. ರಸ್ತೆಯಲ್ಲಿ ನೀರು ನಿಂತ ಪರಿಣಾಮ ವಾಹನ ಸಂಚಾರದಲ್ಲಿ ತೊಡಕಾಗಿತ್ತು.

ಧರ್ಮಸ್ಥಳದಲ್ಲಿ ನಾಳೆ ಸಾಮೂಹಿಕ ವಿವಾಹ

ಧರ್ಮಸ್ಥಳ: ನಾಡಿನ ಪವಿತ್ರ ಕ್ಷೇತ್ರ ಹಾಗೂ ಸರ್ವಧರ್ಮ ಸಮನ್ವಯ ಕೇಂದ್ರವಾದ ಧರ್ಮಸ್ಥಳದಲ್ಲಿ ಬುಧವಾರ ಸಂಜೆ ಗಂಟೆ 6.40ಕ್ಕೆ ಗೋಧೂಳಿ ಲಗ್ನ ಸುಮುಹೂರ್ತದಲ್ಲಿ ಐವತ್ತನಾಲ್ಕನೆ ವರ್ಷದ ಉಚಿತ ಸಾಮೂಹಿಕ ವಿವಾಹ ಸಮಾರಂಭ ನಡೆಯಲಿದೆ.

ಈಗಾಗಲೆ 105 ಜೊತೆ ವಧು-ವರರು ವಿವಾಹಕ್ಕಾಗಿ ಹೆಸರು ನೋಂದಾಯಿಸಿದ್ದು, ಅವರು ಕೊಟ್ಟ ದಾಖಲೆಗಳ ಮೂಲ ಪ್ರತಿಗಳನ್ನು ಪರಿಶೀಲಿಸಿದ ಬಳಿಕ ಅವರಿಗೆ ಸಾಮೂಹಿಕ ವಿವಾಹದಲ್ಲಿ ಅವಕಾಶ ನೀಡಲಾಗುವುದು. ವರನಿಗೆ ಧೋತಿ, ಶಾಲು ಮತ್ತು ವಧುವಿಗೆ ಸೀರೆ, ರವಿಕೆ ಕಣ ಹಾಗೂ ಮಂಗಳಸೂತ್ರ, ಹೂವಿನಹಾರ ನೀಡಲಾಗುವುದು.

ಮದುವೆಯ ಎಲ್ಲಾ ವೆಚ್ಚವನ್ನು ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅಧ್ಯಕ್ಷರಾಗಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ವತಿಯಿಂದ ಭರಿಸಲಾಗುವುದು ಎಂದು ಟ್ರಸ್ಟ್‌ನ ಕಾರ್ಯದರ್ಶಿ ಎ.ವಿ. ಶೆಟ್ಟಿ ತಿಳಿಸಿದ್ದಾರೆ. ವರದಕ್ಷಿಣೆ ಹಾಗೂ ಮದುವೆಗಾಗುವ ದುಂದುವೆಚ್ಚವನ್ನು ತಡೆಯುವ ಉದ್ದೇಶದಿಂದ ಪೂಜ್ಯ ಡಿ. ವೀರೇಂದ್ರ ಹೆಗ್ಗಡೆಯವರು ಧರ್ಮಸ್ಥಳದಲ್ಲಿ 1972ರಲ್ಲಿ ಆರಂಭಿಸಿದ ಉಚಿತ ಸಾಮೂಹಿಕ ವಿವಾಹವನ್ನು ಪ್ರತಿವರ್ಷ ನಡೆಸುತ್ತಿದ್ದು, ಕಳೆದ ವರ್ಷದ ವರೆಗೆ ಹದಿಮೂರು ಸಾವಿರ ಜೊತೆ ಸಾಮೂಹಿಕ ವಿವಾಹದಲ್ಲಿ ಮದುವೆಯಾಗಿದ್ದು, ಸುಖ-ಶಾಂತಿ, ನೆಮ್ಮದಿಯ ದಾಂಪತ್ಯ ಜೀವನ ನಡೆಸುತ್ತಿದ್ದಾರೆ. ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಡಿ. ಹರ್ಷೇಂದ್ರ ಕುಮಾರ್ ನೇತೃತ್ವದಲ್ಲಿ ನಡೆಯಲಿದೆ.

ಕಿರುಸುದ್ದಿ

ವೆಬ್‌ಸೈಟ್‌ನಲ್ಲಿ ಸಿಇಟಿ ಕೀ ಉತ್ತರ

ಬೆಂಗಳೂರು: ಕಳೆದ ಮಾ. 23 ಮತ್ತು 24ರಂದು ನಡೆದ 2026ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)ಯ ಎಲ್ಲ ವಿಷಯಗಳ ಕೀ ಉತ್ತರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಈ ಕೀ ಉತ್ತರಗಳಿಗೆ ಆಕ್ಷೇಪಣೆಗಳು ಇದ್ದರೆ, ಏ.30ರ ಒಳಗೆ ಸಲ್ಲಿಸಬೇಕು. ಇದಕ್ಕೆ ಆನ್‌ಲೈನ್ ಲಿಂಕ್ ಕೂಡ ಬಿಡುಗಡೆ ಮಾಡಿದ್ದು, ಆಕ್ಷೇಪಣೆಗಳ ಜತೆಗೆ ಪ್ರಶ್ನೆ ಸಂಖ್ಯೆ, ವರ್ಷನ್ ಕೋಡ್ ಇತ್ಯಾದಿ ಮಾಹಿತಿಯನ್ನು ನಿಖರವಾಗಿ ದಾಖಲಿಸಬೇಕು. ಅಪೂರ್ಣ ಮಾಹಿತಿಯ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ. ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ವಿಷಯ ತಜ್ಞರು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ.

ಬಾಲ್ಯವಿವಾಹ ತಡೆದ ಅಕ್ಕ ಪಡೆ

ಬೆಳಗಾವಿ: ನಗರದ ವಂಟಮುರಿ ಕಾಲೋನಿಯಲ್ಲಿ ಬಾಲ್ಯವಿವಾಹ ನಡೆಯುತ್ತಿದ್ದ ವೇಳೆ ಅಕ್ಕ ಪಡೆ ತಡೆದು ಬಾಲಕಿಯನ್ನು ರಕ್ಷಣೆ ಮಾಡಿರುವ ಘಟನೆ ಬೆಳಕಿಗೆ ಬಂದಿದೆ. ಅಕ್ಕ ಪಡೆ ಪೆಟ್ರೋಲಿಂಗ್ ವೇಳೆ ಅನುಮಾನಗೊಂಡು ವಿಚಾರಣೆ ನಡೆಸಿದಾಗ, 17 ವರ್ಷದ ಬಾಲಕಿಯ ಮದುವೆ ನಡೆಯಲು ಸಿದ್ಧತೆ ನಡೆದಿರುವುದು ಪತ್ತೆಯಾಗಿದೆ. ಘಟನೆಯ ವಿವರಗಳ ಪ್ರಕಾರ, ಏಪ್ರಿಲ್ 20ರಂದು ಗಸ್ತು ತಿರುಗುತ್ತಿದ್ದ ಅಕ್ಕ ಪಡೆಯ ಸಿಬ್ಬಂದಿ, ಒಂದು ಮನೆಯ ಮುಂದೆ ಮಂಟಪ ಹಾಕಿರುವುದನ್ನು ಗಮನಿಸಿದ್ದಾರೆ. ಅನುಮಾನಗೊಂಡು ಮನೆಗೆ ತೆರಳಿ ವಿಚಾರಿಸಿದಾಗ ಏಪ್ರಿಲ್ 21ರಂದು ಅಪ್ರಾಪ್ತ ಬಾಲಕಿಯ ಮದುವೆ ಮಹಾರಾಷ್ಟ್ರದ ಪೂಣೆಯ ಯುವಕನೊಂದಿಗೆ ನಡೆಸಲು ಸಿದ್ಧತೆ ನಡೆಯುತ್ತಿರುವುದು ತಿಳಿದುಬಂದಿದೆ. ಪೊಲೀಸರು ಬಾಲಕಿಯ ಆಧಾರ್ ಕಾರ್ಡ್ ಹಾಗೂ ಜನನ ಪ್ರಮಾಣಪತ್ರ ಪರಿಶೀಲಿಸಿದಾಗ ಆಕೆಗೆ ಕೇವಲ 17 ವರ್ಷ 4 ತಿಂಗಳು ವಯಸ್ಸು ಇರುವುದಾಗಿ ದೃಢಪಟ್ಟಿತು. ತಕ್ಷಣವೇ ವಿಷಯವನ್ನು ಮಹಿಳಾ ಪೊಲೀಸ್ ಠಾಣೆಯ ಅಧಿಕಾರಿಗಳಿಗೆ ತಿಳಿಸಲಾಯಿತು. ಮಹಿಳಾ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ದಿಲೀಪ್ ಪಿ.ನಿಂಬಾಳಕರ ಅವರ ಮಾರ್ಗದರ್ಶನದಲ್ಲಿ ಅಕ್ಕ ಪಡೆ, ಮಕ್ಕಳ ಸಹಾಯವಾಣಿ ತಂಡ ಹಾಗೂ ಮಾಳಮಾರುತಿ ಪೊಲೀಸ್ ಠಾಣೆಯ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದರು. ಬಾಲಕಿಯನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಲಾಯಿತು. ಬಾಲ್ಯವಿವಾಹ ನಡೆಸಲು ಮುಂದಾಗಿದ್ದ ಬಾಲಕಿಯ ತಂದೆಯ ವಿರುದ್ಧ ಬೆಳಗಾವಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಸ್ಥಳೀಯರ ವಿರೋಧ

ಸಾಗರ: ಬೇಸೂರು ಭಾಗದಲ್ಲಿ ಉದ್ದೇಶಿತ ಪರಮಾಣು ವಿದ್ಯುತ್ ಸ್ಥಾವರ ಬೇಡ. ಇದಕ್ಕೆ ನಮ್ಮ ಸಂಪೂರ್ಣ ವಿರೋಧ ಇದೆ ಎಂದು ಬೇಸೂರು ಭಾಗದ ಪ್ರಮುಖರು, ಪರಿಸರ ಪರ ಹೋರಾಟಗಾರರು, ಸಾಮಾಜಿಕ ಕಾರ್ಯಕರ್ತರು, ಚುನಾಯಿತ ಪ್ರತಿನಿಧಿಗಳು ಒಕ್ಕೊರಲಿನ ಒತ್ತಾಯ ಮಾಡಿದ್ದಾರೆ. ತಾಲೂಕು ಕೋಳೂರು ಗ್ರಾಪಂ ವ್ಯಾಪ್ತಿಯ ಹುಲಿದೇವರಬನ ಗ್ರಾಪಂ ಸಭಾಂಗಣದಲ್ಲಿ ಬೇಸೂರು ಅಣು ವಿದ್ಯುತ್ ಸ್ಥಾವರ ನಿರ್ಮಾಣ ಕುರಿತು ಸೋಮವಾರ ಆಯೋಜಿಸಲಾಗಿದ್ದ ಸಮಾಲೋಚನಾ ಸಭೆಯಲ್ಲಿ ಈ ನಿರ್ಣಯ ಕೈಗೊಂಡಿದ್ದು, ಕೇಂದ್ರ, ರಾಜ್ಯ ಸರ್ಕಾರಕ್ಕೆ ಉಪವಿಭಾಗಾಧಿಕಾರಿಗಳಿಗೆ, ಡಿಸಿಗೆ ಈ ಸಂಬಂಧ ಪ್ರತಿಭಟನೆ ಮೂಲಕ ಮನವಿ ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಸಭೆಯಲ್ಲಿ ಸಾಕಷ್ಟು ವಿರೋಧದ ನಡುವೆಯೂ ಕಳೆದ ಎರಡು ದಿನಗಳಿಂದ ಬೇಸೂರು ಗ್ರಾಮದ ನೆತ್ತಿಯ ಮೇಲೆ ವಿಮಾನ ಹಾರಾಟ ನಡೆಸುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಲಾಯಿತು.

ತ್ವರಿತವಾಗಿ ಕಡತ ವಿಲೇವಾರಿಯಾಗಲಿ: ಅಧಿಕಾರಿಗಳಿಗೆ ಸಿಎಂ ಸೂಚನೆ

ವಿಳಂಬ ನೀತಿಗೆ ಸಿಎಂ ಬೇಸರ

ಬೆಂಗಳೂರು: ವಿಳಂಬ ನೀತಿ ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುತ್ತದೆ. ಅಧಿಕಾರಿಗಳು ಯಾವುದೇ ಕಾರಣಕ್ಕೂ ತಡ ಮಾಡದೇ, ಶೀಘ್ರವಾಗಿ ಕಡತಗಳನ್ನು ವಿಲೇವಾರಿ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸಲಹೆ ನೀಡಿದರು.

ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಒಕ್ಕೂಟ ಸಂಘ ಬೆಂಗಳೂರು ಇವರ ವತಿಯಿಂದ ಇನ್‌ಫೆಂಟ್ರಿ ರಸ್ತೆಯಲ್ಲಿರುವ ಕೆಎಎಸ್ ಅಧಿಕಾರಿಗಳ ಸಂಘದ ನವೀಕರಿಸಿದ ಕಟ್ಟಡ ಹೊಸದಾಗಿ ನಿರ್ಮಿಸಿದ ಹೆಚ್ಚುವರಿ ಕೊಠಡಿಗಳನ್ನು ಉದ್ಘಾಟನೆ ಮಾಡಿ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದರು.



ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾರ್ಯಾಂಗ ಹಾಗೂ ಶಾಸಕಾಂಗ ಒಟ್ಟಾಗಿ ಕೆಲಸ ಮಾಡಬೇಕು. ಜನರ ಹಿತವನ್ನು ಕಾಪಾಡುವುದು ನಮ್ಮ ಕರ್ತವ್ಯ. ಮಧ್ಯವರ್ತಿಗಳು ಎಲ್ಲೆಡೆ ಇರುತ್ತಾರೆ ಆದರೆ ಅವರನ್ನು ಕಚೇರಿಯೊಳಗೆ ಬಿಟ್ಟುಕೊಳ್ಳದೇ ಹೊರಗೆ ಕಳಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಅಧಿಕಾರಿಗಳಿಗೆ ಕಾನೂನಿನ ಅರಿವಿನ ಜೊತೆಗೆ ಸಾಮಾನ್ಯ ಜ್ಞಾನ, ಸಮಾಜದ ಬಗ್ಗೆ ಅರಿವು ಇರಬೇಕು. ನಿವೃತ್ತರಾಗುವವರೆಗೆ ಜನಸೇವೆಯಲ್ಲಿ ತೊಡಗಿಸಿಕೊಳ್ಳುವ ಅವಕಾಶವಿದೆ. ಅಸಮಾನತೆ ಇರುವ ಸಮಾಜದಲ್ಲಿ ದುರ್ಬಲ ವರ್ಗಕ್ಕೆ ಸ್ಪಂದಿಸಬೇಕು. ಅಧಿಕಾರಿಗಳಿಗೆ ಕಾನೂನಿನ ಅರಿವಿನ ಜೊತೆಗೆ ಸಾಮಾನ್ಯ ಜ್ಞಾನ, ಸಮಾಜದ ಬಗ್ಗೆ ಅರಿವು ಇರಬೇಕು. ಆಗ ಮಾತ್ರ ಜನರಿಗೆ ಸ್ಪಂದಿಸಲು ಸಾಧ್ಯ ಎಂದರು.

ಸರ್ಕಾರ ರೂಪಿಸುವ ನೀತಿಗಳು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವಲ್ಲಿ ಅಧಿಕಾರಿಗಳ ಪಾತ್ರ ಹಿರಿದು. ಜನಸೇವೆಗೆ ದೊರಕಿರುವ ಅವಕಾಶವನ್ನು ಸದುಪಯೋಗಮಾಡಿಕೊಳ್ಳಬೇಕು. ತೃಪ್ತಿದಾಯಕವಾಗಿ ಕೆಲಸ ಮಾಡಿರುವುದಕ್ಕಿಂತ ದೊಡ್ಡ ಪ್ರಮಾಣಪತ್ರ ಇನ್ನೊಂದಿಲ್ಲ ಎಂದರು. ಈ ಬಗ್ಗೆ ಅಧಿಕಾರಿಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು. ಜೀವನ ಸಾರ್ಥಕವಾಗಿ ಸೇವೆ ತೃಪಿಕರವಾಗಿ ಮಾಡಿದ್ದೇನೆ ಎಂಬ ಭಾವನೆ ನಿಮ್ಮಲ್ಲಿ ಇರಬೇಕು ಎಂದರು.

ನಮ್ಮ ಕೆಲಸವನ್ನು ನಾವು ಪ್ರೀತಿಸಬೇಕು. ಗ್ರಾಮೀಣ ಜನರನ್ನು ಪ್ರೀತಿಯಿಂದ ಮಾತನಾಡಿಸಿ ಅವರ ಸಮಸ್ಯೆ ಅರ್ಥೈಸಿಕೊಂಡು ಬಗೆಹರಿಸಿದರೆ ಅವರು ನಿಮ್ಮನ್ನು ಮರೆಯುವುದಿಲ್ಲ. ಮಧ್ಯವರ್ತಿಗಳ ಹಾವಳಿ ತಪ್ಪಿಸುವ ನಿಟ್ಟಿನಲ್ಲಿ ಗ್ಯಾರಂಟಿ ಯೋಜನೆಗಳು ಸಹಕಾರಿಯಾಗಿವೆ. ನೇರವಾಗಿ ಫಲಾನುಭವಿಗಳ ಖಾತೆಗೆ ಹಣ ವರ್ಗಾಯಿಸಲಾಗುತ್ತಿದೆ ಎಂದರು.

ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿ

ಕೆಎಎಸ್ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಪ್ರಾಮಾಣಿಕವಾಗಿ ಮಾಡಬೇಕು. ಕೆಎಎಸ್ ಅಧಿಕಾರಿಗಳ ಸಂಘಕ್ಕೆ ನೂರು ವರ್ಷಗಳ ಇತಿಹಾಸವಿದ್ದು, ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ರಾಜ್ಯಕ್ಕೆ ಅಪಾರ ಕೊಡುಗೆ ಕೊಟ್ಟಿದ್ದಾರೆ. ಸಾಮಾಜಿಕ, ಆರ್ಥಿಕ, ಮೂಲಭೂತ ಸೌಕರ್ಯಗಳು, ಕೈಗಾರಿಕೆಗಳ ಬೆಳವಣಿಗೆಗೆ ಕಾರಣೀಭೂತರಾಗಿದ್ದಾರೆ. ಅವರ ಕಾಲದಲ್ಲಿ ದಿವಾನರಾಗಿದ್ದವರು ಸಂಘದ ಅಧ್ಯಕ್ಷರಾಗಿದ್ದರು ಎನ್ನುವುದು ಈ ಸಂಘದ ಹೆಗ್ಗಳಿಕೆ. ಅವರೆಲ್ಲರೂ ದಕ್ಷ ಆಡಳಿತಕ್ಕೆ ನಮಗೆ ದಾರಿದೀಪವಾಗಿದ್ದಾರೆ ಎಂದರು.

ಶೀಘ್ರ ಪದೋನ್ನತಿ

ಪದೋನ್ನತಿ ಬಗ್ಗೆ ಕಂದಾಯ ಸಚಿವರು ಕಾರ್ಯೋನ್ಮುಖರಾಗಿದ್ದು, ಶೀಘ್ರವಾಗಿ ಪದೋನ್ನತಿ ಆಗಲಿದೆ. ಶೇ.33 ರಷ್ಟು ಅಧಿಕಾರಿಗಳನ್ನು ಸಿಇಒಗಳಾಗಿ ಬಡ್ತಿ ನೀಡುವ ಭರವಸೆಯನ್ನು ಮುಖ್ಯಮಂತ್ರಿಗಳು ನೀಡಿದರು.

ಗೋಹತ್ಯೆ ವಿರುದ್ಧ ಸರ್ಕಾರ ಕಾನೂನು ಕ್ರಮ ಕೈಗೊಳ್ಳಲಿ

ಬೆಂಗಳೂರು: ಕರ್ನಾಟಕದಲ್ಲಿ ಗೋಹತ್ಯೆ ನಿಷೇಧವಿದ್ದರು ಅಕ್ರಮವಾಗಿ ಗೋಹತ್ಯೆ ನಡೆಯುತ್ತಿದೆ, ಎಲ್ಲಾ ಗ್ರಾಮಗಳಲ್ಲೂ ಗೋ ಮಾಂಸ ಮಾರಾಟ ಮಾಡುತ್ತಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗೋಹತ್ಯೆ ನಿಷೇಧ ಕಾನೂನಿನ ಕುರಿತು ಅರಿವು ಮೂಡಿಸಿ, ಕಾನೂನು ಕ್ರಮ ಕೈಗೊಳ್ಳುವಂತೆ ಹಲಸೂರಿನ ಉದಾಸೀನ್ ಮಠದ ಅಧ್ಯಕ್ಷ ಬಾಲಯೋಗಿ ಗಣೇಶ್ ದಾಸ್ ಆಗ್ರಹಿಸಿದರು.

> ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಗೋಹತ್ಯೆ ಕಾನೂನು ಬಗ್ಗೆ ಕ್ರಮ ಕೈಗೊಂಡಿತ್ತು. ಈಗಿರುವ ಕಾಂಗ್ರೆಸ್ ಸರ್ಕಾರವು ಸಹ ಇದನ್ನು ಮುಂದುವರೆಸಿಕೊಂಡು ಹೋಗುವಂತೆ ಮನವಿ ಮಾಡುತ್ತೇನೆ.
> ■ ಕೆ.ಹೇಮಂತ್, ಸಮಾಜ ಸೇವಕ

ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧ ಮಾಡುವಂತೆ ಒತ್ತಾಯಿಸಿ ಕೆ.ಆರ್.ಪುರ ಬಸ್ ನಿಲ್ದಾಣದಿಂದ ಬೆಂಗಳೂರು ಪೂರ್ವ ತಾಲೂಕಿನ ತಹಶಿಲ್ದಾರ್ ಕಚೇರಿ ವರೆಗೆ ಹಲಸೂರಿನ ಉದಾಸೀನ್ ಮಠದ ಅಧ್ಯಕ್ಷ ಬಾಲಯೋಗಿ ಗಣೇಶ್ ದಾಸ್ ಜಿ ಹಾಗೂ ಸಮಾಜ ಸೇವಕ ಕೆ.ಹೇಮಂತ್ ನೇತೃತ್ವದಲ್ಲಿ ಕಲ್ನಡಿಗೆ ಜಾಥ ನಡೆಸಿ ತಹಶಿಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಮಾತನಾಡಿ, ಸನಾತನ ಧರ್ಮದಲ್ಲಿ ಗೋಮಾತೆಗೆ ಎರಡನೇ ತಾಯಿಯ ಪೂಜನೀಯ ಸ್ಥಾನಮಾನ ನೀಡಲಾಗಿದೆ. ಗೋ ಮಾತೆಯನ್ನು ನಾವು ಪೂಜಿಸುತ್ತೇವೆ. ಆದ್ದರಿಂದ ಗೋ ಮಾತೆ ರಕ್ಷಣೆಯ ಕುರಿತು ಸರ್ಕಾರಕ್ಕೆ ಅಷ್ಟೇ ಅಲ್ಲದೆ, ನಾವು ಸಮಾಜದಲ್ಲಿ ಕಳಕಳಿ ಮೂಡಿಸಬೇಕಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ತೇಜಕುಮಾರ್, ಮುಕುಂದ್ ಇದ್ದರು.

ಯುವ ಪೀಳಿಗೆಗೆ ಗುರಿ ಇರಲಿ

ಬೆಂಗಳೂರು: ಯುವ ಪೀಳಿಗೆಯು ಯಶಸ್ವಿ ವೃತ್ತಿಪರ ಜೀವನಕ್ಕಾಗಿ ಗುರಿಗಳನ್ನು ಇಟ್ಟುಕೊಳ್ಳಬೇಕು ಹಾಗೂ ಅದರ ರೂಪುರೇಷಗಳ ಮೇರೆಗೆ ಕಾರ್ಯನಿರ್ವಸಬೇಕೆಂದು ಕೃಷಿ ವಿವಿ ವಿಸ್ತರಣಾ ನಿರ್ದೇಶಕ ಡಾ.ವೈ.ಎನ್. ಶಿವಲಿಂಗಯ್ಯ ತಿಳಿಸಿದರು.

ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆದ ಒಂದು ದಿನದ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಡಿ ಅವರು, ಯಾವುದೇ ಉದ್ಯಮಿಯು ನಿರ್ವಹಣಾ ಮತ್ತು ಮಾರುಕಟ್ಟೆ ಕೌಶಲ್ಯಗಳನ್ನು ಹೊಂದಿರಬೇಕು ಮತ್ತು ಸೂಕ್ತ ಸಂವಹನ ಕೌಶಲ್ಯಗಳನ್ನು ಅರಿತು ಹೆಚ್ಚಿನ ಲಾಭ ಪಡೆಯಬಹು. ಈ ತರಬೇತಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಕ್ಕಾಗಿ ಹಾಗೂ ಪ್ರಮಾಣಪತ್ರ ಪಡೆಯಲು ಹಾಜರಿದ್ದ 31 ತರಬೇತಿದಾರರಿಗೆ ಅಭಿನಂದಿಸಿದರು.

ಕೃಪಾನಿಧಿ ಕಾಲೇಜಿನಲ್ಲಿ ಪರೀಕ್ಷೆ ನಡೆಸದಂತೆ ವರದಿ

ಬೆಂಗಳೂರು: ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ವೇಳೆ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಡಿವಾಳದಲ್ಲಿರುವ ಕೃಪಾನಿಧಿ ಕಾಲೇಜಿನಲ್ಲಿ ಇನ್ನು ಮುಂದೆ ಸರ್ಕಾರಿ ಪರೀಕ್ಷೆಗಳು ನಡೆಸದಂತೆ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ತಿಳಿಸಿದರು.



ಈ ಕುರಿತು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಇಟಿ ಪರೀಕ್ಷೆ ವೇಳೆ ಜನಿವಾರ ತೆಗೆಸಿದ ವಿಚಾರ ಸಂಬಂಧ ಕೃತ್ಯ ಎಸಗಿರುವುದು ಯಾರು ಎಂಬ ಬಗ್ಗೆ ತನಿಖೆ ಮಾಡಲಾಗಿದೆ. ವಸ್ತ್ರಸಂಹಿತೆ ಬಗ್ಗೆ ತರಬೇತಿ ನೀಡಿದ್ದರೂ ಇಷ್ಟೆಲ್ಲ ಸಮಸ್ಯೆಯಾಗಿದೆ. ಜನಿವಾರ ಘಟನೆಯಲ್ಲಿ ಕರ್ತವ್ಯ ಲೋಪವಾಗಿರುವ ಕಾರಣ ಕೃಪಾನಿಧಿ ಕಾಲೇಜಿನಲ್ಲಿ ಇನ್ನು ಮುಂದೆ ಸರಕಾರಿ ಪರೀಕ್ಷೆಗಳನ್ನು ನಡೆಸದಂತೆ ಸರ್ಕಾರಕ್ಕೆ ವರದಿ ಸಲ್ಲಿಕೆ ಮಾಡುತ್ತೇವೆ. ಪರೀಕ್ಷಾರ್ಥಿಗಳ ಜನಿವಾರವನ್ನು ಉದ್ದೇಶಪೂರ್ವಕವಾಗಿ ತೆಗೆಸಲಾಗಿರುವ ಕಾರಣ ಕೃಪಾನಿಧಿ ಕಾಲೇಜಿನಲ್ಲಿ ಇನ್ನು ಮುಂದೆ ಪರೀಕ್ಷಾ ಕೇಂದ್ರ ನೀಡದಂತೆ ವರದಿ ನೀಡುತ್ತೇವೆ ಎಂದರು.

ವಸ್ತ್ರ ಸಂಹಿತೆಗೆ ಅಧಿಕಾರಿಗಳು ನೇಮಕ ಆಗಿದ್ದರು. ಆದರೂ ಸಹ ಕರ್ತವ್ಯ ಲೋಪವಾಗಿದೆ ಎಂಬುದು ಗೊತ್ತಾಗಿದೆ. ಈ ರೀತಿ ಮಾಡಬಾರದು ಎಂದು ತರಬೇತಿ ನೀಡಲಾಗಿತ್ತು. ಉದ್ದೇಶಪೂರ್ವಕವಾಗಿ ಮಾಡಿದ್ದಾರೆ ಎಂದು ತನಿಖೆ ವೇಳೆ ಗೊತ್ತಾಗಿದ್ದು, ಹೀಗಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ. ಹಿರಿಯ ಅಧಿಕಾರಿಗಳು ಕಾಲೇಜಿಗೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದು, ಸಿಸಿ ಕ್ಯಾಮೆರಾ, ಡಾಕ್ಯುಮೆಂಟ್ ಪರಿಶೀಲನೆ ಮಾಡಿ ವರದಿ ಸಲ್ಲಿಸಿದ್ದಾರೆ. ಅಖಿಲ ಭಾರತ ಬ್ರಾಹ್ಮಣರ ಮಹಾಸಂಘ ಕೂಡ ಮನವಿ ಸಲ್ಲಿಸಿದ್ದಾರೆ. ಅವರ ಮನವಿಯನ್ನು ಕೆಇಎಗೆ ಕಳುಹಿಸಿಕೊಡಲಾಗುತ್ತದೆ. ಪತ್ರದಲ್ಲಿನ ಮನವಿ ಕುರಿತು ಸರ್ಕಾರ ಹಾಗೂ ಕೆಇಎ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಜಗದೀಶ್ ಮಾಹಿತಿ ನೀಡಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಆಕ್ರೋಶ

ಇದು ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಕಾಲೇಜು ಪರವಾನಗಿ ರದ್ದುಪಡಿಸಿ 25 ಲಕ್ಷ ರೂ. ದಂಡ ವಿಧಿಸುವಂತೆ ಮುಖ್ಯಮಂತ್ರಿಗಳಿಗೆ ದೂರು ನೀಡಿ ಆಗ್ರಹಿಸಿತ್ತು.

> ಜನಿವಾರವು ಬ್ರಾಹ್ಮಣ ಸಮುದಾಯದವರಿಗೆ ಕೇವಲ ದಾರವಲ್ಲ, ಇದು ಧಾರ್ಮಿಕ ನಂಬಿಕೆ, ಸಂಸ್ಕೃತಿ, ಸಂಪ್ರದಾಯ, ಆಚರಣೆ ಹಾಗೂ ಆತ್ಮಗೌರವದ ಪ್ರತೀಕವಾಗಿದೆ. ಇಂತಹ ಧಾರ್ಮಿಕ ಗುರುತನ್ನು ಬಲವಂತವಾಗಿ ತೆಗೆಸುವುದು ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ.
> ■ ಬಿ.ಆರ್. ಪ್ರದೀಪ್, ರಾಜ್ಯಾಧ್ಯಕ್ಷರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ

ಟೀಕೆಗಳಿಗೆ ಉತ್ತರ ನೀಡಲ್ಲ: ಸಚಿವ ಮಧು ಬಂಗಾರಪ್ಪ

ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಸುಧಾರಣೆ

ಶಿವಮೊಗ್ಗ: ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎಸ್ಸಿ, ಎಸ್ಟಿ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಫಲಿತಾಂಶದಲ್ಲಿ ಸಾಕಷ್ಟು ಸುಧಾರಣೆಯಾಗಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಎಸ್ಸಿ ವಿದ್ಯಾರ್ಥಿಗಳು ಶೇ.18.5 ಮತ್ತು ಎಸ್ಟಿ ವಿದ್ಯಾರ್ಥಿಗಳ ಫಲಿತಾಂಶದಲ್ಲಿ ಸಹ ಶೇ.17.5ರಷ್ಟು ಸುಧಾರಣೆಯಾಗಿದೆ. ಮುಂದೆ ಇನ್ನೂ ಉತ್ತಮ ಫಲಿತಾಂಶ ಪಡೆಯುವ ನಿಟ್ಟಿನಲ್ಲಿ ಯೋಜನೆ ರೂಪಿಸಿಕೊಳ್ಳಲಾಗುವುದು ಎಂದು ಹೇಳಿದರು.



ಸರ್ಕಾರಿ ಎಲ್ಲಾ ಶಾಲೆಗಳಿಗೆ ವಿದ್ಯುತ್ ಸಂಪರ್ಕ ನೀಡಿದ್ದು, ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ಎಲ್ಲಾ ಸರ್ಕಾರಿ ಶಾಲೆಗಳ ಪೋಷಕರೊಂದಿಗೆ ಮೆಗಾ ಮೀಟ್ ಮಾಡಿದ್ದು, ಪೋಷಕರು ಹಾಗೂ ಶಿಕ್ಷಕರ ಸಭೆ ನಡೆಸಿದ್ದು, ವಿದ್ಯಾರ್ಥಿಗಳ ಮೇಲೆ ನಿರಂತರ ನಿಗಾ ಇಡಲಾಗಿತ್ತು. ಫೇಲ್ ಆಗಬಹುದಾದ ವಿದ್ಯಾರ್ಥಿ ಪಾಸ್ ಆಗುವಂತೆ ಕಲಿಸಿದ್ದು, ಜೆಸ್ಟ್ ಪಾಸ್ ಆಗುವ ವಿದಾರ್ಥಿ ಸೆಕೆಂಡ್ ಕ್ಲಾಸ್‌ನಲ್ಲಿ, ಸೆಕೆಂಡ್ ಕ್ಲಾಸ್‌ನವರು ಫಸ್ಟ್ ಕ್ಲಾಸ್‌ನಲ್ಲಿ ಹಾಗೂ ಫಸ್ಟ್ ಕ್ಲಾಸ್ ಮಾರ್ಕ್ ತೆಗೆದವರು ಡಿಸ್ಟಿಂಕ್ಷನ್ ಪಡೆಯುವಂತೆ ಕಲಿಸಲಾಗಿತ್ತು ಎಂದರು.

ಇದು ಯಾವುದನ್ನು ತಿಳಿಯದೆ ಮಾಜಿ ಸಚಿವ ಎಚ್. ವಿಶ್ವನಾಥ್ ಹಾಗೂ ಮಾಜಿ ಸಿಎಂ ಹಾಗೂ ಸಂಸದ ಬಸವರಾಜ್ ಬೊಮ್ಮಾಯಿ ಫಲಿತಾಂಶ ಟೀಕೆ ಮಾಡಿದ್ದಾರೆ. ಕಾಪಿ ಹೊಡೆಸಲಾಗಿದೆ ಎಂದೆಲ್ಲಾ ಹೇಳಿದ್ದಾರೆ. ಅವರೂ ಕೂಡ ಶಿಕ್ಷಕರಿಂದಲೇ ಕಲಿತು ಪರೀಕ್ಷೆ ಬರೆದವರು. ಅವರು ಕಾಪಿ ಹೊಡೆದೇ ಪಾಸ್ ಮಾಡಿದ್ದರಾ ? ಎಂದು ಪ್ರಶ್ನಿಸಿದರು.

ಅವರ ಟೀಕೆಗೆ ಮಕ್ಕಳೇ ಉತ್ತರ ನೀಡಿದ್ದಾರೆ. ಮಕ್ಕಳ ಭವಿಷ್ಯಕ್ಕೆ ವಿರುದ್ಧವಾಗಿ ಹೇಳಿಕೆ ನೀಡಿರುವ ಇಬ್ಬರೂ ನಾಯಕರು ಫೇಲ್ ಆಗಿದ್ದಾರೆ. ಫಲಿತಾಂಶದ ಬಗ್ಗೆ ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ಬಗ್ಗೆ ಜಾಲತಾಣದಲ್ಲಿ ಟೀಕೆ ಮಾಡುವವರಿಗೆ ತಲೆಯಲ್ಲಿ ಬುದ್ದಿಯೇ ಇಲ್ಲ ಎಂದು ಹರಿಹಾಯ್ದರು.

ಇಲಾಖೆಯಲ್ಲಿ ಸುಧಾರಣೆ

ಸಚಿವನಾದ ಮೊದಲ ವರ್ಷ ಇಲಾಖೆಯ ಆಳಗಲದ ಬಗ್ಗೆ ಅರ್ಥವೇ ಆಗಿರಲಿಲ್ಲ. 2ನೇ ವರ್ಷದಲ್ಲಿ ಒಂದಿಷ್ಟು ಹಿಡಿತ ಸಿಕ್ಕಿತ್ತು. ವೆಬ್ ಕಾಸ್ಟಿಂಗ್ ತಂದು ಕಾಪಿ ನಿಯಂತ್ರಿಸಲಾಗಿತ್ತು. 3ನೇ ವರ್ಷ ಸಂಪೂರ್ಣ ಇಲಾಖೆ ಮೇಲೆ ಹಿಡಿತ ಬಂದಿದ್ದರಿಂದಾಗಿ ಉತ್ತಮ ಫಲಿತಾಂಶ ಪಡೆಯಲು ಸಾಧ್ಯವಾಗಿದೆ. ಇಲಾಖೆಯಲ್ಲಿ ಸುಧಾರಣೆ ತಂದಿರುವುದನ್ನು ಐಸಿಐಸಿ, ಸಿಬಿಎಸ್‌ಸಿಯವರು ಅದನ್ನು ಪಾಲಿಸುತ್ತಿದ್ದಾರೆ. ಸಿಇಟಿ ನಿಯಮಾವಳಿಗಳನ್ನು ಕೆಲವರು ತಪ್ಪಾಗಿ ಅರ್ಥೈಸಿಕೊಂಡು ಜನಿವಾರ ತೆಗೆಸಿದ್ದಾರೆ. ಇದನ್ನು ಸಮರ್ಥಿಸುವುದಿಲ್ಲ ಎಂದ ಅವರು, ಡಾ.ರಾಜ್‌ಕುಮಾರ್ ಸ್ಮಾರಕದ ಜಾಗಕ್ಕೆ ಸಂಬಂಧಿಸಿದಂತೆ ಶಿವಣ್ಣ ಹೇಳಿಕೆ ನೀಡಿದ್ದಾರೆ ಎಂದರು.

ಎಂಜಿನ್ ಬದಲಾವಣೆ ಸುಲಭವಲ್ಲ | ಇಡೀ ವಿಮಾನದ ವಿನ್ಯಾಸವೇ ಅದರ ಮೇಲೆ ನಿಂತಿರುತ್ತದೆ

ವರ್ಷಾಂತ್ಯಕ್ಕೆ ಜಿಇ ಎಫ್ 414 ಒಪ್ಪಂದ ಪೂರ್ಣ

ನೆಲ್ಲಿಜೆ ನವ್ಯಜ್ಯೋತಿ

ದಿಗಂತ ವಿಶೇಷ

ಬೆಂಗಳೂರು: ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ತೇಜಸ್ ಲಘು ಯುದ್ಧ ವಿಮಾನ ಕುರಿತಾಗಿ ಸಾರ್ವಜನಿಕವಾಗಿ ಅತೀ ಹೆಚ್ಚು ಟೀಕೆಗೆ ಗುರಿಯಾಗಿದೆ. ಅಮೆರಿಕದ ಜನರಲ್ ಎಲೆಕ್ಟ್ರಿಕ್ (ಜಿಇ) ಒಪ್ಪಂದದಂತೆ ಎಂಜಿನ್‌ಗಳನ್ನು ಪೂರೈಸದಿರುವುದೇ ಇದಕ್ಕೆ ಮುಖ್ಯ ಕಾರಣ. ಅದಕ್ಕಾಗಿ ಜಿಇಯನ್ನು ಕೈಬಿಟ್ಟು ಬೇರೆ ಎಂಜಿನ್ ಹಾಕಿ ತೇಜಸ್ ಹಾರಿಸಿ ಎಂಬ ಪುಕ್ಕಟೆ ಸಲಹೆಯೂ ಬರುತ್ತದೆ. ವಾಸ್ತವದಲ್ಲಿ ಇದು ಸಾಧ್ಯವಾ?

ಒಂದು ಎಂಜಿನ್ ಇಟ್ಟುಕೊಂಡು ಅದಕ್ಕೆ ತಕ್ಕಂತೆ ವಿಮಾನವನ್ನು ವಿನ್ಯಾಸಗೊಳಿಸಿದ ನಂತರ ಎಂಜಿನ್ ಬದಲಾಯಿಸುವುದು ಕಷ್ಟ. ಎಂಜಿನ್ ಎನ್ನುವುದು ಯಾವುದೋ ಪರ್ಯಾಯ ಭಾಗ ಅಲ್ಲ, ಯಾವುದೋ ಬೇರೆಯದು ತಂದು ಹಾಕುವುದಕ್ಕೆ ಸಾಧ್ಯವಿಲ್ಲ, ಅದು ವಿಮಾನದ ಬಹುಮುಖ್ಯ ಭಾಗ. ಅದರ ಆಧಾರದಲ್ಲೇ ಇಡೀ ವಿಮಾನದ ವಿನ್ಯಾಸ ಇರುತ್ತದೆ. ಜಿಇ ಎಂಜಿನ್ ಆರ್ಡರ್ ರದ್ದುಗೊಳಿಸಿ ಬೇರೆ ಎಂಜಿನ್ ಹಾಕಿ ಎಂಬ ಸಾರ್ವಜನಿಕ ಅಭಿಪ್ರಾಯಗಳು ಬರುತ್ತಿವೆ. ಆದರೆ, ಅದು ಹಾಗೆ ಆಗುವುದಿಲ್ಲ, ಅಷ್ಟೇ ಅಲ್ಲದೇ

> ತೇಜಸ್‌ನ ಎಂಜಿನ್ ಕುರಿತಾಗಿ ನಮ್ಮನ್ನು ಸಾಕಷ್ಟು ಟೀಕೆ ಮಾಡಲಾಗಿದೆ. ಜಿಇ ಒಪ್ಪಂದ ರದ್ದುಪಡಿಸಿ ಬೇರೆ ಕಂಪನಿ ನೇಮಿಸಿ ಎಂದು ಎಕ್ಸ್‌ನಲ್ಲಿ ಬರೆಯುವುದು ಸುಲಭ. ಆದರೆ, ಒಂದು ಯುದ್ಧ ವಿಮಾನದ ಎಂಜಿನ್ ಬದಲಾವಣೆ ಅಷ್ಟು ಸುಲಭವಲ್ಲ.
> ■ ಡಾ. ಡಿ.ಕೆ. ಸುನೀಲ್, ಸಿಎಂಡಿ ಎಚ್‌ಎಎಲ್


ತೇಜಸ್ ಜಟಿಲ ಯುದ್ಧವಿಮಾನವಾಗಿದೆ ಎನ್ನುತ್ತಾರೆ ಎಚ್‌ಎಎಲ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ. ಡಿ.ಕೆ. ಸುನೀಲ್.

ಖರೀದಿದಾರರೆಂದು ಪೂರ್ಣ ಅಧಿಕಾರವಿಲ್ಲ: ನಾವು ಎಂಜಿನ್ ಖರೀದಿಸುತ್ತೇವೆ ಎಂದು ನಮಗೆ ಅದರಲ್ಲಿ ಶೇ.100ರಷ್ಟು ಅಧಿಕಾರವಿರುವುದಿಲ್ಲ, ಯಾಕೆಂದರೆ ಜಿಇ ತುಂಬಾ ಬಲಿಷ್ಠವಾಗಿದೆ. ಅವರೊಂದಿಗೆ ಹೊಂದಿಕೊಂಡು ಹೋಗಬೇಕಾದ ಅಗತ್ಯವಿದೆ. ಹೀಗಿರುವಾಗ ಅವರ ಸಮಸ್ಯೆಗಳೇನಿದೆ, ಅದನ್ನು ಜಿಇ ಅವರೊಂದಿಗೆ ಚರ್ಚಿಸಿ, ನಮ್ಮ ಕಡೆಯಿಂದ ಏನು ಮಾಡಬಹುದು? ಎಂಬುದನ್ನು ಪರಿಶೀಲಿಸಿ ಮುಂದುವರಿಯುತ್ತಿದ್ದೇವೆ. ಪ್ರಸಕ್ತ ಪರಿಸ್ಥಿತಿ ಸುಧಾರಿಸಿದೆ, ಸಮಸ್ಯೆಗಳನ್ನು ಬಗೆಹರಿಸಲಾಗಿದೆ. ಈ ವರ್ಷದಲ್ಲಿ ಎಂಜಿನ್‌ಗಳು ಬರುತ್ತವೆ ಎಂಬ ವಿಶ್ವಾಸವಿದೆ. ಸಾಮಾಜಿಕ ಜಾಲತಾಣದಲ್ಲಿ ಜಿಇ ಕಂಪನಿಯೊಂದಿಗಿನ ಒಪ್ಪಂದ ಕೈಬಿಡಿ ಎಂದು ಬರೆಯಬಹುದು. ಆದರೆ, ವಾಸ್ತವದಲ್ಲಿ ಅದು ಸುಲಭವಿಲ್ಲ ಎಂದು ಡಾ. ಸುನೀಲ್ ವಿವರಿಸಿದ್ದಾರೆ.

ನಷ್ಟ ಪರಿಹಾರ ಪಡೆಯುತ್ತದೆ ಎಚ್‌ಎಎಲ್: ಜಿಇ ಸಣ್ಣ ಕಂಪನಿಯಲ್ಲ, ಅದೊಂದು ದೈತ್ಯ ಕಂಪನಿ ಅವರು ಸಿವಿಲ್ ಎಂಜಿನ್ಸ್ ಕೂಡ ಮಾಡುತ್ತಾರೆ. ತೇಜಸ್ ಎಲ್‌ಸಿಎ ಎಂಕೆ-1ಎ ವಿಮಾನಕ್ಕೆ ಎಫ್404 ಎಂಜಿನ್‌ನನ್ನು ಜಿಇ ಕಂಪನಿ ಪೂರೈಕೆ ಮಾಡುತ್ತದೆ. ಎಚ್‌ಎಎಲ್ 99 ಎಂಜಿನ್‌ಗಳಿಗೆ ಆದೇಶ ನೀಡಿತ್ತು. ಒಪ್ಪಂದದಂತೆ 2024ರ ವೇಳೆಗೆ ಸರಬರಾಜು ಪ್ರಾರಂಭವಾಗಬೇಕಿತ್ತು. ಆದರೆ, ಕಳೆದ ವರ್ಷ ಎಂಜಿನ್ ಪೂರೈಕೆ ಪ್ರಾರಂಭಿಸಿತ್ತು. ಇದರಿಂದ ಎಚ್‌ಎಎಲ್ ಸಾಕಷ್ಟು ನಷ್ಟ ಅನುಭವಿಸಿದೆ. ಯಾವುದೇ ಟೆಂಡರ್ ಒಪ್ಪಂದ ಮಾಡಿಕೊಳ್ಳುವಾಗ ಅದರಲ್ಲಿ ವಾಣಿಜ್ಯ ನಿಯಮಗಳಿರುತ್ತವೆ. ಸರಿಯಾದ ಸಮಯಕ್ಕೆ ಉತ್ಪನ್ನ ಪೂರೈಕೆ ಮಾಡದಿದ್ದಾಗ ಇಂತಿಷ್ಟು ಕಡಿತಗೊಳಿಸಲಾಗುತ್ತದೆ ಎಂದು ಷರತ್ತುಗಳಲ್ಲಿದೆ. ಹೀಗಾಗಿ, ವಿಳಂಬಕ್ಕಾಗಿ ದಿವಾಳಿ ಪರಿಹಾರವನ್ನು ವಿಧಿಸಲಾಗಿದೆ ಎಂದಿದ್ದಾರೆ.

ಎಫ್ 414 ಎಂಜಿನ್ ತಾಂತ್ರಿಕ ಭಾಗದ ಮಾತುಕತೆ ಪೂರ್ಣ

ತೇಜಸ್ ಲಘು ಯುದ್ಧ ವಿಮಾನದ ಮುಂದಿನ ಆವೃತ್ತಿ ಎಲ್‌ಸಿಎ ಎಂಕೆ-2 ಈಗಾಗಲೇ ಮೂಲ ಮಾದರಿಯ ಉತ್ಪಾದನೆಯಲ್ಲಿದೆ. ಇದು ಹೆಚ್ಚು ಸುಧಾರಿತ ಜಿಇ ಎಫ್414 ಎಂಜಿನ್‌ನಿಂದ ಕಾರ್ಯಾಚರಿಸಲಿದೆ. ಈ ಜಿಇ ಎಫ್414 ಎಂಜಿನ್‌ನ ತಂತ್ರಜ್ಞಾನದ ವರ್ಗಾವಣೆಗಾಗಿ ಎಚ್‌ಎಎಲ್ ಅಮೆರಿಕದ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಿದೆ. ಈಗಾಗಲೇ ಚರ್ಚೆಗಳನ್ನು ಮುಂದಿವರಿಸಿದ್ದು, ನಿಯಮ ಮತ್ತು ಷರತ್ತುಗಳ ತಾಂತ್ರಿಕ ಭಾಗ ಪೂರ್ಣಗೊಂಡಿದೆ. ಆರ್ಥಿಕ ಭಾಗ ಜೂನ್-ಜುಲೈನಲ್ಲಿ ಅಂತಿಮವಾಗಲಿದೆ. ನಂತರ ಕೇಂದ್ರ ಸರ್ಕಾರದ ಅನುಮೋದನೆ ಪಡೆಯಬೇಕು. ಈ ವರ್ಷಾಂತ್ಯದಲ್ಲಿ ಒಪ್ಪಂದ ಆಗಲಿದೆ ಎಂದು ಎಚ್‌ಎಎಲ್ ಸಿಎಂಡಿ ಡಾ. ಡಿ.ಕೆ. ಸುನೀಲ್ ಕುಮಾರ್ ತಿಳಿಸಿದ್ದಾರೆ. ಎಲ್‌ಸಿಎ ಎಂಕೆ-2 ಉತ್ಪಾದನೆ ಆರಂಭಕ್ಕೆ ಇನ್ನೂ ನಾಲ್ಕು ವರ್ಷ ಆಗುವುದರಿಂದ ಆ ವೇಳೆಗೆ ಜಿಇ ಎಫ್414 ಎಂಜಿನ್ ಭಾರತದಲ್ಲೇ ತಯಾರಾಗಲಿದೆ. ಒಪ್ಪಂದದ ಮಹತ್ವದ ಮೈಲಿಗಲ್ಲು ಪೂರ್ಣಗೊಂಡಿದೆ. ಈಗಾಗಲೇ ಎಚ್‌ಎಎಲ್ ತಂಡ ಜಿಇಗೆ ಹೋಗಿ ಅಲ್ಲಿ ಪರಿಶೀಲನೆ ನಡೆಸಿದೆ, ಅದೇ ರೀತಿ ಜಿಇ ತಂಡವೂ ಇಲ್ಲಿಗೆ ಬಂದು ಪರಿಶೀಲನೆ ಪೂರ್ಣಗೊಳಿಸಿದೆ. ವಿಡಿಯೋ ಕಾನ್ಫರೆನ್ಸ್‌ಗಳ ಮೂಲಕ ಸಂವಹನ ಪ್ರಗತಿಯಲ್ಲಿದೆ ಎಂದು ವಿವರಿಸಿದ್ದಾರೆ.



ಪ್ರಾಧ್ಯಾಪಕರ ಸೇವೆ ಬಳಸಿಕೊಳ್ಳಿ: ಪುಟ್ಟಣ್ಣ

ಬೆಂಗಳೂರು: ಖಾಯಂ ಬೋಧಕರ ಕೊರತೆ ಎದುರಿಸುತ್ತಿರುವ ವಿವಿಗಳಲ್ಲಿ ಪಿಎಚ್.ಡಿ ಮಾರ್ಗದರ್ಶಕರಾಗಿ ಪ್ರಥಮದರ್ಜೆ ಕಾಲೇಜುಗಳ ಪ್ರಾಧ್ಯಾಪಕರ ಸೇವೆ ಬಳಸಿಕೊಳ್ಳಲು ಅವಕಾಶ ಕಲ್ಪಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಆಗ್ರಹಿಸಿದ್ದಾರೆ.

ಬೆಂಗಳೂರು ವಿವಿ, ಸರ್ಕಾರಿ ಕಲಾ ಕಾಲೇಜು, ಕರ್ನಾಟಕ ಪತ್ರಾಗಾರ, ಗೆಜೆಟಿಯರ್ ಇಲಾಖೆ ಹಾಗೂ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತಿನ ಸಹಯೋಗದಲ್ಲಿ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ಕರ್ನಾಟಕ ಇತಿಹಾಸ ಪರಿಷತ್ತಿನ 36ನೇ ವಾರ್ಷಿಕ ಮಹಾಧಿವೇಶನ ಉದ್ಘಾಟಿಸಿ ಮಾತನಾಡಿದರು. ಅನೇಕ ವಿಭಾಗಗಳಲ್ಲಿ ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಇರುವುದರಿಂದ, ವಿದ್ಯಾರ್ಥಿಗಳಿಗೆ ಸಮಯೋಚಿತ ಮಾರ್ಗದರ್ಶನ ದೊರಕದೆ, ಸಂಶೋಧನಾ ಕಾರ್ಯಗಳು ವಿಳಂಬವಾಗುತ್ತಿವೆ. ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಮೇಲೆ ಪರಿಣಾಮ ಬೀರುತ್ತಿದೆ ಎಂದರು.

ಸಂಪಾದಕೀಯ

ಧರೆಗುರುಳುತ್ತಿರುವ ಆಪ್

ರಾಜಕೀಯದಾಗಸದಲ್ಲಿ ಹಠಾತ್ ಉನ್ನತಿ ಕಂಡ ಆಮ್ ಆದ್ಮಿ ಪಕ್ಷವು (ಆಪ್) ಇದೀಗ ಉಲ್ಕೆಯ ರೀತಿಯಲ್ಲಿ ಪತನದ ಹಾದಿ ಕಾಣುತ್ತಿರುವುದು ವಿಪರ್ಯಾಸವೇ ಸರಿ. ಎಲ್ಲರನ್ನೂ ಒಳಗೊಳ್ಳುವಂತೆ ಮಾಡುವ ನೀತಿ ಹೊಂದಿರುವುದಾಗಿ ಹೇಳಿಕೊಳ್ಳುವ ಪಕ್ಷದಿಂದ ಎಲ್ಲರೂ ಈಗ ಹೊರ ಸರಿಯುತ್ತಿದ್ದಾರೆ. ಕಳೆದ ಕೆಲ ವರ್ಷಗಳಲ್ಲಿ ಕೆಲವು ಪ್ರಮುಖ ಮುಖಂಡರು ಪಕ್ಷ ತ್ಯಜಿಸಿ ಹೊರಬಂದಿದ್ದರೆ, ಇದೀಗ ಏಳು ಮಂದಿ ರಾಜ್ಯಸಭಾ ಸದಸ್ಯರು ಒಮ್ಮೆಗೆ ಪಕ್ಷ ಬಿಡುವ ಮೂಲಕ ಆಪ್‌ಗೆ ಭಾರೀ ಆಘಾತ ನೀಡಿದ್ದಾರೆ. ಪಕ್ಷದಿಂದ ನಿಧಾನವಾಗಿ ದೂರಸರಿಯುವಂತೆ ತೋರುತ್ತಿದ್ದ ಯುವ ಮುಖಂಡ



ರಾಘವ್ ಚಡ್ಡಾ ಅವರ ರಾಜ್ಯಸಭಾ ನಾಯಕತ್ವವನ್ನು ಕಿತ್ತುಕೊಂಡು ಅವರಿಗೆ ಸೂಕ್ತ ಪಾಠ ಕಲಿಸಿದ್ದಾಗಿ ಬೀಗುತ್ತಿದ್ದ ಕೇಜ್ರಿವಾಲ್‌ಗೆ ರಾಘವ್ ಚಡ್ಡಾ ಉಚಿತ ರೀತಿಯಲ್ಲಿ ಹೊಡೆತ ನೀಡಿ, ಇನ್ನೂ ಆರು ಮಂದಿಯನ್ನು ಪಕ್ಷದಿಂದ ದೂರ ಸೆಳೆದಿದ್ದಾರೆ. ರಾಜ್ಯಸಭೆಯಲ್ಲಿ ಕೇವಲ 10 ಸ್ಥಾನಗಳನ್ನು ಹೊಂದಿದ್ದ ಆಪ್‌ಗೆ ಇದೀಗ ಸದನದಲ್ಲಿ ಅಸ್ತಿತ್ವದ ಭೀತಿಯೇ ಎದುರಾಗಿದೆ. ಮೂರನೇ ಎರಡಕ್ಕಿಂತ ಹೆಚ್ಚಿನ ಸದಸ್ಯರು ಬಂಡೆದ್ದಿರುವುದರಿಂದ ಆಪ್ ಅವರನ್ನು ಪಕ್ಷದಿಂದ ಉಚ್ಚಾಟಿಸುವ ಪರಿಸ್ಥಿತಿಯನ್ನೂ ಇಲ್ಲವಾಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಮುಂದಿನ ವರ್ಷ ನಡೆಯಲಿರುವ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಆಪ್‌ಗೆ ಇದು ಪ್ರತಿಕೂಲವಾಗಿ ಪರಿಣಮಿಸುವ ಸಾಧ್ಯತೆಗಳಿವೆ. ಆಪ್‌ನ ಉನ್ನತ ನಾಯಕತ್ವದ ಕುರಿತಂತೆ, ಕೇಜ್ರಿವಾಲ್‌ರ ಸರ್ವಾಧಿಕಾರಿ ಧೋರಣೆಯ ಕುರಿತಂತೆ, ಪಂಜಾಬ್‌ನ ಮುಖ್ಯಮಂತ್ರಿ ಭಗವಂತ್ ಮಾನ್ ಕಾರ್ಯಶೈಲಿಯ ಕುರಿತಂತೆ ಆಪ್‌ನ ಇತರ ಮುಖಂಡರಲ್ಲಿ ಹಾಗೂ ಕಾರ್ಯಕರ್ತರಲ್ಲಿ ತೀವ್ರ ಅಸಮಾಧಾನವಿದೆ. ಪಕ್ಷದಲ್ಲಿ ಕೆಲವೇ ಕೆಲವರು ಕೂಟ ಕಟ್ಟಿಕೊಂಡು ಇತರ ನಾಯಕರನ್ನು ಕಡೆಗಣನೆ ಮಾಡುತ್ತಿದ್ದಾರೆಂಬ ಆರೋಪವೂ ಜೋರಾಗಿದೆ.

ಕಳೆದ ಕೆಲವು ವರ್ಷಗಳಿಂದ ಆಮ್ ಆದ್ಮಿ ಪಕ್ಷದ ವರ್ಚಸ್ಸು ಕುಂದಿದೆ. ಅಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧಿ ಚಳವಳಿಯ ಮೂಲಕ ಹುಟ್ಟಿಕೊಂಡ ಆಪ್ ಬಳಿಕ ತಾನೂ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಉನ್ನತ ಮುಖಂಡ ಕೇಜ್ರಿವಾಲ್ ಭ್ರಷ್ಟಾಚಾರದ ಕಾರಣಕ್ಕಾಗಿ ಜೈಲು ಪಾಲಾದುದು ಪಕ್ಷದ ಪಾಲಿನ ಅತಿದೊಡ್ಡ ವ್ಯಂಗ್ಯವೆನ್ನಬೇಕು. ಆಪ್ ಪ್ರತಿನಿಧಿಗಳು ಪಕ್ಷತ್ಯಜಿಸುತ್ತಿರುವುದು ಆಪ್ ಪಾಲಿಗೆ ಕೇವಲ ಸಂಖ್ಯೆಯ ಪ್ರಶ್ನೆಯಲ್ಲ, ಅದು ಪಕ್ಷದ ವಿಶ್ವಾಸಾರ್ಹತೆಯ ಪ್ರಶ್ನೆಯಾಗಿದೆ. ದಿಲ್ಲಿ ಮತ್ತು ಪಂಜಾಬ್‌ನಲ್ಲಿ ಆಪ್ ಸರಕಾರಗಳ ನಿರ್ವಹಣೆಯು ಜನರಲ್ಲಿ ಭ್ರಮನಿರಶನವನ್ನೂ ಉಂಟು ಮಾಡಿದೆ. ಇದಕ್ಕೆಲ್ಲ ಕಾರಣರಾದ ಕೇಜ್ರಿವಾಲ್ ತಮ್ಮ ವರ್ತನೆ ತಿದ್ದಿಕೊಳ್ಳುವರೆ? ಅದು ಅತ್ಯಂತ ಮುಖ್ಯ ಪ್ರಶ್ನೆ.

ಭಾರತ-ನ್ಯೂಜಿಲೆಂಡ್ ಮುಕ್ತ ವ್ಯಾಪಾರ ಒಪ್ಪಂದ

ಪಿಯೂಷ್ ಗೋಯಲ್



ಸೋಮವಾರ ಸಹಿ ಹಾಕಲಾಗಿರುವ ಭಾರತ-ನ್ಯೂಜಿಲೆಂಡ್ ಮುಕ್ತ ವ್ಯಾಪಾರ ಒಪ್ಪಂದವು (ಎಫ್‌ಟಿಎ), ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಂದಿಗೆ ಭಾರತದ ಒಡನಾಟದಲ್ಲಿ ಒಂದು ನಿರ್ಣಾಯಕ ಮೈಲಿಗಲ್ಲಾಗಿದೆ. ರೈತರು, ಮಹಿಳೆಯರು, ಯುವಜನರು ಮತ್ತು ಉದ್ಯೋಗ ಸೃಷ್ಟಿಸುವ ಕೈಗಾರಿಕೆಗಳಿಗೆ, ಜಾಗತಿಕ ಆರ್ಥಿಕ ಪಾಲುದಾರಿಕೆಯನ್ನು ಸ್ಪಷ್ಟ ಲಾಭಗಳಾಗಿ ಪರಿವರ್ತಿಸುವ ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಿರ್ಣಾಯಕ ಮುನ್ನಡೆಯನ್ನು ಇದು ಪ್ರತಿಬಿಂಬಿಸುತ್ತದೆ.

ಯುನೈಟೆಡ್ ಕಿಂಗ್‌ಡಮ್ ಮತ್ತು ಐರೋಪ್ಯ ಒಕ್ಕೂಟ ಸೇರಿದಂತೆ ಪ್ರಮುಖ ಅಭಿವೃದ್ಧಿ ಹೊಂದಿದ ಆರ್ಥಿಕತೆಗಳೊಂದಿಗೆ ಮಾಡಿಕೊಂಡ ಐತಿಹಾಸಿಕ ವ್ಯಾಪಾರ ಒಪ್ಪಂದಗಳ ಸರಣಿಯ ಮುಂದುವರಿದ ಭಾಗವಾಗಿ ಈ ಒಪ್ಪಂದ ರೂಪುಗೊಂಡಿದೆ. ಈ ಒಪ್ಪಂದಗಳು ಜಾಗತಿಕ ಮಾರುಕಟ್ಟೆಗಳಲ್ಲಿ ಭಾರತದ ಸ್ಥಾನವನ್ನು ಬಲಪಡಿಸುತ್ತವೆ ಮತ್ತು ಜಾಗತಿಕ ಅನಿಶ್ಚಿತತೆ ಮತ್ತು ವಿಭಿನ್ನ ನಡುವೆಯೂ ವಿಶ್ವದ ಅತ್ಯಂತ ಲಾಭದಾಯಕ ಆರ್ಥಿಕತೆಗಳಲ್ಲಿ ನಮ್ಮ ರಫ್ತುದಾರರಿಗೆ ಸ್ಪರ್ಧಾತ್ಮಕ ಮೇಲುಗೈಯನ್ನು ಒದಗಿಸುತ್ತವೆ.

ರಫ್ತು ಮತ್ತು ಉದ್ಯೋಗಗಳಿಗೆ ಬಲವಾದ ಉತ್ತೇಜನ

ಪರಸ್ಪರ ಲಾಭದಾಯಕವಾದ ಈ ಒಪ್ಪಂದದ ಪ್ರಮುಖ ಅಂಶವೆಂದರೆ, ಎಲ್ಲಾ ಭಾರತೀಯ ಉತ್ಪನ್ನಗಳ ಮೇಲಿನ ಸುಂಕವನ್ನು ತಕ್ಷಣವೇ ರದ್ದುಗೊಳಿಸುವ ನ್ಯೂಜಿಲೆಂಡ್‌ನ ಬದ್ಧತೆಯಾಗಿದೆ. ಪ್ರಸ್ತುತ ನಮ್ಮ ಪ್ರಮುಖ ರಫ್ತುಗಳ ಶೇ. 10ರಷ್ಟು ಸುಂಕವನ್ನು ಎದುರಿಸುತ್ತಿರುವ ಮಾರುಕಟ್ಟೆಯಲ್ಲಿನ ಈ ಮಹತ್ವದ ಅಡೆತಡೆಯನ್ನು ಇದು ನಿವಾರಿಸುತ್ತದೆ. ಸಿದ್ಧ ಉಡುಪುಗಳು, ಕಾರ್ಪೆಟ್‌ಗಳು, ನೂಲು, ಬಟ್ಟೆಗಳು, ಪಾದರಕ್ಷೆಗಳು, ಬ್ಯಾಗ್‌ಗಳು, ಬೆಲ್ಟ್‌ಗಳು, ಆಟೋಮೊಬೈಲ್ ಘಟಕಗಳು, ಯಂತ್ರೋಪಕರಣಗಳು, ಉಪಕರಣಗಳು, ರತ್ನ ಮತ್ತು ಆಭರಣಗಳು ಹಾಗೂ ಕರಕುಶಲ ವಸ್ತುಗಳಂತಹ ಕಾರ್ಮಿಕ-ಪ್ರಧಾನ ವಲಯಗಳಿಗೆ ಇದು ದೊಡ್ಡ ಉತ್ತೇಜನ ನೀಡಿದೆ. ಉದ್ಯೋಗ ಸೃಷ್ಟಿಸುವ ಕೈಗಾರಿಕೆಗಳು ಭಾರತದ ಎಂಎಸ್‌ಎಂಇ ವ್ಯವಸ್ಥೆಯ ಬೆನ್ನೆಲುಬಾಗಿದ್ದು, ಇವು ಬೆಲೆ ಸ್ಪರ್ಧಾತ್ಮಕತೆ ಮತ್ತು ಮಾರುಕಟ್ಟೆ ಪ್ರವೇಶದ ಪ್ರಯೋಜನವನ್ನು ಪಡೆಯಲಿವೆ. ಇದು ರಫ್ತನ್ನು ಹೆಚ್ಚಿಸುವುದಲ್ಲದೆ, ಉತ್ಪಾದನಾ ಕ್ಲಸ್ಟರ್‌ಗಳು, ಕುಶಲಕರ್ಮಿ ಸಮುದಾಯಗಳು ಮತ್ತು ಸಣ್ಣ ಉದ್ಯಮಗಳಲ್ಲಿ ದೊಡ್ಡ ಪ್ರಮಾಣದ ಉದ್ಯೋಗ ಸೃಷ್ಟಿಗೆ ಕಾರಣವಾಗಲಿದೆ. ಈ ಒಪ್ಪಂದವು 2014ರಲ್ಲಿ ಮೋದಿ ಸರ್ಕಾರ ರಚನೆಯಾದಾಗಿನಿಂದ ಭಾರತದ ವ್ಯಾಪಾರ ನೀತಿಯನ್ನು ಮುನ್ನಡೆಸುತ್ತಿರುವ ವಿಶಾಲ ತತ್ವಶಾಸ್ತ್ರವನ್ನು ಪ್ರತಿಬಿಂಬಿಸುತ್ತದೆ. ಇದು ಒಳಗೊಳ್ಳುವಿಕೆ, ಸುಲಲಿತ ಜೀವನ ಮತ್ತು ಸಹಭಾಗಿತ್ವದ ಸಮೃದ್ಧಿಯ ತತ್ವದೊಂದಿಗೆ ಆಳವಾಗಿ ಬೇರು ಬಿಟ್ಟಿದೆ. ಇಲ್ಲಿ ವ್ಯಾಪಾರವನ್ನು ಕೇವಲ ಸಂಖ್ಯೆಗಳಾಗಿ ನೋಡದೆ, ರೈತರು, ಕಾರ್ಮಿಕರು, ಮಹಿಳೆಯರು, ಯುವಕರು ಮತ್ತು ಹಿಂದುಳಿದವರಿಗೆ ಪ್ರಯೋಜನ ನೀಡುವ ರಾಷ್ಟ್ರೀಯ ಪರಿವರ್ತನೆಯ ಸಾಧನವಾಗಿ ನೋಡಲಾಗುತ್ತದೆ.

ನಾರೀಶಕ್ತಿ

ಈ ಒಪ್ಪಂದದ ಒಂದು ವಿಶಿಷ್ಟ ಲಕ್ಷಣವೆಂದರೆ, ಇದು ಭಾರತದ ಮೊದಲ

ರೈತರು, ಯುವಜನತೆ, ಉದ್ಯೋಗ ಮತ್ತು ಅಭಿವೃದ್ಧಿಗಾಗಿ ಮಹಿಳಾ ನೇತೃತ್ವದ ಮೈಲಿಗಲ್ಲು

ಮಹಿಳಾ ನೇತೃತ್ವದ ಎಫ್‌ಟಿಎ ಆಗಿದೆ. ಸಮಾಲೋಚನೆ ನಡೆಸಿದ ಇಡೀ ತಂಡದಲ್ಲಿ ಬಹುಪಾಲು ಮಹಿಳೆಯರೇ ಆಗಿದ್ದರು. ಇದರಲ್ಲಿ ಮುಖ್ಯ ಸಮಾಲೋಚಕರು, ಉಪಮುಖ್ಯ ಸಮಾಲೋಚಕರು, ವಲಯದ ಮುಖ್ಯಸ್ಥರು ಮತ್ತು ನ್ಯೂಜಿಲೆಂಡ್‌ಗೆ ಭಾರತದ ರಾಯಭಾರಿಯೂ ಮಹಿಳೆಯೇ ಆಗಿದ್ದಾರೆ. ಈ ಮೈಲಿಗಲ್ಲು ಮೋದಿ ಸರ್ಕಾರದಲ್ಲಿ ಮಹಿಳೆಯರಿಗೆ ನೀಡಲಾಗುತ್ತಿರುವ ಪ್ರಾಮುಖ್ಯತೆಯನ್ನು ಪ್ರತಿಬಿಂಬಿಸುತ್ತದೆ. ಇದು ಆಡಳಿತ, ನಾಯಕತ್ವ ಮತ್ತು ನಿರ್ಧಾರ ತೆಗೆದುಕೊಳ್ಳುವಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಪ್ರಯತ್ನಗಳೊಂದಿಗೆ ಹೊಂದಿಕೆಯಾಗುತ್ತದೆ ಮತ್ತು ರಾಷ್ಟ್ರೀಯ ಅಭಿವೃದ್ಧಿಯ ಚಾಲಕಶಕ್ತಿಯಾಗಿ ನಾರೀಶಕ್ತಿಯ ಕಲ್ಪನೆಯನ್ನು ಬಲಪಡಿಸುತ್ತದೆ.

ರೈತರಿಗೆ ಮೊದಲ ಆದ್ಯತೆ

ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು ಈ ಎಫ್‌ಟಿಎ ಅನ್ನು ಎಚ್ಚರಿಕೆಯಿಂದ ರೂಪಿಸಲಾಗಿದೆ. ಕಿವಿ, ಸೇಬು ಮತ್ತು ಜೇನುತುಪ್ಪಕ್ಕಾಗಿ ಕೃಷಿ ಉತ್ಪಾದಕತಾ ಕ್ರಿಯಾ ಯೋಜನೆಗಳನ್ನು ನ್ಯೂಜಿಲೆಂಡ್ ಬೆಂಬಲಿಸಲಿದೆ. ಈ ಉಪಕ್ರಮಗಳು ಸುಧಾರಿತ ನೆಟ್ಟ ವಸ್ತುಗಳು, ಸಂಶೋಧನಾ ಸಹಯೋಗ, ಬೆಳೆಗಾರರ ಸಾಮರ್ಥ್ಯ ವೃದ್ಧಿ, ತೋಟದ ನಿರ್ವಹಣಾ ಪದ್ಧತಿಗಳು, ಕೊಯ್ಲಿನ ನಂತರದ ಸುಧಾರಣೆಗಳು, ಆಹಾರ ಸುರಕ್ಷತಾ ವ್ಯವಸ್ಥೆಗಳು ಮತ್ತು ಉತ್ಕೃಷ್ಟತಾ ಕೇಂದ್ರಗಳ (ಸೆಂಟರ್ ಆಫ್ ಎಕ್ಸಲೆನ್ಸ್) ಸ್ಥಾಪನೆಯನ್ನು ಒಳಗೊಂಡಿವೆ. ಸೇಬು ಬೆಳೆಗಾರರು ಮತ್ತು ಸುಸ್ಥಿರ ಜೇನು ಸಾಕಣೆಗಾಗಿ ಕೈಗೊಳ್ಳುವ ಈ ಯೋಜನೆಗಳು ಉತ್ಪಾದನೆ ಮತ್ತು ಗುಣಮಟ್ಟವನ್ನು ಹೆಚ್ಚಿಸಲಿವೆ, ಇದು ರೈತರ ಸಮೃದ್ಧಿಯನ್ನು ಹೆಚ್ಚಿಸುತ್ತದೆ. ಇದೇ ವೇಳೆ, ಭಾರತವು ತನ್ನ ಪ್ರಮುಖ ಕೃಷಿ ಹಿತಾಸಕ್ತಿಗಳನ್ನು ದೃಢವಾಗಿ ರಕ್ಷಿಸಿದೆ. ಡೈರಿ ಉತ್ಪನ್ನಗಳು (ಹಾಲು, ಕ್ರೀಮ್, ಹಾಲಿನ ರಸ, ಮೊಸರು ಮತ್ತು ಚೀಸ್ ಸೇರಿದಂತೆ), ಈರುಳ್ಳಿ, ಚನಾ, ಬಟಾಣಿ, ಜೋಳ, ಬಾದಾಮಿ, ಸಕ್ಕರೆ ಮತ್ತು ಕೆಲವು ತೈಲಗಳಂತಹ ಸೂಕ್ಷ್ಮ ಉತ್ಪನ್ನಗಳನ್ನು ಸುಂಕ ದರಿಯಾಯಿತಿಗಳಿಂದ ಹೊರಗಿಡಲಾಗಿದೆ. ಇದರಿಂದ ದೇಶೀಯ ರೈತರು ವಿದೇಶಿ ಆಮದು ಪೈಪೋಟಿಯಿಂದ ಸುರಕ್ಷಿತವಾಗಿರುತ್ತಾರೆ. ರೈತರು ಮತ್ತು ಮೀನುಗಾರರ ಹಿತಾಸಕ್ತಿಗಳನ್ನು ರಕ್ಷಿಸುವುದು ಭಾರತದ ಎಲ್ಲಾ ವ್ಯಾಪಾರ ಸಂಧಾನಗಳ ಕೇಂದ್ರಬಿಂದುವಾಗಿದೆ.

ಯುವಜನತೆ ಮತ್ತು ವೃತ್ತಿಪರರು

ವಿದ್ಯಾರ್ಥಿಗಳು ಮತ್ತು ನುರಿತ ವೃತ್ತಿಪರರಿಗೆ ಹೆಚ್ಚಿನ ಚಲನಶೀಲತೆಯು ಈ ಒಪ್ಪಂದದ ಪ್ರಮುಖ ಆಧಾರಸ್ತಂಭವಾಗಿದೆ, ಇದು ಭಾರತದ ಯುವಜನತೆಗೆ ಹೊಸ ಜಾಗತಿಕ ಅವಕಾಶಗಳನ್ನು ಸೃಷ್ಟಿಸುತ್ತದೆ.

ಯಾವುದೇ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದಲ್ಲಿ ಮೊದಲ ಬಾರಿಗೆ, ನ್ಯೂಜಿಲೆಂಡ್ ಭಾರತೀಯ ವಿದ್ಯಾರ್ಥಿಗಳ ಚಲನಶೀಲತೆ ಮತ್ತು ಓದಿನ ನಂತರದ ಕೆಲಸದ ಅವಕಾಶಗಳಿಗಾಗಿ ವ್ಯವಸ್ಥಿತ ಚೌಕಟ್ಟನ್ನು ಪರಿಚಯಿಸಿದೆ. ಭಾರತೀಯ ವಿದ್ಯಾರ್ಥಿಗಳಿಗೆ ಯಾವುದೇ ಸಂಖ್ಯೆಯ ಮಿತಿಗಳಿಲ್ಲ (ನ್ಯೂಮೆರಿಕಲ್ ಕ್ಯಾಪ್). ವಿದ್ಯಾರ್ಥಿಗಳು ಅಧ್ಯಯನದ ಸಮಯದಲ್ಲಿ ವಾರಕ್ಕೆ ಕನಿಷ್ಠ 20 ಗಂಟೆಗಳ ಕಾಲ ಕೆಲಸ ಮಾಡಲು ಅನುಮತಿಸಲಾಗುತ್ತದೆ. ವಿದ್ಯಾಭ್ಯಾಸದ ನಂತರದ ಕೆಲಸದ ಹಕ್ಕುಗಳು ಸ್ಟೆಮ್ (ಸ್ಟೆಮ್) ಪದವೀಧರರಿಗೆ ಮೂರು ವರ್ಷಗಳವರೆಗೆ ಮತ್ತು ಡಾಕ್ಟರೇಟ್ ವಿದ್ವಾಂಸರಿಗೆ ನಾಲ್ಕು ವರ್ಷಗಳವರೆಗೆ ವಿಸ್ತರಿಸಲ್ಪಡುತ್ತವೆ.

ಐಟಿ, ಎಂಜಿನಿಯರಿಂಗ್, ಆರೋಗ್ಯ ಸೇವೆ, ಶಿಕ್ಷಣ, ನಿರ್ಮಾಣ ಮತ್ತು ಯೋಗ, ಆಯುರ್ವೇದ, ಭಾರತೀಯ ಪಾಕ ಪದ್ಧತಿ ಹಾಗೂ ಸಂಗೀತ ಶಿಕ್ಷಣದಂತಹ ಸಾಂಪ್ರದಾಯಿಕ ಕ್ಷೇತ್ರಗಳಲ್ಲಿ 5,000 ಭಾರತೀಯ ವೃತ್ತಿಪರರಿಗೆ ಯಾವುದೇ ಸಮಯದಲ್ಲಿ ಮೂರು ವರ್ಷಗಳವರೆಗೆ ವಾಸ್ತವ್ಯ ಹೂಡಲು ತಾತ್ಕಾಲಿಕ ಉದ್ಯೋಗ ಪ್ರವೇಶ ವೀಸಾ (ಟೆಂಪರರಿ ಎಂಪ್ಲಾಯ್ ಮೆಂಟ್ ಎಂಟ್ರಿ ವೀಸಾ) ಮಾರ್ಗವನ್ನು ಈ ಒಪ್ಪಂದವು ಒದಗಿಸುತ್ತದೆ. ಇದರ ಜೊತೆಗೆ, ವರ್ಕಿಂಗ್ ಹಾಲಿಡೇ ವೀಸಾ ಯೋಜನೆ ವಾರ್ಷಿಕವಾಗಿ 1,000 ಯುವ ಭಾರತೀಯರಿಗೆ ನ್ಯೂಜಿಲೆಂಡ್‌ನಲ್ಲಿ 12 ತಿಂಗಳವರೆಗೆ ವಾಸಿಸಲು ಮತ್ತು ಕೆಲಸ ಮಾಡಲು ಅವಕಾಶ ನೀಡುತ್ತದೆ, ಇದು ಸಾಂಸ್ಕೃತಿಕ ವಿನಿಮಯವನ್ನು ಬಲಪಡಿಸುತ್ತದೆ ಮತ್ತು ಜಾಗತಿಕ ಅನುಭವವನ್ನು ಹೆಚ್ಚಿಸುತ್ತದೆ.

ಹೂಡಿಕೆ ಮತ್ತು ಆವಿಷ್ಕಾರ

ಭಾರತದಲ್ಲಿ 20 ಬಿಲಿಯನ್ ಡಾಲರ್ ಹೂಡಿಕೆಗೆ ನ್ಯೂಜಿಲೆಂಡ್ ಬದ್ಧವಾಗಿದೆ. ಇದು ಉತ್ಪಾದನೆ, ಮೂಲಸೌಕರ್ಯ, ನವೀಕರಿಸಬಹುದಾದ ಇಂಧನ, ಡಿಜಿಟಲ್ ಸೇವೆಗಳು, ನಾವೀನ್ಯತಾ ಪರಿಸರ ವ್ಯವಸ್ಥೆಗಳು ಮತ್ತು ಉದ್ಯೋಗ ಸೃಷ್ಟಿಗೆ ಬೆಂಬಲ ನೀಡುವ ನಿರೀಕ್ಷೆಯಿದೆ.

ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು, ಹೂಡಿಕೆಯ ಬದ್ಧತೆಗಳು ಕಡಿಮೆಯಾದರೆ ಭಾರತವು ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡುವ ರೀಬ್ಯಾಲೆನ್ಸಿಂಗ್ ಏ ಕ್ಲಾಸ್ ಅನ್ನು ಇದರಲ್ಲಿ ಸೇರಿಸಲಾಗಿದೆ. ಸಂಶೋಧನೆ, ತಂತ್ರಜ್ಞಾನ ವರ್ಗಾವಣೆ, ಕೌಶಲ್ಯ ಅಭಿವೃದ್ಧಿ ಹಾಗೂ ನಾವೀನ್ಯತೆ-ಆಧಾರಿತ ವಲಯಗಳಲ್ಲಿ ಸಹಯೋಗವನ್ನು ಈ ಒಪ್ಪಂದವು ಪ್ರೋತ್ಸಾಹಿಸುತ್ತದೆ ಮತ್ತು ವ್ಯಾಪಾರವು ದೀರ್ಘಕಾಲೀನ ಅಭಿವೃದ್ಧಿ ಪಾಲುದಾರಿಕೆಗಳಿಂದ ಪೂರಕವಾಗಿದೆ ಎಂಬುದನ್ನು ಖಚಿತಪಡಿಸುತ್ತದೆ.

ವ್ಯಾಪಾರ ತಂತ್ರ

ಭಾರತ-ನ್ಯೂಜಿಲೆಂಡ್ ಎಫ್‌ಟಿಎಯು, ದೇಶೀಯ ಸೂಕ್ಷ್ಮತೆಗಳನ್ನು ಗೌರವಿಸುತ್ತಾ, ಭಾರತದ ಕಾರ್ಮಿಕ-ಪ್ರಧಾನ ವಲಯಗಳಿಗೆ ಅರ್ಥಪೂರ್ಣ ಮಾರುಕಟ್ಟೆ ಪ್ರವೇಶವನ್ನು ಮುಕ್ತಗೊಳಿಸುವ ಅಭಿವೃದ್ಧಿ ಹೊಂದಿದ ಆರ್ಥಿಕತೆಗಳೊಂದಿಗೆ ಪಾಲುದಾರಿಕೆ ಹೊಂದುವ ಸ್ಪಷ್ಟ ಮತ್ತು ವಿಶ್ವಾಸಾರ್ಹ ವ್ಯಾಪಾರ ತಂತ್ರವನ್ನು ಪ್ರತಿಬಿಂಬಿಸುತ್ತದೆ. ಭಾರತವು ಇಂದು ಶಕ್ತಿ ಮತ್ತು ವಿಶ್ವಾಸಾರ್ಹತೆಯ ಸ್ಥಾನದಿಂದ ಸಂಧಾನ ನಡೆಸುತ್ತಿದೆ. ವ್ಯಾಪಾರ ಒಪ್ಪಂದಗಳು ಸಾಕಷ್ಟು ರಕ್ಷಣೆಗಳಿಲ್ಲದೆ ಸೂಕ್ಷ್ಮ ವಲಯಗಳನ್ನು ಅಸುರಕ್ಷಿತಗೊಳಿಸುತ್ತಿದ್ದ ಹಿಂದಿನ ದಶಕಗಳಿಗಿಂತ ಭಿನ್ನವಾಗಿ, ಈಗಿನ ಮಾತುಕತೆಗಳು ಕೃಷಿ, ಡೈರಿ ಮತ್ತು ಇತರ ಸೂಕ್ಷ್ಮ ಕ್ಷೇತ್ರಗಳು ಸಂಪೂರ್ಣವಾಗಿ ರಕ್ಷಿತವಾಗಿರುವುದನ್ನು ಖಚಿತಪಡಿಸುತ್ತವೆ. ಮುಂದುವರಿದ ಆರ್ಥಿಕತೆಗಳೊಂದಿಗೆ ಭಾರತವು ತನ್ನ ಸಂಬಂಧವನ್ನು ಮತ್ತಷ್ಟು ಬಲಪಡಿಸುತ್ತಿದ್ದಂತೆ, ಅಭಿವೃದ್ಧಿ ಹೊಂದಿದ ಪ್ರಪಂಚದೊಂದಿಗಿನ ಈ ವ್ಯಾಪಾರ ಒಪ್ಪಂದಗಳು, ವ್ಯಾಪಾರ ನೀತಿಯನ್ನು ರಾಷ್ಟ್ರೀಯ ಅಭಿವೃದ್ಧಿ ಗುರಿಗಳೊಂದಿಗೆ ಹೇಗೆ ಜೋಡಿಸಬಹುದು ಎಂಬುದಕ್ಕೆ ಒಂದು ಪ್ರಬಲ ಉದಾಹರಣೆಯಾಗಿವೆ, ಮತ್ತು ವಿಕಸಿತ ಭಾರತ 2047ರ ಹಾದಿಯಲ್ಲಿ ಒಳಗೊಳ್ಳುವ ಬೆಳವಣಿಗೆ ಹಾಗೂ ದೀರ್ಘಕಾಲೀನ ಆರ್ಥಿಕ ಸ್ಥಿತಿಸ್ಥಾಪಕತ್ವವನ್ನು ಇವು ಖಚಿತಪಡಿಸುತ್ತವೆ.

(ಲೇಖಕರು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು)

ಬೆಲೆಯನ್ನು ಹೇಳಲು ನಾವ್ಯಾರು?

ಕವಿಸೂಕ್ತೇಃ ದೈವಭಕ್ತೇಃ ಮಾತೃಪ್ರೀತೇಃ ಹರಿಸ್ತುತೇಃ ।
ಮೂಲ್ಯಂ ವಕ್ತುಂ ನ ಶಕ್ನೋತಿ ಶಾರದಾಪಿ ವಯಂ ತು ಕೇ॥ –ಸುವಚನ ಶತಕಂ

ಕವಿಯ ನುಡಿಯು, ದೈವಭಕ್ತಿಯ, ತಾಯಿಯ ಪ್ರೀತಿಯ, ಹರಿಸ್ತುತಿಯ ಬೆಲೆಯನ್ನು ಸಾಕ್ಷಾತ್ ಸರಸ್ವತಿಯೂ ಹೇಳಲಾರಳು, ಇನ್ನು ಅದನ್ನು ಹೇಳಲು ನಾವು ಯಾರು? –ಎಂಬುದು ಶ್ಲೋಕಾರ್ಥ.



ಜಗತ್ತಿನಲ್ಲಿ ಎಲ್ಲದಕ್ಕೂ ಅದರದೇ ಆದ ವಿಶೇಷತೆ ಇರುತ್ತದೆ. ಕೆಲವಷ್ಟನ್ನು ಮಾತಿನಲ್ಲಿ ಹೇಳಬಹುದು. ಇನ್ನು ಕೆಲವಷ್ಟನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ ನಾವು ಕಟ್ಟಿಕೊಡುವ ಶಬ್ದಾರ್ಥಗಳ ವ್ಯಾಪ್ತಿಯನ್ನು ಅದು ಮೀರಿರುತ್ತದೆ. ಯಾರು ಅನುಭವಿಸುತ್ತಾರೋ ಅವರಿಗೆ ಮಾತ್ರ ಅದು ಗೊತ್ತಾಗುತ್ತದೆ. ಅನುಭವಕ್ಕೆ ಗೋಚರವಾಗುವ ವಿಚಾರವನ್ನು ಮಾತಿನಲ್ಲಿ ಹಿಡಿದಿಡುವುದು ಕಷ್ಟದ ಕೆಲಸ ಅಥವಾ ಅಸಾಧ್ಯವಾದ ಕಾಯಕ.

ಇಂತಹ ನಾಲ್ಕು ಅಂಶಗಳನ್ನು ಪ್ರಕೃತ ಕಾರಿಕೆಯಲ್ಲಿ ಹೆಸರಿಸಿದ್ದಾರೆ. ಅಷ್ಟೇ ಅಲ್ಲ, ಸರಸ್ವತಿಯೂ ಅದರ ಬೆಲೆಯನ್ನು ಹೇಳಲಾರಳು ಎಂಬುದು ಕವಿಯ ಅಭಿಮತ.

ಕವಿಯ ನುಡಿಗೆ ಬೆಲೆ ಕಟ್ಟಲು ಸಾಧ್ಯವೇ? ಅದರ ಹಿರಿಮೆಯನ್ನು ಮಾತಿನ ಚೌಕಟ್ಟಿನಲ್ಲಿ ಹಿಡಿದಿಡಲು ಸಾಧ್ಯವೇ? ಕವಿಯ ಕಲ್ಪನೆಯೇ ಬೇರೆ. ಕವಿಯು ನೋಡುವ ದೃಷ್ಟಿ, ಅನುಭವಿಸುವ ಪರಿ ಲೋಕಭಿನ್ನವಾಗಿರುತ್ತದೆ. ಆದ್ದರಿಂದಲೇ 'ರವಿ ಕಾಣದ್ದನ್ನು ಕವಿ ಕಾಣುತ್ತಾನೆ' ಎಂಬ ನಾಣ್ಣುಡಿ ಪ್ರಸಿದ್ಧವಾಗಿದೆ. ಜನರ ದೃಷ್ಟಿ ವಿಭಿನ್ನವಾಗಿರುವುದೇ ಇದಕ್ಕೆ ಕಾರಣ. ಜೋಗದಲ್ಲಿ ಕಾಣುವ ಜಲಪಾತ ಸಾಮಾನ್ಯರಿಗೂ ಸಂತೋಷವನ್ನುಂಟು ಮಾಡಿದರೆ, ಅದ್ಭುತವೆನಿಸಿದರೆ ಸರ್ ಎಂ. ವಿಶ್ವೇಶ್ವರಯ್ಯರವರಿಗೆ 'ನೇಷನಲ್ ವೇಸ್ಟ್' ಎಂದು ತೋರಿತಂತೆ. ಉಳಿದವರದ್ದು ಸೌಂದರ್ಯ ದೃಷ್ಟಿಯಾದರೆ ವಿಶ್ವೇಶ್ವರಯ್ಯನವರದ್ದು ವ್ಯವಹಾರ ದೃಷ್ಟಿ, ಅಭಿವೃದ್ಧಿ ದೃಷ್ಟಿ. ಕವಿ ಕಲ್ಪನೆಯ ಬೆಲೆಯನ್ನು ಹೇಳುವ ಸಾಕ್ಷಾತ್ ಸರಸ್ವತಿಯೂ ಸೋಲುತ್ತಾಳೆ.

ದೈವಭಕ್ತಿಯ ಮಹತ್ವ ದೈವಭಕ್ತನಿಗೇ ಗೊತ್ತು. ಅದರಿಂದ ಸಿಗುವ ಸಂತೋಷ ಆತನಿಗೆ ಮಾತ್ರ ಗೊತ್ತು. ದೊರಕುವ ನೆಮ್ಮದಿ ಅವನ ಅನುಭವಕ್ಕೆ ಬಂದಿರುತ್ತದೆ. ಉಳಿದವರು ಟೀಕಿಸಬಹುದು. ಹೀಗಳೆಯಬಹುದು. ದೈವಭಕ್ತಿಯ ಗಂಧವಿಲ್ಲದವರು ಮತ್ತೇನು ತಾನೆ ಮಾಡಿಯಾರು? ದೈವವನ್ನೇ ನಂಬಿ ಬದುಕನ್ನು ಚೆನ್ನಾಗಿ ಕಟ್ಟಿಕೊಂಡವರಿದ್ದಾರೆ. ಮಾನಸಿಕ ನೆಮ್ಮದಿಯನ್ನು ಪಡೆದವರಿದ್ದಾರೆ. ದೈವಭಕ್ತಿಯ ಅನುಪಮ ಆನಂದವನ್ನು ಅವನು ಮಾತ್ರ ಅನುಭವಿಸಬಲ್ಲ, ಅದನ್ನು ಶಬ್ದದ ಮೂಲಕ ಕಟ್ಟಿಕೊಡಲು ಅಸಾಧ್ಯ.

ತಾಯಿಯ ಪ್ರೀತಿಯನ್ನು ಅನುಭವಿಸದವರಿಲ್ಲ, ತಾಯಿ ಮಮತೆಯನ್ನು ಅರಿಯದವರಿಲ್ಲ. ತಾಯಿಯ ತ್ಯಾಗ ಗೊತ್ತಿರದವರಿಲ್ಲ, ಇದನ್ನು ನಿರೂಪಿಸಲು ಸಾಕ್ಷಾತ್ ಶಾರದೆಯೂ ಸಮರ್ಥಳಾಗದೆ ಸೋಲನ್ನೊಪ್ಪಿಕೊಳ್ಳಬೇಕಾಗುತ್ತದೆ. ಇಂತಹ ಅಮೂಲ್ಯ ಅನುಭವವನ್ನು ಸಾಮಾನ್ಯರಾದ ನಾವು ಮಾತಿನ ಮೂಲಕ ಹೇಳಲು ಸಾಧ್ಯವೇ?

ಭಗವಂತನ ಸ್ತುತಿಯ ಮಹತ್ವವನ್ನು ಭಕ್ತಿಯಿಂದ ಸ್ತುತಿಸಿ ಮಾತ್ರ ಅನುಭವಿಸಬಲ್ಲ, ಅದರ ಮಹತ್ವ ಉಂಟಾದ ಅನುಭೂತಿ... ಅನುಭವಿಸಿಯೇ ಪಡೆಯಬೇಕೇ ವಿನಾ ಕೇಳಿ ತಿಳಿಯಲು ಸಾಧ್ಯವಿಲ್ಲ.

ಈ ರೀತಿ ನಿರೂಪಿಸುವ ಕವಿಯು, ಶಬ್ದದ ಮೂಲಕ ಕಟ್ಟಿಕೊಡಲು ಸರಸ್ವತಿಯೇ ಸೋಲಬಹುದಾದರೆ ಸಾಮಾನ್ಯರಾದ ನಾವು ಅದೆಂತು ಹೇಳಲು ಸಾಧ್ಯ ಎನ್ನುತ್ತಾನೆ.

ಜೀವನದಲ್ಲಿ ಕೆಲವಷ್ಟನ್ನು ಅನುಷ್ಠಾನಿಸಿ, ಅನುಭವಿಸಿ, ಅವಲೋಕಿಸಿ ತಿಳಿಯಬೇಕಾಗುತ್ತದೆ. ಅಮೂರ್ತವಾದ ಅನುಭವವನ್ನು ವಾಗ್ದೇವಿಯೂ ಹೇಳಲಾರಳು ಎಂದ ಮೇಲೆ ಪಾಮರರಾದ ನಾವು ಯಾವ ಲೆಕ್ಕ?

ಉಳುಮೆಗೂ ಸಾಗಾಟಕ್ಕೂ ಹೆಸರುವಾಸಿಯಾದ ಖಿಲಾರಿ ದನಗಳು

ಧರಣಿ ಮಂಡಲ

ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಕರ್ನಾಟಕದಲ್ಲಿ ಹೆಸರುವಾಸಿಯಾದ ಮತ್ತು ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಚಿರಪರಿಚಿತ ಹಾಗೂ ಜನಪ್ರಿಯವಾದ ದನಗಳೆಂದರೆ ಖಿಲಾರಿ ದನಗಳು. ಈ ಖಿಲಾರಿ ಜಾತಿಯ ದನಗಳ ಆಕಾರ, ಮೈಕಟ್ಟು, ಚಪಲತೆ, ಹುರುಪು, ಕಷ್ಟ ಸಹಿಷ್ಣುತೆ ಮತ್ತು ಸಿಟ್ಟು ಹೆಚ್ಚಿನಂಶ ಅಮೃತಮಹಲ್ ದನಗಳನ್ನು ಹೋಲುತ್ತವೆ. ಆದರೆ ಈ ಜಾತಿಯ ದನಗಳು ಅಮೃತಮಹಲ್ ಜಾತಿಯ ದನಗಳಂತೆ ಶುದ್ಧ ಜಾತಿಯ ಒಂದೇ ತಳಿಯ ದನಗಳಲ್ಲ. ಈ ದನಗಳೂ ಅಮೃತಮಹಲ್ ದನಗಳಿಂದ ಉತ್ಪನ್ನವಾದ ಒಂದು ಉಪಜಾತಿ ಮತ್ತು ಇವುಗಳಲ್ಲಿ ಉತ್ತರ ಭಾರತದಲ್ಲಿಯ ದೊಡ್ಡ ಬಿಳಿಯ ಜಾತಿಯ ದನಗಳ ಮಿಶ್ರಣವು ಕಂಡುಬರುತ್ತದೆ ಎಂಬುದಾಗಿ ಕರ್ನಲ್ ಸಾ. ಆರ್ಥರ್ ಆಲಿವರ್ ತನ್ನ 'ಭಾರತದಲ್ಲಿಯ ಕೆಲವು ಮುಖ್ಯ ದನಗಳ ಸಂಕ್ಷಿಪ್ತ ಚರಿತ್ರೆ' ಎಂಬ ಪುಸ್ತಕದಲ್ಲಿ ದಾಖಲಿಸಿದ್ದಾನೆ. ಹಾಗೆಯೇ ಜಿ. ಮೊಲಿಸನ್ ಎಂಬಾತನು 'ಮುಂಬಯಿ ಇಲಾಖೆಯಲ್ಲಿಯ ದನಗಳ ತಳಿಗಳು' ಎಂಬ ಪುಸ್ತಕದಲ್ಲಿ, ನಾಸಿಕ್ ಜಿಲ್ಲೆಯಲ್ಲಿ ಸುಮಾರು 19ನೇ ಶತಮಾನದ ಆದಿ ಭಾಗದಲ್ಲಿ ಬರಗಾಲ ಬಿದ್ದಾಗ ದನಗಳ ಅಭಾವ ಉಂಟಾಗಲು ಆಗ ಗೌಡರ ದನಗರ್ ಎಂಬಾತನು ಮೈಸೂರು ದನಗಳ ಒಂದು ಹಿಂಡನ್ನು ನಾಗಪುರ ಪ್ರದೇಶಕ್ಕೆ ತೆಗೆದುಕೊಂಡು ಹೋದನೆಂದೂ, ಈ ಮೈಸೂರು ದನಗಳು ಅಲ್ಲಿಯ ಸ್ಥಳೀಯ ದನಗಳೊಡನೆ ಕೂಡಿ ಹುಟ್ಟಿದ ದನಗಳೇ ಖಿಲಾರಿ ದನಗಳೆಂದು ಹೆಸರಾದವು ಎಂಬುದಾಗಿ ಬರೆದಿರುವುದು ದಾಖಲಾಗಿದೆ. ಮುಂಬಯಿ ಇಲಾಖೆಯಲ್ಲಿ ಜಾನುವಾರು ತಜ್ಞರಾಗಿದ್ದ ಈ.ಜಿ. ಬ್ರೂಯಿನ್ ಈ ಖಿಲಾರಿ ಜಾತಿಯ ದನಗಳಲ್ಲಿಯೂ ಸಹ ಅಮೃತಮಹಲ್, ಆಟಪಾಡಿಮಹಲ್, ಮಸ್ವಾಡಖಿಲಾರ, ತಪತಿಖಿಲಾರ, ಜತ್ ಖಿಲಾರ ಮತ್ತು ನಕಲಿಖಿಲಾರ ಎಂಬೆಲ್ಲಾ ಜಾತಿಯ ತಳಿಗಳು ಸಮಾವೇಶವಾಗಿರುತ್ತವೆ. ನಾವು ಇಂದು ಈ ದನಗಳನ್ನು ಮಾಸವಾಡ, ನಾಗೋಟ, ಜತ್, ಚಿಂಚಲಿ, ವಿಜಾಪುರ, ಸೊಲ್ಲಾಪುರ, ಅಥಣಿ, ಜಮುಖಂಡಿ, ರಸುಂಡಿ, ಪಂಢರಪುರಗಳಲ್ಲಿ ಸೇರುವ ದನಗಳ ವಾರ್ಷಿಕ ಜಾತ್ರೆಯಲ್ಲಿ ಕಾಣಬಹುದಾಗಿದೆ ಎಂಬುದಾಗಿ ಹೇಳಿರುವುದು ದಾಖಲಾಗಿದೆ.

ಬಹಳ ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿದಾಗ ಖಿಲಾರಿ ದನಗಳು ಬಹುಮಟ್ಟಿಗೆ ಎಲ್ಲಾ ವಿಧದಲ್ಲಿ ಅಮೃತಮಹಲ್ ದನಗಳನ್ನು ಹೋಲುತ್ತವೆ. ಇವುಗಳ ತಲೆ, ಮುಖ ಮತ್ತು ಕೊಂಬು, ಮುಖದ ಭಾಗ, ಕಣ್ಣುಗಳ ಮಧ್ಯದಿಂದ ಮೂಗಿನ ತುದಿಯವರೆಗೆ ಅಮೃತಮಹಲ್ ದನಗಳಿಗಿಂತ ಸ್ವಲ್ಪ ಉದ್ದವಾಗಿರುತ್ತದೆ. ಆದರೆ ಹಳ್ಳಿಕಾರ್ ದನಗಳಷ್ಟು ಉದ್ದವಾಗಿ ನೀಳಾಗಿರದೆ, ಸ್ವಲ್ಪ ಮೇಲಿಂದ ಕೆಳಗೆ ಒತ್ತಿದಂತೆ ಇರುತ್ತದೆ. ಖಿಲಾರಿ ದನಗಳ ಕುತ್ತಿಗೆ ಅಮೃತಮಹಲ್ ದನಗಳಿಗಿಂತ ಸ್ವಲ್ಪ ಗಿಡ್ಡದಾಗಿ ದಪ್ಪವಾಗಿರುತ್ತದೆ ಮತ್ತು ಕುತ್ತಿಗೆಯ ಮೇಲಿನ ಚರ್ಮವು ಬಿಗಿಯಾಗಿ ನಯವಾಗಿರುತ್ತದೆ. ಈ ದನಗಳ ಹಣೆ ಅಮೃತಮಹಲ್ ದನಗಳ ಹಣೆಯಂತೆ ಚಪ್ಪಟೆಯಾಗಿ ತಟ್ಟೆಯಂತಿರದೆ, ಹಳ್ಳಿಕಾರ್ ದನಗಳಂತೆ ಎರಡೂ ಕಣ್ಣಿನ ಮೇಲೆ ಉಬ್ಬಿಕೊಂಡು ಮಧ್ಯದಲ್ಲಿ ತಗ್ಗಾಗಿ, ಸೀಳು ಗೆರೆಯಿಂದ ಕೂಡಿರುತ್ತದೆ. ಈ ದನಗಳ ಮೈಬಣ್ಣ ಬಿಳಿಯ ಬಣ್ಣದಿಂದ ಕೂಡಿದ್ದರೂ ಕುತ್ತಿಗೆಯು ಕಿತ್ತಳೆ ಬಣ್ಣದಿಂದ ಕೂಡಿರುತ್ತದೆ. ಬೂದಿ ಬಣ್ಣದ ದನಗಳಲ್ಲಿ ಕಂದು ಬಣ್ಣದ ಛಾಯೆ ಮಿಶ್ರಿತವಾಗಿರುತ್ತದೆ. ಇವುಗಳಲ್ಲಿ ತೊಡೆಯ ಹಿಂಭಾಗವು ಬಿಲ್ಲಿನಾಕಾರವಾಗಿದ್ದು, ಬೆನ್ನಿನ ಡುಬ್ಬವು ಹೆಚ್ಚು ದಪ್ಪವಾಗಿ ದೊಡ್ಡದಾಗಿರುತ್ತದೆ. ಮೂಗಿನ ಸಿಂಬೆ ಮತ್ತು ಕಣ್ಣುಗಳ ಪೊರೆಯು ಕೆಂಪು ಬಣ್ಣದಾಗಿರುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಖಿಲಾರಿ ಮತ್ತು ಅಮೃತಮಹಲ್ ದನಗಳು ಒಂದಕ್ಕೊಂದು ನೂರಾರು ವರ್ಷಗಳಿಂದ ಬೆರೆತು ಸಂವರ್ಧನೆ ಹೊಂದಿರುವುದರ ಪರಿಣಾಮವಾಗಿ ಅವುಗಳನ್ನು ಪ್ರತ್ಯೇಕವಾಗಿ ಗುರುತಿಸಿ ಹೇಳುವುದು ಸುಲಭ ಸಾಧ್ಯವಲ್ಲ. ಖಿಲಾರಿ ದನಗಳು ಎಲ್ಲಿ ಪ್ರಾರಂಭವಾಗುವುವು ಮತ್ತು ಅಮೃತಮಹಲ್ ದನಗಳು ಎಲ್ಲಿಗೆ ಮುಗಿಯುವುವು ಎಂದು ಹೇಳುವುದು ಸಾಧ್ಯವೇ ಇಲ್ಲವೆಂಬುದು ತಜ್ಞರ ಅಭಿಪ್ರಾಯ. ಚಿರಪರಿಚಿತವಾದ ಹೆಚ್ಚು ಅನುಭವವುಳ್ಳವರು ಮಾತ್ರ ಇವುಗಳನ್ನು ಗುರುತಿಸಲು ಸಾಧ್ಯವಾಗಬಹುದು ಎನ್ನಲಾಗುತ್ತದೆ.

ಇವು ಹೂಡುವುದಕ್ಕೂ ಮತ್ತು ತೀವ್ರವಾಗಿ ನಡೆಯುವುದಕ್ಕೂ ಅತ್ಯಂತ ಯೋಗ್ಯವಾದವುಗಳಾಗಿವೆ. ಇವುಗಳ ಕೋಡುಗಳು ಬುಡದಲ್ಲಿ ಒಂದಕ್ಕೊಂದು ಸಮೀಪವಾಗಿದ್ದು, ತುದಿಯಲ್ಲಿ ಅಗಲವಾಗಿದ್ದು ಚೂಪಾಗಿರುತ್ತವೆ. ಇದರ ಮುಖವು ಹಳ್ಳಿಕಾರ ದನಗಳಷ್ಟು ಉದ್ದವಾಗಿರದೆ ಸ್ವಲ್ಪ ಗಿಡ್ಡವಾಗಿರುತ್ತದೆ. ಈ ದನಗಳು ಬಹಳ ಉಗ್ರ ಸ್ವಭಾವದವುಗಳಾಗಿದ್ದು, ಇವುಗಳನ್ನು ಹಿಡಿತದಲ್ಲಿ ತರುವುದು ಸ್ವಲ್ಪ ಕಠಿಣವಾದರೂ ಉತ್ತಮ ಕೆಲಸ ಮಾಡುವ ಪ್ರಾಣಿಗಳಾಗಿವೆ. ಇವುಗಳ ಕಣ್ಣುಗಳು ಕಾಂತಿಯುತವಾಗಿದ್ದು ಎದ್ದು ಕಾಣುತ್ತವೆ. ಸ್ವಭಾವದಿಂದ ಇವು ಬಹಳ ಸಿಟ್ಟಿನ ಮತ್ತು ಹುರುಪಿನ ದನಗಳಾಗಿರುತ್ತವೆ. ಕಿವಿಗಳು ಸಣ್ಣದಾಗಿದ್ದು ತುದಿಯಲ್ಲಿ ಚೂಪಾಗಿರುತ್ತವೆ. ಕಾಲುಗಳು ಸ್ನಾಯುಗಳಿಂದ ಕೂಡಿ ಓಟಕ್ಕೆ ಅನುಕೂಲವಾಗಿರುತ್ತದೆ. ಗೊರಸು ಕಪ್ಪಾಗಿ ಗಟ್ಟಿಯಾಗಿರುತ್ತವೆ. ಬಾಲವು ಉದ್ದವಾಗಿ ಅಂದವಾಗಿರುತ್ತದೆ. ಹೋರಿಗಳ ಇಣಿ ಅಥವಾ ಡುಬ್ಬವು 50 ಅಂಗುಲ ಉದ್ದವಿರುತ್ತದೆ. ಎದೆಯ ಸುತ್ತಳತೆ 60ರಿಂದ 80 ಅಂಗುಲವಿದ್ದು, ಈ ರೀತಿಯ ಎದೆಯ ಬೆಳವಣಿಗೆಯು ಉತ್ತಮ ಹೂಡುವ ದನಗಳ ಲಕ್ಷಣವಾಗಿರುತ್ತದೆ. ಆಕಳುಗಳ ಇಣಿಯು 45ರಿಂದ 48 ಅಂಗುಲ ಉದ್ದವಿರುತ್ತದೆ. ಹೋರಿಗಳು 400ರಿಂದ 500 ಕೆ.ಜಿ. ತೂಕವಿರುತ್ತವೆ. ಆಕಳುಗಳು 350ರಿಂದ 400 ಕೆ.ಜಿ. ಸಾಮಾನ್ಯವಾಗಿ ತೂಗುತ್ತವೆ.

ಈ ತಳಿಯ ಆಕಳು ಕಡಿಮೆ ಹಾಲನ್ನು ನೀಡಿದರೂ ಹಾಲಿನ ಗುಣಮಟ್ಟ ಶ್ರೇಷ್ಠವಾಗಿರುತ್ತದೆ. ಇಂದಿಗೂ ಈ ದನಗಳು ಮಳೆ, ಗಾಳಿ, ಬಿಸಿಲಿನಲ್ಲಿಯೇ ತಿರುಗಾಡಿಕೊಂಡು ಬಯಲಿನಲ್ಲಿಯೇ ವಾಸವಾಗಿರುವ ಚಿತ್ರಣ ಸಾಮಾನ್ಯವಾಗಿ ಕಂಡುಬರುತ್ತದೆ. ಇವುಗಳು ಹೆಚ್ಚು ಶ್ರಮ ಜೀವಿಗಳಾಗಿದ್ದು, ಇವುಗಳಲ್ಲಿನ ಹೆಣ್ಣುಗಳು ಎರಡು ವರ್ಷಕ್ಕೊಮ್ಮೆ ಕರು ಹಾಕುತ್ತವೆ. ಗಂಡು ಕರುಗಳಿಗೆ ಇಂದಿಗೂ ಬೇಡಿಕೆ ಹೆಚ್ಚಿದ್ದು, ಸ್ವಭಾವದಲ್ಲಿ ಸಾಧುವಾಗಿರುತ್ತವೆ. ದನಗಳು ಮುಖ್ಯವಾಗಿ ಹೊಲದ ಮತ್ತು ಸಾರಿಗೆ ಕೆಲಸಗಳಿಗೆ ಬಹಳ ಉತ್ತಮವಾದುವುಗಳಾಗಿವೆ. ಇದಕ್ಕಾಗಿ ಇವು ದಕ್ಷಿಣ ಮಹಾರಾಷ್ಟ್ರ ಭಾಗದಲ್ಲಿ ಮತ್ತು ಉತ್ತರ ಕರ್ನಾಟಕ ಭಾಗಗಳಲ್ಲಿ ಹೆಚ್ಚು ಜನಪ್ರಿಯತೆಯನ್ನು ಗಳಿಸಿಕೊಂಡಿವೆ.

17ನೇ ಶತಮಾನದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಈ ಖಿಲಾರಿ ದನಗಳು ಉತ್ತಮ ಸ್ಥಿತಿಯಲ್ಲಿದ್ದವು ಎಂಬುದು ಕುಮಾರವ್ಯಾಸನ ಗದುಗಿನ ಭಾರತದಲ್ಲಿನ ಪದ್ಯಗಳಿಂದ ತಿಳಿದುಬರುತ್ತದೆ. ಈ ಜಾತಿಯ ದನಗಳು ದಕ್ಷಿಣ ಮಹಾರಾಷ್ಟ್ರದಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ಇದಕ್ಕೆ ಖಿಲಾರ ಎಂದು ಹೆಸರು ಬಂದಿದೆ. ಖಿಲಾರ ಎಂದರೆ ದಕ್ಷಿಣ ದಿಕ್ಕು ಎಂದರ್ಥ. ಈ ದನಗಳ ಮೂಲಸ್ಥಾನ ಸಾತಪುಡ ಬೆಟ್ಟದ ಸುತ್ತಮುತ್ತಲಿನ ಹುಲ್ಲುಗಾವಲುಗಳಿಂದ ಕೂಡಿರುವ ಕಂದರ ಪ್ರದೇಶ ಮತ್ತು ಉತ್ತರ ಭಾಗ ಹಾಗೂ ಇಂದೂರಿನ ಸುತ್ತಮುತ್ತಲಿನ ಭಾಗಗಳಾಗಿವೆ. ಇವುಗಳ ಹಿಂಡನ್ನು ಖಿಲಾರಿ, ಧನಗರ್ ಮತ್ತು ಬಂಜಾರಿಗಳೆಂಬ ದನಗಾರರು ಸಾಕಿ ಬೆಳೆಸಿದ್ದು ತಿಳಿದುಬರುತ್ತದೆ. ತಮ್ಮ ದನಗಳ ಹಿಂಡನ್ನು ಗುಡ್ಡಗಾಡು ಪ್ರದೇಶಗಳಲ್ಲಿ ಮೇಯಿಸುವುದು, ಸಂವರ್ಧನೆ ಮಾಡಿ ಹಿಂಡು ಬೆಳೆಸುವುದು ಮತ್ತು ಹೋರಿ ಕರುಗಳನ್ನು ಮಾರಾಟ ಮಾಡುವುದನ್ನು ಖಿಲಾರಿ ದನಗಾರರು ತಮ್ಮ ಜೀವನದ ಮುಖ್ಯ ಕಸುಬನ್ನಾಗಿ ಮಾಡಿಕೊಂಡಿದ್ದರು. ಧನಗರ್ ಮತ್ತು ಬಂಜಾರಿಗಳೆಂಬ ದನಗಾರರು ಅಲ್ಪ ಸ್ವಲ್ಪ ಜಮೀನು ಸಾಗುವಳಿ ಮಾಡಿಕೊಂಡು ತಮ್ಮ ಒಕ್ಕಲುತನದ ಉದ್ಯೋಗದ ಜೊತೆಗೆ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕಾಗಿ ಪೂರಕ ಉದ್ಯೋಗವೆಂದು ಈ ಖಿಲಾರಿ ದನಗಳ ಹಿಂಡನ್ನು ಸಾಕಿ ಬೆಳೆಸಿಕೊಂಡಿದ್ದರು. ಒಬ್ಬೊಬ್ಬ ಜೋಪಾಸನೆಗಾರನ ಬಳಿ ಸುಮಾರು 25ರಿಂದ 200 ದನಗಳ ಹಿಂಡು ಇದ್ದದ್ದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಇವರುಗಳಲ್ಲಿ 100 ದನಗಳ ಹಿಂಡಿನ ಗುಂಪನ್ನು ಇಬ್ಬರು ಕಾಯ್ದು ಮೇಯಿಸುತ್ತಿದ್ದರು. ಉತ್ತಮ ಪೀಳಿಗೆಯ ಉತ್ಪಾದನೆಗಾಗಿ ತಮ್ಮ ಆಕಳುಗಳಿಗೆ ಶ್ರೇಷ್ಠ ಜಾತಿಯ ಉತ್ತಮ ಹೋರಿಗಳಿಂದ ಸಂಕರಿಸುವುದರಲ್ಲಿ ವಿಶೇಷ ಆಸಕ್ತಿ ಉಳ್ಳವರಾಗಿದ್ದರು. ಅದಕ್ಕಾಗಿ ತಮ್ಮ ಹಿಂಡಿನಲ್ಲಿಯೇ ಬೀಜಕ್ಕಾಗಿ ಆರಿಸಿದ ಉತ್ತಮವಾದ ಹೋರಿಗಳನ್ನು ತಳಿ ಸಂವರ್ಧನೆಗಾಗಿ ಸಾಕಿಕೊಂಡಿದ್ದರು ಮತ್ತು ತಮ್ಮಲ್ಲಿನ ಹೋರಿ ಕರುಗಳನ್ನು ಹೆಚ್ಚು ಪ್ರೀತಿಯಿಂದ ಪಾಲಿಸಿ ಪೋಷಿಸುತ್ತಿದ್ದರು. ಗುಡ್ಡಗಾಡು ಪ್ರದೇಶಗಳ ಹತ್ತಿರವೇ ಗುಡಿಸಲುಗಳನ್ನು ಹಾಕಿಕೊಂಡು ಈ ದನಗಳ ಹಿಂಡಿನೊಂದಿಗೆ ವಾಸವಾಗಿರುತ್ತಿದ್ದರು. ರಾತ್ರಿ ದನಗಳನ್ನು ಕೂಡಿ ಹಾಕಿ ಬೆಳಗಾದ ಕೂಡಲೇ ಅವುಗಳನ್ನು ಮೇಯಲು ಹೊರಗೆ ಬಿಡುತ್ತಿದ್ದರು. ಹುಲ್ಲು ಕಡಿಮೆಯಾದಂತೆ ಗುಡ್ಡಗಾಡುಗಳಲ್ಲಿ ಹುಲ್ಲನ್ನು ಹುಡುಕಿಕೊಂಡು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ದನಗಳೊಂದಿಗೆ ವಲಸೆ ಹೋಗುತ್ತಿದ್ದರು. ಹೀಗೆ ತಿರುಗಾಡುತ್ತಿದ್ದರಿಂದಲೇ ಈ ದನಗಳ ಕಾಲುಗಳು ಬಲವಾದ ಸ್ನಾಯುಗಳಿಂದ ಕೂಡಿದ್ದು, ಗೊರಸುಗಳು ಕಬ್ಬಿಣದಂತೆ ಗಟ್ಟಿಯಾಗಿರುತ್ತಿದ್ದವು. ಇದೇ ಕಾರಣಕ್ಕೆ ಇರಬೇಕು ಇಂದಿಗೂ ಇವುಗಳ ಕಾಲುಗಳು ಮತ್ತು ಗೊರಸುಗಳು ಅತಿ ಗಟ್ಟಿಯಾಗಿ ಎಂತಹ ನೆಲದಲ್ಲೂ ಸಾಗಬಲ್ಲ ಶಕ್ತಿಯನ್ನು ಹೊಂದಿರುವುದು ಕಂಡುಬರುತ್ತದೆ.

ಮಮತಾ ಬ್ಯಾನರ್ಜಿ ಪದಚ್ಯುತಿ ಅಸಂಭವವೇನಲ್ಲ!

ಮಜುಂದಾರ್

ಪಶ್ಚಿಮ ಬಂಗಾಳದಲ್ಲಿ ಯಾರು ಗೆಲ್ಲಬಲ್ಲರು? ಇದು ಎಲ್ಲರ ಕುತೂಹಲ ಕೆರಳಿಸಿರುವ ಪ್ರಶ್ನೆ. ಹಳೆಯ ವಿಶ್ಲೇಷಣಾ ಸಾಧನಗಳನ್ನೇ ಹಿಡಿದುಕೊಂಡ ಹೆಚ್ಚಿನ ರಾಜಕೀಯ ಪಂಡಿತರು ಪ.ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಸರಕಾರವನ್ನು ಪದಚ್ಯುತಗೊಳಿಸುವುದು ಕಷ್ಟ ಎಂದು ಹೇಳುತ್ತಿರುತ್ತಾರೆ. ಆದರೆ ಕೆಲವು ವಿಷಯಗಳನ್ನು ಸೂಕ್ಷ್ಮವಾಗಿ ವಿಶ್ಲೇಷಣೆಗೆ ಒಳಪಡಿಸಿದರೆ ಬೇರೆಯೇ ಚಿತ್ರಣ ದೊರಕುತ್ತದೆ.

ಪ.ಬಂಗಾಳದಲ್ಲಿ ಟಿಎಂಸಿ ಈಗಲೂ ಬಲವಾಗಿದೆ ಎಂಬಂತಹ ಚಿತ್ರಣಗಳನ್ನು ಹರಿಯಬಿಡುತ್ತಿರುವಾಗಲೇ ದಿನಕಳೆದಂತೆ ಅದಕ್ಕೆ ಬಿಜೆಪಿ ಒಡ್ಡುತ್ತಿರುವ ಸವಾಲೂ ಹೆಚ್ಚುತ್ತಿದೆ ಎಂಬುದು ಅರಿವಿಗೆ ಬರುತ್ತಿದೆ.

ಮಮತಾ ಸರಕಾರಕ್ಕೆ ಆಡಳಿತ ವಿರೋಧಿ ಅಲೆ ಕಾಡುತ್ತಿರುವುದಂತೂ ಸಂಪೂರ್ಣ ಸತ್ಯ. ಇದಷ್ಟೇ ಅಲ್ಲದೆ ಈ ಬಾರಿಯ ಚುನಾವಣೆಯ ವಿಶೇಷತೆಯೆಂದರೆ ಮತದಾರರ ತಳಮಟ್ಟದಲ್ಲೇ ಅತ್ಯಂತ ಮಹತ್ವದ ಬದಲಾವಣೆಗಳು ಆಗುತ್ತಿವೆ.

ಇತ್ತೀಚಿನ ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್ ಐಆರ್) ಯಲ್ಲಿ ಪ.ಬಂಗಾಳದಲ್ಲಿ 91 ಲಕ್ಷ ಹೆಸರುಗಳನ್ನು ತೆಗೆದುಹಾಕಲಾಯಿತು. ಇಷ್ಟು ದೊಡ್ಡ ಪ್ರಮಾಣದ ಹೆಸರು ರದ್ದತಿಯು ರಾಜಕೀಯ ಆಯಾಮವನ್ನು ದೊಡ್ಡದಾಗಿ ಬದಲಿಸುವಷ್ಟು ಮಹತ್ವಪೂರ್ಣವಾಗಿದೆ. ಇದರಿಂದಾಗಿ ಹಳೆಯ ಮತದಾನ ಸ್ವರೂಪವೇ ಕುಸಿಯಬಹುದು. ಯಾವುದೋ ಪಕ್ಷಕ್ಕೆ ಸುರಕ್ಷಿತವಾಗಿ ಕಂಡುಬಂದ ಸ್ಥಾನವೊಂದು ನಿಕಟ ಸ್ಪರ್ಧೆ ನೀಡುವಂತಾಗಬಹುದು. ಕಳೆದ ಚುನಾವಣೆಯಲ್ಲಿ ಬಹಳಷ್ಟು ಕ್ಷೇತ್ರಗಳಲ್ಲಿನ ಫಲಿತಾಂಶಗಳು ಅತ್ಯಂತ ಕಡಿಮೆ ಅಂತರ ಹೊಂದಿರುವುದರಿಂದ ಈ ಬಾರಿ ಅಂತಹ ಕ್ಷೇತ್ರಗಳಲ್ಲಿ ಏರುಪೇರಿನ ಫಲಿತಾಂಶ ಸಂಭವಿಸಬಹುದು. ಮತದಾರ ಪಟ್ಟಿಯಲ್ಲಿನ ಅತಿ ಸಣ್ಣ ಬದಲಾವಣೆ ಕೂಡಾ ಫಲಿತಾಂಶದಲ್ಲಿ ಏರುಪೇರು ಸೃಷ್ಟಿಸಬಹುದು.

ತೃಣಮೂಲ ಕಾಂಗ್ರೆಸ್‌ನ ಮತಗಳು ಯಾವ ರೀತಿ ಹಂಚಿಕೆಯಾಗಿದೆ ಎಂಬುದು ಅದರ ದುರ್ಬಲ ಅಂಶಗಳಲ್ಲೊಂದಾಗಿದೆ. ಪಕ್ಷವು ರಾಜ್ಯದಲ್ಲಿ ಒಟ್ಟಾಗಿ ಗಳಿಸುವ ಮತಪ್ರಮಾಣಕ್ಕೆ ಪ್ರಮುಖ ಕೊಡುಗೆ ನೀಡುವುದು ಕೆಲವೇ ಕೆಲವು ವಿಧಾನಸಭಾ ಕ್ಷೇತ್ರಗಳು. ಮುಖ್ಯವಾಗಿ ಮುಸ್ಲಿಂ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಅದಕ್ಕೆ ದೊಡ್ಡ ಅಂತರದ ಗೆಲುವುಗಳು ಸಿಗುತ್ತಿವೆ. ಒಂದು ರೀತಿಯಲ್ಲಿ ಇದು 'ವ್ಯರ್ಥಗೊಂಡ ಮತ'ಗಳಂತೆ. ಈ ಸ್ಥಾನಗಳಲ್ಲಿ ಸಿಗುವ ಹೆಚ್ಚು ಮತಗಳು ಇತರೆಡೆಗಳಲ್ಲಿ ಹೆಚ್ಚುವರಿ ಸ್ಥಾನಗಳನ್ನು ಗಳಿಸಲು ನೆರವಾಗುವುದಿಲ್ಲ.

ಕಳೆದ ಚುನಾವಣೆಯಲ್ಲಿ ಟಿಎಂಸಿ ಶೇ. 10ಕ್ಕಿಂತ ಹೆಚ್ಚು ಮತ ಅಂತರದಿಂದ ಗೆದ್ದ 114 ಸ್ಥಾನಗಳನ್ನು ಹೊಂದಿದೆ. ಬಿಜೆಪಿ ಬಳಿ ಇರುವುದು ಅಂತಹ ಸುರಕ್ಷಿತ ಕ್ಷೇತ್ರಗಳು ಕೇವಲ 35.





2024ರ ಲೋಕಸಭಾ ಚುನಾವಣೆಯಲ್ಲಿ ಟಿಎಂಸಿಗೆ ಸುಮಾರು 55.8 ಲಕ್ಷ ಇಂತಹ 'ವ್ಯರ್ಥ ಮತ'ಗಳು ಬಿದ್ದಿದ್ದವು (ಶೇ. 10ಕ್ಕಿಂತ ಹೆಚ್ಚು ಗೆಲುವಿನ ಅಂತರದ ಮತಗಳು). ಬಿಜೆಪಿಗೆ ದೊರಕಿದ್ದು ಇಂತಹ 11.9 ಲಕ್ಷ ಮತಗಳು ಮಾತ್ರ.

2021ರ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ ಈ ಅಂತರವು ಇನ್ನೂ ಹೆಚ್ಚು. ಟಿಎಂಸಿಗೆ 65 ಲಕ್ಷ ಇಂತಹ ವ್ಯರ್ಥ ಮತಗಳು ಬಿದ್ದಿದ್ದರೆ, ಬಿಜೆಪಿಗೆ ಬಿದ್ದಿರುವುದು 5.5 ಲಕ್ಷ ಮತಗಳು. ನಿರೀಕ್ಷೆಯಂತೆಯೇ, ಟಿಎಂಸಿಗೆ ಈ ಬಗೆಯ ಹೆಚ್ಚುವರಿ ಮತಗಳು ಲಭಿಸಿದ್ದು ಮುಸ್ಲಿಂ ಪ್ರಾಬಲ್ಯದ ಕ್ಷೇತ್ರಗಳಲ್ಲಿ. ಅಂದರೆ ಇಡೀ ರಾಜ್ಯದಲ್ಲಿ ಟಿಎಂಸಿಯ ಒಟ್ಟು ಮತ ಗಳಿಕೆ ಹೆಚ್ಚಿದ್ದರೂ ಈ ಹೆಚ್ಚುವರಿ ಮತಗಳು

ಟಿಎಂಸಿ ಮತಗಳು ಮುಸ್ಲಿಂ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಹೆಚ್ಚಾಗಿದ್ದರೆ, ಬಿಜೆಪಿಯ ಲಾಭವೆಂದರೆ ಅದರ ಮತಗಳು ರಾಜ್ಯಾದ್ಯಂತ ಸಮಾನವಾಗಿ ಹಂಚಿಕೆಯಾಗಿರುವುದು.

ಸಿಗುತ್ತಿರುವುದು ಮುಸ್ಲಿಂ ಪ್ರಾಬಲ್ಯದ ಕೆಲವು ಸ್ಥಾನಗಳಲ್ಲಿ ಮಾತ್ರ.

ಇದಕ್ಕೆ ವಿರುದ್ಧವಾಗಿ ಬಿಜೆಪಿಯ ಮತಗಳು ರಾಜ್ಯಾದ್ಯಂತ ಬಹುತೇಕ ಸಮಾನವಾಗಿ ಹಂಚಿಕೆಯಾಗಿವೆ. ಈ ರೀತಿ ಸಮಾನವಾಗಿ ಹಂಚಿಕೆಯಾದ ಮತಗಳು ಸಣ್ಣ ಪ್ರಮಾಣದ ಸ್ವಿಂಗ್ ಸಂಭವಿಸಿದರೂ ಹಲವು ಬಾರಿ ಹೆಚ್ಚು ಸ್ಥಾನಗಳನ್ನು ಗಳಿಸಿಕೊಡುವುದಿದೆ.

2024ರ ಲೋಕಸಭಾ ಚುನಾವಣೆಯಲ್ಲಿ 58 ಸ್ಥಾನಗಳಲ್ಲಿ ನಿಕಟಸ್ಪರ್ಧೆ ಏರ್ಪಟ್ಟಿತ್ತು. ಅದನ್ನು ವಿಶ್ಲೇಷಿಸಿದರೆ ಕೇವಲ 1.92 ಮತಗಳು ಮತ್ತೊಂದೆಡೆಗೆ ವಾಲಿದರೂ (ಸ್ವಿಂಗ್) ರಾಜ್ಯದಲ್ಲಿ ಅಧಿಕಾರ ಸಮತೋಲನವು ವ್ಯತ್ಯಯವಾಗಲಿದೆ.


ಇದರ ಜತೆಗೇ ರಾಜ್ಯದಲ್ಲಿ ಈಗ ಆಡಳಿತ ವಿರೋಧಿ ಅಲೆಯೂ ಇದೆ. ಅದು ಹಲವು ಆಯಾಮಗಳಲ್ಲಿ ವ್ಯಕ್ತವಾಗುತ್ತಿದೆ ಕೂಡಾ. ರಾಜ್ಯದಲ್ಲಿ ಹೆಚ್ಚುತ್ತಿರುವ ರಾಜಕೀಯ ಹಿಂಸಾಚಾರ, ಮುಸ್ಲಿಂ ತುಷ್ಟೀಕರಣ, ನಿರುದ್ಯೋಗ, ದುರಾಡಳಿತ, ಹಗರಣಗಳು, ಮಹಿಳೆಯರ ಮೇಲಿನ ದೌರ್ಜನ್ಯ ಮೊದಲಾದ ಕುರಿತಂತೆ ಜನರಲ್ಲಿ ಅಸಮಾಧಾನ ಹೆಚ್ಚಿದೆ. 2011ರಿಂದ 2024ರ ಅವಧಿ ಯಲ್ಲಿ ರಾಜ್ಯದಲ್ಲಿ ಅತ್ಯಧಿಕ ರಾಜಕೀಯ ಕೊಲೆಗಳು ಸಂಭವಿಸಿವೆ. ಮಹಿಳೆಯರ ವಿರುದ್ಧದ ಅಪರಾಧದಲ್ಲೂ ಪ.ಬಂಗಾಳ ಕುಖ್ಯಾತಿ ಪಡೆದಿದೆ. ದೇಶದಲ್ಲೆ ಅಗ್ರ ಸ್ಥಾನದಲ್ಲಿದೆ. ಹಾಗೆಂದು ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿರುವ ಪ್ರಮಾಣವೂ ಅತೀ ಕಡಿಮೆ. ಇದೆಲ್ಲ ಜನರಿಗೆ ಮಮತಾ ಆಡಳಿತದ ಮೇಲೆ ರೇಜಿಗೆ ಹುಟ್ಟಿಸಿದೆ. ಪ.ಬಂಗಾಳದ ರಾಜಕೀಯ ಫಲಿತಾಂಶವು ಲೆಕ್ಕಾಚಾರಗಳನ್ನು ಆಧರಿಸಿರುವಂತೆಯೇ ಭಾವನೆಗಳಿಂದಲೂ ರೂಪಿಸಲ್ಪಡುತ್ತವೆ. ಸದ್ಯಕ್ಕಂತೂ ರಾಜಕೀಯ ಲೆಕ್ಕಾಚಾರಗಳು ನಿಧಾನವಾಗಿ ಬಿಜೆಪಿ ಗೆಲುವಿನತ್ತ ವಾಲುತ್ತಿವೆ.

ಪಾರಂಪರಿಕ ಲೆಕ್ಕಾಚಾರಗಳು ಮಮತಾ ಜಯ ಗಳಿಸುವುದಾಗಿ ಹೇಳುತ್ತವೆ. ಆದರೆ ಅಂಕಿಅಂಶಗಳು ಯಾವಾಗಲೂ ಪರಂಪರೆಯನ್ನೆ ಅನುಸರಿಸುವುದಿಲ್ಲ. ತಳ ಮಟ್ಟದ ಬದಲಾವಣೆಗಳು ಈ ಲೆಕ್ಕಾಚಾರ ಬುಡಮೇಲು ಮಾಡುತ್ತವೆ. ಸದ್ಯಕ್ಕೆ ಪ.ಬಂಗಾಳದಲ್ಲಿ ಅಂತಹ ತಳಮಟ್ಟದ ಬದಲಾವಣೆ ಸಂಭವಿಸುತ್ತಲಿದೆ.

ಪ.ಬಂಗಾಳದಲ್ಲಿ ಈ ಬಾರಿ ಮೊದಲ ಹಂತದಲ್ಲಿ ಭಾರೀ ಪ್ರಮಾಣದ ಮತದಾನವಾಗಿದೆ. ಇದು ಕೂಡಾ ಆಡಳಿತ ವಿರೋಧಿ ಅಲೆಯ ಪ್ರತಿಬಿಂಬ ಎಂಬುದಾಗಿ ಕೆಲವು ರಾಜಕೀಯ ಪಂಡಿತರು ವಿಶ್ಲೇಷಿಸುತ್ತಿದ್ದಾರೆ.

ಯುದ್ಧ ಅಂತ್ಯಮಾಡಿ, ದಿಗ್ಬಂಧನ ತೆರವುಗೊಳಿಸಿ

ಜಲಸಂಧಿ ಮುಕ್ತಕ್ಕೆ ಇರಾನ್ ಪ್ರಸ್ತಾವನೆ



ಕೈರೋ: ಅಮೆರಿಕ ತನ್ನ ಆರ್ಥಿಕ ದಿಗ್ಬಂಧನವನ್ನು ತೆರವುಗೊಳಿಸಿ ಈಗಿನ ಯುದ್ಧವನ್ನು ಅಂತ್ಯಗೊಳಿಸಿದರೆ ಹಾರ್ಮುಜ್ ಜಲಸಂಧಿ ತೆರೆಯುವ ಬಗ್ಗೆ ಮರುಪರಿಶೀಲಿಸುವುದಾಗಿ ಇರಾನ್ ಪ್ರಸ್ತಾಪಿಸಿದೆ ಎಂದು ಪ್ರಾದೇಶಿಕ ಅಧಿಕಾರಿಗಳು ಸೋಮವಾರ ಖಚಿತಪಡಿಸಿದ್ದಾರೆ.

ಪಾಕಿಸ್ತಾನಿ ಮಧ್ಯಸ್ಥಗಾರರ ಮೂಲಕ ತಲುಪಿಸಲಾದ ಈ ಪ್ರಸ್ತಾವನೆ, ರಾಜತಾಂತ್ರಿಕ ವಿಧಾನದಲ್ಲಾದ ಬೆಳವಣಿಗೆಯನ್ನು ಸೂಚಿಸಿದೆ. ತೈಲ ರಫ್ತುಮಾಡದಂತೆತಡೆದಿರುವ ಅಮೆರಿಕದ ದಿಗ್ಬಂಧನಕ್ಕೆ ಸಂಪೂರ್ಣ ಅಂತ್ಯವನ್ನು ಇರಾನ್ ಬಯಸಿದೆ. ಈ ಪ್ರಸ್ತಾವನೆ ಅನ್ವಯ ಇರಾನ್‌ನ ಪರಮಾಣು ಕಾರ್ಯಕ್ರಮದ ಕುರಿತಾದ ಚರ್ಚೆಗಳನ್ನು ನಂತರದ ಹಂತಕ್ಕೆ ಮುಂದೂಡಲಾಗುತ್ತದೆ. ಟೆಹ್ರಾನ್‌ನಿಂದ ಉತ್ತಮ ಪ್ರಸ್ತಾವನೆ ಬಂದಿದೆ ಎಂದು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರೂ, ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಪಡೆಯದಂತೆ ತಡೆಯುವುದು ಇನ್ನೂ ಕಟ್ಟುನಿಟ್ಟಾದ ಷರತ್ತಾಗಿ ಉಳಿದಿದೆ ಎಂದಿದ್ದಾರೆ.

ಆರ್ಥಿಕತೆಯ ಮೇಲೆ ಪರಿಣಾಮ: ಹಾರ್ಮುಜ್ ಜಲಸಂಧಿ ಜಾಗತಿಕ ತೈಲ ಮತ್ತು ಅನಿಲದ ಶೇ.20ರಷ್ಟು ಸಾಗಣೆಯಾಗುವ ಪ್ರಮುಖ ಸಮುದ್ರ ಮಾರ್ಗವೆನಿಸಿದೆ. ಫೆ.28, 2026ರಂದು ಸಂಘರ್ಷ ಪ್ರಾರಂಭವಾದಾಗಿನಿಂದ, ಇದರ ಮುಚ್ಚುವಿಕೆಯಿಂದ ಬ್ರೆಂಟ್ ಕಚ್ಚಾ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 108 ಡಾಲರ್‌ಗೆ ಏರಿದೆ.

ಪಾಕ್ ಮೇಲೆ ವಿಶ್ವಾಸವಿಲ್ಲ

ಟೆಹರಾನ್: ಮಧ್ಯಪ್ರಾಚ್ಯ ಸಂಘರ್ಷಕ್ಕೆ ಸಂಬಂಧಿಸಿ ಅಮೆರಿಕ ಮತ್ತು ಇರಾನ್ ನಡುವೆ ಈಗ ಮಧ್ಯವರ್ತಿ ಪಾತ್ರ ನಿರ್ವಹಿಸುತ್ತಿರುವ ಪಾಕಿಸ್ತಾನದ ವಿಶ್ವಾಸಾರ್ಹತೆ ಏನು ಎಂಬುದಾಗಿ ಇರಾನಿನ ಹಿರಿಯ ಕಾನೂನು ನಿರೂಪಕ ಪ್ರಶ್ನೆ ಮಾಡಿದ್ದಾರೆ. ಮಾತುಕತೆಗಾಗಿ ವಿವಿಧ ಹಾದಿಗಳನ್ನು ಕಂಡುಕೊಳ್ಳುವ ರಾಜತಾಂತ್ರಿಕ ಪ್ರಯತ್ನಗಳು ಮುಂದುವರಿಯುತ್ತವಾದರೂ, ಪಾಕಿಸ್ತಾನ ಅಮೆರಿಕದ ಹಿತಾಸಕ್ತಿಗಳನ್ನು ಕಾಯುವತ್ತ ವಾಲುತ್ತಿರುವ ದೇಶವಾಗಿದ್ದು, ಅದರ ವಿಶ್ವಾಸಾರ್ಹತೆ ಏನು ಎಂಬುದಾಗಿ ಇರಾನಿನ ಹಿರಿಯ ನಾಯಕ ಇಬ್ರಾಹಿಂ ರೆಜಾಯಿ ಪ್ರಶ್ನಿಸಿದ್ದಾರೆ. ಮುಂದುವರಿಯುತ್ತಿರುವ ಪ್ರಾದೇಶಿಕ ರಾಜತಾಂತ್ರಿಕತೆಯಲ್ಲಿ ಒಂದು ತಟಸ್ಥ ಮಧ್ಯಸ್ಥನಾಗಿ ಪಾಕಿಸ್ತಾನದ ಸೂಕ್ತತೆ ಮತ್ತು ಅರ್ಹತೆ ಏನು ಎಂಬುದಾಗಿ ಅವರು ಪ್ರಶ್ನಿಸಿದ್ದಾರೆ.

ಇರಾನ್‌ಗೆ ಪುಟಿನ್ ಅಭಯ

ಮಾಸ್ಕೋ: ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆಗೆ ರಷ್ಯಾ ತನ್ನಿಂದಾದಷ್ಟು ಸಹಾಯ ಮಾಡಲು ಸಿದ್ಧವಿದೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಇರಾನ್‌ಗೆ ಅಭಯ ನೀಡಿದ್ದಾರೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಭೇಟಿ ಬಳಿಕ ಮಾತನಾಡಿರುವ ಪುಟಿನ್, ಇರಾನ್ ಜನರ ಧೈರ್ಯವನ್ನು ಪ್ರಶಂಸಿಸಿದರು. ಇದೇ ವೇಳೆ ಅರಾಘ್ಚಿ ಅವರು, ಅಮೆರಿಕದ ವಿರುದ್ಧ ಇರಾನ್ ತೋರಿದ ಶಕ್ತಿಯನ್ನು ಉಲ್ಲೇಖಿಸಿ, ರಷ್ಯಾದ ಬೆಂಬಲಕ್ಕೆ ಕೃತಜ್ಞತೆ ವ್ಯಕ್ತಪಡಿಸಿದರು. ಇತ್ತೀಚಿನ ಮಾತುಕತೆಗಳು ನಿರೀಕ್ಷಿತ ಫಲಿತಾಂಶ ನೀಡಲಿಲ್ಲ ಎಂದೂ ಹೇಳಿದರು.

ಹೀಟ್‌ಸ್ಟ್ರೋಕ್ ಬಗ್ಗೆ ಎಚ್ಚರವಿರಲಿ

ಹೊಸದಿಲ್ಲಿ: ಬೇಸಿಗೆ ಅವಧಿಯಲ್ಲಿ ತಾಪ ಅಲೆ ದಿನಗಳು ಸಾಮಾನ್ಯಕ್ಕಿಂತ ಹೆಚ್ಚು ಇರುವ ಸಾಧ್ಯತೆ ಹಿನ್ನೆಲೆಯಲ್ಲಿ, ದೇಶದ ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಹೀಟ್‌ಸ್ಟ್ರೋಕ್ ನಿರ್ವಹಣಾ ಘಟಕಗಳನ್ನು ಕಡ್ಡಾಯವಾಗಿ ಆರಂಭಿಸುವಂತೆ ಕೇಂದ್ರ ಸರ್ಕಾರ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿದೆ.

ಕೇಂದ್ರ ಆರೋಗ್ಯ ಕಾರ್ಯದರ್ಶಿ ಪುಣ್ಯ ಸಲಿಲಾ ಶ್ರೀವಾಸ್ತವ ಅವರು ಏ.23ರಂದು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಬರೆದ ಪತ್ರದಲ್ಲಿ, ತಾಪಾಘಾತ ಪ್ರಕರಣಗಳ ತ್ವರಿತ ಗುರುತಿಸುವಿಕೆ ಹಾಗೂ ಚಿಕಿತ್ಸೆಗಾಗಿ ಪ್ರತ್ಯೇಕ ಘಟಕಗಳನ್ನು ಪ್ರಾರಂಭಿಸುವುದರ ಜೊತೆಗೆ ಆಂಬುಲೆನ್ಸ್ ಸೇವೆಗಳು ಸಂಪೂರ್ಣ ಸಜ್ಜಾಗಿರಬೇಕು ಎಂದು ಸೂಚಿಸಿದ್ದಾರೆ. ಇದಲ್ಲದೆ, ಮುನ್ನೆಚ್ಚರಿಕಾ ಎಚ್ಚರಿಕೆಗಳನ್ನು ಸಮಯಕ್ಕೆ ಸರಿಯಾಗಿ ಸಾರ್ವಜನಿಕರಿಗೆ ತಲುಪಿಸುವುದು ಮತ್ತು ತಾಪಾಘಾತ ಪ್ರಕರಣಗಳನ್ನು ಸಮಗ್ರ ಆರೋಗ್ಯ ಮಾಹಿತಿ ವೇದಿಕೆಯಲ್ಲಿ ತಕ್ಷಣದ ಆಧಾರದ ಮೇಲೆ ದಾಖಲಿಸುವುದು ಅಗತ್ಯವೆಂದು ಅವರು ಒತ್ತಿಹೇಳಿದ್ದಾರೆ.

ಭಾರತೀಯ ಹವಾಮಾನ ಇಲಾಖೆ ನೀಡಿರುವ ಏಪ್ರಿಲ್–ಜೂನ್ 2026ರ ಹವಾಮಾನ ಮುನ್ನೋಟದ ಪ್ರಕಾರ, ಪೂರ್ವ, ಮಧ್ಯ ಹಾಗೂ ವಾಯುವ್ಯ ಭಾರತ ಭಾಗಗಳಲ್ಲಿ ತಾಪ ಅಲೆ ದಿನಗಳು ಹೆಚ್ಚಾಗಲಿದ್ದು, ದಕ್ಷಿಣಪೂರ್ವ ಉಪಖಂಡದಲ್ಲಿಯೂ ಉಷ್ಣತೆಯ ತೀವ್ರತೆ ಏರಿಕೆಯಾಗುವ ಸಾಧ್ಯತೆ ಇದೆ. ಒಡಿಶಾ, ಪಶ್ಚಿಮ ಬಂಗಾಳ, ತಮಿಳುನಾಡು, ಪುದುಚೇರಿ ಹಾಗೂ ಆಂಧ್ರ ಪ್ರದೇಶದ ಕರಾವಳಿ ಭಾಗಗಳಲ್ಲಿ ಉಷ್ಣ ಅಲೆ ಹೆಚ್ಚು ಕಾಣಿಸಿಕೊಳ್ಳಲಿದೆ.


ಅಣುಶಕ್ತಿಯಲ್ಲಿ ಭಾರತ ಸಾಧನೆ

ಫಾಸ್ಟ್ ಬ್ರೀಡರ್ ರಿಯಾಕ್ಟರ್‌ನ ಐತಿಹಾಸಿಕಮೈಲುಗಲ್ಲು

ಪರಮಾಣು ಕಾರ್ಯಕ್ರಮದಲ್ಲಿ ಮಹತ್ವದ ಪ್ರಗತಿ

ಈ ರಿಯಾಕ್ಟರ್‌ನ ವಿಭಿನ್ನತೆ ಏನು?

ಕೇವಲ ಯುರೇನಿಯಂ ಇಂಧನವನ್ನು ಅವಲಂಬಿಸಿರುವ ಸಾಂಪ್ರದಾಯಿಕ ಪ್ರೆಶರೈಸ್ಡ್ ಹೆವಿ ವಾಟರ್ ರಿಯಾಕ್ಟರ್‌ಗಳಿಗೆ ಹೋಲಿಸಿದರೆ, ಈ ಫಾಸ್ಟ್ ಬ್ರೀಡರ್ ರಿಯಾಕ್ಟರ್ ತಾನು ಬಳಸುವುದಕ್ಕಿಂತ ಹೆಚ್ಚಿನ ಇಂಧನವನ್ನು ಉತ್ಪಾದಿಸುತ್ತದೆ. ಇದು ಅಸ್ತಿತ್ವದಲ್ಲಿರುವ ರಿಯಾಕ್ಟರ್‌ಗಳಿಂದ ತ್ಯಾಜ್ಯವಾಗಿ ಬರುವ ಪ್ಲುಟೋನಿಯಂ ಅನ್ನು ಬಳಸಿಕೊಳ್ಳುತ್ತದೆ ಮತ್ತು ಕಾರ್ಯಾಚರಣೆಯ ಸಮಯದಲ್ಲಿ ಯುರೇನಿಯಂ ಅನ್ನು ಹೆಚ್ಚುವರಿ ಪ್ಲುಟೋನಿಯಂ ಆಗಿ ಪರಿವರ್ತಿಸುತ್ತದೆ.





ತಮಿಳುನಾಡಿನ ಕಲ್ಪಕ್ಕಂನಲ್ಲಿರುವ ಪ್ರೊಟೊಟೈಪ್ ಫಾಸ್ಟ್ ಬ್ರೀಡರ್ ರಿಯಾಕ್ಟರ್ (ಪಿಎಫ್‌ಬಿಆರ್) ಕ್ರಿಟಿಕಾಲಿಟಿ ಹಂತವನ್ನು ತಲುಪುವ ಮೂಲಕ ಭಾರತ ತನ್ನ ದೀರ್ಘಕಾಲದ ಪರಮಾಣು ಶಕ್ತಿ ಕಾರ್ಯತಂತ್ರದಲ್ಲಿ ಪ್ರಮುಖ ಹೆಜ್ಜೆ ಇಟ್ಟಿದೆ. ಕ್ರಿಟಿಕಾಲಿಟಿ ಎಂದರೆ ಪರಮಾಣು ಸರಣಿ ಕ್ರಿಯೆಗಳು ತನ್ನಷ್ಟಕ್ಕೆ ತಾನೇ ನಿರಂತರವಾಗಿ ನಡೆಯುವ ಹಂತ. ಭಾರತದ ಅಣುಶಕ್ತಿ ಕಾರ್ಯಕ್ರಮದಲ್ಲಿ ಇದು ಅತ್ಯಂತ ಮಹತ್ವದ ಪ್ರಗತಿಯಾಗಿದ್ದು, ರಷ್ಯಾದ ನಂತರ ವಾಣಿಜ್ಯಿಕವಾಗಿ ಫಾಸ್ಟ್ ಬ್ರೀಡರ್ ರಿಯಾಕ್ಟರ್ ಅನ್ನು ನಿರ್ವಹಿಸುವ ವಿಶ್ವದ ಎರಡನೇ ದೇಶ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಲಿದೆ. ಪ್ರಧಾನಿ ನರೇಂದ್ರ ಮೋದಿ, ಈ ಸಾಧನೆಯನ್ನು ಭಾರತದ ಪರಮಾಣು ಮಹತ್ವಾಕಾಂಕ್ಷೆಯ ನಿರ್ಣಾಯಕ ಹಂತ ಎಂದು ಬಣ್ಣಿಸಿದ್ದಾರೆ ಮತ್ತು ಇದು ದೇಶದ ವೈಜ್ಞಾನಿಕ ಹಾಗೂ ಎಂಜಿನಿಯರಿಂಗ್ ಸಾಮರ್ಥ್ಯವನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಭಾರತದ ಮೂರು ಹಂತದ ಪರಮಾಣು ಯೋಜನೆಗಳು

ದೇಶದಲ್ಲಿ ಯುರೇನಿಯಂ ಪ್ರಮಾಣ ಕಡಿಮೆ ಇರುವುದರಿಂದ ಮತ್ತು ಹೇರಳವಾಗಿರುವ ಥೋರಿಯಂ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಉದ್ದೇಶದಿಂದ ರೂಪಿಸಲಾದ ಭಾರತದ ಮೂರು ಹಂತದ ಪರಮಾಣು ಕಾರ್ಯಕ್ರಮಕ್ಕೆ ಈ ರಿಯಾಕ್ಟರ್ ಅತ್ಯಂತ ಪ್ರಮುಖ. ವಿಶ್ವದ ಯುರೇನಿಯಂ ದಾಸ್ತಾನಿನಲ್ಲಿ ಭಾರತ ಕೇವಲ 1ರಿಂದ 2 ಪ್ರತಿಶತದಷ್ಟು ಮಾತ್ರ ಹೊಂದಿದ್ದರೆ, ವಿಶ್ವದ ಒಟ್ಟು ಥೋರಿಯಂ ದಾಸ್ತಾನಿನಲ್ಲಿ 25 ಪ್ರತಿಶತಕ್ಕಿಂತ ಹೆಚ್ಚಿನ ಪಾಲನ್ನು ಹೊಂದಿದೆ. ಮೊದಲ ಹಂತದಲ್ಲಿ ಸಾಂಪ್ರದಾಯಿಕ ರಿಯಾಕ್ಟರ್‌ಗಳು ಯುರೇನಿಯಂ ಇಂಧನವನ್ನು ಬಳಸುತ್ತವೆ. ಎರಡನೇ ಹಂತದಲ್ಲಿ ಫಾಸ್ಟ್ ಬ್ರೀಡರ್ ರಿಯಾಕ್ಟರ್‌ಗಳು ಪ್ಲುಟೋನಿಯಂ ಬಳಸಿ ಶಕ್ತಿಯನ್ನು ಉತ್ಪಾದಿಸುತ್ತವೆ. ಮೂರನೇ ಹಂತವು ಸಂಪೂರ್ಣವಾಗಿ ಥೋರಿಯಂ ಆಧಾರಿತವಾಗಿದ್ದು, ಇದು ಭವಿಷ್ಯದಲ್ಲಿ ಭಾರತ, ಯುರೇನಿಯಂ ಆಮದಿನ ಮೇಲೆ ಅವಲಂಬಿತವಾಗುವುದನ್ನು ತಪ್ಪಿಸುತ್ತದೆ.

ಇಂಧನ ಭದ್ರತೆಯ ಕಾರ್ಯತಂತ್ರ

ಭಾರತದ ಬೆಳೆಯುತ್ತಿರುವ ಆರ್ಥಿಕತೆ ಮತ್ತು ಜನಸಂಖ್ಯೆಯಿಂದಾಗಿ ವಿದ್ಯುತ್ ಬೇಡಿಕೆ ವೇಗವಾಗಿ ಹೆಚ್ಚುತ್ತಿದೆ. ಪ್ರಸ್ತುತ ಭಾರತದ ಒಟ್ಟು ಇಂಧನ ಬಳಕೆಯಲ್ಲಿ ಅಣುಶಕ್ತಿಯ ಪಾಲು ಕೇವಲ 3 ಪ್ರತಿಶತದಷ್ಟಿದೆ. ಸರ್ಕಾರ 2024ರಲ್ಲಿದ್ದ 8,180 ಮೆಗಾವ್ಯಾಟ್ ಸಾಮರ್ಥ್ಯವನ್ನು 2047ರ ವೇಳೆಗೆ 100 ಗಿಗಾವ್ಯಾಟ್‌ಗೆ ಏರಿಸುವ ಗುರಿ ಹೊಂದಿದೆ. ಬ್ರೀಡರ್ ರಿಯಾಕ್ಟರ್ ತಂತ್ರಜ್ಞಾನ, ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ ಮತ್ತು ಜಾಗತಿಕ ತೈಲ ಮಾರುಕಟ್ಟೆಯ ಏರಿಳಿತಗಳಿಂದ ಭಾರತವನ್ನು ರಕ್ಷಿಸಿ ಇಂಧನ ಭದ್ರತೆಯನ್ನು ಹೆಚ್ಚಿಸುತ್ತದೆ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ.

ಸವಾಲು ಮತ್ತು ಟೀಕೆಗಳು

ಈ ಯಶಸ್ಸಿನ ಹೊರತಾಗಿಯೂ, ತಾಂತ್ರಿಕ ಮತ್ತು ಆರ್ಥಿಕ ಸವಾಲುಗಳು ಹಾಗೆಯೇ ಉಳಿದಿವೆ ಎಂದು ತಜ್ಞರು ಎಚ್ಚರಿಸಿದ್ದಾರೆ. 2004ರಲ್ಲಿ ನಿರ್ಮಾಣ ಆರಂಭವಾದ ಈ ಯೋಜನೆ, ಹಲವು ವಿಳಂಬಗಳನ್ನು ಕಂಡಿದೆ ಮತ್ತು ಇದರ ವೆಚ್ಚವು ಅಂದಾಜು ಮಾಡಿದ್ದಕ್ಕಿಂತ ದುಪ್ಪಟ್ಟಾಗಿದೆ ಎಂದು ವರದಿಯಾಗಿದೆ. ಸೌರಶಕ್ತಿ ಅಥವಾ ಸಾಂಪ್ರದಾಯಿಕ ಅಣು ಸ್ಥಾವರಗಳಿಗೆ ಹೋಲಿಸಿದರೆ ಈ ರಿಯಾಕ್ಟರ್‌ನಿಂದ ಉತ್ಪಾದನೆಯಾಗುವ ವಿದ್ಯುತ್ ಬೆಲೆ ಗಣನೀಯವಾಗಿ ಹೆಚ್ಚಿರಬಹುದು ಎಂಬುದು ವಿಮರ್ಶಕರ ವಾದ. ಅಲ್ಲದೆ, ಜಾಗತಿಕವಾಗಿ ಇಂತಹ ರಿಯಾಕ್ಟರ್‌ಗಳ ನಿರ್ವಹಣೆ ಮತ್ತು ದಕ್ಷತೆಯ ವಿಷಯದಲ್ಲಿ ಹಲವು ದೇಶಗಳು ಈ ಹಿಂದೆ ಸವಾಲುಗಳನ್ನು ಎದುರಿಸಿವೆ.

ಮುಖ್ಯಾಂಶಗಳು

- ಕಲ್ಪಕ್ಕಂನಲ್ಲಿರುವ ಭಾರತದ ಪಿಎಫ್‌ಬಿಆರ್ ರಿಯಾಕ್ಟರ್ ಕಾರ್ಯಾಚರಣೆಯ ಪ್ರಮುಖ ಹಂತವಾದ ಕ್ರಿಟಿಕಾಲಿಟಿ ತಲುಪಿದೆ.
- ಈ ರಿಯಾಕ್ಟರ್ ತಾನು ಬಳಸುವ ಪರಮಾಣು ಇಂಧನಕ್ಕಿಂತ ಹೆಚ್ಚಿನ ಇಂಧನವನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ.
- ವಾಣಿಜ್ಯಿಕ ಫಾಸ್ಟ್ ಬ್ರೀಡರ್ ರಿಯಾಕ್ಟರ್ ಹೊಂದಲಿರುವ ವಿಶ್ವದ ಎರಡನೇ ದೇಶ ಭಾರತ
- ಭಾರತದ ಮೂರು ಹಂತದ ಥೋರಿಯಂ ಆಧಾರಿತ ಪರಮಾಣು ಕಾರ್ಯಕ್ರಮಕ್ಕೆ ಈ ತಂತ್ರಜ್ಞಾನ ಅಗತ್ಯ
- ಇದರ ದೀರ್ಘಕಾಲದ ಆರ್ಥಿಕ ಲಾಭದ ಬಗ್ಗೆ ತಜ್ಞರಲ್ಲಿ ಭಿನ್ನಾಭಿಪ್ರಾಯ



ಪರಮಾಣು ತ್ಯಾಜ್ಯ ಕಡಿಮೆ

ಈ ಪ್ರಕ್ರಿಯೆ, ಸೀಮಿತ ಯುರೇನಿಯಂ ಸಂಪನ್ಮೂಲಗಳಿಂದ ಹೆಚ್ಚಿನ ಶಕ್ತಿಯನ್ನು ಹೊರತೆಗೆಯಲು ಸಹಾಯ ಮಾಡುತ್ತದೆ ಮತ್ತು ದೀರ್ಘಕಾಲದ ಪರಮಾಣು ತ್ಯಾಜ್ಯವನ್ನು ಕಡಿಮೆ ಮಾಡುತ್ತದೆ. ಕಲ್ಪಕ್ಕಂನ ಈ ರಿಯಾಕ್ಟರ್ 500 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಿದ್ದು, ಇದನ್ನು ಅಣುಶಕ್ತಿ ಇಲಾಖೆ ಯಲ್ಲಿರುವ ಇಂದಿರಾ ಗಾಂಧಿ ಅಣು ಸಂಶೋಧನಾ ಕೇಂದ್ರ ವಿನ್ಯಾಸಗೊಳಿಸಿದೆ.

ಜಾಗತಿಕ ಪರಿಣಾಮಗಳು

ಅಮೆರಿಕ, ಫ್ರಾನ್ಸ್, ಜಪಾನ್ ಮತ್ತು ಚೀನಾ ಸೇರಿದಂತೆ ಹಲವು ದೇಶಗಳು ಫಾಸ್ಟ್ ಬ್ರೀಡರ್ ತಂತ್ರಜ್ಞಾನದ ಮೇಲೆ ಕೆಲಸ ಮಾಡುತ್ತಿವೆ. ಆದರೆ ಹೆಚ್ಚಿನ ವೆಚ್ಚ ಮತ್ತು ಎಂಜಿನಿಯರಿಂಗ್ ಸವಾಲುಗಳಿಂದಾಗಿ ಇದರ ವಾಣಿಜ್ಯ ಬಳಕೆ ಸೀಮಿತವಾಗಿದೆ. ಒಂದು ವೇಳೆ ಭಾರತವು ಈ ಯೋಜನೆಯನ್ನು ಯಶಸ್ವಿಯಾಗಿ ವಾಣಿಜ್ಯೀಕರಣಗೊಳಿಸಿದರೆ, ಅದು ಜಾಗತಿಕವಾಗಿ ಈ ತಂತ್ರಜ್ಞಾನದ ಬಗ್ಗೆ ಮತ್ತೆ ಆಸಕ್ತಿ ಮೂಡಿಸುವಂತೆ ಮಾಡುತ್ತದೆ ಮತ್ತು ಸುಧಾರಿತ ಅಣುಶಕ್ತಿ ಕ್ಷೇತ್ರದಲ್ಲಿ ಭಾರತದ ಸ್ಥಾನವನ್ನು ಬಲಪಡಿಸುತ್ತದೆ.

ಕಿರುಸುದ್ದಿ

ಪಾಕ್‌ನಲ್ಲಿ ಉಗ್ರ ಹಫೀಜ್ ನಿಕಟವರ್ತಿ ಶೇಖ್ ವಧೆ

ಇಸ್ಲಾಮಾಬಾದ್: ನಿಷೇಧಿತ ಭಯೋತ್ಪಾದಕ ಸಂಘಟನೆ ಲಷ್ಕರ್– ಎ–ತೊಯ್ಬಾ ಹಿರಿಯ ಕಮಾಂಡರ್ ಶೇಖ್ ಯೂಸುಫ್ ಅಫ್ರಿದಿನನ್ನು ಪಾಕಿಸ್ತಾನದ ಖೈಬರ್ ಪಖ್ತುನ್ಖ್ವಾದಲ್ಲಿ ಅಪರಿಚಿತ ಬಂದೂಕುಧಾರಿಗಳು ಗುಂಡಿಕ್ಕಿ ಕೊಂದಿದ್ದಾರೆ. ಪ್ರಾಥಮಿಕ ವರದಿಗಳ ಪ್ರಕಾರ, ಸಶಸ್ತ್ರ ದಾಳಿಕೋರರು ಹತ್ತಿರದಿಂದ ಗುಂಡು ಹಾರಿಸಿದ್ದಾರೆ. ಇದರಿಂದಾಗಿ ಅಫ್ರಿದಿ ಗಂಭೀರ ಗಾಯಗೊಂಡಿದ್ದು, ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ದಾಳಿಕೋರರು ಘಟನೆ ನಂತರ ತಕ್ಷಣವೇ ಪರಾರಿಯಾಗಿದ್ದು, ಇಲ್ಲಿಯವರೆಗೆ ಯಾವುದೇ ಗುಂಪು ಈ ಘಟನೆಯ ಹೊಣೆ ಹೊತ್ತುಕೊಂಡಿಲ್ಲ. ಲಷ್ಕರ್–ಎ–ತೊಯ್ಬಾ ಪ್ರಾದೇಶಿಕ ರಚನೆಯ ಪ್ರಮುಖ ವ್ಯಕ್ತಿಯೆಂದು ಪರಿಗಣಿಸಲ್ಪಟ್ಟ ಅಫ್ರಿದಿ, 26/11ರ ಮುಂಬೈ ಭಯೋತ್ಪಾದಕ ದಾಳಿಯ ಮಾಸ್ಟರ್ ಮೈಂಡ್, ಗುಂಪಿನ ಮುಖ್ಯಸ್ಥ ಹಫೀಜ್ ಸಯೀದ್‌ನೊಂದಿಗೆ ನಿಕಟ ಸಂಬಂಧ ಹೊಂದಿದ್ದ ಎಂದು ಶಂಕಿಸಲಾಗಿದೆ. ವಾಯುವ್ಯ ಪಾಕಿಸ್ತಾನದಲ್ಲಿ ಸಂಸ್ಥೆಯ ಚಟುವಟಿಕೆಗಳ ನೇಮಕಾತಿ ಮತ್ತು ಸಮನ್ವಯದಲ್ಲಿ ಆತ ಮಹತ್ವದ ಪಾತ್ರ ವಹಿಸಿದ್ದಾನೆ ಎಂದು ಭದ್ರತಾ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ.ಬಂಗಾಳದಲ್ಲಿ ಇನ್ನೂ 2 ತಿಂಗಳು ಕೇಂದ್ರ ಪಡೆ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಅಂತಿಮ ಹಂತದ ಮತದಾನದಲ್ಲಿ ಮತದಾರರೆಲ್ಲರು ದೀದಿ ಗೂಂಡಾಗಳಿಗೆ ಹೆದರದೆ ನಿರ್ಭೀತಿಯಿಂದ ಮತಚಲಾಯಿಸಬೇಕು ಎಂದು ಕರೆ ನೀಡಿರುವ ಗೃಹ ಸಚಿವ ಅಮಿತ್ ಶಾ, ಬಂಗಾಳದಲ್ಲಿ ಚುನಾವಣೆ ನಂತರವೂ ಅರವತ್ತು ದಿನ ಕೇಂದ್ರೀಯ ಪಡೆಗಳ ಕಾವಲಿರುವುದು ಎಂದು ಘೋಷಿಸಿದ್ದಾರೆ.

ಸೋದರ ಸೋದರಿಯರೇ, ಏ.29ರಂದು ಮತದಾನ ಕೇಂದ್ರಗಳಿಗೆ ತೆರಳಿ ಮತ ಚಲಾಯಿಸಿ. ದೀದಿ ಗೂಂಡಾಗಳಿಗೆ ಹೆದರದಿರಿ. ಚುನಾವಣಾ ಆಯೋಗವು ಬಂಗಾಳದ ಮೂಲೆ ಮೂಲೆಗೂ ಸಿಆರ್‌ಪಿಎಫ್ ಭದ್ರತೆಯನ್ನು ನಿಯೋಜಿಸಿದೆ. ಇಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರವೂ ಎರಡು ತಿಂಗಳ ಕಾಲ ಕೇಂದ್ರೀಯ ಪಡೆಗಳ ಕಾವಲು ಮುಂದುವರೆಯಲಿದೆ ಎಂದು ಪುನರುಚ್ಚರಿಸಿದರು. ದ್ವಿತೀಯ ಹಂತ ಅಥವಾ ಕೊನೆ ಹಂತದ ಮತದಾನಕ್ಕೆ ಅಣಿಯಾಗಿರುವ ಬೆಹಾಲದಲ್ಲಿ ಬೃಹತ್ ರೋಡ್ ಶೋನಲ್ಲಿ ಪಾಲ್ಗೊಂಡ ಬಳಿಕ ನೆರೆದ ಜನಸ್ತೋಮವನ್ನು ಉದ್ದೇಶಿಸಿ ಸಚಿವ ಶಾ ಮಾತನಾಡಿದರು.

ತೆರೆದ ವಾಹನದಲ್ಲಿ ನಿಂತುಕೊಂಡು ರೋಡ್ ಶೋನಲ್ಲಿ ಪಾಲ್ಗೊಂಡ ಸಚಿವ ಶಾ, ರಸ್ತೆ ಇಕ್ಕೆಲಗಳಲ್ಲೂ ನೆರೆದಿದ್ದ ಅಭಿಮಾನಿ ಬೆಂಬಲಿಗರತ್ತ ಆತ್ಮೀಯವಾಗಿ ಕೈಬೀಸಿದರು. ಜನರು ಸಚಿವರತ್ತ ಪುಷ್ಪವೃಷ್ಟಿಗೈದರು. ಸಾವಿರಾರು ಬಿಜೆಪಿ ಕಾರ್ಯಕರ್ತರು, ಬೆಂಬಲಿಗರು ಪಕ್ಷದ ಧ್ವಜಗಳು ಮತ್ತು ಕೇಸರಿ ಹಸಿರು ಬಣ್ಣದ ಬಲೂನ್‌ಗಳೊಂದಿಗೆ ರೋಡ್ ಶೋನಲ್ಲಿ ಪಾಲ್ಗೊಂಡರು. ಜೈ ಶ್ರೀರಾಮ್, ಭಾರತ್ ಮಾತಾ ಕೀ ಜೈ ಘೋಷಣೆಗಳು ಮುಗಿಲುಮುಟ್ಟಿದ್ದವು.

ಏಳು ಎಎಪಿ ಸಂಸದರ ಬಿಜೆಪಿ ವಿಲೀನಕ್ಕೆ ಒಪ್ಪಿಗೆ

ಹೊಸದಿಲ್ಲಿ: ಆಮ್ ಆದ್ಮಿ ಪಕ್ಷ(ಆಪ್) ತೊರೆದ ರಾಘವ್ ಚಡ್ಡಾ ಮತ್ತು ಇತರ ಆರು ಸಂಸದರನ್ನು ಬಿಜೆಪಿಯೊಂದಿಗೆ ವಿಲೀನಗೊಳಿಸಲು ರಾಜ್ಯಸಭೆ ಅಧ್ಯಕ್ಷ ಸಿ. ಪಿ. ರಾಧಾಕೃಷ್ಣನ್ ಅವರು ಅನುಮೋದನೆ ನೀಡಿದ್ದಾರೆ. ಈ ಮೂಲಕ ರಾಜ್ಯಸಭೆಯಲ್ಲಿ ಎಎಪಿ ಸದಸ್ಯರ ಬಲ 3ಕ್ಕೆ ಕುಸಿದಿದೆ. ಬಿಜೆಪಿ ಬಲ 113ಕ್ಕೆ ಏರಿಕೆಯಾಗಿದೆ.

ಮೂವರು ಸಂಸದರಾದ ರಾಘವ್ ಚಡ್ಡಾ, ಸಂದೀಪ್ ಪಾಠಕ್ ಮತ್ತು ಅಶೋಕ್ ಮಿತ್ತಲ್ ಅವರು ಶುಕ್ರವಾರ ಆಪ್ ತೊರೆದು ಬಿಜೆಪಿಯ ನಾಯಕತ್ವದ ಸಮ್ಮುಖದಲ್ಲಿ ಬಿಜೆಪಿ ಸೇರಿದ್ದರು. ಜತೆಗೆ ಹರ್ಭಜನ್ ಸಿಂಗ್, ರಾಜಿಂದರ್ ಗುಪ್ತಾ, ವಿಕ್ರಂಜಿತ್ ಸಿಂಗ್ ಸಾಹ್ನಿ ಮತ್ತು ಸ್ವಾತಿ ಮಲಿವಾಲ್ ಕೂಡ ಬಿಜೆಪಿ ಸೇರಿದ್ದರು.



ಈ ಮಧ್ಯೆ ಆಪ್ ಸಂಸದ ಸಂಜಯ್ ಸಿಂಗ್ ಅವರು ಏಳು ಸಂಸದರನ್ನು ಅನರ್ಹಗೊಳಿಸುವಂತೆ ರಾಜ್ಯಸಭೆ ಅಧ್ಯಕ್ಷ ಸಿ.ಪಿ.ರಾಧಾಕೃಷ್ಣನ್ ಅವರಿಗೆ ಅಧಿಕೃತವಾಗಿ ಅರ್ಜಿ ಸಲ್ಲಿಸಿದ್ದರು.

ಅರ್ಜಿಯಲ್ಲಿ ಸಂವಿಧಾನದ ಹತ್ತನೇ ಪರಿಚ್ಛೇದದ 4ನೇ ಪರಿಚ್ಛೇದದ ಅನ್ವಯದಲ್ಲಿ ಉದ್ದೇಶಿತ ವಿಲೀನವನ್ನು ಪ್ರಶ್ನಿಸಿದ್ದು, ಅದರ 2(1)(ಎ) ಪರಿಚ್ಛೇದದಲ್ಲಿ ಸಂಸದರನ್ನು ಅನರ್ಹಗೊಳಿಸುವಂತೆ ಕೋರಿದ್ದರು. ಆದಾಗ್ಯೂ, ಹತ್ತನೇ ಪರಿಚ್ಛೇದದ ಪ್ರಕಾರ, ವಿಲೀನವು ಮೂರನೇ ಎರಡರಷ್ಟು ಸದಸ್ಯರನ್ನು ಒಳಗೊಂಡಿರುವುದರಿಂದ, ಮೂಲ ರಾಜಕೀಯ ಪಕ್ಷವು ಮತ್ತೊಂದು ರಾಜಕೀಯ ಪಕ್ಷದೊಂದಿಗೆ ವಿಲೀನಗೊಂಡರೆ ಸಂಸದರ ಅನರ್ಹತೆ ನಡೆಯುವುದಿಲ್ಲ.

ಫುಡ್ ಪಾಯಿಸನ್ ಶಂಕೆ ಕುಟುಂಬದ ನಾಲ್ವರ ಬಲಿ

ಮುಂಬೈ: ಬಿರಿಯಾನಿ ಸೇವಿಸಿದ ಬಳಿಕ ಕಲ್ಲಂಗಡಿ ತಿಂದಿದ್ದ ಒಂದೇ ಕುಟುಂಬದ ನಾಲ್ವರು ಸದಸ್ಯರು ತೀವ್ರ ಅಸ್ವಸ್ಥಗೊಂಡು ಮೃತಪಟ್ಟಿರುವ ಘಟನೆ ಬೆಳಕಿಗೆ ಬಂದಿದೆ. ಪ್ರಾಥಮಿಕವಾಗಿ ಫುಡ್ ಪಾಯಿಸನ್ ಈ ಸಾವಿಗೆ ಕಾರಣವಾಗಿರಬಹುದು ಎಂದು ಶಂಕಿಸಲಾಗಿದೆ.

ಮೃತರು 40 ವರ್ಷದ ವ್ಯಕ್ತಿ, ಅವರ ಪತ್ನಿ ಹಾಗೂ ಇಬ್ಬರು ಕಿರಿಯ ಪುತ್ರಿಯರು ಎಂದು ಗುರುತಿಸಲಾಗಿದೆ. ಮನೆಯಲ್ಲಿ ನಡೆದ ಸಮಾರಂಭದಲ್ಲಿ ಅತಿಥಿಗಳಿಗೆ ಬಿರಿಯಾನಿ ಊಟ ನೀಡಲಾಗಿತ್ತು. ಬಂದ ನೆಂಟರು ತೆರಳಿದ ಮೇಲೆ ಈ ಕುಟುಂಬ ಮಧ್ಯರಾತ್ರಿ 1 ಗಂಟೆ ವೇಳೆಗೆ ಕಲ್ಲಂಗಡಿ ಹಣ್ಣು ಸೇವಿಸಿ ಮಲಗಿತ್ತು.

ಬಿರಿಯಾನಿ ತಿಂದ ಬಳಿಕ ಕಲ್ಲಂಗಡಿ ಸೇವನೆ

ಕಲ್ಲಂಗಡಿ ತಿಂದ ಕೆಲವೇ ಗಂಟೆಗಳಲ್ಲಿ ನಾಲ್ವರಿಗೆ ವಾಂತಿ, ಜುರುಗು, ದೌರ್ಬಲ್ಯ ಸೇರಿದಂತೆ ತೀವ್ರ ಅಸ್ವಸ್ಥತೆ ಕಾಣಿಸಿಕೊಂಡಿತು. ಪರಿಸ್ಥಿತಿ ಹದಗೆಟ್ಟ ಹಿನ್ನೆಲೆಯಲ್ಲಿ ಅವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದರು. 10ರಿಂದ 12 ಗಂಟೆಯೊಳಗೆ ಎಲ್ಲರೂ ಮೃತಪಟ್ಟಿದ್ದಾರೆ. ಈ ಘಟನೆಯಲ್ಲಿ ಬಿರಿಯಾನಿ ಸೇವಿಸಿದ್ದ ಇತರ ಅತಿಥಿಗಳಿಗೆ ಯಾವುದೇ ತೊಂದರೆ ಕಾಣಿಸದಿರುವುದು ಗಮನಾರ್ಹ. ಇದರಿಂದ ಕಲ್ಲಂಗಡಿಯೇ ಫುಡ್ ಪಾಯಿಸನ್‌ಗೆ ಕಾರಣವಾಗಿರಬಹುದು ಎಂಬ ಅನುಮಾನ ಗಟ್ಟಿಯಾಗುತ್ತಿದೆ. ಪೊಲೀಸರು ಮನೆದಿಂದ ಉಳಿದಿದ್ದ ಕಲ್ಲಂಗಡಿ ತುಂಡುಗಳನ್ನು ವಶಕ್ಕೆ ಪಡೆದು ಪ್ರಯೋಗಾಲಯ ಪರೀಕ್ಷೆಗೆ ಕಳುಹಿಸಿದ್ದಾರೆ. ಮೃತದೇಹಗಳ ಮರಣೋತ್ತರ ಪರೀಕ್ಷೆಯ ವರದಿ ಹಾಗೂ ಆಹಾರ ಮಾದರಿಗಳ ವಿಶ್ಲೇಷಣೆಯ ನಂತರವೇ ನಿಖರ ಕಾರಣ ಸ್ಪಷ್ಟವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲಡಾಖ್‌ನಲ್ಲಿ 5 ಹೊಸ ಜಿಲ್ಲೆಗಳ ರಚನೆಗೆ ಅಸ್ತು

ಶ್ರೀನಗರ: ಲಡಾಖ್ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಅವರು ಕೇಂದ್ರಾಡಳಿತ ಪ್ರದೇಶದಲ್ಲಿ ಐದು ಹೊಸ ಜಿಲ್ಲೆಗಳ ರಚನೆಗೆ ಸೋಮವಾರ ಅನುಮೋದನೆ ನೀಡಿದ್ದಾರೆ. ಈ ಪ್ರದೇಶದ ಜನರ ಆಕಾಂಕ್ಷೆಗಳು ಮತ್ತು ದೀರ್ಘಕಾಲದ ಬೇಡಿಕೆಯನ್ನು ಪೂರೈಸಿದ್ದಾರೆ. ಈ ನಿರ್ಧಾರವನ್ನು ಲಡಾಖ್‌ಗೆ ಐತಿಹಾಸಿಕ ದಿನ ಎಂದು ಸಕ್ಸೇನಾ ಕರೆದಿದ್ದಾರೆ.

ಲಡಾಖ್‌ನಲ್ಲಿ ಐದು ಹೊಸ ಜಿಲ್ಲೆಗಳ ರಚನೆಯ ಅಧಿಸೂಚನೆಗೆ ಅನುಮೋದನೆ ನೀಡಿದ್ದೇನೆ. ಇದು ಲಡಾಖ್‌ನ ಜನರ ಆಕಾಂಕ್ಷೆಗಳು ಮತ್ತು ದೀರ್ಘಕಾಲದ ಬೇಡಿಕೆಯನ್ನು ಪೂರೈಸುತ್ತದೆ ಎಂದು ಲೆಫ್ಟಿನೆಂಟ್ ಗವರ್ನರ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ನುಬ್ರಾ, ಶಾಮ್, ಚಾಂಗ್ಥಾಂಗ್, ಜನ್ಸ್ಕರ್ ಮತ್ತು ದ್ರಾಸ್ ಎಂಬ ಐದು ಹೊಸ ಜಿಲ್ಲೆಗಳ ಅನುಮೋದನೆಯೊಂದಿಗೆ ಲಡಾಖ್ ಈಗ ಏಳು ಜಿಲ್ಲೆಗಳನ್ನು ಹೊಂದಿದೆ.

ಕಮಲ ಸರ್ಕಾರ ಪ್ರಮಾಣ ಸಮಾರಂಭಕ್ಕೆ ಮತ್ತೆ ಬರುವೆ: ಪ್ರಧಾನಿ ಮೋದಿ ವಿಶ್ವಾಸ

ಪ.ಬಂಗಾಳದಲ್ಲಿ ಬಿಜೆಪಿಗೆ ಅಧಿಕಾರ ಖಚಿತ

ಕೋಲ್ಕತ್ತಾ: ವಿಧಾನಸಭಾ ಚುನಾವಣೆಗಳ ನಂತರ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರ್ಕಾರ ರಚಿಸುವ ವಿಶ್ವಾಸ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ, ಮೇ 4ಕ್ಕೆ ಫಲಿತಾಂಶ ಘೋಷಣೆಯಾದ ಬೆನ್ನಲ್ಲೇ ಬಿಜೆಪಿ ಸರ್ಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಳ್ಳಲು ರಾಜ್ಯಕ್ಕೆ ಮತ್ತೆ ನಾನು ಭೇಟಿ ಕೊಡುತ್ತೇನೆ. ಪಶ್ಚಿಮ ಬಂಗಾಳದ ಜನರ ಮೂಡ್ ಕಾಣುವಾಗ ರಾಜ್ಯದಲ್ಲಿ ಈ ಬಾರಿ ಬಿಜೆಪಿ ಅಧಿಕಾರಸೂತ್ರ ಹಿಡಿಯುವುದು ಅತ್ಯಂತ ಖಚಿತವೆನಿಸಿದೆ ಎಂದರು.

ಆಳುವ ಟಿಎಂಸಿಯು ಸಿಂಡಿಕೇಟ್ ರಾಜ್, ರಾಜಕೀಯ ಹಿಂಸಾಕಾಂಡ ಮತ್ತು ಆರ್ಥಿಕ ಕುಸಿತದಂತಹ ದುಸ್ಥಿತಿಯಲ್ಲಿ ಮುಳುಗಿದೆ ಎಂದು ಪ್ರಧಾನಿ ಮೋದಿ ಟಿಎಂಸಿ ಸರಕಾರವನ್ನು ತರಾಟೆಗೆತ್ತಿಕೊಂಡರು.

ವಿಧಾನಸಭಾ ಚುನಾವಣೆಯ ಎರಡನೇ ಹಂತದ ಮತದಾನಕ್ಕೆ ಪ್ರಚಾರಾಂತ್ಯ ದಿನವಾದ ಸೋಮವಾರ, ಉತ್ತರ 24 ಪರಗಣ ಜಿಲ್ಲೆಯ ಬರಾಕ್‌ಪೋರ್‌ನಲ್ಲಿ ಚುನಾವಣಾ ರ್‍ಯಾಲಿ ಉದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿದರು.

1857ರಲ್ಲಿ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ಬರಾಕ್‌ಪೋರ್, ಇಂದೀಗ ಪ.ಬಂಗಾಳದಲ್ಲಿ ರಾಜಕೀಯ ಬದಲಾವಣೆಯನ್ನು ಸೃಜಿಸಲು ಅಣಿಯಾಗುತ್ತಿದೆ. ರಾಷ್ಟ್ರದ ಭವ್ಯ ಭವಿಷ್ಯಕ್ಕಾಗಿ ಪೂರ್ವ ವಲಯದ ಉನ್ನತಿ ಅತ್ಯಂತ ನಿರ್ಣಾಯಕ. ಭಾರತದ ಸರ್ವತೋಮುಖ ಅಭಿವೃದ್ಧಿಗಾಗಿ ಪ.ಬಂಗಾಳದ ಪ್ರಗತಿ ಅನಿವಾರ್ಯ. ಪ.ಬಂಗಾಳದ ಜನರ ಸೇವೆ ಮಾಡುವುದು, ಜನರ ಭದ್ರತೆ ಮತ್ತು ಸುರಕ್ಷೆ ನನ್ನ ಕರ್ತವ್ಯ ಮತ್ತು ಹೊಣೆಗಾರಿಕೆಯಾಗಿದೆ. ಒಡಿಶಾ, ಬಿಹಾರದ ನಂತರದಲ್ಲೀಗ ಕಮಲವು ಪ.ಬಂಗಾಳದಲ್ಲೂ ಅರಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಸಿಕ್ಕಿಂನ 50ನೇ ರಾಜ್ಯೋತ್ಸವದಲ್ಲಿ ಭಾಗವಹಿಸಲು ಗ್ಯಾಂಗ್ಟಾಕ್‌ಗೆ ಆಗಮಿಸಿದ ಪ್ರಧಾನಿ ಮೋದಿಯವರು ಬೃಹತ್ ರೋಡ್ ಶೋ ನಡೆಸಿದರು.

ಜನರಿಗೆ ಮೋಸ ಮಾಡಿದೆ ಟಿಎಂಸಿ

ಮಾ, ಮಾಟಿ ಮತ್ತು ಮಾನುಷ್ ಘೋಷಣೆ ಮುಂದಿಟ್ಟು ಅಧಿಕಾರಕ್ಕೆ ಬಂದಿರುವ ಟಿಎಂಸಿ ಜನರಿಗೆ ಮೋಸ ಮಾಡಿದೆ. ರಾಜ್ಯದ ಅಭಿವೃದ್ಧಿಯ ದೃಷ್ಟಿಕೋನ ಟಿಎಂಸಿ ಸರಕಾರಕ್ಕಿಲ್ಲ. ಪ.ಬಂಗಾಳದಲ್ಲಿ ಉದ್ದಿಮೆಗಳು ಮುಚ್ಚುಗಡೆಯಾಗ್ತಿವೆ, ಕ್ರಿಮಿನಲ್ ಜಾಲಗಳು ಸಖತ್ ವಿಜೃಂಭಿಸುತ್ತಿವೆ. ಒಂದೆಡೆ ಗಿರಣಿಗಳು ಮುಚ್ಚುಗಡೆಯಾಗ್ತಿದ್ದರೆ ಮಗದೊಂದೆಡೆ ಕಚ್ಚಾ ಬಾಂಬ್ ತಯಾರಿ ಕಾರ್ಖಾನೆಗಳು ರಾಜಾರೋಷ ತಲೆ ಎತ್ತುತ್ತಿವೆ. ಗೂಂಡಾಗಳ ಬಳಕೆ ಜತೆ ಟಿಎಂಸಿ ಸಿಂಡಿಕೇಟ್ ವಿಸ್ತಾರವಾಗುತ್ತಿದೆ ಎಂದು ಪ್ರಧಾನಿ ಮೋದಿ ಆತಂಕ ವ್ಯಕ್ತಪಡಿಸಿದರು.

ಸುಪ್ರೀಂ ಕೋರ್ಟ್‌ನಿಂದ ಅರ್ಜಿದಾರರಿಗೆ ತೀಕ್ಷ್ಣ ಪ್ರಶ್ನೆ

ಸಮ್ಮತಿಯ ಸಂಬಂಧ ಅಪರಾಧ ಹೇಗೆ?

ಹೊಸದಿಲ್ಲಿ: ಪರಸ್ಪರ ಸಮ್ಮತಿಯ ಆಧಾರದ ಮೇಲೆ ನಡೆದ ಸಂಬಂಧದಲ್ಲಿ ಅಪರಾಧದ ಪ್ರಶ್ನೆ ಎಲ್ಲಿ ಉದ್ಭವಿಸುತ್ತದೆ ಎಂದು ಸುಪ್ರೀಂಕೋರ್ಟ್ ಸೋಮವಾರ ತೀಕ್ಷ್ಣವಾಗಿ ಪ್ರಶ್ನಿಸಿದೆ.

ಮದುವೆಯ ಭರವಸೆ ನೀಡಿ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬ ಆರೋಪದ ಮೇಲೆ ದಾಖಲಾಗಿದ್ದ ಪ್ರಕರಣವನ್ನು ಮಧ್ಯಪ್ರದೇಶ ಹೈಕೋರ್ಟ್ ರದ್ದುಗೊಳಿಸಿದ್ದನ್ನು ಪ್ರಶ್ನಿಸಿ ಮಹಿಳೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಈ ಅಭಿಪ್ರಾಯ ವ್ಯಕ್ತವಾಗಿದೆ. ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಉಜ್ವಲ್ ಭುಯಾನ್ ಅವರ ಪೀಠ, ಮಹಿಳೆ ಮತ್ತು ಆರೋಪಿಯು 15 ವರ್ಷಗಳ ಕಾಲ ಒಂದೇ ಮನೆಯಲ್ಲಿದ್ದು ಸಹವಾಸ ನಡೆಸಿದ್ದು, ಅವರಿಗೆ ಮಗುವೂ ಇದೆ ಎಂಬುದನ್ನು ಗಮನಕ್ಕೆ ತಂದಿತು.

15 ವರ್ಷಗಳ ಸಹವಾಸ, ಮಗು ಇದ್ದರೂ ದೌರ್ಜನ್ಯ ಆರೋಪ

ಸಮ್ಮತಿಯ ಸಂಬಂಧವಿದ್ದಾಗ ಅಪರಾಧದ ಪ್ರಶ್ನೆ ಎಲ್ಲಿ ಉದ್ಭವವಾಗುತ್ತದೆ? ಇಷ್ಟು ವರ್ಷ ಒಟ್ಟಿಗೆ ಬದುಕಿ, ಮಗುವೂ ಹೊಂದಿದ ನಂತರ ಮದುವೆಯಾಗಿಲ್ಲ ಎಂಬ ಕಾರಣಕ್ಕೆ ದೌರ್ಜನ್ಯ ಎಂದು ಹೇಳುವುದು ಹೇಗೆ? ಎಂದು ನ್ಯಾ. ನಾಗರತ್ನ ಪ್ರಶ್ನಿಸಿದರು.

ಮಹಿಳೆಯ ಪರ ವಕೀಲರು, ಆರೋಪಿಯು ಮದುವೆಯಾಗುವುದಾಗಿ ಹೇಳಿ ಮಹಿಳೆಯನ್ನು ಲೈಂಗಿಕವಾಗಿ ದುರುಪಯೋಗ ಮಾಡಿಕೊಂಡಿದ್ದಾನೆ ಎಂದು ವಾದಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಲಯ, ಮದುವೆಗೆ ಮುನ್ನವೇ ಏಕೆ ಜೊತೆಯಾಗಿ ವಾಸಿಸಲು ಮುಂದಾದರು? ಎಂದು ಪ್ರಶ್ನಿಸಿತು.

ಇದೇ ವೇಳೆ, ಆರೋಪಿ ಈಗಾಗಲೇ ವಿವಾಹಿತನಾಗಿದ್ದು, ಆ ವಿಚಾರವನ್ನು ಮರೆಮಾಚಿದ್ದಾನೆ ಎಂಬ ವಾದವೂ ನ್ಯಾಯಾಲಯದ ಗಮನಕ್ಕೆ ತಂದಿತು. ಇದಕ್ಕೆ ನ್ಯಾಯಾಲಯ, ಮದುವೆಯಾಗಿದ್ದರೆ ಮಹಿಳೆಗೆ ಕಾನೂನುಬದ್ಧ ಹಕ್ಕುಗಳು ಸ್ಪಷ್ಟವಾಗುತ್ತವೆ. ಹಾಗೇ ದ್ವಿವಿವಾಹ ಅಥವಾ ಪಾಲನಾ ಪರಿಹಾರಕ್ಕಾಗಿ ಕ್ರಮ ಕೈಗೊಳ್ಳಬಹುದಾಗಿತ್ತು. ಆದರೆ ಮದುವೆಯಿಲ್ಲದ ಸಹವಾಸ ಸಂಬಂಧದಲ್ಲಿ ಈ ರೀತಿಯ ಅಪಾಯಗಳು ಸಹಜ, ಎಂದು ಅಭಿಪ್ರಾಯಪಟ್ಟಿತು. ಅವನು ಶಿಕ್ಷೆಗೆ ಒಳಗಾದರೂ ಮಹಿಳೆಗೆ ಏನು ಲಾಭ? ಮಗುವಿನ ಪಾಲನೆಗಾಗಿ ಆರ್ಥಿಕ ನೆರವು ಒದಗಿಸುವ ಬಗ್ಗೆ ಯೋಚಿಸಬಹುದು, ಎಂದು ನ್ಯಾ.ನಾಗರತ್ನ ಹೇಳಿದರು. ಏಳು ವರ್ಷದ ಮಗುವಿನ ಹಿತದೃಷ್ಟಿಯಿಂದ ಪರಿಹಾರ ನೀಡುವ ಸಾಧ್ಯತೆಯನ್ನು ಪರಿಗಣಿಸಲು ಸೂಚಿಸಿದರು.

ಈ ಹಿನ್ನೆಲೆಯಲ್ಲಿ, ನೋಟಿಸ್ ಜಾರಿಗೊಳಿಸಿದ ಸುಪ್ರೀಂ ಕೋರ್ಟ್, ಮಹಿಳೆ ಮತ್ತು ಆರೋಪಿಯ ನಡುವೆ ಸಂಧಾನದ ಮೂಲಕ ಪರಿಹಾರ ಕಂಡುಕೊಳ್ಳುವ ಸಾಧ್ಯತೆಯನ್ನು ಪರಿಶೀಲಿಸಲು ಸೂಚಿಸಿದೆ.

ಕಿರುಸುದ್ದಿ

ಬಸ್ ನಿರ್ವಾಹಕನ ಮಗಳ ಸಾಧನೆ



ಬಸವನಬಾಗೇವಾಡಿ: ಸ್ಥಳೀಯ ಬಸ್ (ಡಿಪೋ) ಘಟಕದ ನಿರ್ವಾಹಕ ವಾಗು ಚವ್ಹಾಣ ಅವರ ಸುಪುತ್ರಿ ನಾಲತವಾಡದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕುಮಾರಿ ವರ್ಷಾ ವಾಗು ಚವ್ಹಾಣ ವಿದ್ಯಾರ್ಥಿನಿ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ 625ಕ್ಕೆ 575 (ಶೇ.92ರಷ್ಟು) ಅಂಕಗಳನ್ನು ಪಡೆದು ಉತ್ತಮ ಸಾಧನೆ ಮಾಡಿದ್ದಾಳೆ. ಬಸ್ ನಿರ್ವಾಹಕ ವಾಗು ಅವರ ಮಗಳ ಸಾಧನೆಗೆ ಕುಟುಂಬಸ್ಥರು ಹಾಗೂ ಸ್ನೇಹಿತರು ಹರ್ಷವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.

ಮಡಿಕೇರಿ ತಾಲೂಕಿನ ಚೇರಂಬಾಣೆ ಗ್ರಾಮದಲ್ಲಿ ಘಟನೆ
ಗುಂಡು ಹಾರಿಸಿಕೊಂಡು ಶಿಕ್ಷಕಿ ಆತ್ಮಹತ್ಯೆ

ಮಡಿಕೇರಿ: ಶಿಕ್ಷಕಿಯೊಬ್ಬರು ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿ ಕೊಂಡಿರುವ ಘಟನೆ ಮಡಿಕೇರಿ ತಾಲೂಕಿನ ಚೇರಂಬಾಣೆ ಗ್ರಾಮದಲ್ಲಿ ನಡೆದಿದೆ. ಚೇರಂಬಾಣೆ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕಿ ಅಂಜಪಂಡ ಯು. ರೋಹಿಣಿ (51) ಆತ್ಮಹತ್ಯೆ ಮಾಡಿಕೊಂಡ ಶಿಕ್ಷಕಿ. ಸರಕಾರದ ಜನಗಣತಿ ಕಾರ್ಯದ ಒತ್ತಡ ಇವರ ಸಾವಿಗೆ ಕಾರಣವೇ ಎಂಬ ಶಂಕೆ ವ್ಯಕ್ತವಾಗಿದೆ.

ರೋಹಿಣಿ ಅವರು ಕಳೆದ 25 ವರ್ಷಗಳಿಂದ ತಮ್ಮ ವೃತ್ತಿ ಜೀವನದಲ್ಲಿ ಸಾವಿರಾರು ಮಕ್ಕಳಿಗೆ ದಾರಿದೀಪವಾಗಿದ್ದರು. ಅಲ್ಲದೆ ಎಲ್ಲರ ಅಚ್ಚುಮೆಚ್ಚಿನ ಶಿಕ್ಷಕಿಯಾಗಿದ್ದರೆನ್ನಲಾಗಿದೆ. ಆದರೆ ಭಾನುವಾರ ತಮ್ಮ ಮನೆಯಲ್ಲೇ ಒಂಟಿ ನಳಿಗೆ ಕೋವಿಯಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿದ್ದಾರೆ. ಶನಿವಾರ ರಾತ್ರಿ 12 ಗಂಟೆಯವರೆಗೂ ಕೆಲಸ ಮಾಡಿ ಮಲಗಿದ್ದ ಅವರು ಮುಂಜಾನೆ 5 ಗಂಟೆ ವೇಳೆಗೆ ತಮ್ಮ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗುಂಡಿನ ಸಿಡಿದ ಶಬ್ದ ಕೇಳುತ್ತಿದ್ದಂತೆ ಪಕ್ಕದ ಕೊಠಡಿಯಲ್ಲಿ ಮಲಗಿದ್ದ ಅವರ ಪತಿ ಕರುಂಬಯ್ಯ ಹಾಗೂ ಮಗಳು ಎದ್ದು ಹೋಗಿ ನೋಡಿದಾಗ ರೋಹಿಣಿ ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ. ಕೂಡಲೇ ಪೊಲೀಸರಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಭಾಗಮಂಡಲ ಠಾಣೆ ಪೊಲೀಸರು ಮೃತದೇಹವನ್ನು ಕೊಡಗು ಜಿಲ್ಲಾಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ.

ಜನಗಣತಿ ಕೆಲಸ ಒತ್ತಡ ?

ಈ ಬಗ್ಗೆ ಮಾತನಾಡಿರುವ ರೋಹಿಣಿ ಅವರ ಪತಿ ಕರುಂಬಯ್ಯ ಅವರು, ಯಾವಾಗಲೂ ಟೆನ್ಷನ್ ಎಂದು ಹೇಳುತ್ತಿದ್ದರು. ಜನಗಣತಿ ಆರಂಭವಾದ ಬಳಿಕ ಎಲ್ಲಾ ಕೆಲಸ ಮುಗಿಸಿ ಮಲಗುವುದು ರಾತ್ರಿ 12 ಗಂಟೆಯಾಗುತ್ತಿತ್ತು. ಇವರಿಗೆ 250ಕ್ಕೂ ಹೆಚ್ಚು ಮನೆಗಳ ಜನಗಣತಿ ಮಾಡಲು ಕೊಟ್ಟಿದ್ದರು. ಅದು ಸಾಧ್ಯವಾಗದೇ ಮತ್ತೊಬ್ಬ ಸಹಾಯಕರನ್ನು ಕೊಡುವಂತೆ ತಹಶೀಲ್ದಾರ್‌ಗೆ ಮನವಿ ಮಾಡಿದ್ದರೂ, ಯಾವುದೇ ಸ್ಪಂದನೆ ಸಿಕ್ಕಿರಲಿಲ್ಲ. ಈ ಒತ್ತಡದಿಂದ ಅವರು ಸಾವನ್ನಪ್ಪಿರಬಹುದೆಂದು ಶಂಕಿಸಿದ್ದಾರೆ.

ಆದರೆ ಮಡಿಕೇರಿ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮೋಹನ್ ಪೆರಾಜೆ ಅವರ ಪ್ರಕಾರ, ಇಲಾಖೆ ಎಂದ ಮೇಲೆ ಒತ್ತಡಗಳು ಇರುತ್ತವೆ. ಆದರೆ ಆತ್ಮಹತ್ಯೆ ಮಾಡಿಕೊಳ್ಳುವಂತಹ ಯಾವುದೇ ಒತ್ತಡಗಳು ಇರಲಿಲ್ಲ. ರೋಹಿಣಿ ಅವರು ತುಂಬಾ ಧೈರ್ಯವಂತೆಯಾಗಿದ್ದವರು. ಎಂತಹದ್ದೇ ಕೆಲಸಗಳನ್ನು ವಹಿಸಿದ್ದರೂ ಕೆಲಸದಿಂದ ಹಿಂದೆ ಸರಿಯುತ್ತಿರಲಿಲ್ಲ. ಹೀಗಾಗಿ ಜನಗಣತಿ ಕಾರ್ಯದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂಬುದನ್ನು ನಂಬಲಾಗುತ್ತಿಲ್ಲ ಎಂದು ಹೇಳಿದ್ದಾರೆ.

ಸಾವಿರಾರು ವಿದ್ಯಾರ್ಥಿಗಳಿಗೆ ದಾರಿದೀಪವಾಗಿದ್ದ ಈ ಶಿಕ್ಷಕಿಯ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಸಿಲಿಂಡರ್ ಸ್ಫೋಟ: ಮನೆ ವಸ್ತುಗಳು ಭಸ್ಮ

ಬಳ್ಳಾರಿ: ಸಿಲಿಂಡರ್ ಸ್ಫೋಟಗೊಂಡು ಮನೆಯ ವಸ್ತುಗಳು ಸುಟ್ಟು ಕರಕಲಾದ ಘಟನೆ ಜಿಲ್ಲೆಯ ಕಂಪ್ಲಿ ಪಟ್ಟಣದಲ್ಲಿ ಭಾನುವಾರ ನಡೆದಿದೆ.

ಆದರೆ, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಕಂಪ್ಲಿ ಪಟ್ಟಣದ 4ನೇ ವಾರ್ಡ್ ವ್ಯಾಪ್ತಿಯ ಯಲ್ಲಪ್ಪ ಎನ್ನುವವರ ಮನೆಯಲ್ಲಿ ಈ ಅವಘಡ ಸಂಭವಿಸಿದ್ದು, ಸ್ಫೋಟದ ತೀವ್ರತೆಗೆ ಮನೆಯಲ್ಲಿದ್ದ ಸಾಮಾನುಗಳು ಸಂಪೂರ್ಣ ಸುಟ್ಟು ಕರಕಲಾಗಿವೆ.

ಕೂಡಲೇ ಅಗ್ನಿಶಾಮಕ ಠಾಣೆ ಅಧಿಕಾರಿಗಳು, ಸಿಬ್ಬಂದಿ, ಸ್ಥಳಕ್ಕೆ ತೆರಳಿ ಬೆಂಕಿ ನಂದಿಸಿ, ಅಪಾಯವನ್ನು ತಡೆಗಟ್ಟಿದರು. ಪ್ರಕರಣ ಕಂಪ್ಲಿ ಠಾಣೆಯಲ್ಲಿ ದಾಖಲಾಗಿದೆ.

ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಕೆಟ್ಟು ಹೋದ ಕೇಂದ್ರಗಳು | ರೈತರ ಆಕ್ರೋಶ
65 ಮಳೆ ಮಾಪನ ಕೇಂದ್ರಗಳು ಬಂದ್!

▸ ರುದ್ರಗೌಡ ಪಾಟೀಲ

ದಿಗಂತ ವಿಶೇಷ

ಗದಗ: ಯಾವ ಭಾಗದಲ್ಲಿ ಎಷ್ಟು ಮಳೆಯಾಗಿದೆ ಎಂಬ ನಿಖರ ಮಾಹಿತಿ ಲಭಿಸುವುದು ಮಳೆ ಮಾಪನ ಕೇಂದ್ರದಲ್ಲಿ ಮಾತ್ರ. ಹೀಗಾಗಿ ಸರ್ಕಾರ ರಾಜ್ಯಾದ್ಯಂತ ಮಳೆ ಮಾಪನ ಕೇಂದ್ರಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದೆ. ಆದರೆ, ಜಿಲ್ಲೆಯಲ್ಲಿ ನಿರ್ವಹಣೆ ನಿಲ್ಲದೆ ಮಳೆ ಮಾಪನ ಕೇಂದ್ರಗಳು ಸಂಪೂರ್ಣ ಹಾಳಾಗಿವೆ. ಇದರಿಂದ ಮಳೆ ಪ್ರಮಾಣ ಸರಿಯಾಗಿ ಬಾರದ ಕಾರಣ ರೈತರಿಗೆ ತೊಂದರೆಯಾಗಿದೆ.

ಜಿಲ್ಲೆಯಲ್ಲಿ ಸರ್ಕಾರ ಲಕ್ಷಾಂತರ ರೂ. ಖರ್ಚು ಮಾಡಿ 135 ಮಳೆ ಮಾಪನ ಕೇಂದ್ರಗಳನ್ನು ಗದಗ ನಗರ, ತಾಲೂಕು ಕೇಂದ್ರ, ಗ್ರಾಮ ಪಂಚಾಯತಗಳಲ್ಲಿ ಮಳೆ ಮಾಪನ ಕೇಂದ್ರ ನಿರ್ಮಿಸಿದ್ದವು. ಆದರೆ, 70 ಮಳೆ ಮಾಪನ ಕೇಂದ್ರಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಉಳಿದ 65 ಮಳೆ ಮಾಪನ ಕೇಂದ್ರಗಳು ಕೆಟ್ಟು ಹಳ್ಳ ಹಿಡಿದಿವೆ. ತುಕ್ಕು ಹಿಡಿದು ಮುಳ್ಳಿನ ಕಂಟಿ ಬೆಳೆದು ಮಳೆ ಮಾಪನ ಕೇಂದ್ರಗಳು ಸರಿಯಾದ ಮಾಹಿತಿ ನೀಡುತ್ತಿಲ್ಲ.

ಮಳೆ ಬಗ್ಗೆ ಸರಿಯಾದ ಮಾಹಿತಿ ಕೂಡ ಸಿಗುತ್ತಿಲ್ಲ, ಇದರಿಂದ ರೈತಾಪಿ ವರ್ಗಕ್ಕೆ ಬಹಳಷ್ಟು ಸಮಸ್ಯೆಯಾಗುತ್ತಿದೆ. ಮಳೆ ಆಧಾರ ಮೇಲೆ ಬೆಳೆ ಹಾನಿ, ಬರಗಾಲ ಘೋಷಣೆ ಮಾಡುತ್ತಾರೆ. ಆದರೆ, ಇಲ್ಲಿ ಮಳೆ ಪ್ರಮಾಣದ ಮಾಹಿತಿ ನೀಡು ಯಂತ್ರಗಳು ಕೆಟ್ಟು ಹಳ್ಳ ಹಿಡಿದಿವೆ. ಹೀಗಾಗಿ ಸರ್ಕಾರ ಹಾಗೂ ಅಧಿಕಾರಿಗಳ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಳೆ ಮಾಪನ ದುರಸ್ತಿ ಯಾವಾಗ?: ಜಿಲ್ಲಾಡಳಿತದ ಸರ್ವೇ ಪ್ರಕಾರ 70 ಮಳೆ ಮಾಪನ ಕೇಂದ್ರಗಳು ಮಾತ್ರ ಕಾರ್ಯ ನಿರ್ವಹಿಸುತ್ತಿವೆ. ಕೆಟ್ಟು ಹಾಳಾಗಿರುವ ಮಳೆ ಮಾಪನ ಯಂತ್ರಗಳನ್ನು ದುರಸ್ತಿ ಮಾಡಿಸಲು ಟೆಂಡರ್ ಸಹ ಕರೆಯಲಾಗಿದೆ. ಸರ್ಕಾರದ ರಾಜ್ಯಾದ್ಯಂತ ಮಳೆ ಮಾಪನ ಕೇಂದ್ರಗಳ ದುರಸ್ತಿಗೆ ಟೆಂಡರ್ ಕರೆದಿದೆ. ಎಲ್ಲಾ ಪ್ರಕ್ರಿಯೆ ಮುಗಿದಿದ್ದರೂ, ದುರಸ್ತಿ ಮಾತ್ರ ಆಗುತ್ತಿಲ್ಲ. ಹೀಗಾಗಿ ಬರಗಾಲ, ಮಳೆಯ ಪ್ರಮಾಣ ಸರ್ಕಾರಕ್ಕೆ ನೈಜ ವರದಿ ಮಾತ್ರ ಸಿಗುತ್ತಿಲ್ಲ.



ದುರಸ್ತಿಯಾಗದ ಮಾಪನಗಳು ಮಳೆ ಪ್ರಮಾಣವನ್ನು ಅರಿತುಕೊಳ್ಳುವ ಉದ್ದೇಶದಿಂದ ಪ್ರತಿ ಪಂಚಾಯತಿಗೆ ಮಳೆ ಮಾಪನ ಯಂತ್ರವನ್ನು ನೀಡಲಾಗಿದೆ. ಆದರೆ, ಅದು ಬಳಕೆಯಾಗದೆ ತುಕ್ಕು ಹಿಡಿದಿವೆ. ಅವುಗಳ ದುರಸ್ತಿಯಾಗದ ಕಾರಣ ಈಗ ಧೂಳು ತಿನ್ನುತ್ತಿವೆ. ಕೂಡಲೇ ದುರಸ್ತಿ ಮಾಡಿ ಮಳೆ ಪ್ರಮಾಣ ದಾಖಲಿಸಬೇಕು ಎಂದು ರೈತರು ಆಗ್ರಹಿಸಿದ್ದಾರೆ.

ಮಳೆ ಮಾಪನ ಕೇಂದ್ರಗಳು

ತಾಲೂಕು	ಸುಸ್ಥಿತಿಯಲ್ಲಿರುವುದು	ಸ್ಥಗಿತ	ಒಟ್ಟು
ಗದಗ	17	14	31
ರೋಣ	9	16	25
ಲಕ್ಷ್ಮೇಶ್ವರ	9	6	15
ಶಿರಹಟ್ಟಿ	7	8	15
ಮುಂಡರಗಿ	9	11	20
ನರಗುಂದ	9	5	14
ಗಜೇಂದ್ರಗಡ	9	5	14

ಈ ಹಿಂದೆ ಗ್ರಾಮ ಪಂಚಾಯತ್ ಮೂಲಕ ನಿರ್ವಹಣೆ ಮಾಡಲಾಗುತ್ತಿತ್ತು. ಜಿಲ್ಲಾಡಳಿತದಿಂದ ಮೂಲಕ ಸರ್ವೆ ಮಾಡಿಸಲಾಗಿದೆ. ಆದಷ್ಟು ಬೇಗನೆ ವಿವಿಧ ಕಂಪನಿಗಳ ಮೂಲಕ ರಿಪೇರಿ ಮಾಡುವ ಕೆಲಸವನ್ನು ಮಾಡಲಾಗುತ್ತಿದೆ. ರಾಜ್ಯದ್ಯಂತ ಮಳೆ ಮಾಪನ ಕೇಂದ್ರದ ಸಮಸ್ಯೆ ಇದೆ.

■ ಶ್ರೀಶೈಲ ತಳವಾರ, ತಹಶೀಲ್ದಾರ್ ನರಗುಂದ

ಜಿಲ್ಲೆಯಲ್ಲಿರುವ ಮಳೆ ಮಾಪನ ಕೇಂದ್ರಗಳು ಸಾಕಷ್ಟು ಪ್ರಮಾಣದಲ್ಲಿ ಬಂದ್ ಆಗಿವೆ. ಇದರಿಂದ ನಿಖರವಾದ ಮಾಹಿತಿ ಅಧಿಕಾರಿಗಳಿಗೆ ಸಿಗುತ್ತಿಲ್ಲ, ರೈತರಿಗೆ ಬೆಳೆ ಪರಿಹಾರ ಪಡೆಯುವಲ್ಲಿ ಹಿನ್ನಡೆಯಾಗಿದೆ. ಕೂಡಲೇ ಜಿಲ್ಲಾಡಳಿತ ಜಿಲ್ಲೆಯಲ್ಲಿರುವ ಮಳೆ ಮಾಪನ ಕೇಂದ್ರವನ್ನು ದುರಸ್ತಿ ಮಾಡಿಸಬೇಕು.

■ ನಾಗೇಶ್ ಅಪ್ಪೋಜಿ, ರೈತ


ಮಹನೀಯರ ತತ್ವ ಸಿದ್ಧಾಂತ ಪಾಲಿಸಿ: ವಿಶ್ವನಾಥ ಕಪ್ಪತ್ತನವರ

ಶಿರಹಟ್ಟಿ: ಪ್ರತಿಯೊಬ್ಬರಲ್ಲಿ ದೇಶ ಪ್ರೇಮ ಬೆಳೆಸಿ, ಸಂಸ್ಕೃತಿ ವೈಭವವನ್ನು ಉತ್ತುಂಗಕ್ಕೆ ಏರಿಸಿದ ಮತ್ತು ಜಾತಿ ಅಸಮಾನತೆ ತೊಲಗಿಸಿ ಸಮ ಸಮಾಜ ಕಟ್ಟಲು ಶ್ರಮಿಸಿದ ಶ್ರೀಮಂತ ಮಹನೀಯರ ತತ್ವ ಸಿದ್ಧಾಂತ ಎಲ್ಲರು ಪಾಲಿಸಬೇಕು ಎಂದು ಜಿಪಂ ಮಾಜಿ ಅಧ್ಯಕ್ಷ ವಿಶ್ವನಾಥ ಕಪ್ಪತ್ತನವರ ಹೇಳಿದರು.

ಸ್ಥಳೀಯ ಬಸವೇಶ್ವರ ವೃತ್ತದಲ್ಲಿ ಸೋಮವಾರ ಬಸವಣ್ಣನವರ ಹಾಗೂ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವ ಸಮಿತಿ ವತಿಯಿಂದ ಮಹನೀಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿ, ಬಸವಣ್ಣನವರು ತಮ್ಮ ಜೀವನವನ್ನು ಸಮಾಜ ಸೇವೆಗಾಗಿ ಮೀಸಲಿಟ್ಟವರು. ಅಲ್ಲದೆ ವೈಚಾರಿಕ ಜ್ಞಾನ ಹಾಗೂ ವಿಚಾರ ಧಾರೆಗಳ ಮೂಲಕ ಭಾರತ ವಿಶ್ವಗುರು ಮಾಡಲು ಸಾಕಷ್ಟು ಶ್ರಮಿಸಿದ್ದರು. ಸಮಾಜದಲ್ಲಿ ನಡೆಯುತ್ತಿರುವ ಕಂದಾಚಾರ, ಮೂಢನಂಬಿಕೆ, ಕೀಳು ಜಾತಿ ವ್ಯವಸ್ಥೆ ವಿರುದ್ಧ ಹೋರಾಟ ಮಾಡಿ, ಬಡವರಿಗೆ ನ್ಯಾಯ ಕಲ್ಪಿಸಿದ್ದಾರೆ. ಅಲ್ಲದೆ ಕಲ್ಯಾಣದ ಅನುಭವ ಮಂಟಪ ಮೂಲಕ ಪ್ರಜಾತಂತ್ರ ವ್ಯವಸ್ಥೆ ರೂಪಿಸಿರುವುದು ನಮಗೆಲ್ಲ ಇಂದಿನ ಪ್ರಜಾಪ್ರಭುತ್ವಕ್ಕೆ ಮಾದರಿಯಾಗಿದೆ ಎಂದರು.

ಸಮಿತಿ ಅಧ್ಯಕ್ಷ ಬಸವರಾಜ ತುಳಿ ಮಾತನಾಡಿ. ಛತ್ರಪತಿ ಶಿವಾಜಿ ಹಿಂದೂ ಧರ್ಮ ಸಂರಕ್ಷಣೆಗಾಗಿ ಮೊಘಲರ ವಿರುದ್ಧ ಹೋರಾಡಿ ಜಯಶೀಲರಾಗುವ ಮೂಲಕ ಭಾರತೀಯ ಕಲೆ, ಸಂಸ್ಕೃತಿ, ಸಾಹಿತ್ಯ ಪರಂಪರೆ ಉಳಿಸಿದರು. ಪ್ರತಿಯೊಬ್ಬರಲ್ಲಿ ದೇಶ ಪ್ರೇಮ ಬೆಳೆಸಿದರು ಎಂದರು.

ಈ ವೇಳೆ ಚಂದ್ರಕಾಂತ ನೂರಶೆಟ್ಟರ, ಹುಮಾಯೂನ್ ಮಾಗಡಿ, ಎಚ್.ಎಮ್.ದೇವಗಿರಿ, ಎನ್.ಆರ್. ಕುಲಕರ್ಣಿ, ಪರಮೇಶ ಪರಬ, ನಾಗರಾಜ ಲಕ್ಕುಂಡಿ, ಬಸವರಾಜ ಹಲಸೂರು, ಎಂ.ಕೆ. ಲಮಾಣಿ, ಗೀತಾ ಹಲಸೂರು, ಮಂಗಳಾ ಹಲಸೂರು, ರೇಣುಕಾ ಲಕ್ಕುಂಡಿ, ಸುಧಾ ಹುಚ್ಚಣ್ಣನವರ, ಗೂಳಪ್ಪ ಕರಿಗಾರ, ರಾಮಣ್ಣ ಕಂಬಳಿ, ಅಕ್ಬರ ಯಾದಗಿರಿ, ವಿಠ್ಠಲ ಬಿಡವೆ, ಶಿವನಗೌಡ ಪಾಟೀಲ, ಬಸವರಾಜ ಹೊಸೂರ ಇತರರು ಇದ್ದರು.





ಧಾರವಾಡ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಕಳೆದ 2025-26ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಿದ ಕ್ಷಣ.

ಚರ್ಮರೋಗ ತಡೆಯಲು ಸ್ವಚ್ಛತೆ ಮುಖ್ಯ



ಗದಗ: ಚರ್ಮರೋಗ, ಸಕ್ಕರೆ ಕಾಯಿಲೆ ಮತ್ತು ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಕುರಿತು ತಿಳುವಳಿಕೆ ಬಹಳ ಅಗತ್ಯವಾಗಿದೆ. ಇವುಗಳೆಲ್ಲವೂ ಇಂದಿನ ಸಮಾಜದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಆರೋಗ್ಯ ಸಮಸ್ಯೆಗಳಾಗಿವೆ. ಜನರಲ್ಲಿ ಅರಿವು ಕೊರತೆಯಿಂದಾಗಿ ಈ ಕಾಯಿಲೆಗಳು ಗಂಭೀರ ರೂಪ ಪಡೆದುಕೊಳ್ಳುತ್ತಿವೆ ಎಂದು ಚರ್ಮರೋಗ ತಜ್ಞೆ ಡಾ.ರಚನಾ ದಾಡಿಬಾವಿ ಹೇಳಿದರು.

ನಗರದ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯಲ್ಲಿ ಏರ್ಪಡಿಸಿದ್ದ ಆರೋಗ್ಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿ, ಚರ್ಮರೋಗಗಳು ಅಂದರೆ ಬ್ಯಾಕ್ಟೀರಿಯಾ, ವೈರಸ್‌ಗಳಿಂದ ಉಂಟಾಗುವ ರೋಗಗಳು. ಇವು ಸಾಮಾನ್ಯವಾಗಿ ಸ್ವಚ್ಛತೆ ಕೊರತೆಯಿಂದ ಹರಡುತ್ತವೆ. ಕೈತೊಳೆಯದಿರುವುದು ಅಶುದ್ಧ ನೀರು ಕುಡಿಯವುದು, ಅಸ್ವಚ್ಛ ಆಹಾರ ಸೇವನೆ ಇವು ಪ್ರಮುಖ ಕಾರಣಗಳಾಗಿವೆ. ಚರ್ಮರೋಗಗಳನ್ನು ತಡೆಯಲು ಸ್ವಚ್ಛತೆ ಮುಖ್ಯ. ದಿನನಿತ್ಯ ಸ್ನಾನ ಮಾಡುವುದು, ಕೈಗಳನ್ನು ಸಾಬೂನ್‌ನಿಂದ ತೊಳೆಯುವುದು, ಶುದ್ಧವಾದ ಆಹಾರ ಸೇವಿಸುವುದು ಅಗತ್ಯವಿದೆ. ಸಾರ್ವಜನಿಕ ಸ್ಥಳಗಳಲ್ಲಿ ಶೌಚತೆ ಕಾಪಾಡುವುದು ಬಹಳ ಮುಖ್ಯವಾಗಿದೆ ಎಂದರು. ವೈದ್ಯಕೀಯ ವಿಜ್ಞಾನ ಸಂಸ್ಥೆಯ ಜನರಲ್ ಮೆಡಿಸಿನ್ ಸಹ ಪ್ರಾಧ್ಯಾಪಕಿ ಸ್ನೇಹಾ ಪಾಟೀಲ ಮಾತನಾಡಿ, ಸಕ್ಕರೆ ಕಾಯಿಲೆ ಅಥವಾ ಡಯಾಬಿಟೀಸ್ ಇಂದಿನ ಕಾಲದಲ್ಲಿ ಸಾಮಾನ್ಯವಾಗಿ ಕಂಡು ಬರುವ ದೀರ್ಘಕಾಲಿಕ ರೋಗ. ದೇಹದಲ್ಲಿ ಇನ್ಸುಲಿನ್ ಪ್ರಮಾಣ ಕಡಿಮೆಯಾಗುವುದು ಅಥವಾ ಸರಿಯಾಗಿ ಕೆಲಸ ಮಾಡದಿರುವುದು ಇದರ ಮುಖ್ಯ ಕಾರಣವಾಗಿದೆ. ಹೆಚ್ಚು ದಾಹ, ಹೆಚ್ಚು ಮೂತ್ರವಿಸರ್ಜನೆ, ತೂಕಇಳಿಕೆಯಾಗುವುದು, ದಣಿವು ಇತ್ಯಾದಿಗಳು ಸಕ್ಕರೆ ಕಾಯಿಲೆಯ ಲಕ್ಷಣಗಳಾಗಿವೆ. ಈ ಲಕ್ಷಣ ಕಂಡುಬಂದಲಿ ವೈದ್ಯರನ್ನು ಸಂಪರ್ಕಿಸುವುದು ಉತ್ತಮ ಎಂದರು. ವಾಣಿಜ್ಯೋದ್ಯಮ ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ರಾಮನಗೌಡ ದಾನಪ್ಪಗೌಡ್ರ ಮಾತನಾಡಿದರು. ನಂದಾ ಚಂದ್ರು ಬಾಳಿಹಳ್ಳಿಮಠ, ಪೂರ್ಣಿಮಾ ಆಟದ, ರೇಣುಕಾ ಲಿಂಗರಾಜ ಅಮಾತ್ಯ ಇತರರು ಇದ್ದರು.

ವಿವಿಧ ಬೇಡಿಕೆ ಈಡೇರಿಸುವಂತೆ ಕೇಂದ್ರಕ್ಕೆ ಮನವಿ



ನವಲಗುಂದ : ರಾಷ್ಟ್ರದ ಕೃಷಿ ಪರಿಕರಗಳ ಮಾರಾಟಗಾರರ ಸಂಘವು ಸೋಮವಾರದಂದು ಕರೆದಿರುವ ರಾಷ್ಟ್ರವ್ಯಾಪಿ ಬಂದ್‌ಗೆ ಬೆಂಬಲ ವ್ಯಕ್ತಪಡಿಸಿ ನವಲಗುಂದ-ಅಣ್ಣಿಗೇರಿ ತಾಲೂಕ ಕೃಷಿ ಪರಿಕರ ಮಾರಾಟಗಾರರ ಸಂಘದ ಪ್ರಮುಖ ಬೇಡಿಕೆ ಈಡೇರಿಸುವಂತೆ ಶಾಸಕ ಎನ್.ಎಚ್. ಕೋನರಡ್ಡಿ, ಕೃಷಿ ಅಧಿಕಾರಿಗೆ ಮನವಿ ಸಲ್ಲಿಸಿ ತಹಶಿಲ್ದಾರ್ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪ್ರಮುಖ ಬೇಡಿಕೆಗಳಾದ ಡಿಎಪಿ ಮತ್ತು ಯುರಿಯಾ ಜೊತೆಗೆ ಒತ್ತಾಯವಾಗಿ ಉತ್ಪಾದನೆ ಲಿಂಕ್ ಮಾಡುವುದು ನಿಲ್ಲಿಸಬೇಕು, ಎಲ್ಲ ರಸಗೂಬ್ಬರ ಎಂಆರ್‌ಪಿ ಮೇಲೆ ಶೇ.8% ಡೀಲರ್ ಲಾಭಾಂಶ ಇರುವ ಹಾಗೆ ನೋಡಿಕೊಳ್ಳಬೇಕು. ರಸಗೊಬ್ಬರ ಎಫ್‌ಓಎಲ್ ಕೊಡುವುದಕ್ಕೆ ಕ್ರಮಕೈಗೊಳ್ಳಬೇಕು. ಗೊಬ್ಬರ, ಬೀಜ, ಕೀಟನಾಶಕಗಳ ಶಾಂಪಲ್ ಕಳಪೆ ಬಂದಾಗ ಕಂಪನಿ ಮೇಲೆ ಮಾತ್ರ ಕೇಸ್ ಹಾಕಿ ಡೀಲರ್ ಸಾಕ್ಷಿಯಾಗಿ ಪರಿಗಣಿಸಬೇಕು. ಡೀಲರ್‌ಗಳಿಂದ ಸ್ಯಾಂಪಲ್ ಡ್ರಾ ಮಾಡಿದಾಗ ಹಣ ಕಡ್ಡಾಯವಾಗಿ ಡೀಲರ್‌ಗಳಿಗೆ ಪಾವತಿ ಮಾಡಬೇಕು. ಅಧಿಕಾರಿಗಳು ತಪಾಸಣೆಗಾಗಿ ಅಂಗಡಿಗಳಿಗೆ ಭೇಟಿ ಕೊಟ್ಟ ನಂತರ ಮಾಧ್ಯಮಗಳಿಗೆ ಹೇಳಿಕೆ ಕೊಡುವಾಗ ದಾಳಿ ಎನ್ನುವ ಪದದ ಬದಲು ತಪಾಸಣೆ, ಅಂಗಡಿಗಳ ಮೋಟೋ ಬಳಸಬಾರದು. ಎಫ್‌ಐಡಿ ಮುಖಾಂತರ ರಸಗೊಬ್ಬರ ಮಾರಾಟ ಮಾಡುವ ಆದೇಶ ಸ್ವಾಗತಿಸುತ್ತೇವೆ. ಎಫ್‌ಐಡಿ ಮುಖಾಂತರ ಡಿಎಪಿ, ಯೂರಿಯಾ ಮಾರಾಟ ಮಾಡುವದನ್ನು ಹಿಂಗಾರು ಕಡ್ಡಾಯಗೊಳಿಸಬಾರದು. ಎಸ್ ಎಟಿಇ ಪೋರ್ಟಲ್‌ನ್ನು (ಬೀಜ ಮಾರಾಟ ಆಫ್) ಮಾರಾಟ ಸ್ನೇಹಿಯಾಗಿ ರೂಪಿಸಬೇಕು. ನಮ್ಮ ಎಲ್ಲ ಬೇಡಿಕೆ ಈಡೇರಿಸುವಂತೆ ಹಾಗೇ ಕೇಂದ್ರ ಸರ್ಕಾರಕ್ಕೆ ಕ'ಳ'ುಹಿಸಿಕ'ೂಡ'ಬೇಕ'ೆಂದ'ು ತಹಶೀಲ್ದಾರ್ ಮೂಲಕ ಮನವಿ ಸಲ್ಲಿಸಿದರು.

ಈ ವೇಳೆ ಗುರುರಾಜ ಧಾರವಾಡ, ಬಸನಗೌಡ ಕಲಾಲಬಂಡಿ, ವಿನಾಯಕ ಚಿಟ್ಟೆ, ಹರೀಶ ಮಂಗನಹಳ್ಳಿ, ಚೆನ್ನಪ್ಪ ಚಲಾವದಿ, ಸದ್ದಾಂಹುಸೇನ ಬೆಟಗೇರಿ, ಬಸವಲಿಂಗಪ್ಪ ಶೀಲವಂತರ, ಸುರೇಶ ಯಕ್ಕುಂಡಿ, ಶಶಾಂಕ ಗುಜ್ಜಳ, ಸಂತೋಷ ಶೇರೆವಾಡ ಸೇರಿದಂತೆ ಹಾಜರಿದ್ದರು.

ಕಾಂಗ್ರೆಸ್ ಮಿತ್ರ ಪಕ್ಷಗಳ ನಡೆ ಖಂಡನೀಯ: ಪವಿತ್ರಾ



ಮುಂಡರಗಿ: ಪಟ್ಟಣದಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿ ಮಸೂದೆ ವಿರೋಧಿಸಿದ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ನಡೆ ಬಿಜೆಪಿ ಮುಂಡರಗಿ ಮಂಡಲದ ಮಹಿಳಾ ಮೋರ್ಚಾ ಕಾರ್ಯಕರ್ತರು ಖಂಡಿಸಿ ಸೋಮವಾರ ಪ್ರತಿಭಟನೆ ನಡೆಸಿದರು.

ಕೋಟೆ ಭಾಗದ ಆಂಜನೇಯ ದೇವಸ್ಥಾನದಿಂದ ಹೊರಟ ಪ್ರತಿಭಟನೆ ಮೆರವಣಿಗೆ ಹೇಮರಡ್ಡಿ ಮಲ್ಲಮ್ಮ ವೃತ್ತಕ್ಕೆ ತಲುಪಿತು.

ಬಿಜೆಪಿ ಮುಂಡರಗಿ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷೆ ಪವಿತ್ರಾ ಕಲ್ಲಕುಟಗರ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ನಾರೀಶಕ್ತಿ ವಂದನಾ ಅಧಿನಿಯ ಜಾರಿಯಾಗದಂತೆ ತಡೆದ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ನಡೆ ಖಂಡನೀಯ. ಮೋದಿಜೀ ಮಹಿಳಾ ಮೀಸಲಾತಿ ಮೂಲಕ ಮಹಿಳೆಯರು ಸಹ ಸಮಾಜದ ಮುಖ್ಯವಾಹಿನಿಗೆ ಬರುವುದಕ್ಕೆ ಅವಕಾಶ ನೀಡುವುದಕ್ಕೆ ಮುಂದಾಗಿದ್ದರು. ಆದರೆ ಕಾಂಗ್ರೆಸ್ ಮಿತ್ರ ಪಕ್ಷಗಳು ವಿರೋಧಿಸಿದ್ದು ಮಹಿಳಾ ವಿರೋಧಿಯಾಗಿದೆ. ಬರುವ ದಿನದಲ್ಲಿ ಬಿಜೆಪಿ ಬಹುಮತದಿಂದ ಶೇ.33ರಷ್ಟು ಮಹಿಳಾ ಮೀಸಲಾತಿ ಜಾರಿ ತರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಮುಂಡರಗಿ ಮಂಡಲ ಅಧ್ಯಕ್ಷ ಡಾ.ಕುಮಾರಸ್ವಾಮಿ ಹಿರೇಮಠ ಮಾತನಾಡಿ, ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ದೇಶದ ಮಹಿಳೆಯರಿಗೆ ಅವಮಾನ ಮಾಡಿದೆ. ಬಿಜೆಪಿ ಮಹಿಳೆಯರ ಧ್ವನಿಯಾಗಿ ಕೆಲಸ ಮಾಡಲಿದೆ. ಮಹಿಳೆಯರು ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಪ್ರಮುಖ ಕರಬಸಪ್ಪ ಹಂಚಿನಾಳ, ಪುರಸಭೆ ಮಾಜಿ ಅಧ್ಯಕ್ಷೆ ಕವಿತಾ ಉಳ್ಳಾಗಡ್ಡಿ, ಮಾಜಿ ಸದಸ್ಯೆ ಜ್ಯೋತಿ ಹಾನಗಲ್ ಮಾತನಾಡಿದರು.

ಬಸವರಾಜ ಬಿಳಿಮಗ್ಗದ, ಪ್ರಶಾಂತ ಗುಡದಪ್ಪನವರ, ಅರುಣಾ ಪಾಟೀಲ, ಪುಷ್ಪಾ ಉಕ್ಕಲಿ, ರಾಧಾ ಬಾರಕೇರ, ವೀಣಾ ಬೂದಿಹಾಳ, ಮಂಜುಳಾ ಹೆಬ್ಬಳ್ಳಿಮಠ, ರೇಖಾ ಬಾರಕೇರ, ಬಸಮ್ಮ ಸಕ್ರಿ, ರಜನಿಕಾಂತ ದೇಸಾಯಿ, ಕೊಟ್ರೇಶ ಅಂಗಡಿ, ಶಿವಪ್ಪ ಚಿಕ್ಕಣ್ಣವರ, ಮೈಲಾರಪ್ಪ ಕಲಕೇರಿ, ಪವನ ಮೇಟಿ, ಸಿದ್ದು ದೇಸಾಯಿ, ಶಿವು ಕುರಿ, ರವಿ ಪಾಟೀಲ, ಚಿನ್ನಪ್ಪ ವಡ್ಡಟ್ಟಿ, ಸೋಮು ಹಕ್ಕಂಡಿ ಇತರರು ಇದ್ದರು.

ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ಎಲೈಟ್‌ನ ಕಾರ್ಯ ಶ್ಲಾಘನೀಯ



ಹುಬ್ಬಳ್ಳಿ: ಭವ್ಯ ಭಾರತದ ಪ್ರತಿಭಾನ್ವಿತ ನಾಗರಿಕರನ್ನು ನಿರ್ಮಾಣ ಮಾಡುವಂಥ ಶಾಲಾಭಿವೃದ್ಧಿ ಕಾರ್ಯದಲ್ಲಿ ತೊಡಗಿರುವ ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ಎಲೈಟ್‌ನ ಕಾರ್ಯ ಉತ್ತಮವಾಗಿದೆ ಎಂದು ಸ್ವರ್ಣ ಸಮೂಹ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಡಾ.ವಿ.ಎಸ್.ವಿ. ಪ್ರಸಾದ ಮೆಚ್ಚುಗೆ ವ್ಯಕ್ತಪಡಿಸಿದರು.

ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ಎಲೈಟ್ ಹಾಗೂ ಸ್ವರ್ಣ ಸಮೂಹ ಸಂಸ್ಥೆಯಿಂದ ವಿದ್ಯಾನಗರದ ನೇಕಾರ ಕಾಲೋನಿಯ ಹ್ಯಾಪಿ ಸ್ಕೂಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಾಗಿ ರೂಪಿಸಿದ್ದ ಮೂರು ಅರ್ಥಪೂರ್ಣ ಯೋಜನೆಗಳಿಗೆ ಚಾಲನೆ ನೀಡಿ ಮಾತನಾಡಿದರು.

ಸ್ವರ್ಣ ಸಂಸ್ಥೆಯಿಂದ 2,000 ಚದರ ಅಡಿ ಪೇವರ್ಸ್ ಅಳವಡಿಸಲಾಗಿದೆ. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗೆ ಸುರಕ್ಷಿತ ಹಾಗೂ ಸ್ವಚ್ಛವಾದ ನಡೆ ದಾರಿ ಹಾಗೂ ಎರಡು ತರಗತಿ ಕೊಠಡಿಗಳಿಗೆ ಸಂಪೂರ್ಣವಾಗಿ ಬಣ್ಣ ಹಚ್ಚುವುದರ ಜೊತೆಗೆ ಕಾರ್ಯಕ್ರಮ ನಡೆಯುವ ಮಳೆ ಗಾಳಿ , ಬಿಸಿಲು ಬಡಿಯದಂತೆ ಮಕ್ಕಳಿಗಾಗಿ ವೇದಿಕೆಯ ಮೇಲೆ ಹೊಸ ಶೆಡ್ ಕೂಡ ನಮ್ಮ ಸಂಸ್ಥೆಯಿಂದ ನಿರ್ಮಿಸಿದ್ದು ಇದರಿಂದ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು, ಸಭೆಗಳನ್ನು ಆಯೋಜಿಸಲು ಹಾಗೂ ಇತರ ಶಾಲಾ ಕಾರ್ಯಕ್ರಮಗಳಿಗೆ ಅನುಕೂಲಕರ ಮತ್ತು ಸುರಕ್ಷಿತ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಸರ್ಕಾರಿ ಶಾಲೆಗಳಿಗೆ ಸರ್ಕಾರ ಸರಿಯಾಗಿ ಅನುದಾನ ನೀಡದಿರುವ ಸಂದರ್ಭದಲ್ಲಿ ರೋಟರಿ ಸಂಸ್ಥೆ ಮುಂದೆ ಬಂದು ಶಾಲೆಗೆ ಅಗತ್ಯವಾದ ಸೌಲಭ್ಯಗಳನ್ನು ಕಲ್ಪಿಸುತ್ತಿರುವುದು ಸಾರ್ಥಕವಾದ ಸೇವೆಯಾಗಿದೆ ಎಂದು ತಿಳಿಸಿದರು.

ಇದೇ ಸಮಯದಲ್ಲಿ 3170 ಡಿಸ್ಟ್ರಿಕ್ಟ್ ಜಿಲ್ಲಾ ಗೌರ್ನರ್ ಅರುಣ ಭಂಡಾರೆ ಮಾತನಾಡಿ , ನಗರದಲ್ಲಿ 10 ಕ್ಕೂ ಹೆಚ್ಚು ಹಿರಿಯ ಕ್ಲಬ್ಬಗಳ ಜೊತೆಗೆ ಕಳೆದ ಮೂರ್ನಾಲ್ಕು ವರ್ಷಗಳಿಂದ ಸಾಮಾಜ ಸೇವೆಯಲ್ಲಿ ರೋಟರಿ ಕ್ಲಬ್ ಹುಬ್ಬಳ್ಳಿ ಎಲೈಟ್ ತೊಡಗಿಕೊಂಡಿದ್ದು ಇದರ ಸೇವೆಯನ್ನು ಶ್ಲಾಘಿಸಿದರು. ಹೀಗೆ ಮುಂದಿನ ದಿನಗಳಲ್ಲೂ ಸಹ ಸಮಾಜ ಸೇವೆ ಮುಂದುವರೆಸೊಕೊಂಡು ಹೋಗಲು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಎಜಿ ರಾಣಕಾ ಗೋಖಲೆ , ಕ್ಲಬ್‌ನ ಅಧ್ಯಕ್ಷ ಅವಿನಾಶ ಕುರ್ತಕೋಟಿ, ಕಾರ್ಯದರ್ಶಿ ಅಂಬಾಪ್ರಸಾದ ಮಲ್ಯ, ಹ್ಯಾಪಿ ಸ್ಕೂಲ್ ಚೇರ್ಮನ್ ಶರದ್ ಜಾಧವ, ಪ್ರಾಜೆಕ್ಟ್ ಕೋ-ಆರ್ಡಿನೇಟರ್ ಗೌತಮಿ ಇದ್ದರು.

ನಾರೀಶಕ್ತಿ ವಂದನ್ ಮಸೂದೆ: ಕಾಂಗ್ರೆಸ್‌ನಿಂದ ಮಹಿಳೆಯರಿಗೆ ಅನ್ಯಾಯ



ಚನ್ನಮ್ಮನ ಕಿತ್ತೂರು: ದೇಶದಲ್ಲಿ ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ಶೇ.33 ಮಹಿಳಾ ಮೀಸಲು ಜಾರಿ ಮಾಡಲು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಲೋಕಸಭೆಯಲ್ಲಿ ಮಂಡಿಸಿದ ನಾರೀಶಕ್ತಿ ವಂದನ್ ಮಸೂದೆ ಪ್ರಸ್ತಾಪವನ್ನು ಸೋಲಿಸಿ ದೇಶದ ಮಹಿಳಾ ಶಕ್ತಿಗೆ ಅವಮಾನ ಮಾಡಿದ ಕಾಂಗ್ರೆಸ್ ಪಕ್ಷಕ್ಕೆ ಮಾತೃಶಕ್ತಿಯ ಶಾಪ ತಟ್ಟಲಿದೆ ಎಂದು ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಆಕ್ರೋಶ ವ್ಯಕ್ತಪಡಿಸಿದರು.

ನಾರೀಶಕ್ತಿ ವೇದಿಕೆಯಿಂದ, ಸೋಮವಾರ ಸಂಜೆ ನಾರಿ ಶಕ್ತಿಯ ಸ್ವಾಭಿಮಾನಕ್ಕೆ, ಕಾಂಗ್ರೆಸ್‌ನಿಂದ ಮತ್ತೆ ಅವಮಾನ ಖಂಡಿಸಿ ಜನಾಕ್ರೋಶ ಮಹಿಳಾ ಪಾದಯಾತ್ರೆಯಲ್ಲಿ ಮಾತನಾಡಿದ ಅವರು, ಆದಿ ಅನಾದಿ ಕಾಲದಿಂದ ಮಹಿಳೆಯರಿಗೆ ಸೂಕ್ತ ಸ್ಥಾನ ಮಾನ ನೀಡಿ ಗೌರವಿಸುತ್ತಾ ಬಂದಿರುವದು ನೋಡಬಹುದು ಮಹಿಳೆಯರು ಪುರಷರಿಗೆ ಸರಿ ಸಮಾನವಾಗಿ ನಿಂತಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷ ಮಹಿಳಾ ಮಿಸಲಾತಿಗೆ ಹಿನ್ನೆಡೆ ಮಾಡಿ ಅವಮಾನ ಮಾಡಿರುವದು ಖಂಡನೀಯ ಇದಕ್ಕೆ ಕಾಂಗ್ರೆಸ್ ಪಕ್ಷ ಪಾಠ ಅನುಭವಿಸಲಿದೆ. ದಶಕಗಳ ಕಾಲ ಅಧಿಕಾರದಲ್ಲಿದ್ದರೂ ಶಾಸನಸಭೆಗಳಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ನೀಡದೆ, ಮಹಿಳೆಯರನ್ನು ಕೇವಲ ಮತಬ್ಯಾಂಕ್ ಆಗಿ ಬಳಸಿಕೊಂಡ ಕಾಂಗ್ರೆಸ್‌ಗೆ, ಈಗ ಮಹಿಳೆಯರು ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಸಮಾನ ಪಾಲು ನೀಡುವ ಈ ಐತಿಹಾಸಿಕ ಮೈಲಿಗಲ್ಲನ್ನು ಸಹಿಸಲು ಸಾಧ್ಯವಾಗುತ್ತಿಲ್ಲ. ಅಡ್ಡಗಾಲು ಹಾಕುವ ತನ್ನ ಕೀಳು ರಾಜಕೀಯವನ್ನೇ ಮುಂದುವರಿಸುತ್ತಿದೆ ಎಂದು ಹೇಳಿದರು.

ಬಿಜೆಪಿ ನಾಯಕಿ ಲಕ್ಷ್ಮೀ ಇನಾಂದಾರ ಮಾತನಾಡಿದರು. ರಾಷ್ಟ್ರೀಯ ಹೆದ್ದಾರಿ ಪಕ್ಕದ ರಾಣಿ ಚನ್ನಮ್ಮಾ ವರ್ತುಳದಲ್ಲಿ ಸಭೆ ನಡೆಸಿ ಪ್ರತಿಭಟನಾ ಮೆರವಣಿಗೆ ಅರಳಿಕಟ್ಟಿ ವೃತ್ತದ ವರೆಗೆ ಬಂದು ಮುಕ್ತಾಯಗೊಂಡಿತು. ಸಾಕಷ್ಟು ಮಹಿಳೆಯರು, ಪುರುಷರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕಿತ್ತೂರು ಮಂಡಳ ಮಹಿಳಾ ಮೋರ್ಚಾ ಅಧ್ಯಕ್ಷೆ ರಾದಾಶ್ಯಾಮ ಕಾದ್ರೋಳಿ ಮಾತನಾಡಿದರು. ಶೈಲಾ ಸಿದ್ರಾಮನಿ, ಉಮಾದೇವಿ ಬಿಕ್ಕಣ್ಣವರ, ಸುವರ್ಣಾ ಹಣಜಿ, ಪಾರ್ವತಿ ಸರಪಳಿ, ಸಂದಿಪ ದೇಶಪಾಂಡೆ, ಶ್ರೀಕರ್ ಕುಲಕರ್ಣಿ, ಉಳವಪ್ಪ ಉಳ್ಳಾಗಡ್ಡಿ, ನಾಗರಾಜ ದುರಗದ, ಕಿರಣ ಪಾಟೀಲ, ಬಸವರಾಜ ಮಾತನವರ ಸೇರಿದಂತೆ ಇತರರು ಉಪಸ್ಥಿತರಿದ್ದರು.

CHANGE OF NAME

I, ABDUL RAHMAN (New Name) previously called ABDUL RAHMAN SHAIKH (Old Name) Address: H NO: 24 TANZEEM ROAD NAWAYATH COLONY BHATKAL, KARWAR PIN: 581320, KARNATAKA, INDIA henceforth I will be called and recognized by new name for all future purposes, dated: 27-04-2026

CHANGE OF NAME

I, AKSHATHA SAVADI (Old Name) Resident of Hirehalla Tota, At/Post Harugeri, Tq- Raibag Dist- Belagavi, Karnataka - 591220, have changed my name as AKSHATA AJITKUMAR NAGAVI (New Name) henceforth I will be called and recognized by new name for all future purposes, dated: 27/04/2026.

CHANGE OF NAME

I, MOHAN (Old Name) Resident of #54, Siddeshwar Park, Vidyanagar, Hubli Eng College, Dharwad, State: Karnataka, Pin Code: 580031, have changed my name as MOHAN SHIROLKAR (New Name) henceforth I will be called and recognized by new name for all future purposes, dated: 27/04/2026.

CHANGE OF NAME

I, SWASTHI SUPRASANNA HEGDE (Old Name) Resident of # 2, Jain Plot, Behind Vinayakeshwara Temple, Gokul Road, Udyamnagar, Hubli, Dharwad, Karnataka, Pin Code: 580030, have changed my name as SWASTHI HEGDE (New Name) henceforth I will be called and recognized by new name for all future purposes, dated: 27/04/2026.

ಕರ್ನಾಟಕ ಸರ್ಕಾರ

ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಕೂಡ್ಲಿಗಿ, ವಿಜಯನಗರ ಜಿಲ್ಲೆ.

ಸಂಖ್ಯೆ:ತಾಸಾಆಕೂ/ಟೆಂಡರು/ಪಥ್ಯಾಹಾರ/09/2026-27ದಿನಾಂಕ:16.04.2026

ಇ-ಟೆಂಡರ್ ಪ್ರಕಟಣೆ

2026-27 ನೇ ಸಾಲಿಗಾಗಿ ತಾಲೂಕು ಸಾರ್ವಜನಿಕಆಸ್ಪತ್ರೆ, ಕೂಡ್ಲಿಗಿಯಲ್ಲಿಸಿದ್ದಪಡಿಸಿದಪಥ್ಯಹಾರ, ಮತ್ತುಉತ್ತಮದರ್ಜೆಯ ಬ್ರೇಡ್ ಸರಬರಾಜಿಗಾಗಿ ಇ-ಪ್ರೋಕ್ಯೂರ್ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿಇ-ಟೆಂಡರನ್ನುಆಹ್ವಾನಿಸಲಾಗಿದೆ, ಇಚ್ಛೆಯುಳ್ಳ ಹಾಗೂ ಅರ್ಹವುಳ್ಳ ಟೆಂಡರುದಾರರು ನಿಗದಿತ ಸಮಯದೊಳಗೆ http://kppp.karnataka.gov.in ವೇದಿಕೆ ಮೂಲಕ ಟೆಂಡರುಗಳನ್ನು ಸಲ್ಲಿಸಲುಕೋರಿದೆ.

DietTender Office RefNo.: **TGH/K/TENDER/DIET/09/2026-27.** Supply of Diet and Breade-Tender No.: **DHFWS/2026-27/IND2430.** Commencement of downloading of e-tender forms from website: **http://kppp.karnataka.gov.in ದಿನಾಂಕ:21-04-2026ರಿಂದ05-05-2026ರಂದು ಸಂಜೆ05.00 ಗಂಟೆಯವರೆಗೆ**. Last Date for seeking clarification if any: **ದಿನಾಂಕ:04-05-2026ರಂದುಮಧ್ಯಾಹ್ನ12.30 ಗಂಟೆಯವರೆಗೆ**. Last date for uploading of Tender in e-procurement platform: **ದಿನಾಂಕ:05-05-2026ರಂದು ಸಂಜೆ05.00ಗಂಟೆಯವರೆಗೆ**. Date, Time & Venue of Opening of Tenders: **ದಿನಾಂಕ:07-05-2026ರಂದುಬೆಳಗ್ಗೆ11:30ಗಂಟೆಗೆ, ಮುಖ್ಯ ವೈದ್ಯಾಧಿಕಾರಿಗಳು,ತಾಲೂಕು ಸಾರ್ವಜನಿಕಆಸ್ಪತ್ರೆ, ಕೂಡ್ಲಿಗಿ ಇವರ ಕಛೇರಿಯಲ್ಲಿ ಇ-ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ತೆರೆಯಲಾಗುವುದು**. Tender Value for supply of DIET& Bread: **Rs.70,00,000/-**. EMD: **Rs. 1,40,000/-**

ಇ-ಪ್ರೋಕ್ಯೂರ್ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ, ಟೆಂಡರು ಫಾರಂಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ ವೆಬ್‌ಸೈಟ್ http://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದುಅಥವಾಕಛೇರಿಯ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಮುಖ್ಯ ವೈದ್ಯಾಧಿಕಾರಿಗಳು
ತಾಲೂಕು ಸಾರ್ವಜನಿಕ ಆಸ್ಪತ್ರೆ ಕೂಡ್ಲಿಗಿ, ವಿಜಯನಗರಜಿಲ್ಲೆ

ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್ಎಂಸಿಎ/ಆರ್.ಓ.ಸಂಖ್ಯೆ/49

ಕರ್ನಾಟಕ ಸರ್ಕಾರ

ಪುರಸಭೆ ಕಾರ್ಯಾಲಯ ಲಕ್ಷ್ಮೇಶ್ವರ

ತಾ: ಲಕ್ಷ್ಮೇಶ್ವರ ಜಿ: ಗದಗ
e-mail: itstaff_ulb_laxmeshwar@yahoo.co.in Phone:08487-272916
Website:www.laxmeshwartown.gov.in Fax no:08487-272916

ಕಂ/ಪ/ಮುಸಲ/ತಾಂ.ವಿ/ಇ-ಟೆಂಡರ್/ವಹಿ/2026-27 ದಿನಾಂಕ:-27-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೋಕ್ಯೂರ್‌ಮೆಂಟ್ ಮೂಲಕ)

ಲಕ್ಷ್ಮೇಶ್ವರ ಪುರಸಭೆ ಸನ್ 2026-27 ನೇ ಸಾಲಿನ ಪುರಸಭೆ ನಿಧಿ ಅನುದಾನದಲ್ಲಿ 1 ರಿಂದ 23 ಕೊಳವೆ ಬಾವಿಯ ವಿವಿಧ ವ್ಯಾಸದ ಮೋಟರ ಹಾಗೂ ಸ್ಟಾರ್ಟರ ಮತ್ತು 1 ರಿಂದ 23 ವಾರ್ಡಗಳಲ್ಲಿ ಬರುವತಂಹ ಬೀದಿ ದೀಪಗಳ ನಿರ್ವಹಣೆ ಒಟ್ಟು 2 ಕಾಮಗಾರಿ ಅಂದಾಜು ಮೊತ್ತ **ರೂ 39.27 ಲಕ್ಷಗಳಿಗೆ** ಕೆ.ಟಿ.ಟಿ.ಪಿ ಕಾಯ್ದೆ ಅಧಿನಿಯಮ 2000 ರನ್ವಯ ಈ ಕೆಳಗಿನಂತೆ ಇಂಡೆಂಟ್‌ಗಳಲ್ಲಿ ಇ ಟೆಂಡರಗಳನ್ನು ಆಹ್ವಾನಿಸಿದ್ದು ಅರ್ಹ ಬಿಡ್‌ದಾರರು ಟೆಂಡರನ್ನು ಇ-ಪ್ರೋಕ್ಯೂರಮೆಂಟ್ ಪೋರ್ಟಲ್ **https:/kppp.karnataka.gov.in** ಠೇವಣಿ (ಇಎಂಡಿ) ಮತ್ತು ಟೆಂಡರ ಫೀಯನ್ನು ಇ-ಪ್ರೋಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿದಂತೆ ಪಾವತಿಸಿ ಭಾಗವಹಿಸಬಹುದಾಗಿದೆ. ಟೆಂಡರ ಸಲ್ಲಿಸುವ ಕೊನೆಯ **ದಿನಾಂಕ: 06-05-2026 ರ ಸಂಜೆ 4.00 ಗಂಟೆಯವರೆಗೆ** ಟೆಂಡರ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರಗೆ ಸಂಬಂಧಿಸಿದ ಯಾವುದೆ ಬದಲಾವಣೆಗಳು ಅಥವಾ ತಿದ್ದುಪಡಿಗಳನ್ನು ಇ-portal ನಲ್ಲಿ ಪ್ರಕಟಿಸಲಾಗುವುದು.

ಅ.ನಂ	ಕಾಮಗಾರಿಯ ಇಡೆಂಟ್ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	DMA/2025-26SE7437	29.27
2	DMA/2025-26/SE7441	10.00

ಸಹಿ/-(ಶ್ರೀ ಮಹಾಂತೇಶ ಎಚ್ ಬೀಳಗಿ) ಮುಖ್ಯಾಧಿಕಾರಿಗಳು ಪುರಸಭೆ ಲಕ್ಷ್ಮೇಶ್ವರ
ಸಹಿ/-(ಶ್ರೀ ಗಂಗಪ್ಪ ಎಮ್) ಉಪವಿಭಾಗಾಧಿಕಾರಿಗಳ ಗದಗ ಅಧ್ಯಕ್ಷರು ಪುರಸಭೆ ಲಕ್ಷ್ಮೇಶ್ವರ

ವಾ.ಸಾ.ಸಂ.ಇ/ಗದಗ/42/ದೇಶಪಾಂಡೆಪಬ್ಲಿಸಿಟಿ/2026-27

CHANGE OF NAME

I, KUMAR PANDAPPA MUNAVALLI (Old Name) Resident of H No: 1 Laxmi Nilay Basaveshwar Park 5th Phase Sulla Road Bengeri, Keshwapur Hubli 580023 (address), have changed my name as KUMAR MUNAVALLI (New Name) henceforth I will be called and recognized by new name for all future purposes, dated: 27/04/2026.

CHANGE OF NAME

I, NANDA ARALELIMATH (Old Name) Resident of No: 12, 1st Floor 15th C Cross, 16th Main, JP Park Back Gate Bandappa Garden, Muthyala Nagar, Bengaluru - 560054, have changed my name as NANDA SHEKHAR HIREMATH (New Name) henceforth I will be called and recognized by new name for all future purposes, dated: 27/04/2026.

CHANGE OF NAME

I, KUSHALA RAO (Old Name) Resident of Annadaneeshwar Nagar Mundargi, Gadag - 582118, have changed my name as KUSHALA NEELAMMANAVAR (New Name) henceforth I will be called and recognized by new name for all future purposes, dated: 27/04/2026.

CHANGE OF NAME

I, ASHOK KALLAPPA CHILLANNAVAR (Old Name) Resident of Kalmeshwar Oni Unkal Hubli Eng College Hubli, Dharwad Karnataka 580031, have changed my name as ASHOK CHILLANNAVAR (New Name) henceforth I will be called and recognized by new name for all future purposes, dated: 27/04/2026.

CHANGE OF NAME

I, ANNAPURNA KHODE (Old Name) Resident of #119, MHB Colony,Near GVT School, Vishweshwar Nagar, Hubli, Dharwad, Karnataka, Pin Code: 580032, have changed my name as ANNAPURNA KARTHIK BHANDGE (New Name) henceforth I will be called and recognized by new name for all future purposes, dated: 27/04/2026.

CHANGE OF NAME

I, SHAKIRASULTANA SAGARI (Old Name) Resident of H No: B/86 Ramalingeshwar Nagar Gokul Road Hubli 580030 (address), have changed my name as SHAKIRASULTANA NAVEED MULLA (New Name) henceforth I will be called and recognized by new name for all future purposes, dated: 27/04/2026.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ" ಬೆಳಗಾವಿ-590018, ಕರ್ನಾಟಕ, ಭಾರತ

ಕ್ರಮ ಸಂಖ್ಯೆ: ವಿ.ತಾ.ವಿ./ಬೆ/ಸ್ಥಾ.ಅ./2026-27/ಐ.ಎಫ್.ಟಿ.ನಂ.13/352, ದಿನಾಂಕ: 24-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ-ದ್ವಿಲಕೋಟಿ ಪದ್ಧತಿ (ಕೆಪಿಪಿ ಪೋರ್ಟಲ್ ಮೂಲಕ)2ನೇ ಕರೆ

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂರ ಪ್ರಕಾರ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು: ವಿತಾವಿಯ ಪ್ರಾದೇಶಿಕ ಕೇಂದ್ರ ಮೈಸೂರಿನ ಹಾಸ್ಟೇಲ್‌ಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ಮೊತ್ತ ರೂ.1,52,45,418/- (ತೆರಿಗೆ ರಹಿತ)2ನೇ ಕರೆ. ಇತರೆ ಮಾಹಿತಿಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ: 24-04-2026 ರಿಂದ ಪಡೆದುಕೊಳ್ಳಬಹುದು.

ಸಹಿ/- ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

ವಾ.ಸಾ.ಸಂ.ಇ./ಬೆಳಗಾವಿ/159/
ದೇಶಪಾಂಡೆಪಬ್ಲಿಸಿಟಿ/2026-27

CHANGE OF NAME

I, SHANKREPPA RUDRAPPA SAMPAGAVI (Old Name) Resident of H. No: 379, Sridevi Nilaya, Rajaji Nagar, 9th Cross, Sattur - 580009, have changed my name as SHANKAR RUDRAPPA SAMPAGANVI (New Name) henceforth I will be called and recognized by new name for all future purposes, dated: 27/04/2026.

ಸೇಂಟ್ ಆನ್ಸ್ ಎಜುಕೇಷನ್ ಸೊಸೈಟಿ ನಂ.2, ಮಿಲ್ಲರ್ ರಸ್ತೆ, ಬೆಂಗಳೂರು-52

ಬೇಕಾಗಿದ್ದಾರೆ

ಮೇಲ್ಕಂಡ ಶಿಕ್ಷಣ ಸಂಸ್ಥೆ ವತಿಯಿಂದ ಪಾಲಹಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ಸೇಂಟ್ ಆನ್ಸ್ ಪ್ರೌಢಶಾಲೆ, ಪಾಲಹಳ್ಳಿ ಶ್ರೀರಂಗ ಪಟ್ಟಣ, ತಾ|| ಮಂಡ್ಯ ಜಿಲ್ಲೆಯಲ್ಲಿ ಖಾಲಿ ಇರುವ ಅನುದಾನಿತ ಶಿಕ್ಷಕರ ಈ ಕೆಳಗಿನ ಹುದ್ದೆ ತುಂಬಲು ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರುರವರ ಅನುಮತಿ ಪತ್ರದ ಸಂಖ್ಯೆ : DPI CPIO ಓ 8 (2):Fov 4/E 2013883/ ಖಾಹುಬ ಅನು/77)2025-26 ದಿನಾಂಕ 12.04.2026ರ ಅನ್ವಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆ ವಿವರ	ವಿದ್ಯಾರ್ಹತೆ	ಮೀಸಲಾತಿ	ಹುದ್ದೆಗಳ ಸಂಖ್ಯೆ
1	ಕನ್ನಡ ಸಹಶಿಕ್ಷಕರು	B.A., B.Ed.,	ಮೀಸಲಾತಿ ಅನ್ವಯಿಸುವುದಿಲ್ಲ	01

ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳು ಪ್ರಕಟವಾದ 21 ದಿನಗಳ ಒಳಗಾಗಿ ಕಾರ್ಯದರ್ಶಿಗಳು, ಸೇಂಟ್ ಆನ್ಸ್ ಪ್ರೌಢಶಾಲೆ, ಪಾಲಹಳ್ಳಿ, ಶ್ರೀರಂಗಪಟ್ಟಣ ತಾಲೂಕು, ಮಂಡ್ಯ ಜಿಲ್ಲೆ-571606 ಇವರಿಗೆ ಅರ್ಜಿ ಸಲ್ಲಿಸುವುದು ಹಾಗೂ ಅರ್ಜಿಯ ಒಂದು ಪ್ರತಿಯನ್ನು ಉಪನಿರ್ದೇಶಕರು, ಶಾ.ಶಿ. ಇಲಾಖೆ, ಮಂಡ್ಯ ಇವರಿಗೆ ಕಳುಹಿಸುವುದು. ದಿನಾಂಕ: 25.05.2026ರಂದು ಬೆಳಗ್ಗೆ 11.00 ಗಂಟೆಗೆ ಪಾಲಹಳ್ಳಿ ಗ್ರಾಮದಲ್ಲಿರುವ ಸೇಂಟ್ ಆನ್ಸ್ ಪ್ರೌಢಶಾಲೆಯಲ್ಲಿ ತಮ್ಮ ಮೂಲ ಪ್ರಮಾಣ ಪತ್ರದೊಂದಿಗೆ ಆಯ್ಕೆ ಸಮಿತಿ ಮುಂದೆ ಸಂದರ್ಶನಕ್ಕೆ ಹಾಜರಾಗಲು ಕೋರಿದೆ.

ವಿ.ಸೂ.: ಸಂದರ್ಶನದ ವೇಳೆ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಭತ್ಯೆ ನೀಡಲಾಗುವುದಿಲ್ಲ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ:(04ಇ/55ಇ):2026-27:ಜೆಇ-1 ದಿನಾಂಕ: 24.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ) /3ನೇ ಕರೆ

ಲೆಕ್ಕಶೀರ್ಷಿಕೆ: 5054-03-101-0-02-132 ಪ್ರಮುಖ ಜಿಲ್ಲಾ ರಸ್ತೆ ಸೇತುವೆಗಳ ನಿರ್ಮಾಣ ಯಡಿ ಇಂಡೆಂಟ್ ನಂ: 35595 ಈ ಕಾಮಗಾರಿಗಳಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 11.05.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಲೆಕ್ಕಶೀರ್ಷಿಕೆ: "5054-03-337-0-17-154 ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳು ಸುಧಾರಣೆಗಳು" ಯಡಿ ಇಂಡೆಂಟ್ ನಂ: 35851 ಈ ಕಾಮಗಾರಿಗಳಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ ಮತ್ತು **ಲೆಕ್ಕಶೀರ್ಷಿಕೆ: 8443 ವಿಪತ್ತು ಉಪಶಮನ ನಿಧಿ** ಇಂಡೆಂಟ್ ನಂ: 34059 ಈ ಕಾಮಗಾರಿಗೆ **3ನೇ ಕರೆಯಾಗಿ** ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 04.05.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ.50.00 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.240.00 ಲಕ್ಷ ಆಗಿರುತ್ತದೆ. ಮೇಲಿನ ಕಾಮಗಾರಿಗಳಿಗೆ **KW-2 & KW-4** ಪ್ರಮಾಣಿತ ಟೆಂಡರ್ ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮೇಲಿನ ಕಾಮಗಾರಿಗಳ ಕೆಲಸದ ಮೌಲ್ಯ, ಟೆಂಡರ್‌ಗೆ ಹಾಕಲಾದ ಮೊತ್ತ, ಇ.ಎಮ್.ಡಿ. ಮೊತ್ತ ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **(www.kppp.karnataka.gov.in)** ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ವಿಷಯ ನಿರ್ವಾಹಕರು, ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824-2423169.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

DIPR/DK/KSMCA/131/26-27 dt.27.04.2026

ಕರ್ನಾಟಕ ಸರ್ಕಾರ

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

"ಅಭಿವೃದ್ಧಿ ಭವನ" ಐವಾನ-ಎ-ಶಾಹಿ, ಕಲಬುರಗಿ-585102, ದೂರವಾಣಿ: (08472) - 256767, 239556, 255564, ಫ್ಯಾಕ್ಸ್ : (08472) 227527
E-mail: hkadbgulb@gmail.com, Website : kkrdb.karnataka.gov.in

ಸಂಖ್ಯೆ:ಕಕಪ್ರಅಮಂ/ಲೆಕ್ಕ ಶಾಖೆ/ ಲೆಅ-2/33/2023-24/640 ದಿನಾಂಕ: 24.04.2026

-: ಸೇರ್ಪಡೆ ಅಧಿಸೂಚನೆ :-

ಈ ಕೆಳಕಂಡ ಸೇರ್ಪಡೆ ಅಧಿಸೂಚನೆಯನ್ನು ಮಂಡಳಿಯಿಂದ ಈಗಾಗಲೇ ಪ್ರಕಟಿಸಿದ ಇ-ಹರಾಜು ಟೆಂಡರ್ ಅಧಿಸೂಚನೆ ಸಂಖ್ಯೆ:KKRDB/Acc/AS-2/33/2025-26 ದಿನಾಂಕ:17-04-2026 ರಲ್ಲಿ ಸಾಮಾನ್ಯ ಷರತ್ತು ಹಾಗೂ ನಿರ್ಬಂಧನೆಗಳ ಕ್ರಮ ಸಂಖ್ಯೆ: xxviii ರ ನಂತರ ಈ ಕೆಳಕಂಡ ಹೊಸ ಷರತ್ತನ್ನು ಸೇರ್ಪಡಿಸಲಾಗಿದೆ.

(xxix) "ಬಿಡ್‌ದಾರರು ನಿಶ್ಚಿತ ಠೇವಣಿಗೆ Non-Callable ಬಡ್ಡಿ ದರವನ್ನು ನಮೂದಿಸಬೇಕು"

ಮೇಲ್ತಿಳಿಸಿದ ಟೆಂಡರ್ ಅಧಿಸೂಚನೆಯಲ್ಲಿ ಇನ್ನಾವುದೇ ಬದಲಾವಣೆಗಳು ಇರುವುದಿಲ್ಲ.

ಸಹಿ/- ಉಪ ಕಾರ್ಯದರ್ಶಿಗಳು,
ಕ.ಕ.ಪ್ರ.ಅ.ಮಂಡಳಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/84/ಕೆ.ಎಸ್.ಎಂ.ಸಿ.&ಎ/2026-27

CHANGE OF NAME

I, AFEEK AHMED BADAL (Old Name) Resident of No 2-1-65 Gogi Mohalla Yadgir 585201 Karnataka (address), have changed my name as ATEEQUR RAHMAN (New Name) henceforth I will be called and recognized by new name for all future purposes, dated: 27/04/2026.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ

Ph.08472 - 220196 e-mail: midnglb@rediffmail.com/midnglb1@gmail.com

ಐಎಫ್‌ಟಿ.ನಂ.ಕಾನಿಅ/ಸನೀಅಅವಿ/ಕ/ಯೋಶಾ-4/ಕೆ.ಡಬ್ಲ್ಯೂ-4/2026-27/534 ದಿನಾಂಕ : 27.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ-4)

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2025-26ನೇ ಸಾಲಿನ 4702-ಆಣೆಕಟ್ಟು, ಪಿಕಪ್, ಬಂದಾರ ಯೋಜನೆ ಅಡಿ ಹಾಗೂ 4702-ಕೆರೆಗಳ ಆಧುನಿಕರಣ - ಪ್ರಧಾನ ಕಾಮಗಾರಿಗಳು ಯೊಜನೆ ಅಡಿಯಲ್ಲಿ ಕಾಮಗಾರಿಗಳಿಗಾಗಿ ಈ-ಟೆಂಡರ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : **ಗರಿಷ್ಠ ರೂ. 14,49,15,217.67 ಕನಿಷ್ಠ ರೂ. 3,93,37,522.22,** 3) ಗುತ್ತಿಗೆದಾರರ ಅರ್ಹತೆ ವಿವರ : 1ನೇ ದರ್ಜೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : ಅರ್ಜಿಯ ಬೆಲೆ ಕೆ.ಪಿ.ಪಿ.ಪಿ. ನಂತೆ **ಇ.ಎಂ.ಡಿ. ಗರಿಷ್ಠ ರೂ. 14,50,000.00, ಕನಿಷ್ಠ ರೂ.5,96,100.00,** 5) ಪ್ರಿ-ಬಿಡ್ ಮೀಟಿಂಗ್ ದಿನಾಂಕ : **08.05.2026 ಬೆಳಿಗ್ಗೆ 11.00 ಗಂಟೆಯವರೆಗೆ,** 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ : **11.05.2026 ಬೆಳಿಗ್ಗೆ 11.00 ಗಂಟೆಯವರೆಗೆ** 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : **12.05.2026 ಸಾಯಂಕಾಲ 17.30** ಗಂಟೆಯವರೆಗೆ, 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **13.05.2026 ಸಾಯಂಕಾಲ 17.30 ಗಂಟೆಯವರೆಗೆ,** 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : **14.05.2026 ಸಾಯಂಕಾಲ 17.30 ಗಂಟೆಯವರೆಗೆ,** 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 11) ಅಂತರಜಾಲ ತಾಣದ ವಿಳಾಸ : https://kppp.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಕಲಬುರಗಿ

ವಾ.ಸಾ.ಸಂ.ಇ.ಕಲಬುರಗಿ/78/
ದೇಶಪಾಂಡೆ ಪಬ್ಲಿಸಿಟಿ/2026-27

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ|| ಎಂ.ಹೆಚ್.ಮರಿಗೌಡ ರಸ್ತೆ, ಬೆಂಗಳೂರು-560029.
ಫೋನ್: 26096832/26096910 ಫ್ಯಾಕ್ಸ್: 080-25536105 ಇಮೇಲ್: purchase@kmf.coop

ಸಂ. ಕಹಾಮ/ಖರೀದಿ/ಟೆಂಡರ್-908/2026-27 ದಿನಾಂಕ: 27.04.2026

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಗೆ ತಿಳಿಸಿದ ಸೇವೆ ಒದಗಿಸಲು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ (Tender No. KMF/2026-27/SE5208).

Sl. No.	Item Description	EMD (Rs.)
1	Hiring of Laboratory Services for Testing of Milk, Milk Products & other Raw Materials through the NABL Accrediated/ Certified Laboratory for 2 Years	1,60,000/-

ಇ-ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ಮೂಲಕ ಟೆಂಡರ್ ಅನ್ನು ದಿನಾಂಕ **08.05.2026** ರಂದು **05.00** ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ. ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಚೇರಿ, ಹುಬ್ಬಳ್ಳಿ

ಟೆಂಡರ್ ಪ್ರಕಟಣೆ ಸಂ. 02/2026-27 ದಿನಾಂಕ: 27-04-2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆಪಿಪಿಪಿ) ಯ ಮೂಲಕ

ಆಸಕ್ತ ಬಿಡ್‌ದಾರರಿಂದ ಈ ಕೆಳಗೆ ತೋರಿಸಿದಂತೆ ಸಾಮಗ್ರಿಗಳ ಸರಬರಾಜಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ವಿವರಣೆ	ಅಂದಾಜು ಮೌಲ್ಯ
1	ಏರ್ ಸಸ್ಪೆನ್ಷನ್ ಭಾಗಗಳು	ರೂ. 554 ಲಕ್ಷ
2	ವ್ಹೀಲ್ ಬೋಲ್ಟ್, ಆಕ್ಸಲ್ ಸ್ಟಡ್ ಮತ್ತು ನಟ್‌ಗಳು	ರೂ. 447 ಲಕ್ಷ
3	ಪಿಸ್ಟನ್, ಪಿಸ್ಟನ್ ರಿಂಗ್ಸ್ ಮತ್ತು ಸಿಲೆಂಡರ್ ಲೈನರ್‌ಗಳು	ರೂ. 318 ಲಕ್ಷ
4	ಲೇಲ್ಯಾಂಡ್ ಬಿಎಸ್-VI ವಾಹನಗಳಿಗೆ ಆಡ್‌ಬ್ಲೂ ಲಿಕ್ವಿಡ್ ಯೂರಿಯಾ) (ಅಲ್ಪಾವಧಿ ಟೆಂಡರ್)	ರೂ. 250 ಲಕ್ಷ
5	250 ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳು (ಅಲ್ಪಾವಧಿ ಟೆಂಡರ್)	ರೂ. 220 ಲಕ್ಷ
6	ಅಲ್ಯೂಮಿನಿಯಂ ಎಕ್ಸ್‌ಟ್ರೂಶನ್‌ಗಳು (ಅಲ್ಪಾವಧಿ ಟೆಂಡರ್)	ರೂ. 210 ಲಕ್ಷ
7	ಆಟೊಮೋಟಿವ್ ಕೇಬಲ್‌ಗಳು ಮತ್ತು ಎಲ್‌ಟಿ ವೈಯರ್‌ಗಳು	ರೂ. 153 ಲಕ್ಷ
8	ಸಿಟಿ ಬಸ್‌ಗಳಿಗೆ ಪ್ಲಾಸ್ಟಿಕ್ ಬ್ಲೋ ಮೌಲ್ಡೆಡ್ ಪ್ಯಾಸೆಂಜರ್ ಸೀಟ್ ಅಸೆಂಬ್ಲಿಗಳು	ರೂ. 82.50 ಲಕ್ಷ
9	ಆಟೊಮೋಟಿವ್ ಬಲ್ಬ್‌ಗಳು	ರೂ. 69 ಲಕ್ಷ
10	ಜಿಪಿ ಕಾಯಿಲ್‌ಗಳು	ರೂ. 40 ಲಕ್ಷ

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಸಮಯ: ಟೆಂಡರ್ ಕ್ರ.ಸಂ. 1 ರಿಂದ 3 ರ ಟೆಂಡರ್‌ಗಳಿಗೆ **27-05-2026** ಮತ್ತು ಕ್ರ. ಸಂ. 4 ರಿಂದ 10 ರವರೆಗಿನ ಟೆಂಡರ್‌ಗಳಿಗೆ **ದಿನಾಂಕ: 12-05-2026 ಗಂಟೆ: 17:30 ರವರೆಗೆ.**

ವಿವರಗಳಿಗಾಗಿ ವೆಬ್ ಸೈಟ್: **http://kppp.karnataka.gov.in** ಅಥವಾ ಮೊಬೈಲ್ ಫೋನ್ ಸಂಖ್ಯೆ **7022009113** ಗೆ ಸಂಪರ್ಕಿಸಿ.

ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಕರು,
(ಟೆಂಡರ್ ಕರೆಯುವ ಪ್ರಾಧಿಕಾರ)

ವಾ.ಸಾ.ಸಂ.ಇ/ಧಾರವಾಡ/97/ದೇಶಪಾಂಡೆಪಬ್ಲಿಸಿಟಿ/2026-27

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

Tel: 0836-2956097, 2224195, 2224274, 2222161
ನವನಗರ, ಹುಬ್ಬಳ್ಳಿ-580 025

ಯೋ.ವಿ/ಭೂ.ಬ/06/2026-27/468 ದಿ: 24/04/2026

ಪ್ರಕಟಣೆ

ಹುಬ್ಬಳ್ಳಿ-ಧಾರವಾಡ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕೃತ-IIರ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ವಿವರಿಸಿದ ಜಮೀನಿನ ಭೂಉಪಯೋಗ ಬದಲಾವಣೆ ಮಾಡಲು ಕೆಟಿಸಿಪಿ ಕಾಯ್ದೆ 1961ಕಲಂ 14(ಎ) ರನ್ವಯ ಅರ್ಜಿದಾರರು ಮನವಿ ಸಲ್ಲಿಸಿರುತ್ತಾರೆ.

ಅ. ನಂ	ಜಮೀನಿನ ಮಾಲೀಕರ ಹೆಸರು	ಗ್ರಾಮ	ರಿಸನಂ/ ಬ್ಲಾಕ ನಂ	ಕ್ಷೇತ್ರ	ಮ.ಯೋ. ಪ-II ರಂತೆ ಹಾಲಿ ಉಪಯೋಗ	ಭೂಉಪಯೋಗ ಬದಲಾವಣೆಗೆ ಕೋರಿರುವ ಉದ್ದೇಶ	ಸಾರ್ವಜನಿಕ ಹಿತಾಸಕ್ತಿ
1	ಶ್ರೀ ಗುರುಸಿದ್ದಪ್ಪ ತಂದೆ ಸಕ್ರಪ್ಪ ನೂಲ್ವಿ	ಬಿಡನಾಳ (ಪ್ಲ)	33/1	06 ಎಕರೆ	ವ್ಯವಸಾಯ	ವಸತಿ	ವಸತಿ ಉದ್ದೇಶದ ನಿವೇಶನಗಳನ್ನು ತಯಾರಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು

ಸದರಿ ಜಮೀನುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಕಲಂ 14 (ಎ) ರನ್ವಯ ಭೂಉಪಯೋಗ ಬದಲಾವಣೆ ಮಾಡುವ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ, ಸಾರ್ವಜನಿಕ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 16 ದಿನದೊಳಗಾಗಿ **ಆಯುಕ್ತರು, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ ಹುಬ್ಬಳ್ಳಿ-580025** ಇವರಿಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಆಯುಕ್ತರು
ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ

ಡಿಐಪಿಆರ್/ಧಾರವಾಡ/97/ಮಣಿಪಾಲ್/2026-27

ಪುರಸಭೆ ಕಾರ್ಯಾಲಯ ಹಳಿಯಾಳ (ಉ.ಕ)-581329

ಸಂ. /ಪು.ಹ/ಕಾಮಗಾರಿ ವಿಭಾಗ/ವಿವ//2026-27 ದಿನಾಂಕ: 27/04/2026

ಟೆಂಡರ್ ಮತ್ತು ಮರು ಟೆಂಡರ್ ಪ್ರಕಟಣೆ

(Kppp portal ಮುಖಾಂತರ ಮಾತ್ರ)

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾಯ್ದೆ -1999 ನಿಯಮಾವಳಿ 2000 ರಂತೆ ಪುರಸಭೆ ಹಳಿಯಾಳದ 2026-27 ನೇ ಸಾಲಿನ ಎಸ್.ಎಫ್.ಸಿ Capital Assets ಮತ್ತು 2026-27ನೇ ಸಾಲಿನ ಪುರಸಭೆ ನಿಧಿ, 15ನೇ ಹಣಕಾಸು ಆಯೋಗದ ಬಡ್ಡಿ ಮೊತ್ತ ಹಾಗೂ SBM 2.0 ಯೋಜನೆಯಡಿ ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಸಿವ್ಹಿಲ್ ಗುತ್ತಿಗೆದಾರರಿಂದ ಟೆಂಡರ್ ಡಾಕ್ಯುಮೆಂಟ್ KW-1 ರ ನಿಬಂಧನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾಯ್ದೆ - 1999 ನಿಯಮಾವಳಿ 2000 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್ Kppp portal ನಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ನಿಶ್ಚಿತ ಕಾಮಗಾರಿಯ ಹೆಸರನ್ನು ನಮೂದಿಸಿದ ಐಟಂವಾರು ಟೆಂಡರಗಳನ್ನು Kppp portal ಮೂಲಕ ಸ್ವೀಕರಿಸಲಾಗುವುದು. ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು http://kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ಮಾಹಿತಿಯನ್ನು ಪುರಸಭೆಯ ಅಂತರಜಾಲ www.haliyalatown.mrc.gov.in ನಲ್ಲಿ ಪಡೆಯಬಹುದು.

Sl. No	Work Indent No	Amount put to Tender (In Lakhs)	Contractor Category
1	DMA/2026-27/OW/ WORK_INDENT57629	5.63	Others
2	DMA/2025-26/OW/ WORK_INDENT56330/CALL-2	10.17	Others
3	DMA/2025-26/BD/ WORK_INDENT56599/CALL-2	12.70	Others

ಕ್ರ. ಸಂಖ್ಯೆ 1 ರ ಕಾಮಗಾರಿಗೆ ದಿನಾಂಕವನ್ನು ನಿಗಧಿಪಡಿಸಲಾಗಿರುತ್ತದೆ. (1) Kppp portal ಮುಖಾಂತರ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05/05/2026 17-00 ಗಂಟೆಯವರೆಗೆ. (2) Kppp portal ಮುಖಾಂತರ ಟೆಂಡರಗಳನ್ನು ತೆರೆಯುವ ದಿನಾಂಕ: 06/05/2026 17-30 ಗಂಟೆಗೆ. ಕ್ರ. ಸಂಖ್ಯೆ 2 ರಿಂದ 3 ರ ವರೆಗಿನ ಕಾಮಗಾರಿಗಳಿಗೆ ದಿನಾಂಕವನ್ನು ನಿಗಧಿಪಡಿಸಲಾಗಿರುತ್ತದೆ. (1) Kppp portal ಮುಖಾಂತರ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11/05/2026 17-00 ಗಂಟೆಯವರೆಗೆ. (2) Kppp portal ಮುಖಾಂತರ ಟೆಂಡರಗಳನ್ನು ತೆರೆಯುವ ದಿನಾಂಕ: 12/05/2026 17-30 ಗಂಟೆಗೆ. (ರಜಾ ಇದ್ದಲ್ಲಿ ಬೇರೆ ದಿನಾಂಕ ತಿಳಿಸಲಾಗುವುದು)

ಸಹಿ/- ಮುಖ್ಯಾಧಿಕಾರಿ,
ಪುರಸಭೆ, ಹಳಿಯಾಳ (ಉ.ಕ)

DIPR/KWR/KSMCA/78/26-27 dt: 27.04.2026

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಯಾದಗಿರ.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಮಾಮಮಮ&ಪಜಾ.ಪಪಂಯೋ/2026-27/ 175 ದಿ: 27.04.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW-2, & 3 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1) ಕಾಮಗಾರಿಗಳ ಹೆಸರು ಮತ್ತು ಇಂಡೆಂಟ್ ಸಂಖ್ಯೆ: (1) ಹುಣಸಗಿ ತಾಲ್ಲೂಕಿನ ಹೊಂಬಳಕಲ್ ಬಲಶೆಟ್ಟಿಹಾಳ ಗ್ರಾಮದ ಹಳೆಯ ಮಾರ್ಗಕ್ಕೆ ಸೇತುವೆ ನಿರ್ಮಾಣ RDPR/2025-26/RD/WORK_INDENT22817/CALL-2 Others (2) ಸುರಪೂರ ತಾಲೂಕಿನ ಚನ್ನಪಟ್ಟಾ ಗ್ರಾಮದಲ್ಲಿ ಸಿ.ಡಿ. ನಿರ್ಮಾಣ RDPR/2025-26/RD/WORK_INDENT21785/CALL-2 (CAT-II(A) Bidders Only) **2) ಲೆಕ್ಕ ಶೀರ್ಷಿಕೆ:**2025-26 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಮತ್ತು 2025 26ನೇ ಸಾಲಿನ 5054 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯೋಜನೆ **3) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ 25.00 ಮತ್ತು ಗರಿಷ್ಠ ರೂ. 75.00 ಲಕ್ಷ **4) ಗುತ್ತಿಗೆದಾರರ ದರ್ಜೆ:** 4ನೇ ಮತ್ತು 3ನೇ ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:** 29.04.2026 ರಿಂದ 08.05.2026 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲಾ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 08.05.2026 ಸಾಯಂಕಾಲ 4:00 ಗಂಟೆವರೆಗೆ **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್ಡ್ (ಕೆ.ಡಬ್ಲ್ಯೂ- 3):** 11.05.2026 ಬೆಳ್ಳಿಗೆ 9:00 ನಂತರ **9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ಡ್ (ಕೆ.ಡಬ್ಲ್ಯೂ- 2):** 11.05.2026 ಬೆಳ್ಳಿಗೆ 9.00 ನಂತರ **10) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ಡ್(ಕೆ.ಡಬ್ಲ್ಯೂ- 3):**15.05.2026 ಬೆಳ್ಳಿಗೆ 11:00 ನಂತರ **11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಯಾದಗಿರ. **12) ಅಂತರಜಾಲ ತಾಣದ ವಿಳಾಸ:** https://kppp.karnataka.gov.in

ಸೂಚನೆ:- ಟೆಂಡರರಿಗೆ ಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/- ಕಾರ್ಯಪಾಲಕ ಇಂಜನೀಯರರು,
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ,
ಯಾದಗಿರ.

ವಾ.ಸಾ.ಸಂ.ಇ/ಯಾದಗಿರಿ/39/ಕೆ.ಎಸ್.ಎಂ.ಸಿ&ಎ/2026-27

ಕರ್ನಾಟಕ ಸರ್ಕಾರ

(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ) ಕರ್ನಾಟಕ ಜಲಸಾರಿಗೆ ಮಂಡಳಿ

ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಕಚೇರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಬೈತ್‌ಖೋಲ್, ಕಾರವಾರ

ಕ್ರ.ಸಂ. ಕಜಮಂ-04/ಕಾಮಗಾರಿ-II/2026-27 ದಿನಾಂಕ: 24.04.2026

ಆಸಕ್ತಿ ವ್ಯಕ್ತಪಡಿಸುವಿಕೆ (EXPRESSION OF INTEREST)

"Appointment of Independent Valuer for Determination of Land Value and Computation of Additional Concession Fee (ACF) for Keni Port Project, Karnataka" ಕಾಮಗಾರಿಯನ್ನು ಕೈಗೊಳ್ಳಲು ಪೂರ್ವ ಅನುಭವ ಹೊಂದಿರುವ ಹೆಸರಾಂತ, ವಿಶ್ವಾಸಾರ್ಹ, ಸಂಪನ್ಮೂಲ ಮತ್ತು ಅನುಭವಿ ಮತ್ತು ಸಮರ್ಥ ಸಲಹೆಗಾರ ಆಸಕ್ತ ಸಂಸ್ಥೆಗಳಿಂದ ಕೆಳ ಸಹಿದಾರರು ಕೊಟೇಶನ್‌ನ್ನು ಇ-ಪ್ರೊಕ್ಯೂರ್‌ಮೆಂಟ್ (KPP Portal) ನಲ್ಲಿ ಆಹ್ವಾನಿಸಿದ್ದಾರೆ.

Sl. No.	Description Of the Work	Qty.	Unit	Rate Excluding GST	
				Figures	words
1	2	3	4	5	6
1	Appointment of Independent Valuer for Determination of Land Value and Computation of Additional Concession Fee (ACF) for Keni Port Project, Karnataka	1	Job		

ಜಿಎಸ್‌ಟಿಯನ್ನು ಹೊರತುಪಡಿಸಿ ಅನ್ವಯವಾಗುವ ಎಲ್ಲಾ ತೆರಿಗೆಗಳು ಹಾಗೂ ಸುಂಕಗಳನ್ನು ಒಳಗೊಂಡತೆ ಸಂಪೂರ್ಣವಾಗಿ ಪೂರ್ಣಗೊಂಡ ದರಗಳನ್ನು ದಿನಾಂಕ: **08.05.2026** ರಂದು ಅಥವಾ ಮುಂಚಿತವಾಗಿ ಕೆಳಸಹಿದಾರರಿಗೆ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸುವುದು. ಈ ಕೊಟೇಶನ್ ದರಗಳು ಅಂದಾಜು ಪಟ್ಟಿ ತಯಾರಿಸಲು / ಇಲಾಖೆಯ ಅನುದಾನ ಹಾಗೂ ಟೆಂಡರ್ ಉದ್ದೇಶದ ಮೌಲ್ಯಮಾಪನಗಳನ್ನು ಪಡೆಯುವ ಸಲುವಾಗಿ ಮಾತ್ರ ಸೀಮಿತವಾಗಿರುತ್ತದೆ. ವಿವರವಾದ ವಿವರಣೆಯು ಅನುಬಂಧ-Aರಲ್ಲಿ ನೀಡಲಾಗಿದೆ. ದಯವಿಟ್ಟು ದರಗಳನ್ನು ಸಲ್ಲಿಸುವ ಮೊದಲು ಇದನ್ನು ಪರಿಶೀಲಿಸಿ. ಯಾವುದೇ ಇತರ ಮಾಹಿತಿಗಾಗಿ ಮತ್ತು ಹೆಚ್ಚಿನ ವಿವರಗಳಿಗಾಗಿ ಕೆಳಸಹಿದಾರರ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. **(1) E-mail: piwtdev.wks@gmail.com (2) Phone No. 08382 -221494**

ಸಹಿ/- ಬಂದರು ಇಂಜಿನೀಯರ್
ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ

DIPR/KWR/KSMCA/77/26-27 Dt: 27.04.2026

ಅಹಿಂದ ಸಂಘಟನೆ ರಾಜಕೀಯ ಹೊರತಾಗಿರಲಿ: ಜಾರಕಿಹೊಳಿ



ಹುಬ್ಬಳ್ಳಿ: ಅಹಿಂದ 25 ವರ್ಷಗಳ ಹೋರಾಟ, ಸಾಧನೆ, ಸಂಕಲ್ಪ–ರಾಜ್ಯಮಟ್ಟದ ವಿಚಾರ ಸಂಕಿರಣಕ್ಕೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ರಾಜ್ಯದಲ್ಲಿ ನಮ್ಮ ಪಕ್ಷದ ಸರ್ಕಾರ ಇದ್ದರೂ ಅಹಿಂದ ವರ್ಗಕ್ಕೆ ಏನೂ ಮಾಡಿಲ್ಲ ಎಂಬ ಮಾತು ಕೇಳಿಬರುತ್ತಿದೆ. ಆ ವರ್ಗಕ್ಕೆ ಕೊಟ್ಟ ಭರವಸೆ ಈಡೇರಿಸಲು ನಮ್ಮವರೇ ತೊಡಕಾಗಿದ್ದಾರೆ ಎಂದು ತಿಳಿಸಿದರು.

25 ವರ್ಷಗಳ ಸುದೀರ್ಘ ಅವಧಿಯಲ್ಲಿ ಅಹಿಂದ ವರ್ಗ ಸಾಕಷ್ಟು ಪಾಠ ಕಲಿತಿದೆ. ಬೃಹತ್ ಸಮಾವೇಶ, ಸಭೆಗಳನ್ನು ನಡೆಸಿದರೂ ನಿರೀಕ್ಷಿತ ಬದಲಾವಣೆ ಆಗಿಲ್ಲ, ಅನಿವಾರ್ಯವಾಗಿ ಈಗ ಹೋರಾಟದ ಸ್ವರೂಪ ಬದಲಿಸಬೇಕಿದೆ. ನಮ್ಮ ರಕ್ಷಣೆ, ಸೌಲಭ್ಯಕ್ಕಾಗಿ ಹೊಸ ದಾರಿಯನ್ನು ಕಂಡುಕೊಳ್ಳಬೇಕಿದೆ ಎಂದು ಹೇಳಿದರು.

ಈ ನಿಟ್ಟಿನಲ್ಲಿ ಎರಡನೇ ಹಂತದ ಹೋರಾಟ ಇದೀಗ ಆರಂಭವಾಗಿದ್ದು, 2028ರ ಮೇ ತಿಂಗಳವರೆಗೆ ನಡೆಯಲಿದೆ. ಇದು ರಾಜ್ಯದಲ್ಲಿ ಹೊಸ ಕ್ರಾಂತಿಗೆ ಅಹಿಂದ ಸಂಘಟನೆ ರಾಜಕೀಯದ ಹೊರತಾಗಿ ಇರಬೇಕು. ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧ್ಯಕ್ಷರು ಸಕ್ರಿಯರಾಗಿ ಕೆಲಸ ಮಾಡುತ್ತ ಸಮಾಜದಲ್ಲಿ ಜಾಗೃತಿ ಮೂಡಿಸಬೇಕು. ಗುಡಿಸಲು, ಟೆಂಟ್ ವಾಸಿಗಳನ್ನು ಗುರುತಿಸಿ, ಅವರ ಏಳಿಗೆಗೆ ಶ್ರಮಿಸಬೇಕು. ರಾಜಕೀಯ ಮುಖಂಡರನ್ನು ಹೊರಗಿಟ್ಟು ವರ್ಷಪೂರ್ತಿ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಸಮಾವೇಶ ನಡೆಸಿ, ಅಹಿಂದ ಸಮುದಾಯಗಳನ್ನು ಒಗ್ಗೂಡಿಸಬೇಕು ಎಂದರು.

ನಿವೃತ್ತ ನಾಗಮೋಹನದಾಸ ನ್ಯಾಯಮೂರ್ತಿ ಅವರು ಸಂವಿಧಾನದಲ್ಲಿ ಇರುವ ಹಲವು ಅನುಚ್ಛೇದಗಳು ಅಪ್ರಸ್ತುತ ಎಂದು ಹೇಳಿ, ಸಾಮಾಜಿಕ ನ್ಯಾಯವನ್ನು ಅಪ ವ್ಯಾಖ್ಯಾನ ಮಾಡಲಾಗುತ್ತಿದೆ ಎಂದರು.

ನಮ್ಮ ಪಕ್ಷದಲ್ಲೇ ಇರುವ ಸಮರ್ಥವಾಗಿ ಎದುರಿಸಿ ಸಂವಿಧಾನ ರಕ್ಷಿಸಬೇಕಿದೆ. ಹೋರಾಟದ ಸ್ವರೂಪ ಬದಲಿಸಬೇಕು. ಎಲ್ಲರ ಹಿತರಕ್ಷಣೆಯೇ ಅಹಿಂದ ಉದ್ದೇಶವಾಗಬೇಕು'ಎಂದು ಸಲಹೆ ಮಾಡಿದರು.

ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ, ಪ್ರೊ.ಪ್ರದೀಪ ರಾಮಾವತ್, ರಾಜಾ ನಾಯಕ, ದಾನಪ್ಪ ಕಬ್ಬೇರ, ಮಾತನಾಡಿದರು. ಶಾಸಕ ಯಾಸೀರ ಅಹ್ಮದ ಖಾನ ಪಠಾಣ, ವಿಧಾನ ಪರಿಷತ್ ಸದಸ್ಯ ಎಫ್.ಎಚ್. ಚಕ್ಕಪ್ಪನವರ, ರಾಹುಲ್ ಜಾರಕಿಹೊಳಿ, ವಿನೋದ ಅಸೂಟಿ, ಗುರುನಾಥ ಉಳ್ಳಿಕಾಶಿ, ಪಾಂಡುರಂಗ ಪಮ್ಮಾರ ಇದ್ದರು.

ಮಹಿಳೆಯರ ಬಿಲ್‌ಗೆ ಕಾಂಗ್ರೆಸ್ ವಿರೋಧ: ಬಿಜೆಪಿ ಪ್ರತಿಭಟನೆ

ಕಲಬುರಗಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಧಾನಿ ವಿರುದ್ಧ ಬಳಸಿದ ಪದ ಬಳಕೆ ಹಾಗೂ ಮಹಿಳಾ ಮೀಸಲಾತಿ ಕಾಯ್ದೆಯನ್ನು ವಿರೋಧಿಸಿದ ಕಾಂಗ್ರೆಸ್ ನಡೆ ಖಂಡಿಸಿ ಬಿಜೆಪಿ ಜಿಲ್ಲಾ ಘಟಕ ಹಾಗೂ ನಾರಿ ಶಕ್ತಿ ಫೋರಂ ಘಟಕವೂ ನಗರದ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತದಿಂದ ಪಾದಯಾತ್ರೆ ಮೂಲಕ ಆಗಮಿಸಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಬಿಜೆಪಿ ರಾಜ್ಯ ಕಾರ್ಯದರ್ಶಿ, ಶಾಸಕ ಬಸವರಾಜ ಮತ್ತಿಮಡು, ದೇಶದ 50 ಪ್ರತಿಶತ ಜನಸಂಖ್ಯೆಯುಳ್ಳ ಮಹಿಳೆಯರಿಗೆ ರಾಜಕೀಯವಾಗಿ ವಿಶೇಷ ಸ್ಥಾನಮಾನ ನೀಡಲು ಕರೆದ ಅಧಿವೇಶನದಲ್ಲಿ 33 ಪ್ರತಿಶತ ಮಹಿಳಾ ಮೀಸಲಾತಿ ಬಿಲ್‌ಗೆ ವಿರೋಧ ವ್ಯಕ್ತಪಡಿಸಿ, ಕಾಂಗ್ರೆಸ್ ಮಹಿಳೆಯರ ವಿರೋಧಿ ಪಕ್ಷ ಎಂದು ಸಾಬೀತು ಪಡಿಸಿದೆ. ಸೋನಿಯಾ ಹಾಗೂ ಪ್ರಿಯಾಂಕಾ ಮುಂದುವರೆಯಬೇಕು ಬೇರೆ ಯಾರು ಬೆಳೆಯಬಾರದು ಎಂಬ ನಿಟ್ಟಿನಲ್ಲಿ ಐತಿಹಾಸಿಕ ಬಿಲ್‌ಗೆ ಸಹಕಾರ ನೀಡದಿರುವುದು ದುರಾದೃಷ್ಟ, ಮುಂದಿನ ದಿನಗಳಲ್ಲಿ ಮೋದಿ ಸರ್ಕಾರ 33% ಬಿಲ್ ಜಾರಿಗೆ ತರಲಿದೆ. ಕಾಂಗ್ರೆಸ್‌ನ ನೀತಿಗೆ ತಕ್ಕ ಪಾಠ ಸಿಗಲಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ ಮಾತನಾಡಿ, ದೇಶದ ಉನ್ನತ ಸ್ಥಾನದಲ್ಲಿರುವ ಪ್ರಧಾನಿ ಮೋದಿಗೆ ಭಯೋತ್ಪಾದಕ ಎಂಬ ಖರ್ಗೆಯವರ ಹೇಳಿಕೆ ಪ್ರಜಾಪ್ರಭುತ್ವದ ಗೌರವವಾದ ಪ್ರಧಾನಿ ಹುದ್ದೆಗೆ ಮಸಿ ಬಳಿಯುವ ಮೂಲಕ ಜಾಗತಿಕ ಮಟ್ಟದಲ್ಲಿ ಭಾರತವನ್ನು ಅಪಮಾನ ಮಾಡಿದ್ದಾರೆ ಎಂದು ಹೇಳಿದರು.

ಮಾಜಿ ವಿಧಾನಪರಿಷತ್ ಸದಸ್ಯ ಅಮರನಾಥಪಾಟೀಲ್ ಮಾತನಾಡಿದರು. ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯೆ ಶಶಿಕಲಾ ಟೆಂಗಳಿ, ಮಹಿಳಾ ಮೋರ್ಚಾ ಕಲಬುರಗಿ ಜಿಲ್ಲಾಧ್ಯಕ್ಷೆ ಗೌರಿ ಚಿಚಕೋಟಿ, ಬಿಜೆಪಿ ನಗರಾಧ್ಯಕ್ಷ ಚಂದು ಪಾಟೀಲ್,ಮಾಜಿ ಶಾಸಕ ರಾಜಕುಮಾರ್ ಪಾಟೀಲ್, ಶಿವರಾಜ್ ಪಾಟೀಲ್ ರದ್ದೆವಡಗಿ, ನಿತೀನ್ ಗುತ್ತೇದಾರ್, ಶರಣಪ್ಪ ತಳವಾರ್, ಅವ್ವಣ್ಣ ಮ್ಯಾಕೇರಿ, ಅಂಬಾರಾಯ ಅಷ್ಟಗಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜ್ ಬಿರಾದಾರ್,ಬಸವರಾಜ್ ಬೆನ್ನೂರ್ಕರ್ ,ನಗರ ಪ್ರಧಾನ ಕಾರ್ಯದರ್ಶಿ ಉಮೇಶ್ ಪಾಟೀಲ್, ಮಹಾದೇವ ಬೆಳಮಗಿ, ಶಿವಯೋಗಿ ನಾಗೇನಹಳ್ಳಿ, ರಾಜು ವಾಡೇಕರ್,ಸಂತೋಷ್ ಹಾದಿಮನಿ, ಶೋಭಾ ಬಾಣಿ,ಶೋಭಾ ಬಾಗೇವಾಡಿ,ಡಾ.ಸುಧಾ ಹಾಲಕಾಯಿ ,ಜಯಶ್ರಿ ಮತ್ತಿಮಡು,ಸಂತೋಷಿ ರಾಣಿ ಪಾಟೀಲ್, ಸವಿತಾ ಪಾಟೀಲ್,ಜಯಶ್ರೀ ಮುಚಳಂಬಿ,ಸುನಂದಾ ಪಾಟೀಲ್, ಸಪ್ನಾ ಮಂಗಲಗಿ,ಗಿರಿರಾಜ್ ಯಳಮೇಲಿ, ಶಿವ ಅಷ್ಟಗಿ,ವೀರೇಂದ್ರ ಪಾಟೀಲ್, ಮಹೇಂದ್ರ ಪೂಜಾರಿ,ಮಹೇಶ್ ಚವಾಣ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಪರಿಹಾರ ನೀಡದ ಎಸಿ ಕಚೇರಿ ಜಪ್ತಿ



ಧಾರವಾಡ: ರೈತರ ಜಮೀನು ಸ್ವಾಧೀನಪಡಿಸಿಕೊಂಡು ಪರಿಹಾರ ನೀಡದಿರುವ ಕಾರಣ ಧಾರವಾಡ ಉಪವಿಭಾಗಾಧಿಕಾರಿ ಕಚೇರಿಯನ್ನು ಸೋಮವಾರ ಜಿಲ್ಲಾ 2ನೇ ಅಧಿಕ ದಿವಾಣಿ ನ್ಯಾಯಾಲಯದ ಆದೇಶದಂತೆ ಕೋರ್ಟ್ ಸಿಬ್ಬಂದಿ ಜಪ್ತಿ ಮಾಡಿದರು. ಪ್ರತಿ ಗುಂಟೆಗೆ ರೂ.10,500 ದರದಂತೆ ಜಿಲ್ಲೆಯ ನವಲಗುಂದತಾಲೂಕಿನಕೊಂಡಿಕೊಪ್ಪ ಗ್ರಾಮದಲ್ಲಿ ಸ್ಮಶಾನದ ಉದ್ದೇಶಕ್ಕಾಗಿ ರೈತ ನಾಗನಗೌಡ ಪಾಟೀಲ ಎಂಬುವರ ಸುಮಾರು ಎರಡು ಎಕರೆ ಕೃಷಿ ಜಮೀನನ್ನು 2010ರಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು.

ಸ್ವಾಧೀನಪಡಿಸಿಕೊಂಡ ಜಮೀನಿಗೆ ಒಟ್ಟು ರೂ.35 ಲಕ್ಷ ಪರಿಹಾರ ಕೊಡಬೇಕಿತ್ತು. ಈ ಪೈಕಿ ರೂ.20 ಲಕ್ಷ ಹಣ ಮಾತ್ರ ಸರ್ಕಾರ ನೀಡಿತ್ತು. ಆದ್ದರಿಂದ ಬಾಕಿ ರೂ.15 ಲಕ್ಷ ಹಣಕ್ಕೆ ಅಲೆದಾಡಿದ ನಾಗನಗೌಡ ಪಾಟೀಲ ನ್ಯಾಯಾಲಯದ ಮೊರೆ ಹೋಗಿದ್ದರು. ವಿಚಾರಣೆ ಮಾಡಿದ ಕೋರ್ಟ್ ಉಪವಿಭಾಗಾಧಿಕಾರಿ ಕಚೇರಿ ಜಪ್ತಿಗೆ ಆದೇಶ ನೀಡಿದ ಕಾರಣ ಸೋಮವಾರ ನ್ಯಾಯಾಲಯದ ಸಿಬ್ಬಂದಿ ಉಪವಿಭಾಗಾಧಿಕಾರಿ ಕಚೇರಿಯ ಕಂಪ್ಯೂಟರ್ ಹಾಗೂ ಟೇಬಲ್ ಸೇರಿ ಮತ್ತಿತರ ವಸ್ತುಗಳನ್ನು ಜಪ್ತಿ ಮಾಡಿದರು.

ಕಾಂಗ್ರೆಸ್‌ಗೆ ತಕ್ಕಪಾಠ ಕಲಿಸುವ ಎಚ್ಚರಿಕೆ



ಹಾವೇರಿ: ದಾವಣಗೆರೆ ಉಪಚುನಾವಣೆನಂತರ ಅನಗತ್ಯವಾಗಿ ಮುಸ್ಲಿಂ ನಾಯಕರ ಮೇಲೆ ಕೈಗೊಂಡಿರು ವ ಕಠಿಣ ನಿರ್ಧಾರಗಳನ್ನು ಹಿಂಪಡೆಯದಿದ್ದರೆ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತಕ್ಕಪಾಠ ಕಲಿಸಲಾಗುವುದು. ಅಲ್ಲದೇ ಪಕ್ಷದ ವಿರುದ್ಧ ಬೀದಿಗಿಳಿದು ಹೋರಾಟ ನಡೆಸಲಾಗುವುದು ಎಂದು ಮುಸ್ಲಿಂ ಮೌಲ್ವಿಗಳು, ಮುಸ್ಲಿಂ ಸಮಾಜದ ಪ್ರಗತಿಪರ ಚಿಂತಕರ ವೇದಿಕೆಯ ಮುಖಂಡರು ಎಚ್ಚರಿಕೆ ನೀಡಿದರು.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಮುಸ್ಲಿಂ ಸಮಾಜದ ಪ್ರಗತಿಪರ ಚಿಂತಕರ ವೇದಿಕೆ ಮುಖಂಡ ಹಾಗೂ ವಕೀಲ ಜಿ.ಎ. ಸವಣೂರು ಮಾತನಾಡಿ, ಮುಸ್ಲಿಂ ಸಮಾಜದ ಪ್ರಶ್ನಾತೀತ ನಾಯಕ ಜಮೀರ್ ಅಹಮ್ಮದ್ ಹಾಗೂ ಮತ್ತಿತರರ ಬೆಳವಣಿಗೆಯನ್ನು ಸಹಿಸಲಾಗದೆ ಟಾರ್ಗೆಟ್ ಮಾಡಿ ಅವರನ್ನು ಹತ್ತಿಕ್ಕುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು.

ಮುಸ್ಲಿಂನಾಯಕ ಜಮೀರ್ ಅಹಮ್ಮದ್ ಅವರು ಸಮಾಜದಲ್ಲಿ ಪ್ರಭಾವಿ ವ್ಯಕ್ತಿಯಾಗಿ ಗುರುತಿಸಿಕೊಂಡಿದ್ದು, ಅವರು ತಮ್ಮನ್ನು ತಾವು ನಾಯಕ ಎಂದು ಹೇಳಿಕೊಳ್ಳದಿದ್ದರೂ ಜನತೆ ಅವರನ್ನು 'ಸುಪ್ರೀಂ ಲೀಡರ್' ಎಂದು ಒಪ್ಪಿಕೊಂಡಿದ್ದಾರೆ. ಅಲ್ಲದೆ, ಅವರು ಸಿಎಂ ಸಿದ್ದರಾಮಯ್ಯ ಅವರ ಆಪ್ತರಾಗಿದ್ದಾರೆ. ಹೀಗಾಗಿ ಅವರ ವಿರುದ್ಧ ಕೆಲವರು ಪಿತೂರಿ ನಡೆಸಿ ಅವರ ಹೆಸರನ್ನು ಕೆಡಿಸುವ ಪ್ರಯತ್ನ ನಡೆಯುತ್ತಿದೆ. ಇದಲ್ಲದೆ, ಪಕ್ಷ ವಿರೋಧಿ ಚಟುವಟಿಕೆಯ ಸುಳ್ಳು ಆರೋಪದಮೇಲೆ ಅಬ್ದುಲ್ ಜಬ್ಬಾರ್ ಹಾಗೂ ನಾಸೀರ್ ಅಹಮ್ಮದ್ ವಿರುದ್ಧ ಕೈಗೊಳ್ಳಲಾದ ಕ್ರಮವನ್ನು ಕೂಡ ತೀವ್ರವಾಗಿ ವಿರೋಧಿಸುತ್ತೇವೆ ಎಂದು ಆಗ್ರಹಿಸಿದ ಅವರು, ಪಕ್ಷವು ಈ ನಿರ್ಧಾರ ಹಿಂಪಡೆಯದಿದ್ದರೆ, ಪ್ರಗತಿಪರ ಮುಸ್ಲಿಂ ಸಮಾಜದ ಮೌಲ್ವಿಗಳು ಪ್ರತಿಭಟನೆ ನಡೆಸಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

ಮುಸ್ಲಿಂ ಮುಖಂಡ ತಡಸದ ಮೊಹಮ್ಮದ್ ಅಬ್ದುಲ್‌ರಜಾಕ ಖಾದ್ರಿ ಮಾತನಾಡಿ, ಕಳೆದ 2–3 ತಿಂಗಳಿಂದ ಮುಸ್ಲಿಂ ಮುಖಂಡರಿಗೆ ಪಕ್ಷದಲ್ಲಿ ತೊಂದರೆ ನೀಡಲಾಗುತ್ತಿದೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬಾರದು ಎಂದು ಶೇ.90ರಷ್ಟು ಜನರು ಕಾಂಗ್ರೆಸ್‌ಗೆ ಮತ ಹಾಕಿದ್ದೇವೆ. ಕರ್ನಾಟಕದಲ್ಲಿ ಶೇ.19ರಷ್ಟು ಮುಸ್ಲಿಂ ಮತದಾರರಿದ್ದಾರೆ. ಆದರೆ ಅಷ್ಟೇ ಪ್ರಮಾಣದಲ್ಲಿ ಮುಸ್ಲಿಂ ಮುಖಂಡರಿಗೆ ಟಿಕೆಟ್ ನೀಡುತ್ತಿಲ್ಲ ಎಂದರು.

ನಗರಸಭೆ ಮಾಜಿ ಸದಸ್ಯ ಪೀರಸಾಬ್ ಚೋಪದಾರ ಮಾತನಾಡಿದರು. ಮೌಲಾನಾ ಮಹ್ಮದ್‌ಸಾಕ್ ನಾರಲವಾಡಿ, ಮೌಲಾನಾ ಸಾಕ್ ಅಹ್ಮದ್ ಮುಖಬೂಲ್, ಅಜೀಜ್‌ವುಲ್ಲಾ ಮಕಾನದಾರ, ಮೌಲಾನಾ ಇಷ್ತಿಯಾರ ಖಾಜಿ, ಮೌಲಾನಾ ಅಬ್ದುಲ್ ರಜಾಕ ಖಾದ್ರಿ ಮತ್ತಿತರರು ಇದ್ದರು.

> ಡಿಸಿಎಂ ಡಿ.ಕೆ.ಶಿವಕುಮಾರ ಮುಸ್ಲಿಂ ನಾಯಕರ ವಿರುದ್ಧ ಕ್ರಮಕೈಗೊಂಡು ಎಡವಿದ್ದಾರೆ. ಈ ಕೂಡಲೇ ನಾಸೀರ್ ಅಹ್ಮದ ಹಾಗೂ ಜಬ್ಬಾರ ವಿರುದ್ಧ ಕೈಗೊಂಡ ಕ್ರಮ ಪುನರ್ ಪರಿಶೀಲಿಸಬೇಕು.
> ■ ಇಮಾಮ್‌ಸಾಬ ಜಮಾದಾರ, ಮಾಜಿ ಅಧ್ಯಕ್ಷ, ಅಂಜುಮನ್ ಇಸ್ಲಾಂ ಕಮೀಟಿ

ಸಂವಿಧಾನ ನಮ್ಮ ಜೀವನಕ್ಕೆ ಮಾರ್ಗದರ್ಶಕ



ವಿಜಯಪುರ: ಸಂವಿಧಾನವು ಕೇವಲ ಪುಸ್ತಕವಾಗಿರದೆ, ನಮ್ಮ ದಿನನಿತ್ಯದ ಜೀವನಕ್ಕೆ ದಾರಿ ತೋರಿಸುವ ಮಾರ್ಗದರ್ಶಕವಾಗಿದೆ ಎಂದು ಮಹಿಳಾ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಹೇಳಿದರು.

ನಗರದ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕದ ಆಶ್ರಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿಯ ನಿಮಿತ್ತ ಸೋಮವಾರ ಹಮ್ಮಿಕೊಂಡ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಪ್ರತಿಯೊಂದು ಕಾರ್ಯಕ್ರಮದಲ್ಲೂ ಸಂವಿಧಾನದ ಪೀಠಿಕೆಯನ್ನು ಓದುವ ಪದ್ಧತಿಯನ್ನು ಕಡ್ಡಾಯವಾಗಿ ಅನುಸರಿಸಲಾಗುತ್ತಿದೆ. ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗಾಗಿ ಹಲವು ಉಪಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.

ಹುಲಕೋಟಿಯ ಗದಗ ಸಹಕಾರಿ ಜವಳಿ ಗಿರಣಿಯ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಅರ್ಜುನ ಗೊಳಸಂಗಿ ಮಾತನಾಡಿ, ಸರ್ವರಿಗೂ ಸಮಪಾಲು ಮತ್ತು ಸಮಬಾಳು ನೀಡಿದ ಮಹಾನ್ ವ್ಯಕ್ತಿ ಬಾಬಾಸಾಹೇಬ್ ಅಂಬೇಡ್ಕರ್. ಯಾವುದೇ ಜಯಂತಿಗಳು ಜಾತಿಗೆ ಸೀಮಿತವಾಗಬಾರದು, ಸಂವಿಧಾನವೇ ನಮ್ಮ ಉಸಿರು, ನಮ್ಮ ಹೆಸರು ಆಗಬೇಕು. ಅದು ನಮ್ಮ ಪವಿತ್ರ ಗ್ರಂಥವಾಗಿದ್ದು, ಅದರ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅಷ್ಟೇ ಅಲ್ಲದೇ ಹಳ್ಳಿಗಳ ಅಭಿವೃದ್ಧಿ ದೇಶದ ಅಭಿವೃದ್ಧಿಗೆ ಮೂಲವಾಗಿದ್ದು, ಅಂಬೇಡ್ಕರ್ ಅವರ ತತ್ವಾದರ್ಶ ಅನುಸರಿಸುವುದು ಅವಶ್ಯಕ ಎಂದರು.

ಸಿಂಡಿಕೇಟ್ ಸದಸ್ಯ ಶಿವಯೋಗಪ್ಪ ಮಾಡ್ಯಾಳ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಮಹಿಳೆಯರ ಹಕ್ಕುಗಳ ಪರ ಹೋರಾಟ ನಡೆಸಿ, ಹಿಂದೂ ಕೋಡ್ ಬಿಲ್ ಮೂಲಕ ಮಹಿಳಾ ಸಬಲೀಕರಣಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಮಹಿಳೆಯರ ಪ್ರಗತಿಯನ್ನು ದೇಶದ ಪ್ರಗತಿಯಿಂದಲೇ ಅಳೆಯಬೇಕು ಎಂಬುದು ಅವರ ಆಶಯವಾಗಿತ್ತು ಎಂದರು.

ಕುಲಸಚಿವ ಶಂಕರಗೌಡ ಸೋಮನಾಳ ಮಾತನಾಡಿ, ಪ್ರತಿಯೊಬ್ಬರೂ ಕಾನೂನುಗಳ ಕುರಿತು ಅರಿವು ಹೊಂದುವುದು ಅಗತ್ಯ ಎಂದು ಹೇಳಿದರು.

ಜಯಂತಿ ಪ್ರಯುಕ್ತ ಆಯೋಜಿಸಲಾದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರನ್ನು ಸನ್ಮಾನಿಸಲಾಯಿತು. ರಸಪ್ರಶ್ನೆ ಸ್ಪರ್ಧೆಯಲ್ಲಿ ಅಶ್ವಿನಿ ಅನಶಟ್ಟಿ ಪ್ರಥಮ (5000 ರೂ.), ಅಂಕಿತಾ ಹಾವಿನಾಳ ದ್ವಿತೀಯ (3000 ರೂ.) ಹಾಗೂ ನಾಗಮ್ಮ ಗುಬ್ಯಾಡ ತೃತೀಯ (2000 ರೂ.) ಸ್ಥಾನ ಪಡೆದರು.

ಮೌಲ್ಯಮಾಪನ ಕುಲಸಚಿವ ಪ್ರೊ.ಬಸವರಾಜ ಲಕ್ಕಣ್ಣವರ, ಸಹಾಯಕ ಕುಲಸಚಿವೆ ರಾಜೇಶ್ವರಿ ಬದನೂರ, ಡಾ.ಸುರೇಖಾ ರಾಠೋಡ ಹಾಗೂ ಬೋಧಕ– ಬೋಧಕೇತರ ಸಿಬ್ಬಂದಿ ಇದ್ದರು.

ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಸಂಜೀವಕುಮಾರ ಗಿರಿ ಸ್ವಾಗತಿಸಿದರು. ಡಾ.ಕಲಾವತಿ ಕಾಂಬಳೆ ನಿರೂಪಿಸಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕದ ಉಪ ನಿರ್ದೇಶಕ ಡಾ.ಬಾಬು ಲಮಾಣಿ ವಂದಿಸಿದರು.

ಮರಕ್ಕೆ ಕಾರು ಡಿಕ್ಕಿ: ಮೂವರಿಗೆ ಗಾಯ




ದಾಂಡೇಲಿ: ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಮರಕ್ಕೆ ಡಿಕ್ಕಿಯಾಗಿ ಓರ್ವನಿಗೆ ಗಂಭೀರ ಗಾಯವಾಗಿ, ಇನ್ನಿಬ್ಬರಿಗೆ ಸಣ್ಣಪುಟ್ಟ ಗಾಯವಾದ ಘಟನೆ ಜೋಯಿಡಾ–ದಾಂಡೇಲಿ ರಸ್ತೆಯ ಪಣಸೋಲಿ ಕ್ರಾಸ್ ಹತ್ತಿರ ಭಾನುವಾರ ತಡರಾತ್ರಿ ನಡೆದಿದೆ.

ಜೋಯಿಡಾ ಮತ್ತು ದಾಂಡೇಲಿಗೆ ಪ್ರವಾಸಕ್ಕೆಂದು ಕೋಲಾರ ದಿಂದ ಬಂದಿದ್ದ ನಾಲ್ವರಿದ್ದ ಕಾರು ಜೋಯಿಡಾ ಕಡೆಯಿಂದ ದಾಂಡೇಲಿಗೆ ಬರುತ್ತಿರುವಾಗ ಚಾಲಕನ ನಿಯಂತ್ರಣ ತಪ್ಪಿ ಪಣಸೋಲಿ ಕ್ರಾಸ್ ಹತ್ತಿರ ಮರಕ್ಕೆ ಡಿಕ್ಕಿಯಾಗಿದೆ.

ಈ ಘಟನೆಯಲ್ಲಿ ಕಾರಿನಲ್ಲಿದ್ದ ಮೂವರಿಗೆ ಗಾಯವಾಗಿದೆ. ಗಾಯಗೊಂಡವರನ್ನು ತಕ್ಷಣವೇ ದಾಂಡೇಲಿಯ ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆ ತರಲಾಗಿದೆ. ಗಂಭೀರ ಗಾಯಗೊಂಡಿದ್ದ ವಿಷ್ಣುವರ್ಧನ ಕೃಷ್ಣಪ್ಪ ರೆಡ್ಡಿ ಎಂಬವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಸುಚಿರಾಯು ಆಸ್ಪತ್ರೆಗೆ ಕರೆದೊಯ್ಯಲಾಗಿದೆ.

ಸಂದೀಪ್ ರೆಡ್ಡಿ ಮತ್ತು ಶ್ರೀಧರ್ ರೆಡ್ಡಿ ಅವರಿಗೆ ಸಣ್ಣಪುಟ್ಟ ಗಾಯವಾಗಿದ್ದು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ನೀಡಲಾಗಿದೆ. ಸ್ಥಳಕ್ಕೆ ದಾಂಡೇಲಿ ಗ್ರಾಮೀಣ ಪೊಲೀಸರು ಭೇಟಿ ನೀಡಿ ಪರಿಶೀಲನೆಯನ್ನು ನಡೆಸಿ ಮುಂದಿನ ಕ್ರಮವನ್ನು ಕೈಗೊಂಡಿದ್ದಾರೆ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	7	6	0	1	13	+1.333
ಆರ್‌ಸಿಬಿ	8	6	2	0	12	+1.919
ಹೈದರಾಬಾದ್	8	5	3	0	10	+0.815
ರಾಜಸ್ಥಾನ	8	5	3	0	10	+0.602
ಗುಜರಾತ್	8	4	4	0	8	-0.475
ಚೆನ್ನೈ	8	3	5	0	6	-0.121
ದಿಲ್ಲಿ	8	3	5	0	6	-1.060
ಕೆಕೆಆರ್	8	2	5	1	5	-0.751
ಮುಂಬೈ	7	2	5	0	4	-0.736
ಲಖನೌ	8	2	6	0	4	-1.106

ಭುವನೇಶ್ವರ್ 3 ವಿಕೆಟ್, ಹ್ಯಾಜೆಲ್‌ವುಡ್ 4 ವಿಕೆಟ್ | ಆರ್‌ಸಿಬಿಗೆ 9 ವಿಕೆಟ್ ಗೆಲುವು

ಸ್ವಿಂಗ್ ಬಿರುಗಾಳಿಗೆ ಕಂಪಿಸಿದ ದಿಲ್ಲಿ!

ಹೊಸದಿಲ್ಲಿ: ಸ್ವಿಂಗ್ ಕಿಂಗ್ ಭುವನೇಶ್ವರ್ ಮತ್ತು ಹ್ಯಾಜೆಲ್‌ವುಡ್ ನೇತೃತ್ವದ ಆರ್‌ಸಿಬಿ ಸ್ವಿಂಗ್ ಬೌಲಿಂಗ್ ಬಿರುಗಾಳಿಯ ನೆರವಿನಿಂದ ಆರ್‌ಸಿಬಿ ಭರ್ಜರಿ 9 ವಿಕೆಟ್‌ಗಳಿಂದ ಗೆದ್ದು ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ಕಳೆದ ಪಂದ್ಯದ ಸೋಲಿನ ಸೇಡು ತೀರಿಸಿಕೊಂಡಿದೆ. 76 ರನ್ ಸುಲಭ ಗುರಿ ಬೆನ್ನತ್ತಿದ ಆರ್‌ಸಿಬಿ ಇನ್ನೇನು ಪವರ್‌ಪ್ಲೇಗಿಂತ 3 ಹೆಚ್ಚುವರಿ ಎಸೆತಗಳಲ್ಲಿ (6.3) 77 ರನ್ ಚಚ್ಚಿ ಬಿಸಾಕಿ ತಾನು ಯಾಕೆ ಹಾಲಿ ಚಾಂಪಿಯನ್ ಎಂಬುದನ್ನು ಮನದಟ್ಟು ಮಾಡಿಸಿದೆ.

ಪವರ್‌ಪ್ಲೇ ಇನ್ನೂ ಪೂರ್ಣಗೊಳ್ಳುವ ಮೊದಲೇ, ನಾಲ್ಕು ಓವರ್‌ಗಳಲ್ಲಿ ಕ್ಯಾಪಿಟಲ್ಸ್ ತನ್ನ 6 ವಿಕೆಟ್‌ಗಳನ್ನು ಕಳೆದುಕೊಂಡಿತು. ಅದೂ ಎಷ್ಟು ರನ್ನಿಗೆ? ಕೇವಲ 8 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡ ದಿಲ್ಲಿ ಇನ್ನೇನು 20 ರನ್‌ಗಳೊಳಗೆ ಆಲೌಟ್ ಆಗುತ್ತೇನೋ ಎಂಬಂತಹ ಸ್ಥಿತಿ ನಿರ್ಮಾಣವಾಗಿತ್ತು. 7ನೇ ವಿಕೆಟ್‌ಗೆ ಜತೆಗೂಡಿದ ಪೊರೆಲ್ ಮತ್ತು ಮಿಲ್ಲರ್ 35 ರನ್ ಪೇರಿಸಿದರು. ಕಿಲ್ಲರ್ ಮಿಲ್ಲರ್ ಸ್ವಲ್ಪ ಧೈರ್ಯ ತೋರಿಸಿದ್ದು, 18 ಎಸೆತಗಳನ್ನು ಎದುರಿಸಿ 19 ರನ್ ಹೊಡೆದರು.

ಐಪಿಎಲ್ ಇತಿಹಾಸದಲ್ಲೇ ಇದು 12ನೇ ಅತಿ ಕಡಿಮೆ ಮೊತ್ತ

ಆರ್‌ಸಿಬಿಗೆ 9 ವಿಕೆಟ್ ಗೆಲುವು: 76 ರನ್ ಸುಲಭ ಗುರಿ ಬೆನ್ನತ್ತಿದ ಆರ್‌ಸಿಬಿ ಬ್ಯಾಟರ್‌ಗಳು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗನೆ ಪಂದ್ಯ ಮುಗಿಸಿಕೊಟ್ಟರು. ಜೇಕಬ್ ಬೆಥೆಲ್ 20 ರನ್ ಹೊಡೆದು ವಿಕೆಟ್ ಒಪ್ಪಿಸಿದರೆ, ಕೊಹ್ಲಿ ಜತೆಗೂಡಿದ ಪಡಿಕ್ಕಲ್ 3 ಸಿಕ್ಸರ್ ಹೊಡೆದು ಮಿಂಚಿದರು. ಇಬ್ಬರೂ ಮುರಿಯದ 2ನೇ ವಿಕೆಟ್‌ಗೆ 51 ರನ್ ಕಲೆಹಾಕಿ ಗೆಲುವಿನ ದಡ ಸೇರಿಸಿದರು. 12 ಅಂಕಗಳೊಂದಿಗೆ ಆರ್‌ಸಿಬಿ 2ನೇ ಸ್ಥಾನದಲ್ಲೇ ಭದ್ರವಾಗಿದೆ.





8/6; ಅತಿ ಕಡಿಮೆ ಮೊತ್ತ!

ಸ್ವಿಂಗ್ ಕಿಂಗ್ ಭುವಿ ಕನಸಿನ ಬೌಲಿಂಗ್ ದಾಳಿ ನಡೆಸಿದ ಪರಿಣಾಮ ಐಪಿಎಲ್ ಇತಿಹಾಸದಲ್ಲೇ ದಿಲ್ಲಿ ಕ್ಯಾಪಿಟಲ್ಸ್ ಅತಿ ಕಡಿಮೆ ಮೊತ್ತಕ್ಕೆ ಮೊದಲ 6 ವಿಕೆಟ್‌ಗಳನ್ನು ಕಳೆದುಕೊಂಡ ವಿನೂತನ ಕಳಪೆ ಆಟದ ದಾಖಲೆಯನ್ನೂ ಬರೆಯಿತು. **2011**ರಲ್ಲಿ ಡೆಕ್ಕನ್ ಚಾರ್ಜರ್ಸ್ ವಿರುದ್ಧ ಕೊಚ್ಚಿ ಟಸ್ಕರ್ಸ್ ಕೇರಳ ತಂಡ **11** ರನ್‌ಗಳಿಗೆ **6** ವಿಕೆಟ್ ಕಳೆದುಕೊಂಡಿದ್ದು ಈವರೆಗಿನ ಐಪಿಎಲ್ ದಾಖಲೆಯಾಗಿತ್ತು. ಅದೂ ಏ.27ರಂದೇ ನಡೆದ ಪಂದ್ಯವಾಗಿತ್ತು. **2017**ರಲ್ಲಿ ಡೇರ್‌ಡೆವಿಲ್ಸ್ **24**ಕ್ಕೆ **6** ವಿಕೆಟ್, **2014**ರಲ್ಲಿ ಆರ್‌ಸಿಬಿ **28**ಕ್ಕೆ **6** ವಿಕೆಟ್ ಮತ್ತು **2013**ರಲ್ಲಿ ಸನ್‌ರೈಸರ್ಸ್ **29**ಕ್ಕೆ **6** ವಿಕೆಟ್ ಕಳೆದುಕೊಂಡಿದ್ದವು.

ಸಂಕ್ಷಿಪ್ತ ಸ್ಕೋರ್

ದಿಲ್ಲಿ ಕ್ಯಾಪಿಟಲ್ಸ್ 75/10 (16.3)
ಪೊರೆಲ್ 30(33), ಮಿಲ್ಲರ್ 19(18), ಜೇಮಿಸನ್ 12(13). ಭುವನೇಶ್ವರ್ 5ಕ್ಕೆ 3, ಹ್ಯಾಜೆಲ್‌ವುಡ್ 12ಕ್ಕೆ 4, ಸುಯಷ್ 7ಕ್ಕೆ 1, ರಸಿಕ್ 21ಕ್ಕೆ 1.
ಆರ್‌ಸಿಬಿ:77/1 (6.3)
ಬೆಥೆಲ್ 20(11), ಕೊಹ್ಲಿ 23(15)*, ಪಡಿಕ್ಕಲ್ 34(13)*, ಜೇಮಿಸನ್ 42ಕ್ಕೆ 1.

ಪವರ್‌ಪ್ಲೇ ಅತಿ ಕಡಿಮೆ ಮೊತ್ತ!

ದಿಲ್ಲಿ ಕ್ಯಾಪಿಟಲ್ಸ್ ಐಪಿಎಲ್ ಇತಿಹಾಸದಲ್ಲೇ ಅತಿ ಕಡಿಮೆ ಪವರ್‌ಪ್ಲೇ ಸ್ಕೋರ್ ಕಲೆಹಾಕಿ ಕಳಪೆ ದಾಖಲೆಯನ್ನು ಬರೆದಿದೆ. ಕಳೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ **264** ರನ್ ಹೊಡೆದಿದ್ದ ಕ್ಯಾಪಿಟಲ್ಸ್ ತಂಡ, ಇಂತಹದ್ದೊಂದು ಕಳಪೆ ದಾಖಲೆಯನ್ನೂ ಬರೆದಿದೆ. ಪವರ್‌ಪ್ಲೇನ **6** ಓವರ್‌ಗಳಲ್ಲಿ ದಿಲ್ಲಿ ಸ್ಕೋರ್ **6** ವಿಕೆಟ್ ನಷ್ಟಕ್ಕೆ **13** ರನ್ ಆಗಿತ್ತು. ಇದು ಐಪಿಎಲ್ ಇತಿಹಾಸದಲ್ಲೇ ಅತಿ ಕಡಿಮೆ ಪವರ್‌ಪ್ಲೇ ಸ್ಕೋರ್.

ಪವರ್‌ಪ್ಲೇ ಅತಿ ಕಡಿಮೆ ರನ್

- 13/6 - ದಿಲ್ಲಿ, ಆರ್‌ಸಿಬಿ ವಿರುದ್ಧ (2026)
- 14/2 - ರಾಜಸ್ಥಾನ್, ಆರ್‌ಸಿಬಿ ವಿರುದ್ಧ (2009)
- 14/3 - ಹೈದರಾಬಾದ್, ರಾಜಸ್ಥಾನ್ ವಿರುದ್ಧ (2022)
- 15/2 - ಸಿಎಸ್‌ಕೆ, ಕೆಕೆಆರ್ ವಿರುದ್ಧ (2011)
- 16/1 - ಪಂಜಾಬ್, ಆರ್‌ಪಿಎಸ್ ವಿರುದ್ಧ (2017).

ಬಿರುಗಾಳಿಯಿಂದ ಆಟಕ್ಕೆ ಅಡ್ಡಿ!



ದಿಲ್ಲಿ ತಂಡ 9 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 43 ರನ್ ಗಳಿಸಿದ್ದ ಸಂದರ್ಭದಲ್ಲಿ ಭಾರೀ ಬಿರುಗಾಳಿ ಬೀಸಿದ್ದು, ತುಸು ಸಮಯ ಆಟಕ್ಕೆ ಅಡ್ಡಿಯಾಗಿತ್ತು. ಇದರಿಂದ ಸುಯಷ್ ಮೊದಲ ಎಸೆತದಲ್ಲಿ ವಿಕೆಟ್ ಕೀಪರ್ ಜಿತೇಶ್ ಶರ್ಮಾ ಪೊರೆಲ್‌ಗೊಂದು ಜೀವದಾನ ನೀಡಿದ್ದರು. 10ನೇ ಓವರ್ ಮುಗಿಯುವ ಮುನ್ನ ಬಿರುಗಾಳಿಯಿಂದ ಬ್ಯಾಟರ್ ಪೊರೆಲ್ ಕಣ್ಣಿಗೆ ಕಸ ಬಿದ್ದಿದ್ದು, ಆರ್‌ಸಿಬಿಯ ವೆಂಕಟೇಶ್ ಅಯ್ಯರ್ ಕಸ ತೆಗೆದು ಕ್ರೀಡಾಸ್ಫೂರ್ತಿ ಮೆರೆದರು.

ಕಿರುಸುದ್ದಿ

ಪಂಜಾಬ್ ಕಿಂಗ್ಸ್ ತಡೆಯಲು ರಾಯಲ್ಸ್‌ನಿಂದ ಸಾಧ್ಯವೇ?

ಚಂಡೀಗಢ: ಪ್ರಸಕ್ತ ಐಪಿಎಲ್ ಆವೃತ್ತಿಯಲ್ಲಿ ಚೇಸಿಂಗ್‌ನಲ್ಲಿ ಸಿಂಗ್ ಈಸ್ ಕಿಂಗ್ ಎನಿಸಿಕೊಂಡಿರುವ ಪಂಜಾಬ್ ಕಿಂಗ್ಸ್ ಅನ್ನು ರಾಜಸ್ಥಾನ್ ರಾಯಲ್ಸ್‌ಗೆ ಕಟ್ಟಿಹಾಕಲು ಸಾಧ್ಯವೇ? ಎಂಬ ಪ್ರಶ್ನೆ ಎಲ್ಲಾ ಐಪಿಎಲ್ ಅಭಿಮಾನಿಗಳಿಗೆ ಕಾಡುವಂತಿದೆ. ವೇಗಿ ಆರ್ಚರ್ ಮತ್ತು ಬರ್ಗರ್ ಮುಂದೆ ಪಂಜಾಬ್ ಕಿಂಗ್ಸ್ ಬ್ಯಾಟರ್‌ಗಳು ಎಂದಿನಂತೆ ಅಬ್ಬರಿಸುವರೇ ನೋಡಬೇಕಿದೆ. ಪವರ್‌ಪ್ಲೇನಲ್ಲಿ ಪಂಜಾಬ್ ಆರಂಭಿಕರಾದ ಪ್ರಿಯಾಂಶ್ ಮತ್ತು ಪ್ರಭ್‌ಸಿಮ್ರನ್ ಸ್ಫೋಟಕ ಆರಂಭ ನೀಡುತ್ತಾರೆ. ಇನ್ನು ದಾಂಡಿಗರಾದ ಕೂಪರ್ ಕೊನೊಲಿ, ನಾಯಕ ಶ್ರೇಯಸ್ ಅಯ್ಯರ್, ಸ್ಟೊಯಿನಿಸ್, ಶಶಾಂಕ್ ಅವರನ್ನು ಒಳಗೊಂಡಿದೆ. ಆದರೆ ಬೌಲಿಂಗ್‌ನಲ್ಲಿ ಪಂಜಾಬ್ ನಿರೀಕ್ಷಿತ ಪ್ರದರ್ಶನ ನೀಡಿಲ್ಲ, ಕಿಂಗ್ಸ್ ಗೆದ್ದ ಅಷ್ಟೂ ಪಂದ್ಯಗಳನ್ನು ಬ್ಯಾಟರ್‌ಗಳ ಅಬ್ಬರದಿಂದ ಚೇಸ್ ಮಾಡಿ ಗೆದ್ದಿದೆ. ರಾಯಲ್ಸ್ ಏನೂ ಕಡಿಮೆಯಿಲ್ಲ, 15ರ ಪೋರ ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಅವರ ಸ್ಫೋಟಕ ಆರಂಭಿಕ ಜೋಡಿ ಹೊಂದಿದೆ. ಉಳಿದಂತೆ ಜ್ಯುರೆಲ್ ಸ್ಫೋಟಕ ಲಯದಲ್ಲಿದ್ದಾರೆ. ನಾಯಕ ಪರಾಗ್ ಲಯಕ್ಕೆ ಮರಳುವ ಅಗತ್ಯವಿದೆ. ಇದು ರಾತ್ರಿಯ ಪಂದ್ಯವಾಗಿದ್ದು, ಮಂಗಳವಾರ 7.30ಕ್ಕೆ ಆರಂಭವಾಗಲಿದೆ.

ಊಬರ್ ಕಪ್: ಆಸ್ಟ್ರೇಲಿಯಾ ಮಣಿಸಿ ಕ್ವಾರ್ಟರ್‌ಗೆ ಭಾರತ

ಹೊಸದಿಲ್ಲಿ: ಡೆನ್ಮಾರ್ಕ್‌ನಲ್ಲಿ ನಡೆಯುತ್ತಿರುವ ಥಾಮಸ್ ಆ್ಯಂಡ್ ಊಬರ್ ಕಪ್ 2026 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಆಸ್ಟ್ರೇಲಿಯನ್ನರನ್ನು ಸೋಲಿಸಿದ ಭಾರತೀಯ ಪುರುಷರು ಕ್ವಾರ್ಟರ್ ಫೈನಲ್‌ಗೇರಿದ್ದಾರೆ. ಕ್ವಾರ್ಟರ್ ಫೈನಲ್ ಹಂತದಲ್ಲಿ ಚೀನಾ ಸವಾಲನ್ನು ಎದುರಿಸಲಿದ್ದಾರೆ. ಪುರುಷರ ವಿಭಾಗದ ಎ ಗುಂಪಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತೀಯರು 5-0 ಅಂತರದ ಗೆಲುವು ದಾಖಲಿಸಿದ್ದಾರೆ. ಮೊದಲ ಪಂದ್ಯದಲ್ಲಿ ಕೆನಡಾ ವಿರುದ್ಧ 4-1 ಅಂತರದಿಂದ ಗೆದ್ದಿದ್ದ ಭಾರತೀಯರು, ದ್ವಿತೀಯ ಪಂದ್ಯದಲ್ಲಿ ಆಸೀಸ್ ಎದುರು ಭರ್ಜರಿ ಜಯ ಸಾಧಿಸಿ ಕ್ವಾರ್ಟರ್ ಪ್ರವೇಶಿಸಿದ್ದಾರೆ. ಆಸ್ಟ್ರೇಲಿಯಾ ವಿರುದ್ಧದ ಅತಿ ಕಡಿಮೆ 23 ನಿಮಿಷದ ಪಂದ್ಯದಲ್ಲಿ ಆ್ಯಂಡಿಕಾ ಮತ್ತು ಸ್ಟೀಫನ್ ಸ್ಯಾಮ್ ಜೋಡಿ ವಿರುದ್ಧ ಹರಿಹರನ್ ಮತ್ತು ಎಂ.ಆರ್. ಅರ್ಜುನ್ ಜೋಡಿ 21-12, 21-10 ನೇರ ಗೇಮ್‌ಗಳ ಜಯ ಸಾಧಿಸಿದ್ದರು. ಲಕ್ಷ್ಯ ಸೇನ್ ತಮ್ಮ ಮೊದಲ ಪಂದ್ಯದಲ್ಲಿ ಸ್ಯಾಮ್ ಎದುರು 37 ನಿಮಿಷಗಳ ಹೋರಾಟದಲ್ಲಿ 21-14, 21-16 ನೇರ ಗೇಮ್‌ಗಳಿಂದ ಜಯಿಸಿದ್ದರು. ಸಿಂಗಲ್ಸ್ ವಿಭಾಗದ ಇನ್ನೊಂದು ಪಂದ್ಯದಲ್ಲಿ ಏಷ್ಯನ್ ಚಾಂಪಿಯನ್‌ಶಿಪ್ ರಜತ ಪದಕ ವಿಜೇತ ಆಯುಷ್ ಶೆಟ್ಟಿ 21-8, 21-6 ಗೇಮ್‌ಗಳಿಂದ ಶ್ರೇಯ್ ಧಾಂಡ್‌ರನ್ನು ಸೋಲಿಸಿದರು. ಡಬಲ್ಸ್ ವಿಭಾಗದಲ್ಲಿ ರಿಜ್ಕಿ ಹಿದಾಯತ್ ಮತ್ತು ಜ್ಯಾಕ್ ಯು ಜೋಡಿ ವಿರುದ್ಧ 21-14, 21-16 ನೇರ ಗೇಮ್‌ಗಳಿಂದ ಗೆದ್ದ ಸಾತ್ವಿಕ್ ಮತ್ತು ಚಿರಾಗ್ ಶೆಟ್ಟಿ ಜೋಡಿ 3-0 ಮುನ್ನಡೆ ಒದಗಿಸಿದರು. ಮೂರನೇ ಸಿಂಗಲ್ಸ್‌ನಲ್ಲಿ ರಿಶಿ ಹೋಂಡ ಭೂಪತಿ ಅವರನ್ನು 21-11, 21-17 ನೇರ ಗೇಮ್‌ಗಳಿಂದ ಭಾರತದ ಎಚ್.ಎಸ್ ಪ್ರಣಯ್ ಸೋಲಿಸಿದರು.

ಒಸಾಕಾ ಮಣಿಸಿ ಕ್ವಾರ್ಟರ್ ಫೈನಲ್‌ಗೇರಿದ ಸೆಬಲೆಂಕಾ!

ಮ್ಯಾಡ್ರಿಡ್: ವಿಶ್ವ ನಂ.1 ಆಟಗಾರ್ತಿ ಅರೀನಾ ಸೆಬಲೆಂಕಾ ನಾಲ್ಕು ಬಾರಿಯ ಗ್ರ್ಯಾಂಡ್ ಸ್ಲಾಮ್ ಚಾಂಪಿಯನ್ ನಯೊಮಿ ಒಸಾಕಾರನ್ನು ಸೋಲಿಸಿ 5ನೇ ಬಾರಿಗೆ ಮ್ಯಾಡ್ರಿಡ್ ಓಪನ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಸೋಮವಾರ ನಡೆದ ರೋಚಕ ಸೆಣಸಾಟದಲ್ಲಿ ಮೂರು ಬಾರಿಯ ಮ್ಯಾಡ್ರಿಡ್ ಚಾಂಪಿಯನ್ ಸೆಬಲೆಂಕಾ ಈ ಋತುವಿನ ಸತತ 15ನೇ ಗೆಲುವು ದಾಖಲಿಸಿ ತಮ್ಮ ಪ್ರಾಬಲ್ಯ ಮೆರೆದಿದ್ದಾರೆ. ಒಸಾಕಾ ವಿರುದ್ಧ 6-7(1-7), 6-3, 6-2 ಸೆಟ್ ಅಂತರದಲ್ಲಿ ಜಯಿಸಿದ್ದಾರೆ.



ಸೂಪರ್ ಓವರ್ ಗೆದ್ದ ಕೆಕೆಆರ್ | ರಿಂಕು, ನರೇನ್ ಪರಾಕ್ರಮ

ಮೂರೇ ಎಸೆತಕ್ಕೆ ಶರಣಾದ ಜೈಂಟ್ಸ್



ಲಖನೌ: ಅಂಕಪಟ್ಟಿಯಲ್ಲಿ ಕೊನೆಯ 2 ಸ್ಥಾನದಲ್ಲಿದ್ದ ತಂಡಗಳ ನಡುವಿನ ರೋಚಕ ಪಂದ್ಯ, ಐಪಿಎಲ್ 19ನೇ ಆವೃತ್ತಿಯ ಮೊದಲ ಸೂಪರ್ ಓವರ್‌ಗೆ ಸಾಕ್ಷಿಯಾಯಿತು. ಸೂಪರ್ ಓವರ್‌ನಲ್ಲಿ ಸುನೀಲ್ ನರೇನ್ ಅದ್ಭುತ ಬೌಲಿಂಗ್‌ನಿಂದಾಗಿ ಕೆಕೆಆರ್ ಸುಲಭ ಜಯ ದಾಖಲಿಸಿತು.

ಸೂಪರ್ ಓವರ್‌ನಲ್ಲಿ ಮೂರು ಎಸೆತಗಳಷ್ಟೇ ಬ್ಯಾಟ್ ಬೀಸಿದ ಲಖನೌ ಕೇವಲ 1 ರನ್ ಗಳಿಸಿದ್ದು, 2 ವಿಕೆಟ್ ಕಳೆದುಕೊಂಡಿತ್ತು. 2 ರನ್ ಬೆನ್ನತ್ತಿದ ಕೆಕೆಆರ್ ಪರ ರಿಂಕು ಮೊದಲ ಎಸೆತದಲ್ಲೇ ಬೌಂಡರಿ ಹೊಡೆದರು. ಕೆಕೆಆರ್ ಗೆಲ್ಲಬೇಕಿದ್ದ ಪಂದ್ಯವನ್ನು ಸೂಪರ್ ಓವರ್ ತನಕ ಬರಲು ಕಾರಣ ಕಾರ್ತಿಕ್ ತ್ಯಾಗಿ ಕಳಪೆ ಕೊನೆಯ ಓವರ್. ಎರಡು ಫುಲ್ಟಾಸ್ ನೋಬಾಲ್ ಎಸೆಯುವ ಮೂಲಕ ತ್ಯಾಗಿ ಲಖನೌ ನೆರವಾದರೆ, ಕೊನೆಯ ಎಸೆತದಲ್ಲಿ ಸಿಕ್ಸರ್ ಹೊಡೆದು ಮೊಹಮ್ಮದ್ ಶಮಿ ಟೈ ಸಾಧಿಸಲು ನೆರವಾದರು.

ರಿಂಕು, ನರೇನ್ ಪರಾಕ್ರಮ: ಪಂದ್ಯದುದ್ದಕ್ಕೂ ರಿಂಕು ಸಿಂಗ್ ಬ್ಯಾಟಿಂಗ್ ಮತ್ತು ಕ್ಷೇತ್ರರಕ್ಷಣೆಯಲ್ಲೂ ಮಿಂಚುವ ಮೂಲಕ ನೈಟ್ ರೈಡರ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 91ಕ್ಕೆ 7 ವಿಕೆಟ್ ಕಳೆದುಕೊಂಡಿದ್ದ ಕೆಕೆಆರ್‌ಗೆ ಆಪತ್ಬಾಂಧವನಾಗಿ ರಿಂಕು ಐಪಿಎಲ್‌ನ ತಮ್ಮ ವೈಯಕ್ತಿಕ ಅತ್ಯುತ್ತಮ 83 ರನ್ ಚಚ್ಚಿದ್ದರು. ಲಖನೌ ನಾಯಕ ಪಂತ್ (42) ವಿಕೆಟ್ ಕಬಳಿಸಿದ್ದ ನರೇನ್, ಸೂಪರ್ ಓವರ್‌ನಲ್ಲೂ ಮಿಂಚಿದರು. ಸೂಪರ್ ಓವರ್‌ನಲ್ಲಿ ನರೇನ್, ಪೂರನ್ ಮತ್ತು ಮಾರ್ಕ್ರಂ ವಿಕೆಟ್ ಕಬಳಿಸಿದ್ದರು.

ಸಂಕ್ಷಿಪ್ತ ಸ್ಕೋರ್

ಕೆಕೆಆರ್: 155/7 (20)
ರಿಂಕು ಅಜೇಯ 83(51), ಮೊಹ್ಸಿನ್ 23ಕ್ಕೆ 5.
ಲಖನೌ: 155/8 (20)
ರಿಷಭ್ ಪಂತ್ 42(38), ಶಮಿ ಅಜೇಯ 11(6), ನರೇನ್ 23ಕ್ಕೆ 1.

ಸೂಪರ್ ಓವರ್
ಲಖನೌ: 1/2 (0.3), ನರೇನ್ 1ಕ್ಕೆ 2 ವಿಕೆಟ್.
ಕೆಕೆಆರ್: 4/0 (0.1), ರಿಂಕು ಅಜೇಯ 4 ರನ್.

ಪೂರನ್‌ಗೆ ಸೂಪರ್ ಓವರ್ ದೇಜಾ ವು!

ಲಖನೌ-ಕೆಕೆಆರ್ ಸೂಪರ್ ಓವರ್‌ನಲ್ಲಿ ಲಖನೌ ಪರ ನಿಕೋಲಸ್ ಪೂರನ್ ಅವರನ್ನು ಭಡ್ತಿ ನೀಡಿ ಕಳುಹಿಸಲಾಗಿತ್ತು. ಕೆಕೆಆರ್ ಪರ ಸುನೀಲ್ ನರೇನ್ ಬೌಲಿಂಗ್‌ಗಿಳಿದ್ದರು. ಇಬ್ಬರೂ ವಿಂಡೀಸ್ ಆಟಗಾರರ ನಡುವೆ ಪೈಪೋಟಿ ಎದುರಾಗಿತ್ತು. ಇದು ದೇಜಾ ವು (ಹಿಂದೆಲ್ಲೋ ನಡೆದಿರುವ) ಅನುಭೂತಿ ನೀಡಿತ್ತು. **2014**ರ ಸಿಪಿಎಲ್ ಸೂಪರ್ ಓವರ್ ಪಂದ್ಯವೊಂದರಲ್ಲಿ ಪೂರನ್ ಅವರನ್ನು ನರೇನ್ ಔಟ್ ಮಾಡಿದ್ದರು. **2020**ರ ಐಪಿಎಲ್‌ನಲ್ಲಿ ಪಂಜಾಬ್ ಪರ ಆಡಿದ್ದ ಪೂರನ್, ಆರ್‌ಸಿಬಿ ವಿರುದ್ಧ ಸೂಪರ್ ಓವರ್ ಪಂದ್ಯವನ್ನು ಗೆದ್ದಿದ್ದಾಗ **2014**ರ ಸೂಪರ್ ಓವರ್ ನೆನಪಾಗಿತ್ತು ಎಂದಿದ್ದರು. ಇದೀಗ **2014**ರ ಸಿಪಿಎಲ್ ಸೂಪರ್ ಓವರ್ ಕ್ಷಣವೇ **2026**ರ ಐಪಿಎಲ್‌ನಲ್ಲಿ ಇತಿಹಾಸ ಮರುಕಳಿಸಿದೆ. ಪೂರನ್ ವೈಫಲ್ಯ ಕಂಡಿದ್ದು, ನರೇನ್ ವಿಕೆಟ್ ಕಬಳಿಸಿದ್ದಾರೆ.

2 ನೋಬಾಲ್ ಎಸೆದ ತ್ಯಾಗಿ!

ಕೆಕೆಆರ್ ವೇಗಿ ಕಾರ್ತಿಕ್ ತ್ಯಾಗಿ ಲಖನೌ ವಿರುದ್ಧ ಕೊನೆಯ ಓವರ್‌ನಲ್ಲಿ ಎರಡು ಎತ್ತರದ ನೋಬಾಲ್ ಎಸೆದಿದ್ದರು. ಆದರೂ ಅಂಪಾಯರ್‌ಗಳು ಅವರಿಗೆ ಓವರ್ ಪೂರ್ಣಗೊಳಿಸಲು ಅವಕಾಶ ನೀಡಿದ್ದರು. ಎಂಸಿಸಿ ಕ್ರಿಕೆಟ್ ನಿಯಮದ ಪ್ರಕಾರ, ಒಂದು ಓವರ್‌ನಲ್ಲಿ ಬೌಲರ್‌ವೊಬ್ಬ ಎರಡು ಬೀಮರ್ ಎಸೆಯುವಂತಿಲ್ಲ. ಮಾರ್ಗಸೂಚಿ **41.7.3** ಪ್ರಕಾರ, ಅಪಾಯಕಾರಿ ಎಸೆತ ಎಂದೆನಿಸಿದರೆ ಅಂಪಾಯರ್ ನೋಬಾಲ್ ನೀಡಬೇಕು ಮತ್ತು **41.7.4**ರ ಪ್ರಕಾರ, ಅಪಾಯಕಾರಿ ಎಸೆತವನ್ನು ಬೌಲರ್ ಮುಂದುವರಿಸಿದರೆ ಇನ್ನೊಮ್ಮೆ ನೋಬಾಲ್ ಸನ್ನೆ ಮಾಡಿ ಬೌಲರನ್ನು ಅಮಾನತು ಮಾಡಬೇಕು. ತ್ಯಾಗಿ ಎಸೆದ ಎರಡನೇ ನೋಬಾಲ್, ಅಪಾಯಕಾರಿ ಎಸೆತವಲ್ಲ ಎಂಬ ನಿಲುವಿಗೆ ಅಂಪಾಯರ್ಸ್ ಬಂದಿದ್ದರು.

ಮ್ಯಾಡ್ರಿಡ್ ಓಪನ್: 16ರ ಸುತ್ತಿಗೆ ಸಿನ್ನರ್, ಗಾಫ್

ಮ್ಯಾಡ್ರಿಡ್: ಸ್ಪೇನ್ ರಾಜಧಾನಿಯಲ್ಲಿ ನಡೆಯುತ್ತಿರುವ ಮ್ಯಾಡ್ರಿಡ್ ಓಪನ್ ಮಾಸ್ಟರ್ಸ್ 1000 ಪಂದ್ಯಾವಳಿಯಲ್ಲಿ ಇಟಲಿ ಟೆನಿಸಿಗ ಯಾನಿಕ್ ಸಿನ್ನರ್ 16ರ ಸುತ್ತನ್ನು ಪ್ರವೇಶಿಸಿದ್ದಾರೆ. ಭಾನುವಾರ ತಡರಾತ್ರಿ ಪಂದ್ಯದಲ್ಲಿ ಡೆನ್ಮಾರ್ಕ್ ಅರ್ಹತಾ ಸುತ್ತಿನ ಆಟಗಾರ ಎಲ್ಮರ್ ಮೊಲ್ಲರ್ ಅವರನ್ನು 6-2, 6-3 ನೇರ ಸೆಟ್‌ಗಳಿಂದ ಸೋಲಿಸಿ ಸಿನ್ನರ್ ಮುಂದಿನ ಹಂತ ಪ್ರವೇಶಿಸಿದ್ದಾರೆ. ಟೆನಿಸ್ ಇತಿಹಾಸದಲ್ಲಿಯೇ ಸತತ 5ನೇ ಮಾಸ್ಟರ್ಸ್ 1000 ಟೂರ್ನಿ ಗೆದ್ದ ಮೊದಲ ಆಟಗಾರನೆಂಬ ದಾಖಲೆ ಬರೆಯುವ ಗುರಿಯನ್ನು ಸಿನ್ನರ್ ಹೊಂದಿದ್ದಾರೆ. ಇನ್ನೋರ್ವ ಇಟಲಿ ಆಟಗಾರ ಲೊರೆನ್ಜೊ ಮುಸೆಟ್ಟಿ ಸಹ 16ರ ಸುತ್ತು ಪ್ರವೇಶಿಸಿದ್ದಾರೆ. ಹೊಟ್ಟೆನೋವಿನಿಂದ ಬಳಲುತ್ತಿದ್ದ ಅಮೆರಿಕ ಆಟಗಾರ್ತಿ ಕೊಕೊ ಗಾಫ್ ವಾಂತಿ ಮಾಡಿದ್ದರೂ, ಸೊರನಾ ಅವರನ್ನು 4-6, 7-5, 6-1ರಿಂದ ಮಣಿಸಿ 16ರ ಸುತ್ತನ್ನು ಪ್ರವೇಶಿಸಿದ್ದಾರೆ.



ಆರ್‌ಸಿಬಿ-ಗುಜರಾತ್ ಪಂದ್ಯದ ವೇಳೆ ನಡೆದ ಘಟನೆ

ಸಿಸಿಟಿವಿ ಕೇಬಲ್ ಕತ್ತರಿಸಿದವರ ಸೆರೆ

ಬೆಂಗಳೂರು: ಐಪಿಎಲ್ ಕ್ರಿಕೆಟ್ ಪಂದ್ಯದ ನಡುವೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭದ್ರತಾ ಲೋಪದ ಆತಂಕ ಸೃಷ್ಟಿಸಿದ್ದ ಘಟನೆಗೆ ಇದೀಗ ಅಚ್ಚರಿಯ ತಿರುವು ಸಿಕ್ಕಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಟೈಟಾನ್ಸ್ ನಡುವಿನ ಪಂದ್ಯದ ವೇಳೆ ಸುಮಾರು 240ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾಗಳ ಕೇಬಲ್ ಕತ್ತರಿಸಿ ಪೊಲೀಸರನ್ನು ಹೈರಾಣಾಗಿಸಿದ್ದ ಕಿಡಿಗೇಡಿಗಳನ್ನು ಕಬ್ಬನ್ ಪಾರ್ಕ್ ಪೊಲೀಸರು ಬಂಧಿಸಿದ್ದಾರೆ. ಆದರೆ, ಈ ಕೃತ್ಯದ ಹಿಂದೆ ಯಾವುದೇ ವಿಧ್ವಂಸಕ ಸಂಚಿರಲಿಲ್ಲ, ಬದಲಾಗಿ ಬಾಕಿ ಸಂಬಳಕ್ಕಾಗಿ ನಡೆದ ಪ್ರತಿಭಟನೆ ಎಂಬುದು ವಿಚಾರಣೆಯಿಂದ ಬಯಲಾಗಿದೆ.

ಸಂಬಳದ ವಿವಾದವೇ ಮುಳುವಾಯಿತು: ಕ್ರೀಡಾಂಗಣದ ಸಿಸಿಟಿವಿ ನಿರ್ವಹಣೆಯ ಉಪಗುತ್ತಿಗೆ ಪಡೆದಿದ್ದ ಐವಿಎಸ್ ಡಿಜಿಟಲ್ ಸೊಲ್ಯೂಷನ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಮಂಜುನಾಥ್ ಹಾಗೂ ಅಬ್ದುಲ್ ಕಲಾಂ ಎಂಬುವರೇ ಈ ಕೃತ್ಯದ ರೂವಾರಿಗಳು. ಹಲವು ತಿಂಗಳಿಂದ ಬರಬೇಕಿದ್ದ ಸಂಬಳವನ್ನು ಕಂಪನಿ ನೀಡದ ಕಾರಣ ರೋಸಿಹೋಗಿದ್ದ ಈ ಇಬ್ಬರು ಸಿಬ್ಬಂದಿ, ಸಂಸ್ಥೆಗೆ ಹಾಗೂ ಪೊಲೀಸರಿಗೆ ತಕ್ಕ ಪಾಠ ಕಲಿಸಲು ನಿರ್ಧರಿಸಿದ್ದರು. ಪಂದ್ಯದ ದಿನವೇ ಸರ್ವರ್ ರೂಂಗೆ ಅನಧಿಕೃತವಾಗಿ ಪ್ರವೇಶಿಸಿ, ಎನ್‌ವಿಆರ್ ಮತ್ತು ಫೈಬರ್ ಸಂಪರ್ಕಗಳನ್ನು ಕಡಿತಗೊಳಿಸಿ ಇಡೀ ಭದ್ರತಾ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿದ್ದರು.



ಪೊಲೀಸರ ಸಮಯಪ್ರಜ್ಞೆ: ಪಂದ್ಯದ ಸಂಜೆಯ ಹೊತ್ತಿಗೆ ಏಕಾಏಕಿ ಸಿಸಿಟಿವಿ ಫೀಡ್ ಸ್ಥಗಿತಗೊಂಡಾಗ ಭದ್ರತಾ ನಿಯಂತ್ರಣ ಕೊಠಡಿಯಲ್ಲಿದ್ದ ಪೊಲೀಸರು ತೀವ್ರ ಆತಂಕಕ್ಕೆ ಒಳಗಾಗಿದ್ದರು. ಸಾವಿರಾರು ಪ್ರೇಕ್ಷಕರು ಸೇರುವ ಹೈ-ವೋಲ್ಟೇಜ್ ಪಂದ್ಯದ ವೇಳೆ ಇದು ಯಾವುದೋ ದೊಡ್ಡ ಸಂಚಿನ ಭಾಗವಿರಬಹುದು ಎಂದು ಶಂಕಿಸಲಾಗಿತ್ತು. ತಕ್ಷಣವೇ ಕಾರ್ಯಪ್ರವೃತ್ತರಾದ ಹಿರಿಯ ಅಧಿಕಾರಿಗಳು ಬದಲಿ ತಾಂತ್ರಿಕ ವ್ಯವಸ್ಥೆಯನ್ನು ಕಲ್ಪಿಸುವ ಮೂಲಕ ಪರಿಸ್ಥಿತಿಯನ್ನು ಹತೋಟಿಗೆ ತಂದರು. ಒಂದು ವೇಳೆ ಪೊಲೀಸರು ಸಮಯಪ್ರಜ್ಞೆ ಮೆರೆಯದಿದ್ದರೆ ಪಂದ್ಯದ ಭದ್ರತೆಗೆ ದೊಡ್ಡ ಹೊಡೆತ ಬೀಳುವ ಸಾಧ್ಯತೆಯಿತ್ತು.

ಸದ್ಯ ಆರೋಪಿಗಳನ್ನು ಬಂಧಿಸಿರುವ ಕಬ್ಬನ್ ಪಾರ್ಕ್ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ತಾಂತ್ರಿಕ ಆಧಾರದ ಮೇಲೆ ಈ ಕಿಡಿಗೇಡಿಗಳನ್ನು ಪತ್ತೆಹಚ್ಚಲಾಗಿದ್ದು ಇಬ್ಬರೂ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ.

ದಕ್ಷಿಣ ಆಫ್ರಿಕಾ ವಿರುದ್ಧ 5 ಪಂದ್ಯಗಳ ಟಿ-20 ಸರಣಿ

ವನಿತೆಯರಿಗೆ ಸರಣಿ ಸೋಲು

ಬೆನೋನಿ: ದ.ಆಫ್ರಿಕಾ ಪ್ರವಾಸದಲ್ಲಿ ನಡೆದ ಟಿ20 ಸರಣಿಯಲ್ಲಿ ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಭಾರತೀಯ ವನಿತೆಯರು 4-1 ಅಂತರದಲ್ಲಿ ಹೀನಾಯ ಸರಣಿ ಸೋಲುಂಡಿದ್ದಾರೆ. ಸೋಮವಾರ ರಾತ್ರಿ ನಡೆದ ಐದನೇ, ಅಂತಿಮ ಟಿ20 ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವನಿತೆಯರು 23 ರನ್‌ಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಮೊದಲು ಬ್ಯಾಟಿಂಗ್ ಮಾಡಿತ್ತು. ಪವರ್‌ಪ್ಲೇನಲ್ಲಿ ಆಫ್ರಿಕಾ ವನಿತೆಯರು ವಿಕೆಟ್ ನಷ್ಟವಿಲ್ಲದೆ 49 ರನ್ ಗಳಿಸಿ ಉತ್ತಮ ಅಡಿಪಾಯ ಹಾಕಿಕೊಂಡಿತ್ತು. ನಾಯಕಿ ಲೌರಾ ವೋಲ್ವಾರ್ಡ್ ಅವರ ಜವಾಬ್ದಾರಿಯುತ, 11 ಬೌಂಡರಿ ಮತ್ತು 2 ಸಿಕ್ಸರ್‌ಗಳಿದ್ದ ಸ್ಫೋಟಕ 92 ರನ್ ನೆರವಿನಿಂದ ದಕ್ಷಿಣ ಆಫ್ರಿಕಾ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 155 ರನ್ ಕಲೆಹಾಕಿತು. ರೇಣುಕಾ, ಶ್ರೀಚಾರಣಿ ಮತ್ತು ದೀಪ್ತಿ ಬೌಲಿಂಗ್ ದಾಳಿಗೆ ಅದು ಕುಸಿತ ಕಂಡರೂ ಸ್ಪರ್ಧಾತ್ಮಕ ಮೊತ್ತ ಪೇರಿಸಿತು.

ಫುಲ್‌ಮಾಲಿ, ರಿಚಾ ಹೋರಾಟ ವ್ಯರ್ಥ: ಭಾರತ ಪರ ಭಾರ್ತಿ ಫುಲ್‌ಮಾಲಿ 40 ರನ್ ಮಾಡಿದ್ದು ವೈಯಕ್ತಿಕ ಗರಿಷ್ಠವಾಗಿದ್ದು, ಕೊನೆಯ ಓವರ್‌ವರೆಗೂ ಸಿಕ್ಸರ್ ಹೊಡೆದಿದ್ದ ಏಕೈಕ ಬ್ಯಾಟರ್ ಆಗಿದ್ದರು. ಆದರೆ ಕೊನೆಯಲ್ಲಿ ರಿಚಾ ಘೋಷ್ ಆಕ್ರಮಣಕಾರಿ ಆಟದಿಂದ ಸಿಕ್ಸರ್ ಹೊಡೆದರೂ ಪಂದ್ಯದಲ್ಲಿ ಭಾರತ ಸೋಲುಂಡಿತು. ದಕ್ಷಿಣ ಆಫ್ರಿಕಾ ನಾಯಕಿ ಲೌರಾ ವೋಲ್ವಾರ್ಡ್ ಭಾರತ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಯಲ್ಲಿ ಶೇ.100 ಟಾಸ್ ಗೆದ್ದಿದ್ದಾರೆ. ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಎದುರು ವೋಲ್ವಾರ್ಡ್ ಸತತ 5ನೇ ಬಾರಿ ಟಾಸ್ ಗೆದ್ದರು. ಮೊದಲ ಮೂರು ಪಂದ್ಯಗಳನ್ನು ದಕ್ಷಿಣ ಆಫ್ರಿಕಾ ಗೆದ್ದಿದ್ದು, ನಾಲ್ಕನೇ ಪಂದ್ಯವನ್ನು ಭಾರತದ ವನಿತೆಯರು ಗೆದ್ದಿದ್ದರು. ಕೊನೆಯ ಪಂದ್ಯ ಮತ್ತೆ ಆಫ್ರಿಕಾ ಗೆದ್ದು, 4-1 ಮುನ್ನಡೆ ಸಾಧಿಸಿತು.

ಸಂಕ್ಷಿಪ್ತ ಸ್ಕೋರ್

ದಕ್ಷಿಣ ಆಫ್ರಿಕಾ (ವ):155/6(20)
ವೋಲ್ವಾರ್ಡ್ 92(56)*, ಲೂಸ್ 23(23), ರೇಣುಕಾ 23ಕ್ಕೆ 2, ಚಾರಣಿ 22ಕ್ಕೆ 2, ದೀಪ್ತಿ 37ಕ್ಕೆ 2.
ಭಾರತ (ವ): 132/8 (20)
ಭಾರ್ತಿ ಫುಲ್‌ಮಾಲಿ 40(30), ರಿಚಾ ಘೋಷ್ 25(15)*, ಎಂಲಾಬ್ 15ಕ್ಕೆ 2, ಡಿ ಕರ್ಕ್ 26ಕ್ಕೆ 2.

ಏಷ್ಯನ್ ಬೀಚ್ ಗೇಮ್ಸ್: ಭಾರತೀಯರಿಗೆ ದಾಖಲೆಯ 6ನೇ ಪ್ರಶಸ್ತಿ

ಭಾರತ ವನಿತೆಯರೇ ಕಬಡ್ಡಿ ಚಾಂಪಿಯನ್!

ಸಾನ್ಯಾ: ಚೀನಾದಲ್ಲಿ ನಡೆದ ಏಷ್ಯನ್ ಬೀಚ್ ಗೇಮ್ಸ್ 2026ರ ಕಬಡ್ಡಿ ಸ್ಪರ್ಧೆಯಲ್ಲಿ ಭಾರತೀಯ ಮಹಿಳಾ ಕಬಡ್ಡಿ ತಂಡ ಸ್ವರ್ಣ ಪದಕವನ್ನು ಗೆದ್ದುಕೊಂಡು ಚಾಂಪಿಯನ್ ಪಟ್ಟ ಉಳಿಸಿಕೊಂಡಿದೆ. ಇದು ಏಷ್ಯನ್ ಬೀಚ್ ಗೇಮ್ಸ್‌ನ 6ನೇ ಆವೃತ್ತಿಯಾಗಿದ್ದು, ಭಾರತೀಯ ವನಿತೆಯರಿಗೆ ಇದು ಸತತ 6ನೇ ಪ್ರಶಸ್ತಿಯಾಗಿದೆ.

ಸೋಮವಾರ ನಡೆದ ಫೈನಲ್‌ನಲ್ಲಿ ಶ್ರೀಲಂಕಾ ವನಿತೆಯರ ವಿರುದ್ಧ 47-31 ಅಂಕಗಳ ಜಯ ಸಾಧಿಸಿದ ಭಾರತೀಯ ವನಿತೆಯರಿಗೆ ಇದು ಸತತ 6ನೇ ಏಷ್ಯನ್ ಬೀಚ್ ಗೇಮ್ಸ್ ಪ್ರಶಸ್ತಿಯಾಗಿದೆ. ಪುರುಷರ ವಿಭಾಗದಲ್ಲಿ ಭಾರತೀಯರ ಸತತ ಎರಡನೇ ಬಾರಿಗೆ ರಜತ ಪದಕವನ್ನು ಗೆದ್ದು ರನ್ನರ್ ಅಪ್ ಪ್ರಶಸ್ತಿಗೆ ತೃಪ್ತರಾಗಿದ್ದಾರೆ.

ಫೈನಲ್ ಮೊದಲಾರ್ಧ ಭಾರತ ಮಹಿಳೆಯರು 20-18 ಅಂಕಗಳ ಮುನ್ನಡೆ ಸಾಧಿಸಿದ್ದರು. ಸೆಮಿಫೈನಲ್‌ನಲ್ಲಿ ಭಾರತೀಯ ಮಹಿಳಾ ಕಬಡ್ಡಿ ತಂಡವು ಬಾಂಗ್ಲಾದೇಶ ತಂಡವನ್ನು 50-31 ಅಂಕಗಳಿಂದ ಸೋಲಿಸಿತ್ತು. ಆರು ಸದಸ್ಯರ ಭಾರತ ವನಿತೆಯರ ತಂಡ ನಾಯಕಿ ರಿತು, ಮನೀಶಾ ಕುಮಾರಿ, ಸಿಮ್ರನ್ ಕಂಬೋಜ್, ಮನ್‌ಪ್ರೀತ್ ಕೌರ್, ನಿಕಿತಾ ಮತ್ತು ನಿಕಿತಾ ಚೌಹಾನ್ ಅವರನ್ನು ಒಳಗೊಂಡಿದೆ. 2016ರ ಆವೃತ್ತಿಯ ಫೈನಲ್‌ನಲ್ಲಿ ಥೈಲ್ಯಾಂಡ್ ತಂಡವನ್ನು ಭಾರತ ಪರಾಭವಗೊಳಿಸಿ ಚಾಂಪಿಯನ್ ಆಗಿತ್ತು.




ಭಾರತೀಯ ಪುರುಷರಿಗೆ ಸತತ ರಜತ

ಕಳೆದ ಆವೃತ್ತಿಯಲ್ಲಿ ಪುರುಷರ ವಿಭಾಗದ ಕಬಡ್ಡಿ ಫೈನಲ್‌ನಲ್ಲಿ ಬದ್ಧವೈರಿ ಪಾಕಿಸ್ತಾನ ವಿರುದ್ಧ ಸೋತು ರಜತ ಪದಕ ಪಡೆದುಕೊಂಡಿದ್ದ ಭಾರತ, ಈ ಆವೃತ್ತಿಯ ಬೀಚ್ ಗೇಮ್ಸ್ ಕಬಡ್ಡಿ ಫೈನಲ್‌ನಲ್ಲಿ ಇರಾನ್ ಎದುರು ಫೈನಲ್‌ನಲ್ಲಿ **31-44** ಅಂಕಗಳ ಅಂತರದಿಂದ ಸೋಲುಂಡಿದೆ. ಪಂದ್ಯದ ಮೊದಲಾರ್ಧದಲ್ಲೇ **11-23** ಅಂಕಗಳ ಹಿನ್ನಡೆ ಅನುಭವಿಸಿದ್ದ ಭಾರತ, ದ್ವಿತೀಯಾರ್ಧ ಮೇಲೇಳಲು ಸಾಧ್ಯವಾಗಿಲ್ಲ. ಸೆಮಿಫೈನಲ್‌ನಲ್ಲಿ ಭಾರತ ಕಳೆದ ಬಾರಿಯ ಚಾಂಪಿಯನ್ ಪಾಕಿಸ್ತಾನವನ್ನು **50-27** ಅಂಕಗಳಿಂದ ಭರ್ಜರಿ ಸೋಲುಣಿಸಿತ್ತು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5967

ಎಡದಿಂದ ಬಲಕ್ಕೆ
1.ಕಾರ್ಯಕ್ರಮ ಮುಂತಾದವುಗಳಲ್ಲಿ ಪಾಲುಗೊಳ್ಳು (5)
3.ಹೆಸರಿಲ್ಲದಂತೆ ನಾಶ ಮಾಡು (3)
5.ಮನುವಿನಿಂದ ಹುಟ್ಟಿದ ಬುದ್ಧಿವಂತ ಪ್ರಾಣಿ (3)
6.ಮರದ ಕೆಳಗೆ ಕಾಣಿಸಿದ ಮಹಿಳೆ (3)
8.ಒಳ್ಳೆಯದರ, ವಿಜಯದ ಸಂಕೇತವೆನಿಸುವ ಹಬ್ಬ (3)
10.ಅದರಲ್ಲಿಯೇ ಮಗ್ನನಾಗುವಿಕೆ (3)
13.ಶಿವ ಮೊದಲಿರುವ ಮಣ್ಣಿನ ಮಡಕೆ (3)
15.ಒಣಕೊಬ್ಬರಿ-ಗೋಟು ತೆಂಗು (3)
16.ರಾಣಿ ಹಿಡಿದಿರುವ ಢಾಲು (3)
17.ವ್ಯಕ್ತಿಗಳ ನಡುವಿನ ಜೈವಿಕ ಬಾಂಧವ್ಯ (5)

ಮೇಲಿನಿಂದ ಕೆಳಕ್ಕೆ
1.ಭಾರತದ ಖಗೋಳ ಶಾಸ್ತ್ರಜ್ಞ (3)
2.ಸುರ-ಮಧು ಒಳಗೊಂಡ ಇಂಪಾದುದು (4)
3.ಶಾಶ್ವತವಾದ ಪದವಿ-ಮೋಕ್ಷ (4)
4.ಮಕರದ ಮೇಲೆ ಕುಳಿತುಕೊಂಡ ದುಂಬಿ (4)
7.ನಾಟಕ-ಸಿನಿಮಾಗಳ ನಡುವಿನ ವಿರಾಮ (4)
9.ಪರಸ್ಪರ ಸಹಾಯ (4)
10.ಅತಿಯಾದ ಆಶ್ಚರ್ಯ (4)
11.ಅಲೆಗಳಿಂದ ಕೂಡಿದ ನದಿ (4)
12.ಕಾಳಿನಿಂದ ಮೊಳಕೆ ಬರುವುದು (4)
14.ವಿರುದ್ಧಾಭಿಪ್ರಾಯ ಸೂಚಿಸು (3)

5964 ಉತ್ತರ

ಎಡದಿಂದ ಬಲಕ್ಕೆ:
1.ಭದ್ರಲಕ್ಷಣ
3.ಕಂಬಳಿ 4.ದಾರಂದ
5.ಪ್ರಪಾತ 7.ಕನಸು
9.ಮಾತಂಗ 10.ಚಿಗರೆ
12.ಅಣಕು 14.ಪದುಮ
16.ರಸನ 17.ಬತ್ತೀಸ
18.ನಟಿಕೆಮುರಿ

ಮೇಲಿನಿಂದ ಕೆಳಕ್ಕೆ :
1.ಭರತ 2.ತಂಗುದಾಣ
3.ಕಂದಕ 6.ಪಾಣಿಗ್ರಹಣ
8.ನಜರುಕೈದು
11.ಗಜಾನನ 13.ಸರಕು
15.ಮಜೂರಿ

12 ಎಕರೆ ಪ್ರದೇಶದಲ್ಲಿ ಹೈಟೆಕ್ ಪಾರ್ಕಿಂಗ್ ವ್ಯವಸ್ಥೆ

ಆನೆಗುಂದಿ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್



ವಿಜಯನಗರ: ಐತಿಹಾಸಿಕ ಆನೆಗುಂದಿ ಪ್ರದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಗಂಗಾವತಿ ಶಾಸಕ ಗಾಲಿ ಜನಾರ್ದನ ರೆಡ್ಡಿ ಅಧ್ಯಕ್ಷತೆಯಲ್ಲಿ ಸೋಮವಾರ ಮಹತ್ವದ ಸಭೆ ನಡೆಯಿತು.

ಹೊಸಪೇಟೆ ತಾಲೂಕಿನ ಕಮಲಾಪುರದಲ್ಲಿರುವ ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ(ಹವಾಮ) ಕಚೇರಿಯಲ್ಲಿ ನಡೆದ ಈ ಸಭೆಯಲ್ಲಿ ಪ್ರವಾಸಿಗರ ಸೌಲಭ್ಯ ಹಾಗೂ ಸ್ಥಳೀಯರ ಉದ್ಯೋಗಾವಕಾಶಗಳಿಗೆ ಪೂರಕವಾದ ಹಲವು ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲಾಯಿತು.

ಆನೆಗುಂದಿಯ ನವಬೃಂದಾವನ, ಚಿಂತಾಮಣಿ ಹಾಗೂ ರಂಗನಾಥಸ್ವಾಮಿ ದೇವಸ್ಥಾನಗಳಿಗೆ ಆಗಮಿಸುವ ಪ್ರವಾಸಿಗರ ವಾಹನ ದಟ್ಟಣೆ ನಿಯಂತ್ರಿಸಲು 12 ಎಕರೆ ವಿಸ್ತೀರ್ಣದಲ್ಲಿ ಬೃಹತ್ ಪಾರ್ಕಿಂಗ್ ವ್ಯವಸ್ಥೆ ಮಾಡಲು ತೀರ್ಮಾನಿಸಲಾಗಿದೆ. ಇಲ್ಲಿ ಕೇವಲ ಪಾರ್ಕಿಂಗ್ ಮಾತ್ರವಲ್ಲದೆ, ವಾಣಿಜ್ಯ ಸಂಕೀರ್ಣ, ಸುಸಜ್ಜಿತ ತಂಗುದಾಣ ಹಾಗೂ ಶೌಚಾಲಯಗಳನ್ನು ನಿರ್ಮಿಸಲಾಗುವುದು. ಪಾರ್ಕಿಂಗ್ ಸ್ಥಳದಿಂದ ಪ್ರವಾಸಿಗರು ಆನೆಗುಂದಿಯ ಒಳಭಾಗಕ್ಕೆ ಭೇಟಿ ನೀಡಲು ಬ್ಯಾಟರಿ ಚಾಲಿತ ವಾಹನಗಳ ವ್ಯವಸ್ಥೆ ಮಾಡಬೇಕು ಎಂದು ಶಾಸಕರು ತಿಳಿಸಿದರು.

ಸ್ಥಳೀಯವಾಗಿ ಪ್ರವಾಸೋದ್ಯಮ ಬೆಳೆಸಲು ಹೋಮ್ ಸ್ಟೇಗಳಿಗೆ ಇರುವ ಕಟ್ಟುನಿಟ್ಟಿನ ನಿಯಮಗಳಿಂದ ವಿನಾಯಿತಿ ನೀಡಿ, ಶೀಘ್ರವಾಗಿ ಪರವಾನಿಗೆ ನೀಡಲು ಪ್ರವಾಸೋದ್ಯಮ ಇಲಾಖೆಗೆ ಸೂಚಿಸುವುದಾಗಿ ತಿಳಿಸಿದರು.

ಆನೆಗುಂದಿ ವ್ಯಾಪ್ತಿಯ ಗ್ರಾಮಗಳಲ್ಲಿ ಮನೆ ನಿರ್ಮಾಣ ಹಾಗೂ ಮೂಲಭೂತ ಸೌಕರ್ಯಗಳ ಕುರಿತಂತೆ ಇರುವ ಸಮಸ್ಯೆಗಳ ನಿವಾರಣೆಗೆ ಮುಂದಿನ ದಿನಗಳಲ್ಲಿ ಕಂದಾಯ, ಪ್ರವಾಸೋದ್ಯಮ ಹಾಗೂ ಹವಾಮ ಇಲಾಖೆಗಳ ಜಂಟಿ ಸಮನ್ವಯ ಸಭೆ ನಡೆಸಿ ಶಾಶ್ವತ ಪರಿಹಾರ ಒದಗಿಸಲಾಗುವುದು ಎಂದು ಶಾಸಕರು ಭರವಸೆ ನೀಡಿದರು.

ಅದಕ್ಕೆ ಉತ್ತರಿಸಿದ ಹವಾಮಾ ಆಯುಕ್ತ ರಮೇಶ್ ವಟಗಲ್, ಆನೆಗುಂದಿಯಲ್ಲಿ ಪಾರ್ಕಿಂಗ್ ನಿರ್ಮಾಣಕ್ಕೆ ಈಗಾಗಲೇ 2.5 ಕೋಟಿ ರೂ. ಹವಾಮಾ ಬಜೆಟ್‌ನಲ್ಲಿ ತೆಗೆದಿರಿಸಲಾಗಿದೆ. ಈ ಹಿಂದೆ ತಾವು ಪ್ರವಾಸೋದ್ಯಮ ಇಲಾಖೆ ಸಚಿವರಾಗಿದ್ದಾಗ ರೂಪಸಿದ್ದ ಹವಾಮಾ ನಿಯಮಗಳೇ ಪಾಲನೆಯಲ್ಲಿದೆ. ಹವಾಮಾ ವ್ಯಾಪ್ತಿಯ ಹೊಸ ಹೋಮ್ ಸ್ಟೇಗಳಿಗೆ ಅವಕಾಶವಿಲ್ಲ. ಈಗಿರುವ ಹೋಮ್ ಸ್ಟೇಗಳಿಗೆ ಯಾವುದೇ ತಕರಾರುಗಳಿಲ್ಲ.ಭೂ ಮಾಲೀಕರು ಕೇವಲ 1 ರಿಂದ 6 ಕೊಠಡಿಗಳವರೆಗೆ ಮಾತ್ರ ಹೋಮ್ ಸ್ಟೇ ನಿರ್ಮಿಸಲು ಅವಕಾಶವಿದೆ. ಅವುಗಳನ್ನು ಮತ್ತೊಬ್ಬರಿಗೆ ವಹಿಸದೇ, ಅವರೇ ನಿರ್ವಹಣೆ ಮಾಡಬೇಕು ಎಂದು ಸ್ಪಷ್ಟಪಡಿಸಿದರು. ಸಭೆಯಲ್ಲಿ ಹವಾಮ ಆಯುಕ್ತ ರಮೇಶ್ ವಟಗಲ್, ಆನೆಗುಂದಿ ರಾಜವಂಶಸ್ಥರಾದ ರಾಜ ಶ್ರೀಕೃಷ್ಣದೇವರಾಯಲು, ರತ್ನಶ್ರೀ ಕೃಷ್ಣದೇವರಾಯಲು, ಪ್ರಮುಖರಾದ ಯಮನೂರು ಚೌಡ್ಕಿ, ಟಿ.ಜಿ. ಬಾಬು, ಮಲ್ಲಿಕಾರ್ಜುನಸ್ವಾಮಿ, ಮಂಜುನಾಥ ಕಲಾಲ್ ಸೇರಿದಂತೆ ಹತ್ತಾರು ಗ್ರಾಮ ಮುಖಂಡರು ಭಾಗವಹಿಸಿದ್ದರು.

ಕಾಂಗ್ರೆಸ್ ಮಹಿಳಾ ವಿರೋಧಿಯಲ್ಲ: ಹೆಬ್ಬಾಳ್ಕರ್



ಬೆಳಗಾವಿ: ಕಾಂಗ್ರೆಸ್ ಯಾವತ್ತೂ ಮಹಿಳಾ ವಿರೋಧಿ ಅಲ್ಲ, ಮಹಿಳಾ ಸಬಲೀಕರಣಕ್ಕಾಗಿ ಹೋರಾಟ ಮಾಡಿದ ಇತಿಹಾಸ ಕಾಂಗ್ರೆಸ್‌ನದ್ದು. ಆದರೆ, ಭಾರತೀಯ ಜನತಾ ಪಾರ್ಟಿ ಮಹಿಳಾ ಮೀಸಲಾತಿ ವಿಷಯವನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.

ಬೆಳಗಾವಿಯ ಕಾಂಗ್ರೆಸ್ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊದಲ ಮಹಿಳಾ ಪ್ರಧಾನಿ (ಇಂದಿರಾ ಗಾಂಧಿ) ಮಾಡಿದ್ದು ಕಾಂಗ್ರೆಸ್, ಮೊದಲ ಮಹಿಳಾ ರಾಷ್ಟ್ರಪತಿ (ಪ್ರತಿಭಾ ಪಾಟೀಲ) ಮಾಡಿದ್ದು ಕಾಂಗ್ರೆಸ್, ಮೊದಲ ಮಹಿಳಾ ಮುಖ್ಯಮಂತ್ರಿ (ಸುಚೇತಾ ಕೃಪಾಲಿನಿ, 1963 ಉತ್ತರ ಪ್ರದೇಶ) ಮಾಡಿದ್ದು ಕಾಂಗ್ರೆಸ್, ಮೊದಲ ಮಹಿಳಾ ಮಂತ್ರಿ (ರಾಜಕುಮಾರಿ ಅಮೃತ ಕೌರ್, 1947) ಮಾಡಿದ್ದು ಕಾಂಗ್ರೆಸ್, ಮೊದಲ ಮಹಿಳಾ ಎಂಪಿ (ರಾಧಾಬಾಯಿ ಸುಬಾರಾಯನ್, 1952) ಮಾಡಿದ್ದು ಕಾಂಗ್ರೆಸ್, ಮೊದಲ ಮಹಿಳಾ ಶಾಸಕಿ (ಮುತ್ತುಲಕ್ಷ್ಮೀ ರೆಡ್ಡಿ, 1927) ಮಾಡಿದ್ದು ಕಾಂಗ್ರೆಸ್, ಮೊದಲ ಮಹಿಳಾ ಪಂಚಾಯತ್ ಅಧ್ಯಕ್ಷೆ ಮಾಡಿದ್ದು ಕಾಂಗ್ರೆಸ್. ಇವೆಲ್ಲವೂ ಕಾಂಗ್ರೆಸ್ ನೀಡಿದ ಅವಕಾಶಗಳೇ. ಇದು ಮಹಿಳಾ ಪರ ನಿಲುವಿನ ಜೀವಂತ ಸಾಕ್ಷಿ. ನಮ್ಮ ಗ್ಯಾರಂಟಿ ಯೋಜನೆಗಳು ಸಹ ಮಹಿಳಾ ಸಬಲೀಕರಣದ ಪರವಾಗಿಯೇ ಇದೆ ಎಂದು ಹೇಳಿದರು.

ಬಿಜೆಪಿ ನಮ್ಮ ಮೇಲೆ ಮಾಡುತ್ತಿರುವ 'ಮಹಿಳಾ ವಿರೋಧಿ' ಎಂಬ ಆರೋಪ ಸಂಪೂರ್ಣ ಸುಳ್ಳು ಮತ್ತು ಜನರನ್ನು ತಪ್ಪು ದಾರಿಗೆ ಎಳೆಯುವ ಪ್ರಯತ್ನ. ಇದು ಪೂರ್ವಯೋಜಿತ. ಮಹಿಳಾ ಮೀಸಲಾತಿ ಜೊತೆಗೆ ಕ್ಷೇತ್ರ ವಿಂಗಡಣೆ ವಿಷಯವನ್ನೂ ಜೋಡಿಸಿದ್ದರಿಂದ ಸೋಲಾಯಿತು. ಬಿಜೆಪಿಗೆ ಸೋಲುವುದು ಮೊದಲೇ ಗೊತ್ತಿತ್ತು. ಹಾಗಾಗಿ ಕಾಂಗ್ರೆಸ್ ಮೇಲೆ ಆರೋಪ ಹೊರಿಸಲು ವ್ಯವಸ್ಥಿತ ಕುತಂತ್ರ ಮಾಡಿದೆ ಎಂದು ಅವರು ಆರೋಪಿಸಿದರು.

ಮಹಿಳಾ ಮೀಸಲಾತಿ ಬೇರೆ ವಿಷಯ, ಕ್ಷೇತ್ರ ಮರುವಿಂಗಡಣೆ ಬೇರೆ ವಿಷಯ. ಈ ಎರಡನ್ನೂ ಒಟ್ಟಿಗೆ ಕಟ್ಟಿ ಮಸೂದೆ ತಂದು ಗೊಂದಲ ಸೃಷ್ಟಿಸಿರುವುದು ಬಿಜೆಪಿಯ ರಾಜಕೀಯ ಲೆಕ್ಕಾಚಾರ. ಹೀಗಾಗಿ ಮಸೂದೆ ಸೋಲಿಗೆ ಕಾರಣ ಕಾಂಗ್ರೆಸ್ ಅಲ್ಲ, ಅನಗತ್ಯ ಷರತ್ತುಗಳನ್ನು ಸೇರಿಸಿ ಅದನ್ನು ಸಂಕೀರ್ಣಗೊಳಿಸಿದ ಬಿಜೆಪಿ ಕ್ರಮವೇ ನಿಜವಾದ ಕಾರಣ ಎಂದು ಹೇಳಿದರು.

ರಾಜಕೀಯ ಆಟದ ವಿಷಯವಲ್ಲ

ಅದು ಮಹಿಳೆಯರ ಹಕ್ಕಿನ ಪ್ರಶ್ನೆ. ಕಾಂಗ್ರೆಸ್ ಮಹಿಳೆಯರ ಪರ ನಿಂತಿತ್ತು, ನಿಂತಿದೆ, ಮುಂದೆಯೂ ನಿಂತೇ ಇರುತ್ತದೆ. ಸುಳ್ಳು ಪ್ರಚಾರದಿಂದ ಸತ್ಯವನ್ನು ಮರೆಮಾಚಲು ಸಾಧ್ಯವಿಲ್ಲ. ಆದರೆ ಬಿಜೆಪಿ ಕಾಂಗ್ರೆಸ್ ಮಹಿಳಾ ವಿರೋಽ ಎನ್ನುವ ರೀತಿ ಅಪಪ್ರಚಾರ ಮಾಡುತ್ತಿದೆ. ಕಾಂಗ್ರೆಸ್ ಮೊದಲಿನಿಂದಲೂ ಎಲ್ಲರಿಗೂ ಸಮಾನ ಹಕ್ಕು ಎನ್ನುವ ಸಂವಿಧಾನಕ್ಕೆ ಬದ್ಧವಾಗಿ ಕಾರ್ಯ ನಿರ್ವಹಿಸುತ್ತಿದೆ. ನಮ್ಮ ಮೇಲೆ ಸುಮ್ಮನೇ ಗೂಬೆ ಕೂರಿಸಲಾಗುತ್ತಿದೆ ಎಂದು ಹೇಳಿದರು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ವಿನಯ ನಾವಲಗಟ್ಟಿ ಹಾಗೂ ಮಹಿಳಾ ಕಾಂಗ್ರೆಸ್ ಮುಖಂಡರು ಸೇರಿದಂತೆ ಉಪಸ್ಥಿತರಿದ್ದರು.

ಕಿರುಸುದ್ದಿ

ಪಕ್ಷ ವಿರೋಧಿ ಚಟುವಟಿಕೆ: ಕಾಂಗ್ರೆಸ್‌ನಿಂದ ಮೂವರ ಅಮಾನತು



ಬಾಗಲಕೋಟೆ: ದಾವಣಗೆರೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವಿರುದ್ಧ ಚಟುವಟಿಕೆ ನಡೆಸಿದ್ದ ಕಾಂಗ್ರೆಸ್ ನಾಯಕರನ್ನು ಪಕ್ಷದಿಂದ ಉಚ್ಚಾಟಿಸಿದ ಬೆನ್ನಲ್ಲೇ ಈಗ ಬಾಗಲಕೋಟೆಯಲ್ಲಿಯೂ ಪಕ್ಷ ವಿರೋಧಿ ಚಟುವಟಿಕೆ ಮಾಡಿದ ಮೂವರನ್ನು ಪಕ್ಷದಿಂದ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

ಬಿಡಿಸಿಸಿ ಬ್ಯಾಂಕ್‌ನ ಉಪಾಧ್ಯಕ್ಷರಾಗಿದ್ದ ಕಮತಗಿಯ ಮುರಗೇಶ ಕಡ್ಲಿಮಟ್ಟಿ, ಕಮತಗಿ ಪಟ್ಟಣ ಪಂಚಾಯತಿ ಮಾಜಿ ಅಧ್ಯಕ್ಷ ರಮೇಶ ಜಮಖಂಡಿ, ಗುರು ಪಾಟೀಲರನ್ನು ಕಾಂಗ್ರೆಸ್ ಪಕ್ಷದಲ್ಲಿದ್ದುಕೊಂಡು ವಿರೋಧಿ ಚಟುವಟಿಕೆ ಮಾಡಿದ್ದು ಬಹಿರಂಗಗೊಂಡ ನಚಿತರ ಪಕ್ಷದಿಂದ ಅಮಾನತು ಮಾಡಿ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ ಆದೇಶ ಹೊರಡಿಸಿದ್ದಾರೆ.

ಪಕ್ಷ ವಿರೋಧಿ ಚಟುವಟಿಕೆ ಮಾಡಿರುವ ಕುರಿತು ಮೂರು ಜನರಿಗೆ ಆರೋಪ ಕುರಿತು ಉಲ್ಲೇಖಿಸಿ ನೋಟಿಸ್ ಜಾರಿ ಮಾಡಿದ್ದರು. ಆರೋಪ ಹೊಂದಿರುವ ಮೂವರಲ್ಲಿಯೂ ಕೂಡ ಸೂಕ್ತ ಉತ್ತರ ಬಾರದ ಹಿನ್ನಲೆಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷರು ಪಕ್ಷದಿಂದ ಅಮಾನತು ಆದೇಶ ಮಾಡಿದ್ದಾರೆ.

ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಉಮೇಶ ಮೇಟಿ, ಬಿಜೆಪಿಯಿಂದ ವೀರಣ್ಣ ಚರಂತಿಮಠವರು ಇತ್ತೀಚೆಗೆ ನಡೆದಿರುವ ಉಪಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದಾರೆ ಆದರೆ ಕಮತಗಿ ಪಟ್ಟಣದ ಮೂವರು ಕಾಂಗ್ರೆಸ್ ನಾಯಕರು ಪಕ್ಷದ ಅಭ್ಯರ್ಥಿ ಪರ ಚುನಾಣೆಯನ್ನು ನಡೆಸಿಲ್ಲ ಎಂಬ ಆರೋಪ ಅವರ ಮೇಲೆ ಇತ್ತು ಇದರ ಬಗ್ಗೆ ಕಾರಣ ಕೇಳಿ ನೋಟಿಸ್ ನೀಡಿದ್ದರೂ ಯಾವುದೇ ಉತ್ತರವನ್ನು ಮೂವರು ನೀಡಲಿಲ್ಲ ಹೀಗಾಗಿ ಜಿಲ್ಲಾಧ್ಯಕ್ಷರು ಪಕ್ಷದಿಂದ ಅವರನ್ನು ಅಮಾನತು ಮಾಡಿರುವ ಕುರಿತು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಹಿಳೆ ಸಾವು

ಹುಬ್ಬಳ್ಳಿ: ಮಹಿಳೆಯೊಬ್ಬಳಿಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ಕುಂದಗೋಳ ಕ್ರಾಸ್ ಕೊಟಗೊಂಡಹುಣಸಿ ಗ್ರಾಮದ ಕೆಎಲ್‌ಇ ಪ್ರೇರಣಾ ಕಾಲೇಜ್ ಹತ್ತಿರ ನಡೆದಿದೆ. 50-55 ವರ್ಷದ ಮಹಿಳೆ ಮೃತಪಟ್ಟಿದ್ದಾಳೆ. ರಸ್ತೆಯಲ್ಲಿ ಹೋಗುವಾಗ ಹುಬ್ಬಳ್ಳಿಯಿಂದ ಹಾವೇರಿಗೆ ಹೋಗುವ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದಿದೆ. ಇದರಿಂದ ಗಂಭೀರವಾಗಿ ಗಾಯಗೊಂಡ ಮಹಿಳೆ ಮೃತಪಟ್ಟಿದ್ದಾಳೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಡುತಿನಿ ಹೋರಾಟ: ನೂರಾರು ರೈತರ ಬಂಧನ, ಬಿಡುಗಡೆ



ಬಳ್ಳಾರಿ(ಕುರುಗೋಡ): ಕುಡುತಿನಿ ಸಮೀಪ ಕೈಗಾರಿಕಾ ಘಟಕಗಳ ನಿರ್ಮಾಣಕ್ಕೆಂದು ವಶಪಡಿಸಿಕೊಂಡ ರೈತರ ಜಮೀನುಗಳಿಗೆ ನ್ಯಾಯಯುತವಾದ ಭೂ ಬೆಲೆ ನೀಡಬೇಕು. ಉದ್ದೇಶಿತ ಸ್ಥಳಗಳಲ್ಲಿ ಕಾರ್ಖಾನೆಯನ್ನು ನಿರ್ಮಿಸಿ, ಉದ್ಯೋಗ ನೀಡಿ, ಇಲ್ಲವೇ ನಮ್ಮ ಜಮೀನುಗಳನ್ನು ವಾಪಸ್ ನೀಡಬೇಕು ಎಂದು ನ್ಯಾಯಯುತವಾಗಿ ಹೋರಾಟ ನಡೆಸುತ್ತಿದ್ದ ರೈತರನ್ನು, ಮುಖಂಡರನ್ನು ಸೋಮವಾರ ಬಂಧಿಸಿ, ನಂತರ ಬಿಡುಗಡೆ ಮಾಡಿದರು.

ಆರ್ಸೆಲ್ ಮಿತ್ತಲ್ ಕಂಪನಿ ನಿರ್ಮಾಣಕ್ಕೆಂದು ಕೆಐಎಡಿಬಿ ಅವರು ವಶಪಡಿಸಿಕೊಂಡ ಜಮೀನಿನಲ್ಲಿ ಇಲ್ಲಿವರೆಗೆ ಕಾರ್ಖಾನೆ ನಿರ್ಮಾಣವಾಗಿಲ್ಲ. ಭೂ ಸಂತ್ರಸ್ತರಿಗೆ ನ್ಯಾಯಯುತ ಪರಿಹಾರವಿಲ್ಲ. ಉದ್ಯೋಗವು ನೀಡಿಲ್ಲ, ಅದನ್ನು ಬಿಟ್ಟು, ವಶಪಡಿಸಿಕೊಂಡ ರೈತರ ಜಮೀನನ್ನು ಜಿಂದಾಲ್ ಕಂಪನಿಯವರಿಗೆ ಜೆ.ಎಫ್.ಈ ಎಲೆಕ್ಟ್ರಿಕ್‌ಗಾಗಿ 204 ಎಕರೆ ಸೇರಿದಂತೆ ಒಟ್ಟು 900 ಎಕರೆ ಜಮೀನನ್ನು ಪರಭಾರೆ ಮಾಡಲು ಮುಂದಾಗಿರುವುದು ಸರಿಯಲ್ಲ, ಕೂಡಲೇ ಇದನ್ನು, ಈ ಪ್ರಕ್ರಿಯೆಯನ್ನು ಕೈಬಿಡಬೇಕು.

ಈ ಕುರಿತು ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದು, ಕೆಐಎಡಿಬಿ ಅಧಿಕಾರಿಗಳು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡುವ ಮೂಲಕ ರೈತರನ್ನು ವಂಚಿಸುತ್ತಿದೆ ಎಂದು ರೈತರು ಬೀದಿಗಿಳಿದು ಹೋರಾಟ ನಡೆಸಲು ಮುಂದಾಗಿದ್ದಾರೆ.

ಈ ವೇಳೆ ಮಾತು ಮಾತಿಗೆ ಬೆಳೆದು ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿದ್ದಂತೆಯೇ ಪೊಲೀಸರು ರೈತರನ್ನು ಬಂಧಿಸಿದರು. ಶಾಂತಿಯುತವಾಗಿ, ನ್ಯಾಯಯುತವಾಗಿ ಹೋರಾಟ ನಡೆಸಿದರೆ ರೈತರ ಮೇಲೆ ದಬ್ಬಾಳಿಕೆ, ಹಲ್ಲೆ, ಕಾನೂನು ದುರ್ಬಳಕೆ ಸಾಮಾನ್ಯವಾಗಿದೆ. ಜಿಲ್ಲಾಡಳಿತ ಕಂಪನಿಯವರ ಒತ್ತಡಕ್ಕೆ ಮಣಿದು ರೈತರನ್ನು ಅನ್ಯಾಯ ಮಾಡಲಾಗುತ್ತಿದೆ. ರೈತರಿಗೆ ನ್ಯಾಯ ಸಿಗಬೇಕು. ಸಿಗುವರೆಗೂ ನಮ್ಮ ಹೋರಾಟ ನಿಲ್ಲುವ ಮಾತೆ ಇಲ್ಲ ಎಂದು ರೈತರು ಎಚ್ಚರಿಸಿದರು.

ಕಂಪನಿಯವರು ಅಧಿಕಾರಿಗಳ ಮೂಲಕ ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿ, ರೈತರ ವಿರುದ್ಧ ಆದೇಶ ಪತ್ರವನ್ನು ತಂದಿದ್ದಾರೆ. ಅಕ್ರಮವಾಗಿ ಪ್ರವೇಶ ಮಾಡಿರುವ ಜಿಂದಾಲ್ ಕಂಪನಿ ಸ್ಥಳದಲ್ಲಿ ಜೂ.7ರ ವರೆಗೆ 144 ಸೆಕ್ಷನ್ ಜಾರಿ ಮಾಡಲಾಗಿದೆ. ಈ ರೈತ ವಿರೋಧಿ ಧೋರಣೆ ಖಂಡಿಸಿ ರೈತ ಮುಖಂಡರು, ಸಾವಿರಾರು ರೈತರು ವಿವಾದಿತ ಸ್ಥಳದಲ್ಲೇ ಪ್ರತಿಭಟನೆ ನಡೆಸಲಾಗುವುದು, ಧರಣಿ ನಡೆಸಲಾಗುವುದು ಎಂದು ಪಟ್ಟು ಹಿಡಿದರು.

ಈ ಸಂದರ್ಭದಲ್ಲಿ ಪ್ರಜಾ ಪರಿವರ್ತನ ವೇದಿಕೆ ಜಿಲ್ಲಾ ಅಧ್ಯಕ್ಷ ಸಿ. ಆನಂದ ಕುಮಾರ್ ಮಾತನಾಡಿದರು. ರೈತ ಮುಖಂಡರಾದ ಯು. ಬಸವರಾಜ್, ಸತ್ಯಬಾಬು ಸೇರಿದಂತೆ ಅನೇಕ ರೈತ ಮುಖಂಡರು ಇದ್ದರು.

ಕರ್ನಾಟಕದಲ್ಲಿ ಪ್ರೋ ಮಿನಿ ಫುಟ್ಬಾಲ್ ಲೀಗ್: ಶರ್ಮಾ



ಹುಬ್ಬಳ್ಳಿ: ದೇಶದಾದ್ಯಂತ ಫುಟ್ಬಾಲ್ ಆಟವನ್ನು ಮನೆ ಮಾತು ಮಾಡುವ ಗುರಿಯೊಂದಿಗೆ ವುಮೆನ್ಸ್ ಫುಟ್ಬಾಲ್ ಫೆಡರೇಶನ್ ಆಫ್ ಇಂಡಿಯಾ ಮುನ್ನಡೆಯುತ್ತಿದೆ. ಈಗ ಕರ್ನಾಟದಲ್ಲಿ ಪ್ರಕ್ರಿಯೆ ಆರಂಭವಾಗಿದೆ ಎಂದು ವುಮೆನ್ ಫುಟ್ಬಾಲ್ ಫೆಡರೇಷನ್ ಆಫ್ ಇಂಡಿಯಾದ ಅಧ್ಯಕ್ಷ ಮುಖೇಶ್ ಶರ್ಮಾ ಹೇಳಿದರು.

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಐಪಿಎಲ್ ಮಾದರಿಯಲ್ಲಿ ಪ್ರಥಮ ಬಾರಿಗೆ ವುಮೆನ್ಸ್ ಪ್ರೋ ಮಿನಿ ಫುಟ್ಬಾಲ್ ಲೀಗ್‌ನ್ನು ಬರುವ ಅಕ್ಟೋಬರ್, ನವೆಂಬರ್‌ನಲ್ಲಿ ಆಯೋಜಿಸಲಾಗುವುದು ಎಂದು ಅವರು ತಿಳಿಸಿದರು.ಈ ಹಿನ್ನೆಲೆ ಮಹಿಳೆಯರಿಗಾಗಿ ಶಾಲೆ, ಕಾಲೇಜುಗಳಲ್ಲಿ ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಫುಟ್ಬಾಲ್ ಪಂದ್ಯಾವಳಿಗಳನ್ನು ಆಯೋಜಿಸುವ ಮೂಲಕ ಪ್ರತಿಭಾನ್ವಿತ ಆಟಗಾರರನ್ನು ದೇಶಕ್ಕೆ ಪರಿಚಯಿಸುವ ಕಾರ್ಯ ಫೆಡರೇಷನ್ ಮಾಡುತ್ತಿದೆ ಎಂದು ತಿಳಿಸಿದರು.ಐಪಿಎಲ್ ಮಾದರಿಯಲ್ಲಿ ಫ್ರಾಂಚೈಸಿಗಳ ಮೂಲಕ ಆಟಗಾರರನ್ನು ಹರಾಜು ಮೂಲಕ ಖರೀದಿ ಮಾಡಿ ತಂಡಗಳನ್ನು ರಚಿಸಿ ಪಂದ್ಯಾವಳಿಗಳನ್ನು ನಡೆಸಲಾಗುವುದು. ಅದೇ ರೀತಿಯಲ್ಲಿ ಜೂನ್ ತಿಂಗಳಲ್ಲಿ ವುಮೆನ್ಸ್ ಫುಟ್ಬಾಲ್ ಫೆಡರೇಶನ್ ಕಪ್ ದೇಶದ ಎಂಟು ಪ್ರಮುಖ ಕ್ಲಬ್‌ಗಳನ್ನು ಒಳಗೊಂಡ ಪಂದ್ಯಾವಳಿಯನ್ನು ಲೀಗ್ ಕಮ್ ನಾಕ್ ಔಟ್ ಮಾದರಿಯಲ್ಲಿ ಆಯೋಜಿಸಲಾಗಿದೆ ಎಂದರು.

ಈಗಾಗಲೇ ಫುಟ್ಬಾಲ್ ಕ್ರೀಡಾಪಟುಗಳಿಗೆ ಜುಲೈಯಿಂದ ಸೆಪ್ಟೆಂಬರ್ ವರೆಗೆ ತರಬೇತಿ ನೀಡಲಾಗುತ್ತಿದೆ. ಮುಂದೆ ಅಂತರ್ ರಾಜ್ಯ ಪಂದ್ಯಾವಳಿಗಳನ್ನು ಏರ್ಪಡಿಸಲಾಗುವುದು. ಪ್ರತಿ ಗ್ರಾಮ ಮಟ್ಟಕ್ಕೂ ಫುಟ್ಬಾಲ್ ಕ್ರೀಡೆ ತೆಗೆದುಕೊಂಡು ಹೋಗಲಾಗುವುದು ಎಂದು ಅವರು ಹೇಳಿದರು.ಕರ್ನಾಟಕ ವುಮೆನ್ ಫುಟ್ಬಾಲ್ ಫೆಡರೇಷನ್‌ನ ಅಧ್ಯಕ್ಷ ಜೆ.ವಿ.ಜೆಮ್ಸು ಕುಮಾರ, ರಾಷ್ಟ್ರೀಯ ಪದಾಧಿಕಾರಿಗಳಾದ ನವೀನ ಹೆಗಡೆ, ಯತೀಶ ಬಂಗೇರಾ, ರಾಜ್ಯ ಪದಾಧಿಕಾರಿಗಳಾದ ಅಶೋಕ ಗಂಗೂರ, ವನಿತಾ ಗಡಳ್ಳಿ ಇದ್ದರು.

ಬಿಜೆಪಿ ವಾಶಿಂಗ್ ಮಷಿನ್: ಲಾಡ್ ವ್ಯಂಗ್ಯ



ಧಾರವಾಡ: ಬಿಜೆಪಿ ಒಂದು ವಾಶಿಂಗ್ ಮಷಿನ್. ಎಷ್ಟೇ ಭ್ರಷ್ಟರಿದ್ದರೂ, ಬಿಜೆಪಿಯ ವಾಶಿಂಗ್ ಮಷಿನ್‌ಗೆ ಹಾಕಿದರೆ ಅವರೆಲ್ಲ ಶುದ್ಧ ಹಾಗೂ 24 ಕ್ಯಾರೆಟ್ ಚಿನ್ನವಾಗಿ ಬಿಡುತ್ತಾರೆ ಎಂದು ಕಾರ್ಮಿಕ ಇಲಾಖೆ, ಉಸ್ತುವಾರಿ ಸಚಿವ ಸಂತೋಷ ಲಾಡ್ ವ್ಯಂಗ್ಯವಾಡಿದರು.

ಆಪ್‌ಗೆ ಏಳು ಜನ ಬಿಜೆಪಿಗೆ ಸೇರಿರುವ ಹಿನ್ನೆಲೆ ಸೋಮವಾರ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಯಾರು ಎಷ್ಟೇ ಭ್ರಷ್ಟಾಚಾರ ಮಾಡಿದರೂ ಬಿಜೆಪಿಗೆ ಬಂದ ಮೇಲೆ ಅವರು ಶುದ್ಧರಾಗುತ್ತಾರೆ. ಇದು ಬಿಜೆಪಿ ತಂತ್ರಗಾರಿಕೆ ಕೂಡ. ರಾಜೀವ್ ಚಡ್ಡಾ ಬಿಜೆಪಿಗೆ ಏಕೆ ಬೇಕಿತ್ತು. ಪಂಜಾಬ್ ಸರ್ಕಾರ ಬೀಳಿಸಲು ಇದೆಲ್ಲ ತಂತ್ರಗಾರಿಕೆ ಎಂದರು.

ಶಾಸಕ ವಿನಯ ಕುಲಕರ್ಣಿ ಪರ ಮೌನ ಮೆರವಣಿಗೆ ಸಮರ್ಥಿಸಿಕೊಂಡ ಲಾಡ್, ಈ ಬಗ್ಗೆ ವಿರುದ್ಧವಾಗಿ ಮಾತನಾಡಿದ ಬಗ್ಗೆ ಮಾಹಿತಿ ಇಲ್ಲ. ಕೋರ್ಟ್ ತೀರ್ಪು ಗೌರವಿಸಬೇಕು. ಆದರೆ, ಮೌನ ಮೆರವಣಿಗೆಯಲ್ಲಿ ಯಾರು ಕೋರ್ಟ್ ಪ್ರಶ್ನಿಸಿಲ್ಲ ಎಂದರು.

ಲುಕ್ ಔಟ್ ನೋಟಿಸ್

ಕಾಂಗ್ರೆಸ್ ಯುವ ಮುಖಂಡ ಫೈರೋಜ್ ಖಾನ್ ಪಠಾಣ ಹತ್ಯೆ ಪ್ರಕರಣದಲ್ಲಿ ಅಂಜುಮನ್ ಸಂಸ್ಥೆಯ ಅಧ್ಯಕ್ಷ ಇಸ್ಮಾಯಿಲ್ ತಮಟಗಾರ ಪರಾರಿಯಾಗಿದ್ದು, ಪೊಲೀಸರು ಲುಕ್ ಔಟ್ ನೋಟಿಸ್ ಹೊರಡಿಸಿದ್ದಾರೆ. ಕಾನೂನು ಪ್ರಕಾರವೇ ತನಿಖೆ ನಡೆಯಲಿದೆ ಎಂದು ಸಚಿವ ಸಂತೋಷ ಲಾಡ್ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದರು.

ತಮಿಳುನಾಡು ಡಿಎಂಕೆ ಮೈತ್ರಿಯೊಂದಿಗೆ ಕಾಂಗ್ರೆಸ್ ಗೆಲ್ಲುತ್ತದೆ. ಕೇರಳದಲ್ಲೂ ಯುಡಿಎಫ್ ಮೈತ್ರಿಯಲ್ಲಿ ಗೆಲುವು ಖಚಿತ. ಹಾಗೆಯೇ ಪಶ್ಚಿಮ ಬಂಗಾಳದಲ್ಲೂ ಟಿಎಂಸಿ ಪುನಃ ಅಧಿಕಾರಕ್ಕೆ ಏರುತ್ತದೆ. ಅಸ್ಸಾಂ ಗೆಲುವು ಕೂಡ ನಿರೀಕ್ಷಿಸಿದ್ದೇವೆ.

■ **ಸಂತೋಷ ಲಾಡ್, ಸಚಿವ**

ಎಸ್‌ಟಿ ಪ್ರಮಾಣಪತ್ರ ನೀಡಲು ಆಗ್ರಹಿಸಿ ಬೃಹತ್ ಪ್ರತಿಭಟನೆ



ಕಲಬುರಗಿ: ಪರಿಶಿಷ್ಟ ಪಂಗಡ (ಎಸ್.ಟಿ) ಪ್ರಮಾಣಪತ್ರ ನೀಡುವಲ್ಲಿ ಆಗುತ್ತಿರುವ ವಿಳಂಬ ಹಾಗೂ ನಿರಾಕರಣೆ ವಿರುದ್ಧ ತಳವಾರ ಸಮುದಾಯದವರು ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ತಳವಾರ ಸಮಾಜದ ನೇತೃತ್ವದಲ್ಲಿ ಜಗತ್ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿ ತನಕ ಮೆರವಣಿಗೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ತಳವಾರ ಸಮುದಾಯ ಎಸ್ಟಿ ಪ್ರಮಾಣ ಪತ್ರ ನೀಡುವಂತೆ ಹೋರಾಟದ ಮೆರವಣಿಗೆಯಲ್ಲಿ ಸಮುದಾಯದ ಮುಖಂಡರು ಡಿಸಿ ಕಚೇರಿ ಒಳ ನುಗ್ಗದಂತೆ ಪೊಲೀಸರು ಬ್ಯಾರಿಕೇಡ್ ಅಳವಡಿಸಲಾಗಿತ್ತು. ಒಳಗಡೆ ಬಿಡಬೇಕು ಎಂದು ಆಕ್ರೋಶಗೊಂಡ ಮುಖಂಡರು ಬ್ಯಾರಿಕೇಡ್ ಮುರಿದು ಡಿಸಿ ಕಚೇರಿ ಮುಖ್ಯಗೇಟ್ ನುಗ್ಗಿದ್ದರು.

ತಳವಾರ ಪ್ರಮಾಣ ಪತ್ರ: ಖರ್ಗೆ ಸ್ಪಷ್ಟನೆ

ತಳವಾರ ಸಮುದಾಯಕ್ಕೆ ಎಸ್ಟಿ ಜಾತಿ ಪ್ರಮಾಣ ಪತ್ರ ವಿತರಣೆಯಲ್ಲಿ ಯಾವುದೇ ಗೊಂದಲವಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಸ್ಪಷ್ಟಪಡಿಸಿದ್ದಾರೆ. ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಈ ಸಂಬಂಧ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಭೆಗಳು ಸೇರಿದಂತೆ ಒಟ್ಟು ನಾಲ್ಕು ಸಭೆಗಳು ನಡೆಸಲಾಗಿದ್ದು, ಅರ್ಹರಿಗೆ ನಿಯಮಾನುಸಾರ ಪ್ರಮಾಣ ಪತ್ರ ನೀಡಲು ಸೂಚನೆ ನೀಡಲಾಗಿದೆ. 2023ರಿಂದ ಈವರೆಗೆ ಸಾವಿರಾರು ಜನರಿಗೆ ಎಸ್ಟಿ ಹಾಗೂ ಸಿಎಟಿ-1 ಜಾತಿ ಪ್ರಮಾಣ ಪತ್ರ ವಿತರಿಸಲಾಗಿದೆ.ಇದಲ್ಲದೆ, ಸುಳ್ಳು ಪ್ರಮಾಣ ಪತ್ರಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದ್ದು, ಕೆಲವು ಪ್ರಕರಣಗಳನ್ನು ರದ್ದುಗೊಳಿಸಲಾಗಿದೆ. ಅರ್ಜಿಗಳನ್ನು ತಹಸೀಲ್ದಾರರ ಮಟ್ಟದಲ್ಲಿ ಕಟ್ಟುನಿಟ್ಟಾಗಿ ಪರಿಶೀಲಿಸಲು ಸೂಚನೆ ನೀಡಲಾಗಿದೆ ಎಂದರು.ಕೆಲವು ಸಂಘಟನೆಗಳು ತಪ್ಪು ಮಾಹಿತಿ ನೀಡಿ ಗೊಂದಲ ಸೃಷ್ಟಿಸುತ್ತಿರುವುದು ರಾಜಕೀಯ ಪ್ರೇರಿತ ಎಂದು ಸಚಿವರು ಆರೋಪಿಸಿದ್ದಾರೆ.

ಆಂಬ್ಯುಲೆನ್ಸ್ ಮೇಲೆ ಕಲ್ಲು ತೂರಾಟ

ತಳವಾರ ಸಮಾಜದ ಪ್ರತಿಭಟನಾಕಾರರಿಂದ ಆಂಬ್ಯುಲೆನ್ಸ್ ಮೇಲೆ ಕಲ್ಲು ತೂರಾಟ ನಡೆದ ಘಟನೆ ನಗರದಲ್ಲಿ ಉದ್ವಿಗ್ನತೆ ಸೃಷ್ಟಿಸಿದೆ. ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಈ ಘಟನೆ ಸಂಭವಿಸಿದೆ.

ತಳವಾರ ಸಮಾಜಕ್ಕೆ ಎಸ್‌ಟಿ ಪ್ರಮಾಣಪತ್ರ ನೀಡುವಂತೆ ಆಗ್ರಹಿಸಿ ಮಧ್ಯಾಹ್ನದಿಂದಲೇ ಜಿಲ್ಲಾಧಿಕಾರಿ ಕಚೇರಿ ಎದುರಿನ ರಸ್ತೆಯನ್ನು ಬಂದ್ ಮಾಡಿ ಪ್ರತಿಭಟನೆ ನಡೆಸಲಾಗುತ್ತಿತ್ತು. ಈ ವೇಳೆ ಆ ಮಾರ್ಗವಾಗಿ ಸಾಗುತ್ತಿದ್ದ ಆಂಬ್ಯುಲೆನ್ಸ್ ಮೇಲೆ ಕೆಲ ಪ್ರತಿಭಟನಾಕಾರರು ಕಲ್ಲು ತೂರಿದ್ದು ಬೆಳಕಿಗೆ ಬಂದಿದೆ.

ಆಂಬ್ಯುಲೆನ್ಸ್ ಮೇಲೆ ಕಲ್ಲು ತೂರಾಟ ನಡೆಯುತ್ತಿದ್ದಂತೆಯೇ ಚಾಲಕ ತಕ್ಷಣ ಯೂ-ಟರ್ನ್ ಪಡೆದು ಸ್ಥಳದಿಂದ ಹೊರಟಿದ್ದಾನೆ. ಇದರಿಂದ ಯಾವುದೇ ಅನಾಹುತ ಸಂಭವಿಸಿಲ್ಲ. ಸ್ಥಳದಲ್ಲಿ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದ್ದು, ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಕ್ರಮ ಕೈಗೊಂಡಿದ್ದಾರೆ. ತಳವಾರ ಸಮಾಜ ತಮ್ಮ ಬೇಡಿಕೆ ಈಡೇರಿಸುವವರೆಗೆ ಅನಿರ್ದಿಷ್ಟಾವಧಿ ಹೋರಾಟ ಮುಂದುವರಿಸುವುದಾಗಿ ಎಚ್ಚರಿಕೆ ನೀಡಿದೆ.

ಮೌನ ಮೆರವಣಿಗೆ ನ್ಯಾಯಾಂಗ ನಿಂದನೆ: ಕೊರವರ

ಧಾರವಾಡ: ಯೋಗೇಶಗೌಡ ಗೌಡರ ಹತ್ಯೆ ಪ್ರಕರಣದಲ್ಲಿ ಅಪರಾಧಿಗಳ ಪರವಾಗಿ ಬೀದಿಗಿಳಿದವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಜನಜಾಗೃತಿ ಸಂಘದ ಅಧ್ಯಕ್ಷ ಬಸವರಾಜ ಕೊರವರ, ಈ ಮೌನ ಮೆರವಣಿಗೆ ನ್ಯಾಯಾಂಗ ನಿಂದನೆ ಆಗಲಿದೆ ಎಂದು ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಪ್ರಕರಣದ ಸುದೀರ್ಘ ವಿಚಾರಣೆ ಬಳಿಕ ಕೋರ್ಟ್ ಅಪರಾಧಿಗಳಿಗೆ ಶಿಕ್ಷೆ ವಿಧಿಸಿದೆ. ಆದರೆ, ಕೆಲವರು ನ್ಯಾಯಲಯದ ಘನತೆಗೆ ಅಗೌರವ ತೋರುವ ಕೆಲಸ ಮಾಡಿದ್ದಾಗಿ ಗಂಭೀರ ಆರೋಪ ಮಾಡಿದರು.

ಯಾವುದೇ ಪ್ರಕರಣದಲ್ಲಿ ಯಾರೇ ಇದ್ದರೂ ಕೂಡ ನ್ಯಾಯಾಲಯದ ತೀರ್ಪಿಗೆ ತಲೆಬಾಗಬೇಕು. ಈ ಪ್ರಕರಣದ ಅಪರಾಧಿಗಳ ಪೈಕಿ ಒಬ್ಬರಾದ ಶಾಸಕ ವಿನಯ ಕುಲಕರ್ಣಿ ಅವರ ಪರ ಬೆಂಬಲಿಗರು ಬೀದಿಗಿಳಿದ್ದು ಎಷ್ಟರ ಮಟ್ಟಿಗೆ ಸರಿ? ಎಂದು ಪ್ರಶ್ನೆ ಮಾಡಿದರು.

ಷಡ್ಯಂತ್ರ ದಿಂದಲೇ ವಿನಯ ಕುಲಕರ್ಣಿ ಸಿಲುಕಿಸಲಾಗಿದೆ ಎಂದು ಆರೋಪದ ಮೂಲಕ ನ್ಯಾಯಾಲಯದ ತೀರ್ಪಿನ ಮೇಲೆ ಸಂಶಯ ಬರುವ ರೀತಿಯಲ್ಲಿ ಹೇಳಿಕೆ ನೀಡುವುದು ತೀರ್ಪಿನ ಬಗ್ಗೆ ಜನರಲ್ಲಿ ಅನುಮಾನ ಮೂಡಿಸುವ ಏಕೈಕ ಉದ್ದೇಶ ಎಂದರು.

ಪ್ರಕರಣದ ತೀರ್ಪು ಗೌರವಿಸುವುದಾಗಿ ಹೇಳುತ್ತಲೇ ಮೌನ ಪ್ರತಿಭಟನೆ ನಡೆಸಿದ್ದು, ನ್ಯಾಯಾಂಗ ವ್ಯವಸ್ಥೆಗೆ ಅಗೌರವ ತೋರಿದಂತೆ. ಈ ಕುರಿತು ವಿಡಿಯೋಗಳು ಸಂಗ್ರಹಿಸಿ, ವಕೀಲರನ್ನು ಸಂಪರ್ಕಿಸಿ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸುವುದಾಗಿ ಹೇಳಿದರು.


ಸ್ಪೀಕರ್ ನಡೆ ಪ್ರಶ್ನಾರ್ಹ



ಗಾಲಿ ಜನಾರ್ದನ ರೆಡ್ಡಿ ಪ್ರಕರಣದಲ್ಲಿ ತೀರ್ಪು ಪ್ರಕಟವಾದ 48 ಗಂಟೆಗಳಲ್ಲಿಯೇ ಅವರ ಶಾಸಕ ಸ್ಥಾನ ಅನರ್ಹಗೊಂಡಿತ್ತು. ಆದರೆ, ಯೋಗೀಶಗೌಡ ಗೌಡರ ಹತ್ಯೆ ಪ್ರಕರಣದಲ್ಲಿ ತೀರ್ಪು ಪ್ರಕಟಗೊಂಡು, 10 ದಿನ ಕಳೆದರೂ ವಿನಯ ಕುಲಕರ್ಣಿ ಅವರ ಶಾಸಕ ಸ್ಥಾನ ಅನರ್ಹಗೊಂಡಿಲ್ಲ ಏಕೆ? ಎಂದು ಪ್ರಶ್ನಿಸಿರುವ ಬಸವರಾಜ ಕೊರವರ, ಸ್ಪೀಕರ್ ನಡೆದ ಪ್ರಶ್ನಾರ್ಹ. ರಾಜ್ಯಪಾಲರಿಂದ ತಮಗೆ ಪತ್ರವೇ ಬಂದಿಲ್ಲ ಎನ್ನುವುದು ಹಾಸ್ಯಾಸ್ಪದ.

ಬಿಟ್ಟಿ ಪ್ರಚಾರ ಕೈಬಿಡಲು ಎಚ್ಚರಿಕೆ

ಬಸವರಾಜ ಕೊರವರ ಅಪ್ರಬುದ್ಧ ಹೇಳಿಕೆ



ಧಾರವಾಡ: ಶಾಸಕ ವಿನಯ ಕುಲಕರ್ಣಿ ವಿರುದ್ಧ ಅಪ್ರಬುದ್ಧ ಹೇಳಿಕೆ ನೀಡುತ್ತಿರುವ ಬಸವರಾಜ ಕೊರವರ ವಾಸ್ತವ ಅರಿತು ಮಾತನಾಡಬೇಕು. ಮಾಧ್ಯಮಗಳಲ್ಲಿ ಬಿಟ್ಟಿ ಪ್ರಚಾರ ಪಡೆಯಲು ಸತ್ಯಕ್ಕೆ ದೂರವಾದ ಮಾತುಗಳು ಆಡುವುದು ಕೈ ಬಿಡುವಂತೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರವಿಂದ ಏಗನಗೌಡರ ಎಚ್ಚರಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿದ ಅವರು, ವಿನಯ ಕುಲಕರ್ಣಿ ಬೆಂಬಲಿಸಿ ಮೌನ ಮೆರವಣಿಗೆ ಮಾಡಿದ್ದು ನ್ಯಾಯಾಲಯ ವಿರುದ್ಧವಲ್ಲ, ಈ ಪ್ರಕರಣದಲ್ಲಿ ತನಿಖೆಯ ದಿಕ್ಕು ತಪ್ಪಿಸಿದವರ ವಿರುದ್ಧ. ಮೆರವಣಿಗೆ ಕಾನೂನು ಬಾಹಿರವಾಗಿದ್ದರೆ ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳಲಿದೆಂಬ ಕನಿಷ್ಠ ಜ್ಞಾನವಿಲ್ಲವೇ? ಎಂದಿದ್ದಾರೆ.

ಪ್ರಕರಣ ತನಿಖೆ ನಡೆಸಿದ ಪೊಲೀಸರಿಂದಲೂ ಬಿ ರಿಪೋರ್ಟ್ ಸಲ್ಲಿಕೆಯಾಗಿತ್ತು. ಇದನ್ನು ಪ್ರಶ್ನಿಸಿ ಹೈಕೋರ್ಟ್ ಮತ್ತು ಸುಪ್ರೀ ಕೋರ್ಟ್ ಮೆಟ್ಟಿಲೇರಿದಾಗಲೂ, ಎರಡು ನ್ಯಾಯಾಲಯಗಳು ಪೊಲೀಸ್ ತನಿಖೆ ಸರಿಯಾಗಿದೆ. ಸಿಬಿಐಗೆ ನೀಡುವ ಅಗತ್ಯವಿಲ್ಲ ಎಂದು ಅರ್ಜಿ ವಜಾಗೊಳಿಸಿದ್ದಾಗಿ ತಿಳಿಸಿದ್ದಾರೆ.

ಸತ್ಯ ಮರೆಮಾಚಿದ ಅಂದಿನ ಬಿಜೆಪಿ ಸರ್ಕಾರ ರಾಜಕೀಯ ದ್ವೇಷಕ್ಕಾಗಿ ಪ್ರಕರಣ ಸಿಬಿಐಗೆ ವಹಿಸಿದ್ದು ಕಾನೂನು ಬಾಹಿರ ಅಲ್ಲವೇ? ಕೋರ್ಟ್ ತೀರ್ಪಿಗೆ ತಲೆಬಾಗಿ ಮೇಲ್ಮನವಿ ಸಲ್ಲಿಸಿ, ಕಾನೂನು ಹೋರಾಟ ಮುಂದುವರಿಸಿದ್ದೇವೆ. ಶಾಸಕ ಸ್ಥಾನದ ಅನರ್ಹತೆಗೆ ತನ್ನದಾದ ಸಾಂವಿಧಾನಿಕ ಚೌಕಟ್ಟು ಇದೆ ಎಂದಿದ್ದಾರೆ.

ಬಸವರಾಜ ಕೊರವರ ಇಲ್ಲಸಲ್ಲದ ಹೇಳಿಕೆ ಮೂಲಕ ಜನರ ದಾರಿ ತಪ್ಪಿಸುವುದು ಬಿಟ್ಟು, ಆಸಕ್ತಿ ಇದ್ದರೆ ಕಾನೂನು ಹೋರಾಟ ಮಾಡಲಿ. ನಮಗೆ ನ್ಯಾಯಾಲಯದ ಮೇಲೆ ವಿಶ್ವಾಸವಿದ್ದು, ಸತ್ಯಕ್ಕೆ ಜಯ ಸಿಗಲಿದೆ ಎಂಬ ಭರವಸೆ ಇದೆ. ಬಸವರಾಜ ಕೊರವರ ಇನ್ನಾದರೂ ಅಗ್ಗದ ಪ್ರಚಾರ ಕೈಬಿಡಲಿ ಎಂದು ಹೇಳಿದ್ದಾರೆ.

ಅಕ್ಕಿಆಲೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ವ್ಯವಸ್ಥೆ

ಹಾನಗಲ್ಲ : ಶನಿವಾರ ಮಧ್ಯಾಹ್ನ ಪಟ್ಟಣದ ನೂರು ಹಾಸಿಗೆಯುಳ್ಳ ಹಾಗೂ ಪ್ರತಿದಿನ 600ಕ್ಕೂ ಹೆಚ್ಚು ಅಧಿಕ ಹೊರ ರೋಗಿಗಳಿಂದ ಕಿಕ್ಕಿರಿಯುತ್ತಿದ್ದ ಹಾನಗಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಅಗ್ನಿ ಅವಘಡದಿಂದ ಸುಮಾರು 80 ಲಕ್ಷಕ್ಕಿಂತ ಹೆಚ್ಚು ವೈದ್ಯಕೀಯ ಪೀಠೋಪಕರಣ ಔಷಧಿ ಸುಟ್ಟು ಭಸ್ಮವಾದ ಹಿನ್ನೆಲೆಯಲ್ಲಿ ಆಸ್ಪತ್ರೆ ಬುಧವಾರದವರೆಗೆ ಯಾವುದೇ ಚಿಕಿತ್ಸೆ ಇರುವುದಿಲ್ಲ. ಅಲ್ಲಿಯವರೆಗೆ ತಾಲೂಕಿನ ಅಕ್ಕಿಆಲೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ತಾತ್ಕಾಲಿಕ ವ್ಯವಸ್ಥೆ ಕೈಗೊಳ್ಳುವಂತಾಗಿದೆ.

ಯಾವ ಕಾರಣಕ್ಕೆ ಬೆಂಕಿ ತಗುಲಿದೆ ಎಂಬುದರ ಬಗ್ಗೆ ಬೆಂಗಳೂರು ಹಾಗೂ ಹಾವೇರಿ ತನಿಖಾ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಪ್ರಾಥಮಿಕ ತನಿಖೆಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಅನಾಹುತ ಸಂಭವಿಸಿದ ಎನ್ನಲಾಗಿದ್ದು, ಪೂರ್ಣ ಪ್ರಮಾಣದ ವಿದ್ಯುತ್ ವ್ಯವಸ್ಥೆಯ ಪರಿಶೀಲನೆ ಹಾಗೂ ಕಟ್ಟಡದ ಪರಿಶೀಲನೆ ಪೂರ್ಣಗೊಳ್ಳುವವರೆಗೆ ಇಲ್ಲಿ ಯಾವುದೇ ರೋಗಿಗಳಿಗೆ ಚಿಕಿತ್ಸೆ ನೀಡಲು ಅನುಮತಿ ನೀಡಲಾಗಿಲ್ಲ.

ಲೋಕೋಪಯೋಗಿ ಇಲಾಖೆಯ ತಂಡವೂ ಆಸ್ಪತ್ರೆ ಕಟ್ಟಡದ ಸಾಮರ್ಥ್ಯದ ಕುರಿತು ಪರಿಶೀಲನೆ ಕೈಗೊಳ್ಳಲಿದೆ. ಬುಧವಾರದ ಒಳಗಾಗಿ ಆಸ್ಪತ್ರೆಯ ರೋಗಿಗಳಿಗೆ ಅಗತ್ಯವಿರುವ ಔಷಧ ಹಾಗೂ ಇತರ ಸಾಮಗ್ರಿಗಳನ್ನು ತರಿಸಿಕೊಳ್ಳುವ ಪ್ರಯತ್ನ ಮಾಡಲಾಗುತ್ತಿದ್ದು, ಆಸ್ಪತ್ರೆಯ ಸ್ವಚ್ಛತಾ ಕಾರ್ಯ ಆರಂಭವಾಗಿದೆ. ಆಸ್ಪತ್ರೆಯಲ್ಲಿರುವ 11 ವೈದ್ಯರೂ ಸೇರಿದಂತೆ 90 ಸಿಬ್ಬಂದಿ ತಮ್ಮ ಕರ್ತವ್ಯವನ್ನು ಅಕ್ಕಿಆಲೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ನಿರ್ವಹಿಸಲು ಆದೇಶಿಸಲಾಗಿದೆ ಎಂದು ಆಸ್ಪತ್ರೆಯ ಆಡಳಿತವೈದ್ಯಾಧಿಕಾರಿ ಡಾ.ಅಖಿಲೇಶ್ ಮಾಳೋದೆ ತಿಳಿಸಿದ್ದಾರೆ.ಬೆಂಕಿ ಅವಘಡಕ್ಕೆ ಒಳಗಾದ ಹಾನಗಲ್ಲಿನ ಸರ್ಕಾರಿ ಆಸ್ಪತ್ರೆ ಬಾಗಿಲು ಮುಚ್ಚಿರುವುದು. ಆಸ್ಪತ್ರೆಯ ಸುವ್ಯವಸ್ಥೆಗಾಗಿ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗುತ್ತಿದೆ. ತುರ್ತಾಗಿ ಅಗತ್ಯವಿರುವ ಔಷಧ, ಚುಚ್ಚುಮದ್ದುಗಳು ಸೇರಿದಂತೆ ತುರ್ತು ಆರೋಗ್ಯ ಚಿಕಿತ್ಸಾಸಲಕರಣೆಗಳನ್ನು ಕಳಿಸಿಕೊಡುವಂತೆ ಮೇಲಾಧಿಕಾರಿಗಳಿಗೆ ಮನವಿ ಮಾಡಲಾಗಿದೆ.ಶನಿವಾರ ಜಿಲ್ಲಾ ವೈದ್ಯಾಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಎಲ್ಲ ವ್ಯವಸ್ಥೆ ಸರಿಪಡಿಸಿಕೊಂಡು ಬುಧವಾರದಿಂದ ಎಂದಿನಂತೆ ಆಸ್ಪತ್ರೆ ಕಾರ್ಯ ನಿರ್ವಹಿಸಲಿದೆ ಎಂದು ಡಾ.ಅಖಿಲೇಶ್ ಮಾಳೋದೆ ತಿಳಿಸಿದ್ದಾರೆ.

ಕಿರುಸುದ್ದಿ

ಭಕ್ತ ಸಮೂಹ ಮಧ್ಯೆ ಕಡುಬಿನ ಕಾಳಗ

ಲಕ್ಷ್ಮೇಶ್ವರ: ಪಟ್ಟಣದ ಶ್ರೀ ಸೋಮೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ಗೋಧೂಳಿ ಸಮಯದಲ್ಲಿ ಅಪಾರ ಭಕ್ತ ಸಮೂಹದ ಹರಹರ ಮಹಾದೇವ ಹರ್ಷೋದ್ಗಾರದ ನಡುವೆ ಶ್ರದ್ಧಾ ಭಕ್ತಿಯಿಂದ ಕಡುಬಿನ ಕಾಳಗ ನೆರವೇರಿತು.

ಕಡುಬಿನ ಕಾಳಗ ಸಂದರ್ಭದಲ್ಲಿ ಸೋಮೇಶ್ವರ ದೇವರ ಉತ್ಸವ ಮೂರ್ತಿಯೊಂದಿಗೆ ಪಲ್ಲಕ್ಕಿಯು ದೇವಸ್ಥಾನದ ಆವರಣ, ರಥಬೀದಿ ಪ್ರದಕ್ಷಣೆ ಮತ್ತು ಅಲ್ಲಿಂದ ಸೋಮೇಶ್ವರ ಪಾದಗಟ್ಟೆಗೆ ತೆರಳಿ ಅಲ್ಲಿ 5 ಸುತ್ತು ಪ್ರದಕ್ಷಣೆಯೊಂದಿಗೆ ಕಡುಬಿನ ಕಾಳಗ ನೆರವೇರಿಸಲಾಯಿತು.

ಸೋಮೇಶ್ವರ ಜಾತ್ರಾ ಕಮಿಟಿಯ ಮುಖಂಡರಾದ ಕುಬೇರಪ್ಪ ಮಹಾಂತಶೆಟ್ಟರ, ಗುರಣ್ಣ ಪಾಟೀಲಕುಲಕರ್ಣಿ, ಚನ್ನಪ್ಪ ಜಗಲಿ, ವಿರುಪಾಕ್ಷ ಆದಿ, ಬಸವರಾಜ ಮೆಣಸಿನಕಾಯಿ, ಸೋಮಣ್ಣ ಮುಳಗುಂದ, ಅಶೋಕ ಮುಳಗುಂದ, ಚಂದ್ರು ಹಂಪಣ್ಣವರ, ಬಸವರಾಜ ಮಶಾಣಿ, ಚಂದ್ರು ಹುರಕಡ್ಲಿ, ರಮೇಶ ಹೆಬ್ಬಾಳ, ಮುದಕಪ್ಪ ಅಣ್ಣಿಗೇರಿ, ಸಿದ್ದು ರಾಟನಾಯ್ಕರ, ರಾಮಣ್ಣ ಗೌರಿ, ಶಿವಯೋಗಿ ಅಂಕಲಕೋಟಿ, ಈರಣ್ಣ ಮುಳಗುಂದ, ಸಿದ್ದನಗೌಡ ಬಳ್ಳೊಳ್ಳಿ, ಬಸಣ್ಣ ಬಾಳಿಕಾಯಿ, ನಂದೀಶ ಬಂಡಿವಾಡ, ಪ್ರಕಾಶ ಮುಳಗುಂದ, ದೀಪು ಕೊಂಚಿಗೇರಿಮಠ ಅರ್ಚಕರಾದ ಸಮೀರ ಪೂಜಾರ, ರಾಘವೇಂದ್ರ ಪೂಜಾರ ಸೇರಿ ದೇವಸ್ಥಾನ ಜಾತ್ರಾ ಸಮಿತಿಯವರು, ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮೀಟಿಯವರು, ಹಿರಿಯರು ಅರ್ಚಕರ ಸಮಿತಿಯವರು, ಉತ್ಸಾಹಿ ಯುವಕರ ತಂಡ, ಅಪಾರ ಭಕ್ತರು ಪಾಲ್ಗೊಂಡಿದ್ದರು.

ನಿಲಯಗಳ ನಿರ್ವಹಣೆ ಕುರಿತು ಕಾರ್ಯಾಗಾರ

ಗದಗ: ಕಾರ್ಯಾಗಾರದ ವಿಷಯಗಳ ಕುರಿತು ಎಲ್ಲ ಸಿಬ್ಬಂದಿಗಳು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಡಾ.ನಂದಾ ಹಣಬರಟ್ಟಿ ಹೇಳಿದರು.

ನಗರದ ಜಿಲ್ಲಾಡಳಿತ, ಜಿಪಂ, ಸಮಾಜ ಕಲ್ಯಾಣ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ವಸತಿ ನಿಲಯಗಳ ಮತ್ತು ವಸತಿ ಶಾಲೆಗಳ ನಿರ್ವಹಣೆ, ದಾಖಲಾತಿಗಳ ನಿರ್ವಹಣೆ, ಆಹಾರ ಸುರಕ್ಷತೆ ಹಾಗೂ ಇ ಗುರುತು ಹಾಗೂ ಬಿಲ್‌ಗಳ ತಯಾರಿಕೆ ಕುರಿತು ಒಂದು ದಿನದ ಕಾರ್ಯಾಗಾರದಲ್ಲಿ ಮಾತನಾಡಿದರು

ಕಾರ್ಯಾಗಾರವನ್ನು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ ಉದ್ಘಾಟಿಸಿದರು.

ನಿಲಯಗಳಲ್ಲಿ ದಾಖಲಾತಿಗಳನ್ನು ನಿರ್ವಹಿಸುವ ಕುರಿತು ಬಿ.ಎಮ್ ಬಡಿಗೇರ, ನಿಲಯಗಳ ನಿರ್ವಹಣೆ ಕುರಿತು ಉದಯಕುಮಾರ ಯಲಿವಾಳ, ಆಹಾರ ಸಾಮಗ್ರಿಗಳ ಬೇಡಿಕೆ ಕುರಿತು ಗೋಪಾಲ ಲಮಾಣಿ, ಬಿಲ್‌ಗಳ ತಯಾರಿಕೆ ಕುರಿತು ಮಲ್ಲಿಕಾರ್ಜುನ ಹೊಸೂರ ಲೆಕ್ಕ ಅಧೀಕ್ಷಕರು ಜಿಲ್ಲಾ ಪಂಚಾಯತಿ ಹಾಗೂ ಸರ್ಫರಾಜ ಅಹಮ್ಮದ, ಮುಖ್ಯ ಲೆಕ್ಕಿಗರ ಜಿಲ್ಲಾ ಖಜಾನೆ ಇಲಾಖೆ ಹಾಗೂ ಆಹಾರ ಸುರಕ್ಷತೆ ಕುರಿತು ರಾಜೇಂದ್ರ ಗಡಾದ ಉಪನ್ಯಾಸ ನೀಡಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್.ನೀಲಗುಂದ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಎಂ.ಎಂ.ತುಂಬರಮಟ್ಟಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಕಚೇರಿಯ ಪತ್ರಾಂಕಿತ ವ್ಯವಸ್ಥಾಪಕಿ ಮಂಜುಳಾ ಸೋಮಕ್ಕನವರ, ಸಹಾಯಕ ನಿರ್ದೇಶಕಿ ಗೋಪಾಲ ಲಮಾಣಿ, ಉದಯಕುಮಾರ ಯಲಿವಾಳ, ಬಿ.ಎಂ. ಬಡಿಗೇರ, ಗೀತಾ ಆಲೂರ, ಕಛೇರಿ ಸಿಬ್ಬಂದಿಗಳು ಹಾಗೂ ಜಿಲ್ಲೆಯ ಎಲ್ಲ ನಿಲಯ ಮೇಲ್ವಿಚಾರಕರು ಹಾಜರಿದ್ದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಧನಿಯಾ	1212-1212
ಶೇಂಗಾ	4672-6197
ಅಲಸಂದಿಕಾಳು	2609-5908
ಕಡಲೆ	2247-2547
ಉದ್ದು	2517-2517
ಹೆಸರು	1244-7711
ಹುರಳಿ	3339-4365
ಜೋಳ	1589-4757
ಗೋವಿನಜೋಳ	1830-1830
ಸಜ್ಜಿ	2500-2500
ಕುಸಬಿ	1011-5487
ಸೂರ್ಯಕಾಂತಿ	2569-6432
ತೊಗರಿ	4112-4244
ಗೋಧಿ	1879-5012



ಲಕ್ಷ್ಮೇಶ್ವರ: ಪಟ್ಟಣದ ಶ್ರೀ ಸೋಮೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ಗೋಧೂಳಿ ಸಮಯದಲ್ಲಿ ಅಪಾರ ಭಕ್ತ ಸಮೂಹದ ಹರಹರ ಮಹಾದೇವ ಹರ್ಷೋದ್ಗಾರದ ನಡುವೆ ಶ್ರದ್ಧಾ ಭಕ್ತಿಯಿಂದ ಕಡುಬಿನ ಕಾಳಗ ನೆರವೇರಿತು.

ಗೋವಂಶ ರಕ್ಷಣೆಗೆ ಸರ್ಕಾರ ಮುಂದಾಗಲಿ

ಶಿರಹಟ್ಟಿ: ಜೀವನದುದ್ದಕ್ಕೂ ಮನುಷ್ಯ ಹಾಗೂ ಪ್ರಕೃತಿಗೆ ಕೊಡುಗೆ ನೀಡುವ ಗೋವುಗಳನ್ನು ಸರ್ಕಾರ ಸಂರಕ್ಷಣೆ ಮಾಡಬೇಕು ಎಂದು ಹಿಂದೂ ಪರ ಒಕ್ಕೂಟಗಳ ಅಧ್ಯಕ್ಷ ಸಂತೋಷ ಕುರಿ ಆಗ್ರಹಿಸಿದರು.

ಸ್ಥಳೀಯ ತಹಶೀಲ್ದಾರ್ ಕಚೇರಿಯಲ್ಲಿ ಹಿಂದೂ ಪರ ಒಕ್ಕೂಟದಿಂದ ಅಖಿಲ ಭಾರತೀಯ ಮಟ್ಟದಲ್ಲಿ ಗೋವನ್ನು ರಾಷ್ಟ್ರೀಯ ಪ್ರಾಣಿಯನ್ನಾಗಿ ಘೋಷಿಸುವ ಮೊದಲ ಹಂತದ ಅಭಿಯಾನ ನಡೆಸಿ ತಹಶೀಲ್ದಾರ್ ಮೂಲಕ ರಾಷ್ಟ್ರಪತಿ, ಪ್ರಧಾನಿಮಂತ್ರಿ, ರಾಜ್ಯಪಾಲರು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಗೋವು ಕೇವಲ ಒಂದು ಪ್ರಾಣಿಯಲ್ಲ, ನಮ್ಮ ದೇಶದ ಸಂಸ್ಕೃತಿಯಲ್ಲಿ ಗೋವಿಗೆ ಮಹತ್ವದ ಸ್ಥಾನವಿದೆ. ಪ್ರತಿವರ್ಷ ಗೋವುಗಳ ಸಂಖ್ಯೆ ಗಣನೀಯವಾಗಿ ಕ್ಷೀಣಿಸುತ್ತಿದೆ. ದೇಶಿಯ ತಳಿಗಳು ಅಳಿವಿನ ಅಂಚಿಗೆ ಬಂದಿವೆ. ಹೀಗಾಗಿ ಸರ್ಕಾರ ಗೋವಂಶ ಸಂರಕ್ಷಣೆಗೆ ಮುಂದಾಗಬೇಕು. ಅಕ್ರಮ ಗೋಸಾಗಾಟ ಮತ್ತು ಕಸಾಯಿಖಾನೆ ಬಂದ್ ಮಾಡಿಸಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಮುಖಂಡ ನಾಗರಾಜ ಲಕ್ಕುಂಡಿ ಮಾತನಾಡಿದರು. ಈ ವೇಳೆ ಫಕ್ಕೀರೇಶ ರಟ್ಟಿಹಳ್ಳಿ, ರಾಮಣ್ಣ ಕಂಬಳಿ, ಪರಶುರಾಮ ಡೊಂಕಬಳ್ಳಿ, ರಾಜುರೆಡ್ಡಿ ಬೊಮ್ಮನಕಟ್ಟಿ, ಪ್ರವೀಣ ಪಾಟೀಲ, ಶ್ರೀನಿವಾಸ ಬಾರ್ಬರಾ, ಗೂಳಪ್ಪ ಕರಿಗಾರ, ವೀರಣ್ಣ ಅಂಗಡಿ, ಬಸವರಾಜ ಕಲ್ಯಾಣ, ಮುತ್ತು ಚಕ್ರಸಾಲಿ, ಮಲ್ಲಿಕಾರ್ಜುನ ಕಬಾಡಿ, ಮಹಾಂತೇಶ ಹಾದಿಮನಿ ಇದ್ದರು.



ಶಿರಹಟ್ಟಿ: ಸ್ಥಳೀಯ ತಹಶೀಲ್ದಾರ್ ಕಚೇರಿಯಲ್ಲಿ ಹಿಂದೂ ಪರ ಒಕ್ಕೂಟದಿಂದ ಅಖಿಲ ಭಾರತೀಯ ಮಟ್ಟದಲ್ಲಿ ಗೋವನ್ನು ರಾಷ್ಟ್ರೀಯ ಪ್ರಾಣಿಯನ್ನಾಗಿ ಘೋಷಿಸುವ ಮೊದಲ ಹಂತದ ಅಭಿಯಾನ ನಡೆಸಿ ತಹಶೀಲ್ದಾರ್ ಮೂಲಕ ರಾಷ್ಟ್ರಪತಿ, ಪ್ರಧಾನಿಮಂತ್ರಿ, ರಾಜ್ಯಪಾಲರು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿದರು.

ಸಚಿವ ಡಾ. ಎಚ್.ಕೆ. ಪಾಟೀಲ ಅಭಿಮತ

ಸಾಧನೆಗೆ ಬಡತನ ಅಡ್ಡಿಯಲ್ಲ

ಗದಗ: ವಿದ್ಯಾರ್ಜನೆಗೆ ಬಡತನ ಎಂದಿಗೂ ಅಡ್ಡಿಯಾಗುವುದಿಲ್ಲ ಎಂಬುದಕ್ಕೆ ಗದಗ ಜಿಲ್ಲೆ ವಿದ್ಯಾರ್ಥಿಗಳ ಸಾಧನೆಯೇ ಉದಾಹರಣೆ. ಬಡತನ ನೆಪ ಮಾಡದೆ ಪ್ರತಿಯೊಬ್ಬ ವಿದ್ಯಾರ್ಥಿ ಶಿಕ್ಷಣದಲ್ಲಿ ಮುನ್ನಡೆಯಬೇಕು. ಕಾನೂನು, ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಹೇಳಿದರು.

ನಗರದಲ್ಲಿ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶದಲ್ಲಿ ಜಿಲ್ಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆಗೈದ ಹಿನ್ನೆಲೆ, ಜಿಲ್ಲೆಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅವರು ಮಾತನಾಡಿ, ಸರ್ಕಾರ ಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನ ನೀಡುತ್ತಿರುವುದನ್ನು ಉಲ್ಲೇಖಿಸಿದ ಅವರು, ಅದರ ಸದ್ಬಳಕೆ ಮಾಡಿಕೊಂಡು ಜೀವನದಲ್ಲಿ ಯಶಸ್ಸು ಸಾಧಿಸಲು ವಿದ್ಯಾರ್ಥಿಗಳು ಮುಂದಾಗಬೇಕು ಎಂದರು.

ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಪಾಲಕರು ನಿರ್ಲಕ್ಷ್ಯತೋರಬಾರದು. ವಿದ್ಯಾರ್ಥಿಗಳ ಭವಿಷ್ಯ ನಿರ್ಮಾಣದಲ್ಲಿ ಪಾಲಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಸಚಿವರು ಅಭಿಪ್ರಾಯಪಟ್ಟರು.



ಜಿಲ್ಲೆಯ ಒಟ್ಟು ಫಲಿತಾಂಶ ಸುಧಾರಣೆಗೆ ಶ್ರಮಿಸಿದ ಜಿಲ್ಲಾಡಳಿತ, ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಶಿಕ್ಷಕ ವೃಂದಕ್ಕೆ ಸಚಿವ ಎಚ್ ಕೆ ಪಾಟೀಲರು ಅಭಿನಂದನೆ ಸಲ್ಲಿಸಿದರು.

ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಅಕ್ಬರ್ ಸಾಬ್ ಬಬರ್ಚಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಬಿ.ಬಿ. ಅಸೂಟಿ, ತಾಲೂಕು ಅಧ್ಯಕ್ಷ ಅಶೋಕ ಮಂದಾಲಿ, ಜಿಪಂ ಮಾಜಿ ಅಧ್ಯಕ್ಷ ಸಿದ್ದು ಪಾಟೀಲ, ಎಸ್.ಎನ್.ಬಳ್ಳಾರಿ, ಪಾರೂಕ್ ಹುಬ್ಬಳ್ಳಿ, ಬಸವರಾಜ ಕಡೇಮನಿ, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್., ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಆರ್.ಎಸ್. ಬುರಡಿ, ಶರಣು ಗೋಗೇರಿ, ನಡುವಿನಮನಿ ಉಪಸ್ಥಿತರಿದ್ದರು.

ಧರ್ಮಾಚರಣೆಯಿಂದ ಸಂಬಂಧಗಳು ಗಟ್ಟಿ

ಮುಂಡರಗಿ: ಮಾನವ ಜೀವನ ಉತ್ಕೃಷ್ಟ, ಅರಿವು ಆಚಾರಗಳ ಪ್ರಜ್ಞೆಬೇಕು. ಧರ್ಮಾಚರಣೆಯಿಂದ ಮಾನವ ಸಂಬಂಧ ಗಟ್ಟಿಗೊಳ್ಳುತ್ತವೆ ಎಂದು ಬಾಳೆಹೊನ್ನೂರು ರಂಭಾಪುರಿ ಡಾ.ವೀರಸೋಮೇಶ್ವರ ಶ್ರೀಗಳು ಹೇಳಿದರು.

ತಾಲೂಕಿನ ಬಸಾಪುರ ಗ್ರಾಮದಲ್ಲಿ ಇತ್ತೀಚಿಗೆ ರೇಣುಕಾಚಾರ್ಯರ ಮತ್ತು ವೀರಭದ್ರೇಶ್ವರ ಮೂರ್ತಿ ಪ್ರತಿಷ್ಠಾಪನಾ ಅಂಗವಾಗಿ ಜರುಗಿದ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ರೇಣುಕಾಚಾರ್ಯರು ಬೋಧಿಸಿದ ತತ್ವ ಸಿದ್ಧಾಂತಗಳು ಬದುಕಿನ ಉನ್ನತಿಗೆ ಅಡಿಪಾಯವಾಗಿವೆ. ಬಸಾಪುರ ಗ್ರಾಮಸ್ಥರು ವೀರಭದ್ರೇಶ್ವರ, ರೇಣುಕಾಚಾರ್ಯರ ಶಿಲಾ ದೇಗುಲ ನಿರ್ಮಿಸಿ ಉದ್ಘಾಟನೆಯಾಗುತ್ತಿರುವುದು ಸಂತೋಷ ತಂದಿದೆ ಎಂದರು.

ಮಾಜಿ ಸಚಿವ ಎಸ್.ಎಸ್.ಪಾಟೀಲ ಮಾತನಾಡಿ, ಪ್ರತಿಯೊಬ್ಬ ವೀರಶೈವ ಲಿಂಗಾಯತರು ಗುರುವಿನಿಂದ ಇಷ್ಟಲಿಂಗ, ಮಂತ್ರೋಪದೇಶ ಪಡೆದಾಗ ಮಾತ್ರ ನಾವು ವೀರಶೈವರಾಗುತ್ತೇವೆ. ಹೆಸರಿಗೆ ಲಿಂಗಾಯತರಾದರೆ ಸಾಲದೆಂದು ವಿಷಾದಿಸಿದರು.

ಮಾನಿಹಳ್ಳಿ ಪುರವರ್ಗಮಠದ ಮಳೆ ಯೋಗೀಂದ್ರ ಶಿವಾಚಾರ್ಯ ಶ್ರೀಗಳು, ಬನ್ನಿಕೊಪ್ಪ ಹಿರೇಮಠದ ಡಾ.ಸುಜ್ಞಾನದೇವ ಶಿವಾಚಾರ್ಯ ಶ್ರೀಗಳು, ವೀರಶೈವ ಧರ್ಮದ ಮತ್ತು ಗುರುವಿನ ಮಹತ್ವದ ಬಗ್ಗೆ ಉಪದೇಶಾಮೃತವನ್ನಿತ್ತರು. ವಿರುಪಾಪುರ ಕಲಕೇರಿ ಮುದಕೇಶ್ವರ ಶಿವಾಚಾರ್ಯರು, ಅಭಿನವ ಮುದುಕೇಶ್ವರ ಶ್ರೀಗಳು, ಹಿರೇವಡ್ಡಟ್ಟಿ ವೀರೇಶ್ವರ ಶಿವಾಚಾರ್ಯರು, ಡೋಣಿ ಅಮೃತೇಶ್ವರ ಹಾಲಸ್ವಾಮಿಗಳು ಉಪಸ್ಥಿತರಿದ್ದರು.

ಮಿಥುನಗೌಡ ಪಾಟೀಲ ವೀರಭದ್ರೇಶ್ವರ ದೇವಸ್ಥಾನ ಗೋಪುರ ನಿರ್ಮಾಣಕ್ಕೆ 5 ಲಕ್ಷ ರೂ. ಕೊಡುವುದಾಗಿ ಭರವಸೆ ನೀಡಿದರು. ಮಠದ ಮಲ್ಲಯ್ಯ ಸ್ವಾಗತಿಸಿ ಮಾತನಾಡಿದರು. ಸಂಗಮೇಶ ಉತ್ತಂಗಿ ಭಕ್ತಿಗೀತೆ ಹಾಡಿದರು. ನವಲಿ ಹಂಪಸಾಗರ ಹಿರೇಮಠದ ಅಭಿನವ ಶಿವಲಿಂಗ ರುದ್ರಮುನಿ ಶಿವಾಚಾರ್ಯ ಶ್ರೀಗಳು ನೇತೃತ್ವ ವಹಿಸಿ ಸಮಾರಂಭ ನಿರೂಪಿಸಿದರು. ಸಮಾರಂಭಕ್ಕೂ ಮುನ್ನ ಗ್ರಾಮದಲ್ಲಿ ರಂಭಾಪುರಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ಜರುಗಿತು. ಬಂದ ಎಲ್ಲ ಭಕ್ತರಿಗೂ ಅನ್ನ ದಾಸೋಹ ಜರುಗಿತು.



ಅರ್ಜಿ ಆಹ್ವಾನ

ಗದಗ: ಪ್ರಸಕ್ತ ಸಾಲಿನ ಆತ್ಮ ಯೋಜನೆಯಡಿ ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆಯ ಕಚೇರಿಯಲ್ಲಿ ಖಾಲಿಯಿರುವ ನೇರಗುತ್ತಿಗೆ ಆಧಾರಿತ ಕಂಪ್ಯೂಟರ್ ಪ್ರೋಗ್ರಾಮರ್/ಆಪರೇಟರ್ [CP] ಈ ಹುದ್ದೆಯು ತಾತ್ಕಾಲಿಕ ಹುದ್ದೆಯಾಗಿದ್ದು, ಕೇಂದ್ರ ಕಚೇರಿಯ ಕ್ರಿಯಾ ಯೋಜನೆಯಂತೆ ಮುಂದುವರೆಯುತ್ತದೆ) ಹುದ್ದೆಗೆ B.Tech/MCA for Computer Programmer and BCA/Graduate with computer skills for computer operator ಬಿ.ಟೆಕ್ ನಂತರ ಒಂದು ವರ್ಷದ ಅನುಭವ, ಎಂ.ಸಿ.ಎ ನಂತರ ಎರಡು ವರ್ಷದ ಸೇವಾ ಅನುಭವ ಹೊಂದಿದ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಿದೆ. ಅಭ್ಯರ್ಥಿಗಳು ಛಾಯಾಚಿತ್ರ ಲಗತ್ತಿಸಿದ ವಿದ್ಯಾರ್ಹತೆ, ಅನುಭವ ಪ್ರಮಾಣ ಪತ್ರ, ಆಧಾರ ಪ್ರತಿ, ಕಂಪ್ಯೂಟರ್ ತರಬೇತಿ ಪ್ರಮಾಣ ಪತ್ರಗಳ ದೃಢೀಕೃತ ಫೋಟೋ ಪ್ರತಿಯ ದಾಖಲಾತಿಗಳನ್ನು ಏಪ್ರಿಲ್ 30ರಂದು ಸಂಜೆ 5 ಗಂಟೆಯೊಳಗಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಹುಡ್ಕೊ ಕಾಲೋನಿ, ನೌಕರ ಭವನ ಹತ್ತಿರ, ಮುಳಗುಂದ ರೋಡ್, ಗದಗ-582103 ಇವರಿಗೆ ಅರ್ಜಿ ಸಲ್ಲಿಸಲು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಜಕ್ಕೆ ಸಮಾನತೆ ಸಾರಿದ ಮಹಾತ್ಮರು


ಮುಂಡರಗಿ: ಜಗಜ್ಯೋತಿ ಬಸವೇಶ್ವರರು ಅನುಭವ ಮಂಟಪ ಸ್ಥಾಪಿಸಿ ಮಹಿಳೆಯರಿಗೂ ಸಮಾನ ಅವಕಾಶ ನೀಡಿದರು. ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನ ರಚಿಸಿ ಹಕ್ಕುಗಳನ್ನು ನೀಡುವುದರ ಮೂಲಕ ಸಂವಿಧಾನದ ಚೌಕಟ್ಟಿನೊಳಗೆ ಜನರು ಹೇಗೆ ಬಾಳಬೇಕೆಂಬುದನ್ನು ತಿಳಿಸಿಕೊಟ್ಟರು. ಶರಣೆ ಅಕ್ಕಮಹಾದೇವಿ ಕನ್ನಡದ ಮೊಟ್ಟ ಮೊದಲ ಕವಿಯತ್ರಿಯಾಗಿ ಹಲವಾರು ವಚನಗಳನ್ನು ರಚಿಸುವ ಮೂಲಕ ಸಮಾಜದಲ್ಲಿ ಇರತಕ್ಕಂತಹ ಓರೆ ಕೋರೆಗಳನ್ನು ತಿದ್ದಲು ಪ್ರಯತ್ನಿಸಿದರು ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಜಿ.ಗಚ್ಚಣ್ಣವರ ಹೇಳಿದರು.

ತಾಲೂಕು ಶರಣ ಸಾಹಿತ್ಯ ಪರಿಷತ್, ಕದಳಿ ಮಹಿಳಾ ವೇದಿಕೆ ಮತ್ತು ಜಾಗತಿಕ ಲಿಂಗಾಯತ ಮಹಿಳಾ ವೇದಿಕೆ ಮತ್ತು ಮುಕ್ತಾಯಕ್ಕ ಅಕ್ಕನ ಬಳಗ ತೋಂಟದಾರ್ಯ ಶಾಖಾ ಮಠ ಮುಂಡರಗಿ ಇವುಗಳ ಸಂಯುಕ್ತಾಶ್ರಯದಲ್ಲಿ ಅಕ್ಕಮಹಾದೇವಿ, ಬಸವೇಶ್ವರ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಉಪನ್ಯಾಸಕ ಹನುಮರೆಡ್ಡಿ ಇಟಗಿ ಜ್ಯೋತಿ ಬಸವೇಶ್ವರ ಹಾಗೂ ಡಾ.ಬಿ.ಆರ್. ಅಂಬೇಡ್ಕರರ ವಿಚಾರಧಾರೆಗಳ ಕುರಿತು ಮಾತನಾಡಿ, ಸಮ ಸಮಾಜ ಕಟ್ಟುವಲ್ಲಿ ಬಸವಣ್ಣನವರು ತಮ್ಮ ವಚನಗಳ ಮೂಲಕ ಸಾಕಷ್ಟು ಪ್ರಯತ್ನ ಮಾಡಿದರು. ಕಾಯಕ ದಾಸೋಹದ ಸಿದ್ಧಾಂತ ಇಡೀ ಸಮಾಜಕ್ಕೆ ನೀಡುವುದರ ಮೂಲಕ ದುಡಿಯದ ಕೈಗಳಿಗೆ ಉಣ್ಣುವ ಹಕ್ಕಿಲ್ಲ ಎಂಬುದನ್ನು ಪ್ರತಿಪಾದಿಸಿದರು. ಹಾಗೆಯೇ ಡಾ.ಬಿ.ಆರ್.ಅಂಬೇಡ್ಕರ್ ನಮಗೆಲ್ಲ ಸಂವಿಧಾನ ನೀಡಿ ತುಳಿತಕ್ಕೊಳಗಾದ ಜನಾಂಗ ಮುಖ್ಯವಾಹಿನಿಗೆ ತರುವಲ್ಲಿ ಸಾಕಷ್ಟು ಶ್ರಮಿಸಿದರು ಎಂದರು.

ತಾಲೂಕ ಕದಳಿ ಮಹಿಳಾ ವೇದಿಕೆ ಅಧ್ಯಕ್ಷ ಸೀತಾ ಸೋಮರೆಡ್ಡಿ ಬಸಾಪೂರವಹಿಸಿ ಮಾತನಾಡಿ, ಮೂವರು ಮಹಾತ್ಮರ ಜಯಂತಿ ಜಗದ್ಗುರು ತೋಂಟದಾರ್ಯ ಮಠದಲ್ಲಿ ಆಚರಿಸುತ್ತಲಿರುವುದು ನಮ್ಮ ಸೌಭಾಗ್ಯವೆಂದರು.

ಅರುಣಾ ಗುಜ್ಜರಿ ಅಕ್ಕಮಹಾದೇವಿ ಕುರಿತು ಉಪನ್ಯಾಸ ನೀಡಿದರು. ವೀಣಾ ಪಾಟೀಲ, ಉಮಾ ದೊಡ್ಡಮನಿ, ಪಾರ್ವತಿ ಕುಬಸದ, ಜ್ಯೋತಿ ಕುರಿಯವರ, ಸುಕನ್ಯಾ ಕಬ್ಬೂರಮಠ, ಲೀಲಕ್ಕ ಆಕ್ಕೂರ, ಸಾವಿತ್ರಮ್ಮ ಮಡಿವಾಳರ, ಈರಮ್ಮ ಕುಂದಗೋಳ, ಹಿರಿಯ ಸಾಹಿತಿ ಶಂಕರ್ ಕುಕನೂರ, ವೀರಣ್ಣ ಮಡಿವಾಳರ, ಪಾಲಾಕ್ಷ ಗಣದಿನ್ನಿ, ಅಶೋಕ ಅಣ್ಣಿಗೇರಿ, ಶರಣಪ್ಪ ಇಳಿಗೇರ, ಎಸ್.ಆರ್. ಬಸಾಪೂರ ಮತ್ತಿತರರಿದ್ದರು. ಜಯಶ್ರೀ ಅಳಬಂಡಿ ಸ್ವಾಗತಿಸಿದರು. ಪ್ರತಿಭಾ ಹೊಸಮನಿ ನಿರೂಪಿಸಿದರು. ಶಶಿಕಲಾ ಕುಕುನೂರ ಶರಣ ಸಮರ್ಪಣೆ ಮಾಡಿದರು.



ಸೋಮೇಶ್ವರ ಮಹಾರಥೋತ್ಸವ ಅದ್ಧೂರಿ



ಲಕ್ಷ್ಮೇಶ್ವರ: ಪಟ್ಟಣದ ಆರಾಧ್ಯದೈವ ಪುಲಿಗೆರೆ ಸೋಮೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವದ ನಿಮಿತ್ತ ಇತ್ತೀಚಿಗೆ ಗೋಧೂಳಿ ಸಮಯದಲ್ಲಿ ಅಪಾರ ಭಕ್ತ ಸಮೂಹದ ನಡುವೆ ಸೋಮೇಶ್ವರ ಮಹಾರಥೋತ್ಸವ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಜಾತ್ರಾಮಹೋತ್ಸವ ಅಂಗವಾಗಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅಲಂಕಾರ ಮಾಡಲಾಗಿತ್ತು. ಬೆಳಗಿನಿಂದಲೇ ಮಹಿಳೆಯರು, ಮಕ್ಕಳು ಹೊಸ ಉಡುಗೆ ಧರಿಸಿ ದೇವಸ್ಥಾನಕ್ಕೆ ಆಗಮಿಸಿ ಸಾಕ್ಷಾತ್ ಶಿವ-ಪಾರ್ವತಿ ನಂದಿ ಮೇಲೆ ಕುಳಿತ ಸೋಮೇಶ್ವರನಿಗೆ ಶ್ರದ್ಧಾ ಭಕ್ತಿಯಿಂದ ನಮಿಸಿದರು. ಚಿನ್ನದ ಕಿರೀಟ ಆಭರಣಗಳಿಂದ ಅಲಂಕೃತಗೊಂಡ ಸೋಮೇಶ್ವರನನ್ನು ಭಕ್ತರು ಸರದಿ ಸಾಲಿನಲ್ಲಿ ನಿಂತು ಕಣ್ತುಂಬಿಕೊಂಡರು. ಹಣ್ಣು-ಕಾಯಿ ನೈವೇದ್ಯ ಮಾಡಿಸಿಕೊಂಡು ಬಳಿಕ ರಥಕ್ಕೆ ಉಡಿ ತುಂಬಿ, ಹೊಸ ವಸ್ತ್ರಾಭರಣಗಳನ್ನಿರಿಸಿ ಪೂಜಿಸಿದ ದೃಶ್ಯ ಕಂಡು ಬಂದಿತು.

ಸಂಜೆ ಸೋಮೇಶ್ವರನ ಪಲ್ಲಕ್ಕಿ ಉತ್ಸವದೊಂದಿಗೆ ಮಹಾರಥೋತ್ಸವ ಪ್ರಾರಂಭ ಗೊಂಡಿತು. ಅಪಾರ ಭಕ್ತ ಸಮೂಹದೊಂದಿಗೆ ಜರುಗಿದ ಸೋಮೇಶ್ವರನ ಮಹಾ ರಥೋತ್ಸವಕ್ಕೆ ನಾಡಿನಾದ್ಯಂತ ಆಗಮಿಸಿದ್ದ ಭಕ್ತಗಣ ಸಾಕ್ಷಿಯಾಗಿತ್ತು. ಹರಹರ ಮಹಾದೇವ ಸೋಮೇಶ್ವರ ಮಹಾರಾಜ ಕೀ ಜೈ ಎಂಬ ಘೋಷಣೆ ಮೊಳಗಿದವು.

ಮಹಾ ರಥೋತ್ಸವದ ಸಂದರ್ಭದಲ್ಲಿ ಸೋಮೇಶ್ವರ ದೇವಸ್ಥಾನದ ಜಾತ್ರಾ ಕಮೀಟಿ, ಸೇವಾ ಸಮಿತಿಯ ಸರ್ವ ಸದಸ್ಯರು, ಮುಖ್ಯ ಅರ್ಚಕರು, ಹಿರಿಯರು ನೇತೃತ್ವವಹಿಸಿ ನಿರ್ವಹಿಸಿದರು. ಪೊಲೀಸರು ಸೂಕ್ತ ಬಂದೂ-ಬಸ್ತ್ ಏರ್ಪಡಿಸಿದ್ದರು. ಏ.27ರಂದು ಸಂಜೆ 6ಕ್ಕೆ ಕಡುಬಿನ ಕಾಳಗ. ಏ.28ರಂದು ಓಕಳಿ ಕಾರ್ಯಕ್ರಮದೊಂದಿಗೆ ಜಾತ್ರೆ ಸಂಪನ್ನಗೊಳ್ಳಲಿದೆ.

ಕ್ರಿಕೆಟ್ ಪಂದ್ಯಾವಳಿ: 17ನೇ ವಾರ್ಡ್ ಪ್ರಥಮ

ಗಜೇಂದ್ರಗಡ: ಯುವಕರು ಕ್ರೀಡೆಯೊಂದಿಗೆ ಸಾಮರಸ್ಯದ ಮಹತ್ವ ಅರಿತು ಕ್ರಿಕೆಟ್ ಪಂದ್ಯಾವಳಿಯಲ್ಲಿ ಕ್ರೀಡಾ ಸ್ಫೂರ್ತಿ ಮೆರೆಯಬೇಕು ಎಂದು ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷ, ರೋಣ ಶಾಸಕ ಜಿ.ಎಸ್.ಪಾಟೀಲ ಹೇಳಿದರು.

ನಗರದ ಎಸ್.ಎಂ.ಭೂಮರೆಡ್ಡಿ ಕಾಲೇಜ್ ಮೈದಾನದಲ್ಲಿ ದುರ್ಗಾ ಬಾಯ್ಸ್ ವತಿಯಿಂದ ಆಯೋಜನೆ ಮಾಡಿದ ವಾರ್ಡ್‌ವೈಸ್ ಕ್ರಿಕೆಟ್ ಟೂರ್ನಾಮೆಂಟ್ ಪ್ರಶಸ್ತಿ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಹಿಂದೆ ಕ್ರೀಡೆ ದೈಹಿಕ ವ್ಯಾಯಾಮದೊಂದಿಗೆ ಆರೋಗ್ಯಕರ ವಾತವರಣದಲ್ಲಿ ಪಂದ್ಯ ಆಯೋಜನೆ ಮಾಡುತ್ತಿದ್ದರು. ಆದರೆ ಇಂದಿನ ಯುವ ಪೀಳಿಗೆಯು ಕ್ರಿಕೆಟ್ ಆಟ ಮೋಜು-ಮಸ್ತಿಗಾಗಿ ಆಯೋಜನೆ ಮಾಡದೆ, ಸಾಮರಸ್ಯದೊಂದಿಗೆ ಪಂದ್ಯಾವಳಿ ಯಶಸ್ಸು ಮಾಡಬೇಕು. ಗಜೇಂದ್ರಗಡದಲ್ಲಿ ಅನೇಕ ಆಟಗಾರರು ರಣಜಿ, ರಾಷ್ಟ್ರೀಯ ತಂಡಗಳಲ್ಲಿ ಸೇರುವ ಅವಕಾಶ ಇದೆ. ಸತತ ಪ್ರಯತ್ನ ಮಾಡಬೇಕಿದೆ ಎಂದರು.

ಬಳಿಕ ನಿಕಟಪೂರ್ವ ಪುರಸಭೆ ಸದಸ್ಯ ಮುತ್ತರಾಜ ಡಾಲಾಯತ, ಶಿವರಾಜ ಘೋರ್ಪಡೆ, ರಾಜೂ ಸಾಂಗ್ಲೀಕರ ಮಾತನಾಡಿದರು.

ಟೂರ್ನಾಮೆಂಟ್ ಪ್ರಥಮ ಬಹುಮಾನ 17ನೇ ವಾರ್ಡ್‌ನ ದುರ್ಗಾ ಬಾಯ್ಸ್, ದ್ವಿತೀಯ ಬಹುಮಾನ 22ನೇ ವಾರ್ಡ್‌ನ ದುರ್ಗಾ ಬಾಯ್ಸ್, ತೃತೀಯ ಬಹುಮಾನ 3ನೇ ವಾರ್ಡ್ ಛತ್ರಪತಿ ಶಿವಾಜಿ ತಂಡ, ಸರಣಿ ಶ್ರೇಷ್ಠ ರಾಕೇಶ ಮಾರನಬಸರಿ, ಉತ್ತಮ ಬ್ಯಾಟ್ಸ್‌ಮ್ಯಾನ್ ಗೋವಿಂದ ಮನೇರಾಳ, ಉತ್ತಮ ಬಾಲರ್ ಮಂಜುನಾಥ ಘೋರ್ಪಡೆ ಅವರಿಗೆ ಬಹುಮಾನ ವಿತರಣೆ ಮಾಡಿದರು.

ಬಿಲ್ಲಾ ನಿಡಗುಂದಿ, ಅಮರೇಶ ಬಂಡಿವಡ್ಡರ, ರವಿ ಭಜೇಂತ್ರಿ, ರವಿ ನಿಡಗುಂದಿ, ಚಂದ್ರು ನಿಡಗುಂದಿ, ಗಫರ ಡಾಲಾಯತ, ಗೈಬು ನಿಶಾನದಾರ, ರವಿ ಜರತಾರಿ, ಮಂಜುನಾಥ ಕುದರಿಕೋಟಿ, ನಾಗರಾಜ ಬಂಡಿವಡ್ಡರ, ರಾಜು ನಿಡಗುಂದಿ, ಶ್ರೀನಿವಾಸ ತಿರಕನ್ನವರ, ಅಶೋಕ ಭಜೇಂತ್ರಿ ಇದ್ದರು.



ಮಲಪ್ರಭಾ ಕಾಲುವೆ ಹೂಳು ಸ್ವಚ್ಛತೆಗೆ ಆಗ್ರಹ

ನರಗುಂದ: ಅಧಿಕಾರಿಗಳ ನಿರ್ಲಕ್ಷ್ಯದಿಂದ ಮಲಪ್ರಭಾ ಬಲದಂಡೆ ಹಾಗೂ ಕೊಳಚೆ ಕಾಲುವೆಗಳಲ್ಲಿ ಕಸಕಡ್ಡಿ, ಹುಲ್ಲು, ಮುಳ್ಳುಕಂಟಿಗಳ ರಾಶಿ ರಾಶಿ ಗುಡ್ಡೆ ಕಾಣಿಸುತ್ತಿವೆ. ಕಾಲುವೆ ಸಂಪೂರ್ಣ ಮುಚ್ಚಿ ಹೋಗಿವೆ. ಕೂಡಲೇ ನೀರಾವರಿ ಅಧಿಕಾರಿಗಳು ಕಾಲುವೆ ಹೂಳು ತೆಗೆಯಬೇಕೆಂದು ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕಾಧ್ಯಕ್ಷ ಉಮೇಶ ಮರ್ಚಪ್ಪನವರ ಆಗ್ರಹಿಸಿದರು.

ಅವರು ಸೋಮವಾರ ಪಟ್ಟಣದ ನೀರಾವರಿ ನಿಗಮದ ಕಛೇರಿಯಲ್ಲಿನ ಅಧಿಕಾರಿಗಳಿಗೆ ಮನವಿ ಅರ್ಪಿಸಿ ಮಾತನಾಡಿ, ಮಲಪ್ರಭಾ ಜಲಾಶಯಕ್ಕೆ ಹೊಂದಿಕೊಂಡ ಮಲಪ್ರಭಾ ಬಲದಂಡೆ ಕಾಲುವೆ ಮತ್ತು ಕೊಣ್ಣೂರ ಗ್ರಾಮದಲ್ಲಿರುವ ಕೊಳಚೆ ಕಾಲುವೆಗಳಲ್ಲಿ ಜಾಲಿ ಕಂಟಿ, ಅಫ್(ಕಸ)ಗಳ ಬೆಳೆದು ನಿಂತಿವೆ. ಕಾಲುವೆ ಸಂಪೂರ್ಣ ಹೂಳು ತುಂಬಿವೆ. ಮಲಪ್ರಭಾ ಜಲಾಶಯದಿಂದ ಕಾಲುವೆಗಳಿಗೆ ನೀರು ಹರಿಸಲಾಗಿದ್ದರೂ ಸರಿಯಾಗಿ ರೈತರ ಜಮೀನಗಳಿಗೆ ನೀರು ತಲುಪುತ್ತಿಲ್ಲ. ಕಾಲುವೆಯಲ್ಲಿ ಹೂಳು ತುಂಬಿದ್ದರಿಂದ ಕಾಲುವೆ ನೀರು ರೈತರ ಜಮೀನಗಳಿಗೆ ನುಗ್ಗಿ ಬೆಳೆ ನಾಶ ಮಾಡುತ್ತಿದೆ. ಈ ಬಗ್ಗೆ ಹಲವಾರು ಬಾರಿ ಸಂಬಂದಪಟ್ಟ ಅಧಿಕಾರಿಗಳಿಗೆ ಕಾಲುವೆ ಹೂಳು ತಗಿಸಿ ಕೆಳ ಭಾಗದ ಜಮೀನಗಳಿಗೆ ನೀರು ಪೂರೈಕೆ ಮಾಡಬೇಕೆಂದು ಮನವಿ ಮಾಡಿದರು. ಆದರೆ ಪ್ರಯೋಜನವಾಗಿಲ್ಲವೆಂದು ಆರೋಪಿಸಿದರು.



ಸರ್ಕಾರವು ಪ್ರತಿವರ್ಷ ಕಾಲುವೆ ಸ್ವಚ್ಛ ಪಡಿಸಲು ಲಕ್ಷಾಂತರ ರೂ. ಅನುದಾನ ನೀಡುತ್ತದೆ.ಆದರೆ ಅಧಿಕಾರಿಗಳು ಬೇಸಿಗೆ ಸಮಯದಲ್ಲಿ ಈ ಕಾಲುವೆ ಸ್ವಚ್ಛ ಮಾಡದೇ ನೀರು ಪೂರೈಕೆಯಾದ ಸಂದರ್ಭದಲ್ಲಿ ಜೆಸಿಬಿ ಮೂಲಕ ಅಲ್ಪಸ್ವಲ್ಪ ತಗಿಸಿ ಹಣ ಲೂಟಿ ಮಾಡುತ್ತಾರೆ. ಮೇಲಾಗಿ ಹಿಂದಿನ ದಿನಗಳಲ್ಲಿ ಈ ಕಾಲುವೆ ಸ್ವಚ್ಛ ಮಾಡಿದ್ದವೆಂದು ಖಾಸಗಿ ಗುತ್ತಿಗೆದಾರರು ಮತ್ತು ಇಲಾಖೆಯ ಅಧಿಕಾರಿಗಳು ಹೊಂದಾಣಿಕೆಯಾಗಿ ಲಕ್ಷಾಂತರ ಹಣ ನುಂಗಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಮೇಲಾಧಿಕಾರಿಗಳು ಕಾನೂನು ಕ್ರಮ ತಗಿದುಕೊಳ್ಳಬೇಕು ಎಂದರು.

ನೀರಾವರಿ ನಿಗಮದ ಕಾರ್ಯನಿರ್ವಾಹಕ ಅಭಿಯಂತರ ಜಗದೀಶ ಕುರಿ ರೈತರ ಮನವಿ ಸ್ವೀಕರಿಸಿ ಕಾಲುವೆ ಸ್ವಚ್ಛ ಮಾಡಲು ಕ್ರಮ ತಗಿದುಕೊಳ್ಳಲಾಗುವದೆಂದರು.

ಶೇಖರಗೌಡ ಹಳೆಪೊಲೀಸ್ ಪಾಟೀಲ, ಶಿವಾನಂದ ಬ್ಯಾಳಿ, ಗುರಶಾಂತ ನರಸಾಪೂರ, ಸುರೇಶ ಐನಾಪೂರ, ಮುತ್ತಣ್ಣ ಬದಾಮಿ ಸೇರಿದಂತೆ ಮುಂತಾದವರು ಇದ್ದರು.

ಭಗವಾನ್ ಬುದ್ಧ ಜಯಂತಿ ಮೇ 1ರಂದು

ಗದಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಭಗವಾನ ಬುದ್ಧ ಜಯಂತಿ ಕಾರ್ಯಕ್ರಮ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಮೇ 1ರಂದು ಬೆಳಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ತಂಗಡಗಿ ಉಪಸ್ಥಿತಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಉದ್ಘಾಟಿಸುವರು.

ಶಾಸಕ ಸಲೀಂ ಅಹ್ಮದ್, ಶಾಸಕ ಜಿ.ಎಸ್.ಪಾಟೀಲ, ಸಂಸದ ಬಸವರಾಜ ಬೊಮ್ಮಾಯಿ, ಸಂಸದ ಪಿ.ಸಿ.ಗದ್ದಿಗೌಡ್ರ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ, ಶಾಸಕ ಸಿ.ಸಿ.ಪಾಟೀಲ, ಶಾಸಕ ಡಾ.ಚಂದ್ರು ಲಮಾಣಿ, ಶಾಸಕ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಮಣದೀಪ್ ಚೌಧರಿ, ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಾನಕಿ ಕೆ.ಎಂ.ಆಗಮಿಸುವರು. ನಿವೃತ್ತ ಉಪನ್ಯಾಸಕ ಪ್ರೊ.ಸತೀಶ ಪಾಸಿ ಹಾಗೂ ಕುವೆಂಪು ಶತಮಾನೋತ್ಸವ ಸರ್ಕಾರಿ ಮಾದರಿ ಶಾಲೆ ಮುಖ್ಯೋಪಾಧ್ಯಾ ಡಿ.ಎಚ್.ಪರಂಗಿ ಉಪನ್ಯಾಸ ನೀಡುವರು.

ಜಿಲ್ಲಾಧಿಕಾರಿ ಸಿ.ಎನ್.ಶೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಸವರಾಜ ಬಳ್ಳಾರಿ ಭಾಗವಹಿಸುವರು.

ಸಂಭ್ರಮದಿಂದ ನಡೆದ ವೀರಭದ್ರೇಶ್ವರ ರಥೋತ್ಸವ

ರೋಣ: ಪಟ್ಟಣದ ಆದಿ ದೇವ ಎಂದು ಪ್ರಸಿದ್ಧಿ ಪಡೆದ ವೀರ ಭದ್ರೇಶ್ವರ ರಥೋತ್ಸವವು ಸಹಸ್ರಾರು ಭಕ್ತರ ಜಯಘೋಷಗಳ ಮಧ್ಯೆ ಸೋಮವಾರ ಸಂಭ್ರಮದಿಂದ ನಡೆಯಿತು.

ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯ ನಡೆದವು. ಸತತ ಎರಡು ದಿನಗಳಿಂದ ದೇವಸ್ಥಾನದಲ್ಲಿ ಅನ್ನಸಂತರ್ಪಣೆ ಕಾರ್ಯ ನಡೆಯಿತು. ಭಾರಿ ಸಂಖ್ಯೆಯ ಭಕ್ತರು ಮಹಾದಾಸೋಹದಲ್ಲಿ ಭಾಗಿಯಾಗಿ ಪ್ರಸಾದ ಸ್ವೀಕರಿಸಿದರು.

ಸೋಮವಾರ ಬೆಳಗಿನ ಜಾವಾ ಪೋತರಾಜನ ಕಟ್ಟೆಯ ಬಳಿಯಿರುವ ದೇವಸ್ಥಾನದಿಂದ ವೀರಭದ್ರೇಶ್ವರ ದೇವಸ್ಥಾನದವರೆಗೆ ಮಡಿಹುಡಿಯಿಂದ ಗುಗ್ಗಳದ ಮೆರವಣಿಗೆ ನಡೆಯಿತು.

ಈ ವೇಳೆ ವೀರಗಾಸೆ ಕುಣಿಯುತ್ತಾ ಆದಿ ದೇವ ವೀರಭದ್ರೇಶ್ವರನ ಒಡಪು ಹೇಳಿದರು. ಅಲ್ಲದೆ ವೀರಗಾಸೆ ವಾಹನಗಳು ಸಂಚರಿಸದಂತೆ ಪೊಲೀಸ್‌ರು ಸೂಕ್ತ ವ್ಯವಸ್ಥೆ ಮಾಡಿದ್ದು ಜನರ ಮೆಚ್ಚುಗೆಗೆ ಕಾರಣವಾಗಿತು.

ಸಂಜೆ ನಂದಿಕೋಲು ಮೆರವಣಿಗೆ ಸಹಸ್ರಾರು ಭಕ್ತರ ಮಧ್ಯ ಜರುಗಿತು. ಈ ವೇಳೆ ಸಾವಿರಾರು ಭಕ್ತರು ರಥೋತ್ಸವಕ್ಕೆ ಹೂ, ಹಣ್ಣು, ಉತ್ತತ್ತಿ ಎಸೆಯುವ ಮೂಲಕ ತಮ್ಮ ಇಷ್ಟಾರ್ಥ ಸಿದ್ಧಿ ಪೂರೈಸುವಂತೆ ವೀರಭದ್ರೇಶ್ವರನಲ್ಲಿ ಪ್ರಾರ್ಥಿಸಿದರು. ಒಟ್ಟಿನಲ್ಲಿ ಕಳೆದ ಒಂದು ವಾರದಿಂದ ನಡೆಯುತ್ತಿದ ಜಾತ್ರೆಯ ಸಂಭ್ರಮಕ್ಕೆ ತೆರೆಕಂಡಿತು.



ಸೌಹಾರ್ದತೆ ಸಂಕೇತ

ಪಟ್ಟಣದ ಆದಿ ದೇವ ವೀರಭದ್ರೇಶ್ವರನಿಗೆ ಎಲ್ಲ ವರ್ಗದ ಜನರು ಭಕ್ತರಾಗಿದ್ದಾರೆ. ಜಾತಿ ಧರ್ಮಗಳ ಬೇದಗಳಿಲ್ಲದೆ ಎಲ್ಲರೂ ನಡೆದುಕೊಳ್ಳುತ್ತಾರೆ. ರಥೋತ್ಸವದಲ್ಲಿ ಎಲ್ಲರೂ ಭಾಗಿಯಾಗಿ ಭಕ್ತಿಯನ್ನು ಮೆರೆಯುತ್ತಾರೆ. ವೀರಭದ್ರೇಶ್ವರ ಜಾತ್ರೆ, ಸೌಹಾರ್ದತೆ, ಸಹೋದರತೆಯನ್ನು ಬೆಸೆಯುವ ಹಬ್ಬವಾಗಿ ಕಾಣಸಿಗುತ್ತದೆ. ಇದು ರೋಣ ಪಟ್ಟಣದ ಜನತೆಯ ಹೆಮ್ಮೆಯಾಗಿ ಬೆಳದು ನಿಂತಿದೆ ಎನ್ನುವುದರಲ್ಲಿ ಅತಿಶೋಕ್ತಿಯಾಗಲಿಕ್ಕಿಲ್ಲ.

‘ಇನ್ಕಾಮೆಕ್ಸ್‌–2026 ಬೃಹತ್ ವಸ್ತು ಪ್ರದರ್ಶನ’

ಹಸಿರು ಕ್ರಾಂತಿ ಜೊತೆ ಆರ್ಥಿಕ ಕ್ರಾಂತಿಯೂ ನಡೆಯಲಿ

ಹುಬ್ಬಳ್ಳಿ: ದೇಶದಲ್ಲಿ ಹೊಸ ಸ್ವರೂಪದ ಕೃಷಿಗೆ ಉತ್ತೇಜನ ನೀಡುವ ಮೂಲಕ, ಉದ್ಯೋಗ ಮತ್ತು ಆದಾಯ ಸೃಷ್ಟಿಸುವಂತಾಗಬೇಕು ಎಂದು ಕೃಷಿ ಉತ್ಪನ್ನಗಳ ಬೆಲೆ ಆಯೋಗದ ಚೇರ್ಮನ್ ಅಶೋಕ ದಳವಾಯಿ ಅಭಿಪ್ರಾಯಪಟ್ಟರು.

ನಗರದ ಎಪಿಎಂಸಿ ಆವರಣದ ವಿವಿಧೋದ್ದೇಶ ಕೈಗಾರಿಕಾ ಮತ್ತು ವಾಣಿಜ್ಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಹಮ್ಮಿಕೊಂಡಿರುವ ‘ಇನ್ಕಾಮೆಕ್ –2026 ಬೃಹತ್ ವಸ್ತು ಪ್ರದರ್ಶನ’ ಕಾರ್ಯಕ್ರಮದಲ್ಲಿ ಸೋಮವಾರ ನಡೆದ ‘ಕೃಷಿ ಸಭೆ’ಯಲ್ಲಿ ಅವರು ಮಾತನಾಡಿದರು.

ಪ್ರಕೃತಿಯನ್ನು ಕೃಷಿ ಕ್ಷೇತ್ರ ಅವಲಂಬಿಸಿದ್ದು, ಅದಕ್ಕೆ ಪೂರಕವಾಗಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಹಸಿರು ಕ್ರಾಂತಿಯ ಜೊತೆಗೆ ಆರ್ಥಿಕ ಕ್ರಾಂತಿಯೂ ನಡೆಯಬೇಕಿದೆ ಎಂದು ಹೇಳಿದರು.

ದೇಶದಲ್ಲಿನ ಅತಿ ಹೆಚ್ಚು ಕೃಷಿ ಭೂಮಿಯನ್ನು ಜೋಳ, ಭತ್ತಕ್ಕೆ ಮೀಸಲಿಡುತ್ತಿದ್ದೇವೆ. ದ್ವಿದಳ ಧಾನ್ಯ ಮತ್ತು ತೋಟಗಾರಿಕೆ ಬೆಳೆಗೆ ನಿರಾಸಕ್ತಿ ವಹಿಸಲಾಗುತ್ತಿದೆ. ನಾವು ಸೇವಿಸುವ ಆಹಾರದಲ್ಲಿ ಕಾರ್ಬೋಹೈಡ್ರೇಟ್ ಹೊರತು ಪಡಿಸಿ, ಉಳಿದ ಪೋಷಕಾಂಶದಿಂದ ವಂಚಿತರಾಗುತ್ತಿದ್ದೇವೆ. ಕೃಷಿ ವಿಜ್ಞಾನಿಗಳು, ರೈತರು ಸೇರಿಕೊಂಡು ನೂತನ ಕೃಷಿ ನೀತಿ ರೂಪಿಸಬೇಕಿದೆ ಎಂದು ಹೇಳಿದರು.



ಬೆಳೆದ ಬೆಳೆಯನ್ನು ಸಂಗ್ರಹಿಸಿಟ್ಟುಕೊಳ್ಳಲು ಮತ್ತು ಸಂಸ್ಕರಣ ಮಾಡುವ ನೂತನ ತಂತ್ರಜ್ಞಾನವನ್ನು ಅಳವಡಿಸಿಕೊಂಡರೆ, ರೈತರ ಆದಾಯ ಹೆಚ್ಚಳವಾಗುವುದಲ್ಲದೆ ಉತ್ಪಾದನೆ ಪ್ರಮಾಣವೂ ಹೆಚ್ಚುತ್ತದೆ. ಹವಾಮಾನ ವೈಪರೀತ್ಯದಿಂದಾಗಿ ಇಳುವರಿ ಕುಂಠಿತವಾಗಿ, ಕೀಟ ಮತ್ತು ರೋಗ ಬಾಧೆಯೂ ಕಾಣಿಸಿಕೊಳ್ಳುತ್ತಿದೆ. ಇವುಗಳ ಕುರಿತು ಗಂಭೀರ ಚಿಂತನೆ ಮಾಡುವ ಸಮಯ ಬಂದಿದೆ ಎಂದರು.

ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಜೆ.ಕೆ. ಆದಪ್ಪಗೌಡರ, ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾಲಯದ ಕುಲಪತಿ ವಿಷ್ಣುವರ್ಧನ, ಕೆನ್ ಅಗ್ರಿಟೆಕ್ ಕಂಪನಿ ವ್ಯವಸ್ಥಾಪಕ ವಿವೇಕ ನಾಯಕ ಹಾಗೂ ಇತರರು ಪಾಲ್ಗೊಂಡಿದ್ದರು.

ಕ್ಯಾನ್ಸರ್ ಲಸಿಕೆ ತಪ್ಪು ಕಲ್ಪನೆ ಬೇಡ: ಸಚಿವ ದಿನೇಶ

ಧಾರವಾಡ: ರಾಜ್ಯದ ಆರೋಗ್ಯ ಇಲಾಖೆ ಗರ್ಭಕಂಠ ಕ್ಯಾನ್ಸರ್ ಮುನ್ನೆಚ್ಚರಿಕೆಗೆ ಬಾಲಕಿಯರಿಗೆ ನೀಡುವ ಲಸಿಕೆ ಪ್ರಮಾಣೀಕರಿಸಿದ್ದು, ಈ ಬಗ್ಗೆ ಯಾವುದೇ ತಪ್ಪು ಕಲ್ಪನೆ ಬೇಡ ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ ಗುಂಡೂರಾವ್ ಮನವಿ ಮಾಡಿದರು.

ಸೋಮವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಜಗತ್ತಿನೆಲ್ಲಡೆ ಈ ಲಸಿಕೆ ನೀಡುತ್ತಿದೆ. ಆದರೆ, ಇದರ ಕುರಿತಂತೆ ಕೆಲವರು ತಪ್ಪು ಸಂದೇಶ ಹರಡುತ್ತಿದ್ದು, ಈ ಕುರಿತು ನಮ್ಮ ಪಾಲಕರು ಹಾಗೂ ಬಾಲಕಿಯರು ಕಿವಿಗೊಡಬಾರದು ಎಂದು ಹೇಳಿದರು.

14 ವರ್ಷದ ಬಾಲಕಿಯರು ಈ ಲಸಿಕೆ ಪಡೆದರೆ, ಭವಿಷ್ಯದಲ್ಲಿ ಗಂರ್ಭಕಂಠ ಕ್ಯಾನ್ಸರ್ ಬರುವುದಿಲ್ಲ. ಈಗಾಗಲೇ ಒಂದು ಲಕ್ಷಕ್ಕೂ ಅಧಿಕ ಬಾಲಕಿಯರಿಗೆ ಈ ಲಸಿಕೆ ನೀಡಿದೆ. ಯಾವುದೇ ಭಯ ಪಡದೆ, ಲಸಿಕೆ ಹಾಕಿಸಿಕೊಳ್ಳುವಂತೆ ಸಲಹೆ ನೀಡಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ರೆಡಿಯೋಲಾಜಿಸ್ಟ್ ಕೊರತೆ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಸಮಸ್ಯೆ ಮೊದಲಿಂದಲೂ ಇದೆ. ಅವರಿಗೆ ಹೆಚ್ಚಿನ ಬೇಡಿಕೆಯೂ ಇದ್ದು, ಟೆಲಿ ರೆಡಿಯಾಲಜಿ ಮೂಲಕ ಈ ಕೊರತೆ ನೀಗಿಸುತ್ತಿರುವುದಾಗಿಯೂ ಗುಂಡೂರಾವ್ ತಿಳಿಸಿದರು.

ಆರೋಗ್ಯ ಇಲಾಖೆಯಲ್ಲಿ ವೈದ್ಯರ ಕೊರತೆ ಬಗ್ಗೆ ಮಾತನಾಡಿದ ಅವರು, ರಾಜ್ಯದ 1,300 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪ್ರಸ್ತುತ 200ಕ್ಕೂ ಹೆಚ್ಚು ವೈದ್ಯರ ನೇಮಕಕ್ಕೆ ಕ್ರಮ ಕೈಗೊಳ್ಳಲಿದೆ. ಶೀಘ್ರವೇ ನೋಟಿಫಿಕೇಶನ್ ಹೊರಡಿಸುವುದಾಗಿ ಹೇಳಿದರು.

ಗಡುವು ನೀಡಿಲ್ಲ

ಮುಖ್ಯಮಂತ್ರಿ ಸ್ಥಾನದ ಬದಲಾವಣೆಗೆ ಯಾರಿಗೂ, ಯಾರೂ ಗಡುವು ನೀಡಿಲ್ಲ. ಆದರೆ, ಇದೆಲ್ಲವೂ ಬದಲಾವಣೆ ಮಾಧ್ಯಮಗಳ ಸೃಷ್ಟಿ ಎಂದ ಸಚಿವ ದಿನೇಶ ಗುಂಡೂರಾವ್, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಕಾರ್ಯ ನಿಮಿತ್ತ ದೆಹಲಿಗೆ ಹೋಗಿದ್ದು, ವಿಶೇಷತೆ ಏನಿಲ್ಲ ಎಂದು ದಿನೇಶ ಗುಂಡೂರಾವ್ ಸ್ಪಷ್ಟನೆ ನೀಡಿದರು.

ಪರಿಸರ ಸಂಘಟನೆಗಳಿಂದ ವಿರೋಧ

ಬಾವಿಕೇರಿಯಲ್ಲಿ ಪರಮಾಣು ಸ್ಥಾವರ ಸ್ಥಾಪನೆ?

ಶಿರಸಿ: ಉತ್ತಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಕೈಗಾ ಅಣು ಸ್ಥಾವರದ ದುಷ್ಪರಿಣಾಮಗಳಿಂದ ಜನತೆ ಕಂಗಾಲಾಗಿರುವ ಬೆನ್ನಲ್ಲೇ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಿಲ್ಲೆಯ ಬಾವಿಕೇರಿಯಲ್ಲಿ ಮತ್ತೊಂದು ಪರಮಾಣು ಸ್ಥಾವರ ಸ್ಥಾಪಿಸಲು ಭೂಮಿ ಗುರುತಿಸಿ, ಸಮೀಕ್ಷೆಗೆ ಮುಂದಾಗಿರುವ ವಿಷಯಕ್ಕೆ ಸಂಬಂಧಿಸಿ ಪರಿಸರ ಸಂಘಟನೆಗಳಿಂದ ವಿರೋಧ ವ್ಯಕ್ತವಾಗಿದ್ದು, ಈ ವಿನಾಶಕಾರಿ ಯೋಜನೆಗೆ ಅವಕಾಶ ನೀಡಬಾರದು ಎಂದು ಸರ್ಕಾರವನ್ನು ಒತ್ತಾಯಿಸಿವೆ.

ಯೋಜನೆ ಕುರಿತು ವೃಕ್ಷ ಲಕ್ಷ ಆಂದೋಲನ ಆಕ್ಷೇಪ ವ್ಯಕ್ತಪಡಿಸಿದ್ದು, ಇಂಧನ ಇಲಾಖೆಯು ರಾಜ್ಯದ ವಿವಿಧೆಡೆ ಪರಮಾಣು ಸ್ಥಾವರಗಳ ಸ್ಥಾಪನೆಗೆ ಸ್ಥಳ ಸಮೀಕ್ಷೆ ನಡೆಸುತ್ತಿದೆ. ಉತ್ತರ ಕನ್ನಡ ಜಿಲ್ಲೆಯ ಬಾವಿಕೇರಿ ಸೇರಿದಂತೆ ಶಿವಮೊಗ್ಗ ಜಿಲ್ಲೆಯ ಬೇಸೂರು, ರಾಯಚೂರು, ಕೊಪ್ಪಳ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ತಲಾ 2,000 ಎಕರೆ ಭೂಮಿಯನ್ನು ಈಗಾಗಲೇ ಗುರುತಿಸಲಾಗಿದೆ. ಈ ಕುರಿತು ಕಂದಾಯ ಇಲಾಖೆಯ ರಾಜ್ಯ ಅಧೀನ ಕಾರ್ಯದರ್ಶಿಯವರು ಫೆಬ್ರವರಿ 3, 2026ರಂದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿದ್ದರೂ, ಈ ಮಾಹಿತಿಯನ್ನು ಜನತೆಯಿಂದ ಗೌಪ್ಯವಾಗಿಡಲಾಗಿದೆ ಎಂದು ಸಂಘಟನೆ ದೂರಿದೆ.

ಕೈಗಾದಲ್ಲಿ ಈಗಾಗಲೇ 5 ಮತ್ತು 6ನೇ ಘಟಕಗಳ ಸ್ಥಾಪನೆಗೆ ತಯಾರಿ ನಡೆಯುತ್ತಿದ್ದು, ಅಣುವಿಕಿರಣದ ಅಪಾಯಗಳ ಬಗ್ಗೆ 35 ವರ್ಷಗಳಿಂದ ಎಚ್ಚರಿಕೆ ನೀಡುತ್ತಿದ್ದರೂ ಸರ್ಕಾರ ಕಿವಿಗೊಡುತ್ತಿಲ್ಲ. ಈಗ ಬಾವಿಕೇರಿಯಲ್ಲಿ ಹೊಸದಾಗಿ ಸ್ಥಾವರ ಸ್ಥಾಪಿಸಲು ಮುಂದಾಗಿರುವುದು ಕಾರವಾರ–ಅಂಕೋಲಾ ಜನರಲ್ಲಿ ಭಾರೀ ಆತಂಕ ಮೂಡಿಸಿದೆ. ಇದೇ ವೇಳೆ ಸಾಗರ ತಾಲೂಕಿನ ಬೇಸೂರಿನಲ್ಲಿ ಶರಾವತಿ ನದಿ ತೀರದಲ್ಲಿ ವೈಮಾನಿಕ ಸಮೀಕ್ಷೆ ಆರಂಭವಾಗಿದ್ದು, ಅಲ್ಲಿನ ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದೆ.

ಬಾವಿಕೇರಿಯಲ್ಲಿ ಇಂಧನ ಇಲಾಖೆ ನಡೆಸುತ್ತಿರುವ ತಯಾರಿಗಳ ಬಗ್ಗೆ ಜಿಲ್ಲಾಡಳಿತವು ಕೂಡಲೇ ಜನತೆಗೆ ಸ್ಪಷ್ಟ ಮಾಹಿತಿ ನೀಡಬೇಕು. ಕಾರವಾರದ ಶಾಸಕರು ಹಾಗೂ ಸಂಸದರು ಈ ವಿಷಯದ ಗಂಭೀರತೆಯನ್ನು ಅರಿತು ಸರ್ಕಾರದೊಂದಿಗೆ ಮಾತನಾಡಿ ವಾಸ್ತವಾಂಶವನ್ನು ಬಹಿರಂಗಪಡಿಸಬೇಕು ಎಂದು ಮನವಿ ಮಾಡಿದೆ.

ಉತ್ತರ ಕನ್ನಡ ಜಿಲ್ಲಾ ಪರಿಸರ ಸಮಿತಿ, ವೃಕ್ಷಲಕ್ಷ ಆಂದೋಲನ ಹಾಗೂ ಪಶ್ಚಿಮ ಘಟ್ಟ ಉಳಿಸಿ ಆಂದೋಲನ ಸಂಘಟನೆಗಳು ಒಗ್ಗೂಡಿ ಈ ಯೋಜನೆಯನ್ನು ತಡೆಯಲು ಮುಂದಾಗುವುದಾಗಿ ತಿಳಿಸಲಾಗಿದೆ.

ಕೇಣಿ ಬಂದರು, ಬೇಡ್ತಿ–ಅಘನಾಶಿನಿ ಹಾಗೂ ಶರಾವತಿ ಯೋಜನೆಗಳ ವಿರುದ್ಧ ಈಗಾಗಲೇ ಹೋರಾಟ ನಡೆಯುತ್ತಿರುವ ಬೆನ್ನಲ್ಲೇ ಈ ಹೊಸ ಪ್ರಸ್ತಾಪವು ಕರಾವಳಿ ಮತ್ತು ಮಲೆನಾಡಿನ ಜನತೆಗೆ ಸರ್ಕಾರ ನೀಡುತ್ತಿರುವ ವಿನಾಶಕಾರಿ ಕೊಡುಗೆ ಎಂದು ವೃಕ್ಷ ಲಕ್ಷ ಆಂದೋಲನ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕುತೂಹಲ ಕೆರಳಿಸಿದ ಸತೀಶ ಜಾರಕಿಹೊಳಿ ದೆಹಲಿ ಭೇಟಿ



ಬೆಳಗಾವಿ: ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಸೋಮವಾರ ದೆಹಲಿಗೆ ಭೇಟಿ ನೀಡಿದ್ದು, ರಾಜ್ಯ ರಾಜಕಾರಣದಲ್ಲಿ ತೀವ್ರ ಕುತೂಹಲ ಕೆರಳಿಸಿದೆ.

ದೆಹಲಿಯಲ್ಲಿ ಸತೀಶ ಜಾರಕಿಹೊಳಿ ಅವರು ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿಮಾಡಿ ರಾಜ್ಯದ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚಿಸಿದ್ದಾರೆ. ಇನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡುವ ಸಾಧ್ಯತೆಯಿದೆ ಎಂದು ತಿಳಿದು ಬಂದಿದೆ.

ರಾಜ್ಯದಲ್ಲಿ ಸಚಿವ ಸಂಪುಟ ಪುನರ್ ರಚನೆ ಮತ್ತು ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಯ್ಕೆ ಕುರಿತು ಚರ್ಚೆಗಳು ನಡೆಯುತ್ತಿರುವ ಬೆನ್ನಲ್ಲೇ ಜಾರಕಿಹೊಳಿ ಅವರ ಈ ದಿಢೀರ್ ದೆಹಲಿ ಪ್ರವಾಸ ಮಹತ್ವ ಪಡೆದುಕೊಂಡಿದೆ.

ಸತೀಶ ಜಾರಕಿಹೊಳಿ ಅವರ ಬೆನ್ನಲ್ಲೇ ಸಚಿವ ಎಚ್.ಸಿ.ಮಹದೇವಪ್ಪ ಅವರೂ ಸಹ ಸೋಮವಾರ ರಾತ್ರಿ ದೆಹಲಿಗೆ ತಲುಪಲಿದ್ದಾರೆ. ಈ ಭೇಟಿಯು ಕೇವಲ ಆಡಳಿತಾತ್ಮಕ ಕೆಲಸಗಳಿಗಾಗಿಯೇ ಅಥವಾ ರಾಜ್ಯ ನಾಯಕತ್ವದ ಬದಲಾವಣೆಯ ಕುರಿತಾದ ಚರ್ಚೆಯೇ ಎಂಬ ಬಗ್ಗೆ ರಾಜಕೀಯ ವಲಯದಲ್ಲಿ ವಿವಿಧ ಊಹಾಪೋಹಗಳು ಎದ್ದಿವೆ.

ಸಿಡಿಲು ಬಡಿದು ರೈತ ಸಾವು

ಕುಷ್ಟಗಿ: ಗುಡುಗು ಸಿಡಿಲಿನ ಆರ್ಭಟಕ್ಕೆ ಸೋಮವಾರ ಸಂಜೆ ತಾಲೂಕಿನ ಜೆ.ಬೆಂಚಮಟ್ಟಿ ಗ್ರಾಮದಲ್ಲಿ ರೈತ ದೇವರಾಯನ ಗೌಡ ಕಲ್ಲನಗೌಡ ಪೊಲೀಸ್‌ಪಾಟೀಲ್ (50) ಮೃತಪಟ್ಟಿರುವ ಘಟನೆ ನಡೆದಿದೆ. ಗ್ರಾಮದ ಹೊರ ಹೊಲಯದ ತೋಟದ ಕೃಷಿ ಚಟುವಟಿಕೆಯಲ್ಲಿ ನಿರತರಾಗಿದ್ದ ರೈತ ಸಿಡಿಲಿನ ಬಡಿತಕ್ಕೆ ಸ್ಥಳದಲ್ಲಿ ಅಸು ನೀಗಿದ್ದಾರೆ. ಸುದ್ದಿ ತಿಳಿದ ಹಿನ್ನೆಲೆಯಲ್ಲಿ ಗ್ರಾಮ ಲೆಕ್ಕಾಧಿಕಾರಿ ಗಳು, ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಕಾರವಾರ ಉಪವಿಭಾಗ ವ್ಯಾಪ್ತಿಯಲ್ಲಿ ಎಚ್.ಟಿ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಕಾರವಾರ ಟೌನ್ ಫೀಡರಿನ ವಿವಿಧ ಪ್ರದೇಶಗಳಲ್ಲಿ ಏ.28 ರಂದು ಬೆಳಗ್ಗೆ 9.30 ಗಂಟೆಯಿಂದ ಸಂಜೆ 6 ಗಂಟೆಯವರೆಗೂ ವಿದ್ಯುತ್ ವ್ಯತ್ಯಯವಾಗಲ್ಲಿದ್ದು, ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಡು ನೊಣದ ಹಾವಳಿಗೆ ಜನ ಹೈರಾಣ

ಯಲ್ಲಾಪುರ: ಕಾಳಮ್ಮ ನಗರ, ಕಲ್ಮಠ ಸೇರಿದಂತೆ ವಿವಿಧೆಡೆ ಪಟ್ಟಣದ ಮನೆ ಮನೆಗಳಲ್ಲಿ, ಅಂಗಡಿ ಗಳಲ್ಲಿ ಕಾಡು ನೊಣದ ಹಾವಳಿಯಿಂದ ಜನರು ಹೈರಾಣಾಗುವಂತೆ ಆಗಿದೆ. ಸಂಜೆಯಾಗುತ್ತಿದ್ದಂತೆ ಇವುಗಳ ಹಾವಳಿ ವಿಪರೀತ ವಾಗಿ ಲೈಟಿನ್ ಬೆಳಕಿಗೆ ಹಾರಾಡುತ್ತ ಮನೆಯಲ್ಲಿದ್ದವರಿಗೆ ಕಚ್ಚಿದಾಗ ರಕ್ತ ಹರಿದು ಅಪಾರ ಯಾತನೆ ನೀಡುತ್ತಿದೆ.ಎಂದು ಜನರು ದೂರುತ್ತಿದ್ದಾರೆ. ಇದರಿಂದ ರೋಗ ರುಜಿನ ಹರಡುವ ಭೀತಿಯಿದ್ದು, ಕಾಡುನೊಣ ಇಷ್ಟೊಂದು ಪ್ರಮಾಣದಲ್ಲಿ ಕಂಡುಬರುತ್ತಿರುವದು ಆತಂಕಕ್ಕೆ ಕಾರಣವಾಗಿದ್ದು. ಸಂಬಂಧ ಪಟ್ಟ ಇಲಾಖೆ ಯಿಂದ ಅವುಗಳ ನಿಯಂತ್ರಣಕ್ಕೆ ಕ್ರಮ ತೆಗೆದುಕೊಳ್ಳಬೇಕು ಸಾರ್ವ ಜನಿಕರು ಆಗ್ರಹಿಸಿದ್ದಾರೆ.

ಇಂದು 'ಶುನಶ್ಯೇಪ' ನಾಟಕ

ಶಿರಸಿ: ಸಿದ್ದಾಪುರದ ಒಡ್ಡೋಲಗ ರಂಗ ಪರ್ಯಟನ ಹಿತ್ತಲಕ್ಕೆ ತಂಡದ ವತಿಯಿಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 2025-26ರ ಧನಸಹಾಯ ಯೋಜನೆಯಡಿ 'ಶುನಶ್ಯೇಪ' ನಾಟಕವು ಏ.28 ರಂದು ನಗರದ ನೆಮ್ಮದಿ ಆವರಣದ ರಂಗಧಾಮದಲ್ಲಿ ಪ್ರದರ್ಶನಗೊಳ್ಳಲಿದೆ.ಅಂದು ಸಂಜೆ 6.30ಕ್ಕೆ ನಾಟಕ ಪ್ರದರ್ಶನ ಆರಂಭವಾಗಲಿದ್ದು, ರಂಗಾಸಕ್ತರಿಗೆ ವಿಶೇಷ ಸಾಂಸ್ಕೃತಿಕ ರಸದೌತಣವಾಗಲಿದೆ. ನಿಸರ್ಗಪ್ರಿಯ ಅವರ ರಚನೆಯ ಈ ನಾಟಕಕ್ಕೆ ಮಂಜುನಾಥ್ ಎಲ್. ಬಡಿಗೇರ್ ವಿನ್ಯಾಸ ಮತ್ತು ನಿರ್ದೇಶನ ನೀಡಿದ್ದಾರೆ. ಭಾರ್ಗವ ಹೆಗ್ಗೋಡು ಅವರ ಸಂಗೀತ ನಿರ್ದೇಶನ ನಾಟಕಕ್ಕಿರಲಿದೆ. ಕಾರ್ಯಕ್ರಮದಲ್ಲಿ ಕಾರವಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಮಂಗಳಾ ನಾಯ್ಕ, ಶಿರಸಿ ತಹಶೀಲ್ದಾರ್ ಪಟ್ಟರಾಜ ಗೌಡ, ಕೆಎಂಎಫ್ ಧಾರವಾಡದ ಉಪಾಧ್ಯಕ್ಷ ಸುರೇಶ್ಚಂದ್ರ ಹೆಗಡೆ ಕೆಶಿನಮನೆ, ಅಜ್ಜಿಮನೆಯ ಮಧುಕೇಶ್ವರ ವಿ. ಹೆಗಡೆ ಹಾಗೂ ಲೋಕಧ್ವನಿ ದಿನಪತ್ರಿಕೆಯ ಸ್ಥಾನಿಕ ಸಂಪಾದಕ ನಾಗರಾಜ ಮತ್ತಿಗಾರ ಭಾಗವಹಿಸಲಿದ್ದಾರೆ.

ನಿಧನ ಸುದ್ದಿ

ಶ್ಯಾಮ್ ಶಿವದಾಸ್

ಅಂಕೋಲ: ಬ್ರೈಟ್ ಮಾಸ್ಟರ್ ಎಂದೇ ಪರಿಚಿತರಾದ ಶ್ಯಾಮ್ ಶಿವದಾಸ್ (86)ಅವರು ಪುಣೆಯ ಮಗಳ ಮನೆಯಲ್ಲಿ ನಿನ್ನೆ ವಿಧಿವಶರಾದರು.



ಕಳೆದ ಕೆಲವು ದಶಕದ ಹಿಂದೇ ಅಂಕೋಲಾದ ಕೆ ಸಿ ರಸ್ತೆಯಲ್ಲಿ ತಮ್ಮದೇ ಟ್ಯೂಷನ್ ಮೂಲಕ ಗಣಿತ ವಿಜ್ಞಾನ ಇಂಗ್ಲಿಷ್ ಬೋಧನೆಯಿಂದ ಮಕ್ಕಳ ಮನೆಮಾತಾಗಿದ್ದರು.

ಹಿಂದೂ ಪರ ಸಂಘಟನೆಯಲ್ಲಿ ಸಕ್ರಿಯ ವಾಗಿದ್ದ ಇವರು ಹಲವು ಧಾರ್ಮಿಕ ಕಾರ್ಯಗಳಲ್ಲಿ ಮುಂಚೂಣಿಸಿದ್ದರು. ಅ ಭಾ ವಿ ಪ್. ತಾಲೂಕಾ ಘಟಕ . ನಿವೃತ್ತ ಶಿಕ್ಷಕ ಎಂ.ಎಂ.ಕರ್ಕಕರ ಹಾಗೂ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60005	69599
ಬಿಳಿಗೋಟು	25499	37568
ಕೆಂಪುಗೋಟು	26699	38324
ಬೆಟ್ಟೆ	35189	51299
ರಾಶಿ	50109	54199
ಚಾಲಿ	44049	48622
ಬಿ.ಕಾಳುಮೆಣಸು	84899	87299
ಯಲ್ಲಾಪುರ	**ಕನಿಷ್ಠ**	**ಗರಿಷ್ಠ**
ಅಪಿ	57765	65279
ರಾಶಿ	50179	57699
ಬೆಟ್ಟೆ	38711	50369
ಕೆಂಪುಗೋಟು	18899	37499
ಬಿಳಿಗೋಟು	17510	40899
ಚಾಲಿ	38618	48499
ಕೋಕಾ	16109	35499
ಕಾಳುಮೆಣಸು	60711	66666



ಯಲ್ಲಾಪುರ: ಕುಂದರಗಿಯ ಭರತನಳ್ಳಿಯ ಪ್ರಗತಿ ವಿದ್ಯಾಲಯದಲ್ಲಿ 50.00 ಲಕ್ಷ ರೂ. ಅನುದಾನದಲ್ಲಿ ಸಭಾಭವನದ ನಿರ್ಮಾಣಕ್ಕೆ ಕಾಮಗಾರಿಗೆ ಶಾಸಕ ಶಿವರಾಮ ಹೆಬ್ಬಾರ್ ಚಾಲನೆ ನೀಡಿದರು. ಶಾಲಾ ಆಡಳಿತ ಮಂಡಳಿಯ ಪದಾಧಿಕಾರಿಗಳು, ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ಬಸವಣ್ಣನವರ ತತ್ವಾದರ್ಶ ಪಾಲಿಸಿ:ನಾಗರಾಜ

ಸಿದ್ದಾಪುರ: ವಿಶ್ವ ಮಾನವತೆಯನ್ನು ಹೊಂದಿದ್ದ ಬಸವೇಶ್ವರರು ನಿಜವಾದ ಅರ್ಥದಲ್ಲಿ ವಿಶ್ವಗುರು. ಧರ್ಮಸ್ಥಾಪನೆಯಲ್ಲಿ ಎಲ್ಲರಿಗೂ ಸಹಭಾಗಿತ್ವವನ್ನು ಕೊಟ್ಟ ಬಸವೇಶ್ವರರು ಮಾರ್ಗದರ್ಶನ ಮಾಡಿದ ದಾರಿಯಲ್ಲಿ ನಾವೆಲ್ಲ ಸಾಗಬೇಕಾದ ಅನಿವಾರ್ಯತೆಯಿದೆ ಎಂದು ತಾಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ತಾಲೂಕು ಸಮಿತಿ ಅಧ್ಯಕ್ಷ ಕೆ.ಜಿ.ನಾಗರಾಜ ಹೇಳಿದರು.ಅವರು ಪಟ್ಟಣದ ಬಸವೇಶ್ವರ ದೇವಾಲಯದಲ್ಲಿ ಅಖಿಲ ಭಾರತೀಯ ವೀರಶೈವ ಮಹಾಸಭಾದ ತಾಲೂಕು ಘಟಕ ಹಾಗೂ ಸ್ಥಳೀಯ ವೀರಶೈವ ಕ್ಷೇಮಾಭಿವೃದ್ಧಿ ಸಂಸ್ಥೆಯ ಸಹಯೋಗದಲ್ಲಿ ಸಂಘಟಿಸಿದ್ದ ಬಸವೇಶ್ವರ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿ,ನಿಜ ಜೀವನದಲ್ಲಿ ಕಂಡಿದ್ದರಲ್ಲೆಲ್ಲ ದೇವರನ್ನು ಕಂಡವರು ಬಸವಣ್ಣ. ಸಮಾಜದ ಕೆಳಸ್ತರದಲ್ಲಿದ್ದವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶ್ರಮಿಸಿದ ಅವರು ಸಮಾಜದ ಕಟ್ಟುಪಾಡುಗಳ ವಿರುದ್ಧ ಹೋರಾಡಿದವರು ಬಸವಣ್ಣನವರು ಎಂದರು. ಮುಖ್ಯ ಅತಿಥಿಗಳಾಗಿ ತಹಶೀಲ್ದಾರ್ ಎಂ.ಆರ್. ಕುಲಕರ್ಣಿ, ಪಿ.ಎಸ್.ಐ. ನಾಗಪ್ಪ, ಮುಖ್ಯ ಅತಿಥಿಗಳಾಗಿ ಪಪಂ ಮುಖ್ಯಾಧಿಕಾರಿ ಮಹ್ಮದ್ ಯಾಕೂಬ್ ಶೇಖ್,ತಾಲೂಕು ಕಾರ್ಯನಿರತಪತ್ರಕರ್ತರ ಸಂಘದ ಅಧ್ಯಕ್ಷರಮೇಶಹಾರ್ಸಿಮನೆ, ಸಾಮಾಜಿಕ ಕಾರ್ಯಕರ್ತ ಗುರುರಾಜ ಶಾನಭಾಗ, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ನಿರ್ದೇಶಕ ವೇ.ಪರಮೇಶ್ವರಯ್ಯ ಕಾನಳ್ಳಿಮಠ ಮಾತನಾಡಿದರು. ಅಕ್ಕಮಹಾದೇವಿ ಸಂಘದ ಅಧ್ಯಕ್ಷೆ ಕಾವ್ಯಾ ಅಶೋಕ ಮರವಣಿಗೆ ಉಪಸ್ಥಿತರಿದ್ದರು.ಅ.ಭಾ.ವೀರಶೈವ ಮಹಾಸಭಾದ ತಾಲೂಕು ಘಟಕದ ಅಧ್ಯಕ್ಷ ಸಿ.ಎಸ್.ಗೌಡರ್ ಅಧ್ಯಕ್ಷತೆವಹಿಸಿ ಮಾತನಾಡಿದರು. ಬಸವೇಶ್ವರ ದೇವಾಲಯ ಸಮಿತಿ ಅಧ್ಯಕ್ಷ ನಾಗರಾಜ ಎಂ.ದೋಶೆಟ್ಟಿ ನಿರೂಪಿಸಿದರು.



ಸಿದ್ದಾಪುರ: ಪಟ್ಟಣದ ಬಸವೇಶ್ವರ ದೇವಾಲಯದಲ್ಲಿ ಅಖಿಲ ಭಾರತೀಯ ವೀರಶೈವ ಮಹಾಸಭಾದ ತಾಲೂಕು ಘಟಕ ಹಾಗೂ ಸ್ಥಳೀಯ ವೀರಶೈವ ಕ್ಷೇಮಾಭಿವೃದ್ಧಿ ಸಂಸ್ಥೆಯ ಸಹಯೋಗದಲ್ಲಿ ಸಂಘಟಿಸಿದ್ದ ಬಸವೇಶ್ವರ ಜಯಂತಿ ಆಚರಿಸಿದರು.

ನೈರ್ಮಲ್ಯ ಸಮಿತಿ ಸಭೆ | ಡಾ.ದಿಲೀಷ್ ಶಶಿ ಸೂಚನೆ

ಕುಡಿಯುವ ನೀರಿನ ಸಮಸ್ಯೆಗೆ ಶೀಘ್ರ ಸ್ಪಂದಿಸಿ

ಕಾರವಾರ: ಪ್ರಸಕ್ತ ಬೇಸಿಗೆಯಲ್ಲಿ ಜಿಲ್ಲೆಯ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಲ್ಲಿ ತಕ್ಷಣ ಸ್ಪಂದಿಸಿ, ಸಮಸ್ಯೆಗೆ ಸೂಕ್ತ ಪರಿಹಾರ ಒದಗಿಸುವಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಅಧಿಕಾರಿಗಳಿಗೆ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ ಸೂಚನೆ ನೀಡಿದರು.

ಅವರು ಸೋಮವಾರ ಜಿಪಂ ಸಭಾಂಗಣದಲ್ಲಿ ನಡೆದ, ಜಿಲ್ಲಾ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಪ್ರಸಕ್ತ ಬೇಸಿಗೆಯಲ್ಲಿ 41 ಗ್ರಾಪಂಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿದ್ದು, 17 ಗ್ರಾಮಗಳಲ್ಲಿ ಸರ್ಕಾರಿ ಮತ್ತು ಖಾಸಗಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಕುಡಿಯುವ ನೀರಿನ ಸರಬರಾಜು ಮಾಡಲು 98 ಖಾಸಗಿ ಬೋರ್‌ವೆಲ್‌ಗಳನ್ನು ಗುರುತಿಸಲಾಗಿದ್ದು, ಜಿಲ್ಲೆಯ ಯಾವುದೇ ಗ್ರಾಮದಲ್ಲಿ ಸಮಸ್ಯೆ ಕಂಡುಬಂದಲ್ಲಿ ತ್ವರಿತವಾಗಿ ಸ್ಪಂದಿಸಿ, ನೀರು ಒದಗಿಸುವಂತೆ ಸೂಚನೆ ನೀಡಿದರು.

ಜಿಲ್ಲೆಯ ಗ್ರಾಮೀಣ ಪ್ರದೇಶಗಳ ನೀರು ಸರಬರಜು ವ್ಯವಸ್ಥೆಯಲ್ಲಿ ಬರುವ ಪೈಪ್ ಲೈನ್ ಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡುವಂತೆ ಹಾಗೂ ನೀರಿನ ಗುಣಮಟ್ಟದ ಪರೀಕ್ಷೆಗಳನ್ನು ಪ್ರಾಥಮಿಕ ಹಂತದಲ್ಲಿ ನಿರಂತರವಾಗಿ ನೀರಿನ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯದಲ್ಲಿ ಪರಿಶೀಲನೆಗೆ ಒಳಪಡಿಸುವ ಮೂಲಕ ಯಾವುದೇ ಸಂದರ್ಭದಲ್ಲಿ ಕಲುಷಿತ ನೀರು ಸರಬರಾಜು ಆಗದಂತೆ ಕಟ್ಟೆಚ್ಚರ ವಹಿಸುವಂತೆ ನಿರ್ದೇಶನ ನೀಡಿದರು.

ಜಲ ಜೀವನ್ ಮಿಷನ್ ಯೋಜನೆಯ ಕಾಮಗಾರಿಗಳಲ್ಲಿ ಇದುವರೆಗೆ 745 ಕಾಮಗಾರಿಗಳನ್ನು ಪೂರ್ಣಗೊಳಿಸಿ, 685 ಕಾಮಗಾರಿಗಳನ್ನು ಗ್ರಾಪಂ ಗಳಿಗೆ ಹಸ್ತಾಂತರಿಸಿ ಶೇ.77.85 ಪ್ರಗತಿ ಸಾಧಿಸಿ, ರೂ.481.25 ಕೋಟಿ ವೆಚ್ಚ ಮಾಡಿ, ಶೇ.54.76 ಆರ್ಥಿಕ ಪ್ರಗತಿ ಸಾಧಿಸಿದ್ದು, ಪ್ರಸ್ತುತ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಶೀಘ್ರದಲ್ಲಿ ಮುಕ್ತಾಯಗೊಳಿಸುವಂತೆ ಸೂಚಿಸಿದರು.

ಜಿಪಂ ಉಪ ಕಾರ್ಯದರ್ಶಿ ಅಲ್ಲಾ ಭಕಷ್, ಮುಖ್ಯ ಲೆಕ್ಕಾಧಿಕಾರಿ ಆನಂದ್ ಸಾ ಹಬೀಬ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಸತ್ಯಪ್ಪ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.



ಅಧಿಕಾರಿಗಳಿಗೆ ಸೂಚನೆ

ಜಲ ಜೀವನ್ ಮಿಷನ್ ಯೋಜನೆಯ ಕಾಮಗಾರಿಗಳ ವೇರಿಯೇಷನ್ ಮತ್ತು ಅವಧಿ ವಿಸ್ತರಣೆ ಪ್ರಸ್ತಾವನೆಯ ಕಾಮಗಾರಿಗಳ ಕುರಿತು ಪರಿಶೀಲನೆ ನಡೆಸಿದ ಅವರು, ಅರಣ್ಯ ಇಲಾಖೆಯ ಅನುಮತಿಗೆ ಸಲ್ಲಿಸಿರುವ ಕಾಮಗಾರಿಗಳ ಕುರಿತಂತೆ ಆಕ್ಷೇಪಣೆಗಳನ್ನು ಬಗೆಹರಿಸಲು ನಿರಂತರವಾಗಿ ಫಾಲೋ ಅಪ್ ಮಾಡಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಮತ್ತು ಬೋರ್‌ವೆಲ್‌ಗಳನ್ನು ಕೊರೆಯುವ ಸಂದರ್ಭದಲ್ಲಿ ಭೂ ವಿಜ್ಞಾನಿಗಳಿಂದ ಪರಿಶೀಲನೆ ನಡೆಸಿ, ಅವರ ಅನುಮತಿಯ ನಂತರ ಕಾಮಗಾರಿ ಕೈಗೊಳ್ಳುವಂತೆ ಸೂಚಿಸಿದರು.

ಪರೀಕ್ಷೆ ಪಾರದರ್ಶಕವಾಗಿರಲಿ: ಜಿಲ್ಲಾಧಿಕಾರಿ

ಕಾರವಾರ: ಏ.30 ರಿಂದ ಮೇ 13 ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ-2 ನಡೆಯಲಿದ್ದು, ಈ ಪರೀಕ್ಷೆಗಳಿಗೆ ಜಿಲ್ಲೆಯಲ್ಲಿ ಒಟ್ಟು 2820 ಪರೀಕ್ಷಾರ್ಥಿಗಳು ನೋಂದಾಯಿಸಿಕೊಂಡಿದ್ದು, 11 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಯು ಜರುಗಲಿದ್ದು, ಯಾವುದೇ ಗೊಂದಲಕ್ಕೆ ಆಸ್ಪದ ನೀಡದೇ ಪರೀಕ್ಷಾ ಕಾರ್ಯವನ್ನು ನಡೆಸುವಂತೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅದೇ ರೀತಿಯಾಗಿ ದ್ವಿತೀಯ ಪಿಯುಸಿ ಪರೀಕ್ಷೆ-2 ಯಲ್ಲಿ ಯಾವುದೇ ಸಮಸ್ಯೆಯಾಗದಂತೆ ವ್ಯವಸ್ಥಿತವಾಗಿ ಪರೀಕ್ಷಾ ಕಾರ್ಯನಿರ್ವಹಿಸಬೇಕು. ಪರೀಕ್ಷಾ ಮಂಡಳಿಯು ನೀಡಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದರು.

ಎಲ್ಲಾ ಪರೀಕ್ಷಾ ಕೇಂದ್ರದಲ್ಲಿ ಸಿ.ಸಿ ಕ್ಯಾಮರವನ್ನು ಪರಿಶೀಲಿಸಿಕೊಂಡು ಸುಸ್ಥಿತಿಯಲ್ಲಿಡಲು ಪರೀಕ್ಷಾ ಕೇಂದ್ರ ಮುಖ್ಯಸ್ಥರಿಗೆ ಸೂಚನೆ ನೀಡಿದ ಅವರು, ಸಿಸಿಟಿವಿ ಅಡಿಯಲ್ಲಿ ಕೇಂದ್ರಗಳಲ್ಲಿ ಪ್ರಶ್ನೆ ಪತ್ರಿಕೆ ಬಂಡಲ್ ತೆರೆಯುವುದು ಮತ್ತು ಉತ್ತರ ಪತ್ರಿಕೆಗಳನ್ನು ಸ್ವೀಕರಿಸಿ ಬಂಡಲ್ ಮಾಡುವ ಕಾರ್ಯಗಳನ್ನು ನಿರ್ವಹಿಸಬೇಕು. ಜಿಲ್ಲಾ ಪಂಚಾಯತ್ ನಲ್ಲಿ ಸಿಸಿಟಿವಿ ವೀಕ್ಷಣೆಗೆ ವೆಬ್ ಕಾಸ್ಟಿಂಗ್ ವ್ಯವಸ್ಥೆಗೆ ಅಗತ್ಯವಿರುವ ಸಿದ್ದತೆಗಳನ್ನು ಕೈಗೊಳ್ಳುವಂತೆ ತಿಳಿಸಿದರು.

ಎಲ್ಲಾ ಪರೀಕ್ಷೆ ಕೇಂದ್ರಗಳಿಗೆ ಆರೋಗ್ಯ ಸಹಾಯಕರುಗಳನ್ನು ನಿಯೋಜಿಸಬೇಕು, ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷೆ ನಡೆಯುವ ದಿನದಂದು ವಿದ್ಯುತ್ ವ್ಯತ್ಯಯವಾಗದಂತೆ ಅಗತ್ಯ ಕ್ರಮ ಕೈಗೊಳ್ಳಲು ಹೆಸ್ಕಾಂ ಅಧಿಕಾರಿಗಳಿಗೆ ಮತ್ತು ಪರೀಕ್ಷಾ ದಿನದಂದು ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ತಲುಪಲು ಎಖಖಆರ ಯವರು ಬಸ್ಸಿನ ವ್ಯವಸ್ಥೆಯನ್ನು ಒದಗಿಸುವಂತೆ ಸೂಚಿಸಿದರು.ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಸತೀಸ್ ನಾಯ್ಕ ಹಾಗೂ ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಿರುವ ಎಲ್ಲಾ ಅಧಿಕಾರಿಗಳು ಹಾಗೂ ವೀಡಿಯೋ ಕಾನ್ಫರೆನ್ಸ್ ಮೂಲಕ ಎಲ್ಲಾ ತಾಲೂಕುಗಳ ತಹಶೀಲ್ದಾರ್‌ಗಳು ಇದ್ದರು.

ಮೇ 30ಕ್ಕೆ ನೀಟ್ ಪರೀಕ್ಷೆ

ಕಾರವಾರ: ನೀಟ್ ಪರೀಕ್ಷೆಯು ಮೇ 3 ರಂದು ಕಾರವಾರದ ಸರ್ಕಾರಿ ಕಲಾ ಮತ್ತು ವಿಜ್ಞಾನ ಪದವಿ ಕಾಲೇಜು ನಲ್ಲಿ ನಡೆಯಲಿದ್ದು, ಈ ಪರೀಕ್ಷೆಯು ಅತ್ಯಂತ ಪಾರದರ್ಶಕ ಮತ್ತು ವ್ಯವಸ್ಥಿತ ರೀತಿಯಲ್ಲಿ ಹಾಗೂ ಪರೀಕ್ಷಾ ಮಾರ್ಗಸೂಚಿಗಳ ಉಲ್ಲಂಘನೆಯಾಗದಂತೆ ಕರ್ತವ್ಯ ನಿರ್ವಹಿಸುವಂತೆ ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಿರುವ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಸೂಚನೆ ನೀಡಿದರು.ಜಿಲ್ಲೆಯಲ್ಲಿ ನಡೆಯುವ ನೀಟ್ ಪರೀಕ್ಷೆಗೆ 488 ವಿದ್ಯಾರ್ಥಿಗಳು ಹಾಜರಾಗಲಿದ್ದಾರೆ.



ಸಿದ್ದಾಪುರ: ತಾಲೂಕಿನ ಮುತ್ತಳ್ಳಿ ಸಮೀಪ ಹಳಿಯಾಳದ ಮಹಿಷಾಸುರ ಮರ್ದಿನಿ ದೇವಾಲಯಕ್ಕೆ ಸಿಗಂಧೂರು ಚೌಡೇಶ್ವರಿ ದೇವಸ್ಥಾನದ ಧರ್ಮದರ್ಶಿಗಳಾದ ರಾಮಪ್ಪ ಅವರು ಭೇಟಿ ನೀಡಿ ದೇವಿಯ ದರ್ಶನ ಪಡೆದರು.

ನಾಳೆ ಪಿಯು ಕಾಲೇಜು ಕಟ್ಟಡ ಉದ್ಘಾಟನೆ



ಭಟ್ಕಳ: ಇಲ್ಲಿಯ ಬಂದರ ರಸ್ತೆಯ ನ್ಯೂ ಇಂಗ್ಲೀಷ್ ಸ್ಕೂಲ್ ಸನಿಹದಲ್ಲಿ ನೂತನವಾಗಿ ನಿರ್ಮಿಸಲಾದ ಗುರು ವಿದ್ಯಾಧಿರಾಜ ನ್ಯೂ ಇಂಗ್ಲೀಷ್ ಪಿಯು ಕಾಲೇಜಿನ ಕಟ್ಟಡ ಏ.29ರಂದು ಬೆಳಗ್ಗೆ 8.13 ಗಂಟೆಗೆ ಲೋಕಾರ್ಪಣಗೊಳ್ಳಲಿದೆ.

ಈ ಕುರಿತು ಕಾಲೇಜಿನಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಭಟ್ಕಳ ಎಜ್ಯುಕೇಶನ್ ಟ್ರಸ್ಟಿನ ಟ್ರಸ್ಟಿ ಮೆನೆಜರ್ ರಾಜೇಶ ನಾಯಕ, ಕಾಲೇಜಿನ ನೂತನ ಕಟ್ಟಡ ಮತ್ತು ಗೀತಾ ವಾಮನ ಶಾನಭಾಗ ಬ್ಲಾಕ್‌ನ್ನು ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದ ಪರಮಪೂಜ್ಯ ಶ್ರೀಮದ್ ವಿದ್ಯಾಧೀಶತೀರ್ಥ ಶ್ರೀಪಾದ ವಡೇರ ಸ್ವಾಮೀಜಿಯವರು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಸಚಿವ ಮಂಕಾಳ ವೈದ್ಯ, ಪುಣೆಯ ಕೈಗಾರಿಕೋದ್ಯಮಿ ಸದಾನಂದ ಬಾಳಿಗಾ,ಡಿಡಿಪಿಐ ಸತೀಶ್ ನಾಯ್ಕ, ಬೆಂಗಳೂರಿನ ಸಾಗರ್ ಆಸ್ಪತ್ರೆಯ ವೈದ್ಯ ಡಾ.ದೇವೇಂದ್ರ ನಾಯ್ಕ ಹಾಗೂ ಬ್ಯಾಂಕ್ ಆಫ್ ಮಹಾರಾಷ್ಟ್ರದ ವಲಯ ವ್ಯವಸ್ಥಾಪಕ ಸುಚೇತ್ ಡಿಸೋಜಾ ಪಾಲ್ಗೊಳ್ಳಲಿದ್ದಾರೆ ಎಂದರು.

ಗುರು ವಿದ್ಯಾರಾಜ ನ್ಯೂ ಇಂಗ್ಲೀಷ್ ಪಿಯು ಕಾಲೇಜು ಭಟ್ಕಳ ಎಜ್ಯುಕೇಶನ್ ಟ್ರಸ್ಟಿನ 8 ವಿದ್ಯಾಕೇಂದ್ರಗಳಲ್ಲೊಂದಾಗಿದೆ. ಈ ಕಾಲೇಜನ್ನು ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಪಿಯು ಶಿಕ್ಷಣ ಪಡೆಯಲು 1995 ರಲ್ಲಿ ಸ್ಥಾಪಿಸಲಾಗಿದೆ. ಕಳೆದ 30 ವರ್ಷಗಳಿಂದ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಕಾಲೇಜು ಮಂಚೂಣಿಯಲ್ಲಿದ್ದು, ಪದವಿ ಪೂರ್ವ ವಿಜ್ಞಾನ, ವಾಣಿಜ್ಯ ಹಾಗೂ ಕಲಾ ವಿಭಾಗಗಳನ್ನು ಹೊಂದಿದ್ದು, ಸಿ.ಇ.ಟಿ ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ನೀಡುತ್ತಿದೆ. ವರ್ಷಂಪ್ರತಿ ಅತ್ಯುತ್ತಮ ಫಲಿತಾಂಶ ದಾಖಲಿಸುವುದರ ಮೂಲಕ ತನ್ನದೇ ಆದ ಛಾಪು ಮೂಡಿಸಿದೆ. ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಕಾಲೇಜಿಗೆ ದಾನಿಗಳ ಸಹಕಾರದಿಂದ ತನ್ನದೇ ಸುಸಜ್ಜಿತವಾದ ಸ್ವಂತ ಕಟ್ಟಡ ನಿರ್ಮಿಸಲಾಗಿದೆ ಎಂದರು.

ಭಟ್ಕಳ ಎಜ್ಯುಕೇಶನ್ ಟ್ರಸ್ಟಿನ ಅಧ್ಯಕ್ಷ ಡಾ. ಸುರೇಶ ನಾಯಕ, ಟ್ರಸ್ಟಿಗಳಾದ ಪ್ರದೀಪ ಪೈ, ನಾಗೇಶ ಭಟ್, ರಮೇಶ ಖಾರ್ವಿ, ವಿದ್ಯಾಧಿರಾಜ ಪಿಯು ಕಾಲೇಜಿನ ಪ್ರಾಂಶುಪಾಲ ವೀರೇಂದ್ರ ಶಾನಭಾಗ, ಸುಧೀಂದ್ರ ಕಾಲೇಜಿನ ಪ್ರಾಂಶುಪಾಲ ಶ್ರೀನಾಥ ಪೈ, ನ್ಯೂ ಇಂಗ್ಲೀಷ್ ಸ್ಕೂಲಿನ ಮುಖ್ಯಶಿಕ್ಷಕ ಗಣಪತಿ ಶಿರೂರು, ವಿದ್ಯಾಭಾರತಿ ಶಾಲೆಯ ಮುಖ್ಯಶಿಕ್ಷಕಿ ರೂಪಾ ಖಾರ್ವಿ ಇದ್ದರು.

ಪರಮಾತ್ಮನ ಸೇವೆಗೆ ಮಂದಿರ ಸ್ಥಾಪನೆ

ಮುಂಡಗೋಡ: ಪಟ್ಟಣದ ಜನಜೀವನ ಸುಧಾರಣೆಗಾಗಿ ಮಂದಿರ ಸ್ಥಾಪನೆ ಮಾಡಿದ್ದೇವೆ ನಾವೆಲ್ಲ ಪಾವನರಾಗಬೇಕು ಎಂದು ಮುಂಬೈ ಈ.ವಿ.ವಿ.ಕಲ್ಯಾಣ ಉಪವಲಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಕುಮಾರಿ ಅಲಕಾ ದೀದಿಜಿ ಹೇಳಿದರು.ಪಟ್ಟಣದ ಮಹಾಗಣಪತಿ ದೇವಸ್ಥಾನ ಕಲ್ಯಾಣ ಮಂಟಪದಲ್ಲಿ ಸೋಮವಾರ ಆಯೋಜಿಸಿದ್ದ 'ಓಂ ಶಾಂತಿ ಭವನ'ದ ಉದ್ಘಾಟನಾ ಸಮಾರಂಭದ ಸಭಾ ಕಾರ್ಯಕ್ರಮ ಉದ್ಘಾಟಿಸಿ ಅವರು ಈಶ್ವರೀಯ ಸಂದೇಶ ನೀಡಿದರು. ಇಂದು ನಮ್ಮೆಲ್ಲರಿಗೂ ಸಂತಸದ ದಿನ. ಪರಮಾತ್ಮ ಭೂಮಿಯ ಮೇಲೆ ಬಂದು ದಿವ್ಯ ಸಂದೇಶ ನೀಡಿದ್ದಾರೆ. ನಮ್ಮಲ್ಲಿ ಯೋಗ ತರಬೇತಿ ಅವಕಾಶವಿದೆ. ಔಷಧಿ ಜೊತೆಗೆ ಯೋಗದ ಅವಶ್ಯಕತೆಇದೆ. ಪರಮಾತ್ಮನ ಸೇವೆ ಎಲ್ಲರ ಸೇವೆಗಾಗಿ ದೇವಸ್ಥಾನ ನಿರ್ಮಾಣವಾಗಿದೆ. ಇದರ ಸದುಪಯೋಗವನ್ನು ಎಲ್ಲರೂ ಪಡೆಯಬೇಕು ಎಂದರು. ಅಧ್ಯಕ್ಷತೆ ವಹಿಸಿ ಈಶ್ವರೀಯ ಸಂದೇಶ ನೀಡಿದ ಬ್ರಹ್ಮಕುಮಾರಿ ನಿರ್ಮಲಾ ಭಾರತೀಯ ಹಿರಿಮೆ, ಗರಿಮೆ ನಮ್ಮೆಲ್ಲರನ್ನೂ ಆಧ್ಯಾತ್ಮಿಕ ಜೀವನದತ್ತ ಕರೆದೊಯ್ಯುತ್ತದೆ. ಎಲ್ಲರ ಆತ್ಮದಲ್ಲಿ ಜ್ಯೋತಿ ಬೆಳಗಲಿ. ಮಾನವ ಮಾನವನಾಗಿ ಹೇಗೆ ಬಾಳಬೇಕು ಎಂದರು. ಗದಗ ಸಂಚಾಲಕಿ ರಾಜಯೋಗಿನಿ ಜಯಂತಿಜಿ ಈಶ್ವರೀಯ ಸಂದೇಶ ನೀಡಿದರು. ಜಿಪಂ ಮಾಜಿ ಸದಸ್ಯ ಎಲ್.ಟಿ.ಪಾಟೀಲ ಮಾತನಾಡಿದರು. ಈ ವೇಳೆ ಗಂಗಾಂಬಿಕೆ, ವಿಜಯ, ಶೈಲಾ, ಕುಸುಮಾ, ಗೀತಾ, ಶಿವಾನಂದ ಇದ್ದರು. ಭಾರತಿ ಗೋಕರ್ಣ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಬ್ರಹ್ಮಕುಮಾರಿ ಸರೋಜಿನಿ ಸ್ವಾಗತಿಸಿದರು. ಚಂದ್ರಕಾಂತ ಶಿವಗೀತೆ ಪ್ರಸ್ತುತಪಡಿಸಿದರು. ಬ್ರಹ್ಮಕುಮಾರಿ ಜ್ಯೋತಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.



ಶಾಂತಿ ಯಾತ್ರೆ

ಬೆಳಗ್ಗೆ ಶಾಂತಿ ಯಾತ್ರೆ ಪಟ್ಟಣದ ಮಹಾಗಣಪತಿ ಮಂದಿರದಿಂದ ಹೊರಟು ಹುಬ್ಬಳ್ಳಿ ರಸ್ತೆ, ಕಲಾಲ ಓಣಿ, ಯಲ್ಲಾಪುರ ರಸ್ತೆ, ಶಿವಾಜಿ ಸರ್ಕಲ್, ನಂದೀಶ್ವರ ನಗರದಲ್ಲಿರುವ ಓಂ ಶಾಂತಿ ಭವನದ ಉದ್ಘಾಟನೆ ಕಾರ್ಯಕ್ರಮ ನಂತರ ರೋಟರಿ ಶಾಲೆ ಮಾರ್ಗವಾಗಿ ಮಹಾಗಣಪತಿ ಮಂದಿರದಲ್ಲಿ ಸಭಾ ಕಾರ್ಯಕ್ರಮದ ವೇದಿಕೆ ತಲುಪಿತು.

ಆತ್ಮವಿಶ್ವಾಸದಿಂದ ಸದೃಢ ಭವಿಷ್ಯ ನಿರ್ಮಿಸಿಕೊಳ್ಳಿ: ಪಾಟೀಲ

ಹಳಿಯಾಳ: ಹದಿಹರೆಯದ ಹಂತವು ಜೀವನದ ಅತ್ಯಂತ ಸಂವೇದನಾಶೀಲ ಘಟ್ಟ. ಈ ಸಮಯದಲ್ಲಿ ಉಂಟಾಗುವ ದೈಹಿಕ ಮತ್ತು ಮಾನಸಿಕ ಬದಲಾವಣೆಗಳನ್ನು ವೈಜ್ಞಾನಿಕವಾಗಿ ಅರ್ಥೈಸಿಕೊಂಡು, ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸಿದಾಗ ಮಾತ್ರ ಸದೃಢ ಭವಿಷ್ಯ ನಿರ್ಮಿಸಿಕೊಳ್ಳಲು ಸಾಧ್ಯ ಎಂದು ಧಾರವಾಡದ ಡಿಮ್ಹಾನ್ಸ್ ಸಂಸ್ಥೆಯ ಸಾಮಾಜಿಕ ಮನೋ ಆರೋಗ್ಯ ಕಾರ್ಯಕರ್ತ ಪ್ರಶಾಂತ ಪಾಟೀಲ ಅವರು ಅಭಿಪ್ರಾಯಪಟ್ಟರು.ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐ.ಕ್ಯೂ.ಎ.ಸಿ, ಕನ್ನಡ ವಿಭಾಗ ಮತ್ತು ಯೂಥ್ ರೆಡ್ ಕ್ರಾಸ್ ಘಟಕ ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ಇವುಗಳ ಸಂಯುಕ್ತ ಆಶ್ರಯದಲ್ಲಿ ಸೋಮವಾರ ಕಾಲೇಜಿನ ಸಭಾಭವನದಲ್ಲಿ ಆಯೋಜಿಸಲಾಗಿದ್ದ ಹದಿಹರೆಯದವರ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕ.ವಿ.ವ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣ ಒಡ್ಡಿನ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಡಾ. ಸಂಗೀತಾ ಕಟ್ಟಿಮನಿ ಅವರು ಮಾತನಾಡಿದರು.ಪ್ರಾರ್ಥನೆಯನ್ನು ಪಂಚಮಿ ಎಡಗೆ ಪ್ರಾರ್ಥಿಸಿದರು. ಯೂಥ್ ರೆಡ್ ಕ್ರಾಸ್ ಸಂಚಾಲಕರಾದ ಪ್ರೀತಿ ಪಾಟೀಲ, ಐ.ಕ್ಯೂ.ಎ.ಸಿ ಸಹ ಸಂಚಾಲಕರಾದ ಡಾ. ಧನರಾಜ ಕೆಂದೂರ, ಕಲಾ ವಿಭಾಗದ ಮುಖ್ಯಸ್ಥರಾದ ಡಾ ವಾಯ್. ಆಯ್ ಚವ್ಹಾಣ ಮತ್ತು ಕಾಲೇಜಿನ ಪ್ರೇರಣಾ ಕೋಶದ ಸಂಚಾಲಕರಾದ ಲಕ್ಷ್ಮಣ ಕಾಳೆ ಮೇಲೆ ಉಪಸ್ಥಿತರಿದ್ದರು. ಉಪನ್ಯಾಸಕರಾದ ಡಾ. ಅನ್ನಪೂರ್ಣಾ ಪಾಟೀಲ, ಡಾ. ಸರೋಜಿನಿ ಭಂಡಾಲ್ಕರ, ಡಾ ಸುನೀತಾ ಮಿರಾಶಿ, ಮಾರುತಿ ಚಿಬ್ಬುಲ್ಕರ, ಡಾ. ಸಾವಿತ್ರಿ ಹಿರೇಮಠ ಮತ್ತು ಉದಯ ಸುತಾರ ಉಪಸ್ಥಿತರಿದ್ದರು.



ಕಾಂಗ್ರೆಸ್ ಮಹಿಳೆಯರ ಪರ ಪಕ್ಷ: ಸುಜಾತಾ ಗಾಂವಕರ

ಅಂಕೋಲಾ: ಕಾಂಗ್ರೆಸ್ ಮಹಿಳೆಯರ ಪರವಾದ ಪಕ್ಷವಾಗಿದ್ದು, ಕೇಂದ್ರಸರ್ಕಾರ ಪಂಚರಾಜ್ಯಗಳ ಚುನಾವಣೆಯನ್ನು ಗಮನದಲ್ಲಿರಿಸಿ ಕ್ಷೇತ್ರ ವಿಂಗಡನೆಯಿಂದ ಬಿಜೆಪಿಯ ಅಧಿಕಾರಕ್ಕೆ ಅನುಕೂಲ ಆಗುವಂತೆ ಮಂಡಿಸಿದ ಮಹಿಳಾ ಮೀಸಲಾತಿ ಮಸೂದೆಯನ್ನು ಕಾಂಗ್ರೆಸ್ ವಿರೋಧಿಸಿದೆ ಎಂದು ರಾಜ್ಯ ಮಹಿಳಾ ಕಾಂಗ್ರೆಸ್ ಉಪಾಧ್ಯಕ್ಷೆ ಸುಜಾತಾ ಗಾಂವಕರ ಹೇಳಿದರು.

ತಾಲೂಕು ಬ್ಲಾಕ್ ಕಾಂಗ್ರೆಸ್ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕಾಂಗ್ರೆಸ್ ಮಹಿಳಾ ಮೀಸಲಾತಿಯ ವಿರೋಧಿಯಲ್ಲ ಕ್ಷೇತ್ರಗಳ ಪುನರ್ವಿಂಗಡನೆ ನಮಗೆ ಅಗತ್ಯವಿಲ್ಲ 543 ಸ್ಥಾನಗಳಲ್ಲಿ 33 ಪ್ರತಿಶತ ಮಹಿಳೆಯರಿಗೆ ಕೊಡಿ ಎಂದು ನಾವು ಪ್ರಧಾನಿಯವರಿಗೆ ಆಗ್ರಹಿಸುವುದಾಗಿ ತಿಳಿಸಿದರು.

ಮಹಿಳಾ ಮೀಸಲಾತಿಗೆ ಸಂಬಂಧಿಸಿದಂತೆ 2023 ರಲ್ಲಿ ಸರ್ವಾನುಮತದಿಂದ ಅನುಮೋದನೆಯಾದ ಮಸೂದೆಯನ್ನು ಬಿಟ್ಟು ಈಗ ಪಂಚರಾಜ್ಯಗಳ ಚುನಾವಣೆಗಳನ್ನು ಗಮನದಲ್ಲಿರಿಸಿ ಹೊಸದಾಗಿ ಮಹಿಳಾ ಮೀಸಲಾತಿ ಮಸೂದೆ ಎಂದು ಪ್ರಧಾನಿ ನರೇಂದ್ರ ಮೋದಿಯವರು ಘೋಷಿಸಿದ್ದು, ಒಂದು ಗಿಮಿಕ್ ಆಗಿದ್ದು, ಮಹಿಳೆಯರಿಗೆ ಮಾಡುತ್ತಿರುವ ದೊಡ್ಡ ಮೋಸವಾಗಿದೆ ಎಂದರು.

ಜನಗಣತಿ ನಡೆಯುತ್ತಿರುವ ನಡುವೆಯೇ ಕ್ಷೇತ್ರ ವಿಂಗಡನೆಗೆ ತಯಾರಿ ನಡೆದಿದೆ ಇದನ್ನು ವಿರೋಧಿಸಿದ ಕಾಂಗ್ರೆಸ್ ಪಕ್ಷಕ್ಕೆ ಮಹಿಳಾ ವಿರೋಧಿಗಳು ಎಂದು ಬಿಂಬಿಸಲಾಗುತ್ತಿದೆ ಆದರೆ ಮಹಿಳೆಯರಿಗೆ ಎಲ್ಲಡೆ ಅವಕಾಶ ವಂಚಿತರಾಗಿಸುವ ಬಿಜೆಪಿಯವರು ಮಹಿಳಾ ವಿರೋಧಿಗಳಾಗಿದ್ದಾರೆ ಎಂದ ಅವರು ದೇಶಕ್ಕೆ ಮೊದಲ ಮಹಿಳಾ ಪ್ರಧಾನಿ, ಮೊದಲ ಮಹಿಳಾ ರಾಷ್ಟ್ರಪತಿ ನೀಡಿರುವುದು ಕಾಂಗ್ರೆಸ್ ಪಕ್ಷ ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳ ಮೂಲಕ ಕಾಂಗ್ರೆಸ್ ಪಕ್ಷ ಮಹಿಳೆಯರಿಗೆ ಆಧಾರವಾಗಿ ನಿಂತಿದೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ 33 ಪ್ರತಿಶತ ಮಹಿಳಾ ಮೀಸಲಾತಿ ನೀಡಿರುವುದು ಕಾಂಗ್ರೆಸ್ ಪಕ್ಷದ ರಾಜೀವ ಗಾಂಧಿ ಎನ್ನುವುದನ್ನು ಬಿಜೆಪಿಯವರು ಅರ್ಥ ಮಾಡಿಕೊಳ್ಳಬೇಕು ಇತ್ತೀಚಿಗೆ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಯನ್ನು ಸಹ ಬಿಜೆಪಿಗರು ತಿರುಚಿ ಹೇಳಿದ್ದು, ಈ ರೀತಿಯ ಸುಳ್ಳು ಸುದ್ದಿ ಹರಡುವುದನ್ನು ಬಿಜೆಪಿಯವರು ನಿಲ್ಲಿಸಬೇಕು ಎಂದು ಹೇಳಿದರು.

ಗ್ಯಾರಂಟಿ ಯೋಜನೆಯ ತಾಲೂಕು ಅಧ್ಯಕ್ಷ ಪಾಂಡುರಂಗ ಗೌಡ ಮಾತನಾಡಿ ಕೇಂದ್ರ ಸರ್ಕಾರದ ಉದ್ದೇಶ ಕ್ಷೇತ್ರ ವಿಂಗಡನೆಯಾಗಿದ್ದು, ಅದನ್ನು ಮಹಿಳಾ ಮೀಸಲಾತಿಯ ಜೊತೆ ಜೋಡಿಸಿ ಮಸೂದೆ ಮಂಡನೆಯ ತಂತ್ರ ರೂಪಿಸಿದ್ದು ಕ್ಷೇತ್ರ ವಿಂಗಡನೆಯಿಂದ ಬಿಜೆಪಿಗೆ ಅನುಕೂಲವಿದೆ ಎಂದರು.ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜೇಶ್ವರ ನಾಯಕ ಮಾತನಾಡಿ ಕಾಂಗ್ರೆಸ್ ಮಹಿಳಾ ಮೀಸಲಾತಿಯ ವಿರೋಧಿಯಲ್ಲ ಬಿಜೆಪಿಯವರು ಮಹಿಳಾ ಮೀಸಲಾತಿಯ ಹೆಸರಲ್ಲಿ ತಮಗೆ ಅನುಕೂಲ ಆಗುವಂತೆ ಕ್ಷೇತ್ರಗಳಲ್ಲಿ ಹೆಚ್ಚಳ ಮಾಡಿಕೊಳ್ಳುವುದಕ್ಕೆ ವಿರೋಧವಿದೆ ಎಂದರು.ಮಹಿಳಾ ಕಾಂಗ್ರೆಸ್ಸಿನ ಪ್ರಮುಖರುಗಳಾದ ಲೀಲಾವತಿ ನಾಯ್ಕ, ಶಾಂತಿ ಆಗೇರ, ಶೀಲಾ ನಾಯ್ಕ, ದೀಪಾ ಆಗೇರ, ಸುಧಾ ನಾಯ್ಕ, ಧನ್ವಂತಿ ರೇವಣಕರ್ ಉಪಸ್ಥಿತರಿದ್ದರು.



ಕೃಷಿ ಪರಿಕರಗಳ ಮಾರಾಟ ಬಂದ್‌ಗೆ ಬೆಂಬಲ

ಬನವಾಸಿ: ಕೃಷಿ ಪರಿಕರ ಮಾರಾಟಗಾರರ ಸಂಘವು ದೇಶವ್ಯಾಪ್ತಿಯಲ್ಲಿ ಕರೆ ನೀಡಿದ್ದ ಕೃಷಿ ಪರಿಕರಗಳ ಮಾರಾಟ ಬಂದ್‌ಗೆ ಸೋಮವಾರ ಬನವಾಸಿ ಪಟ್ಟಣದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಯೂರಿಯಾ ಮತ್ತು ಇತರ ರಸಗೊಬ್ಬರಗಳ ಮಾರಾಟದ ಮೇಲೆ ಸರ್ಕಾರಗಳು ಅನಗತ್ಯವಾಗಿ ಹೇರಲಾಗುತ್ತಿರುವ ಲಿಂಕ್ ಸಿಸ್ಟಮ್ ವಿರೋಧಿಸಿ ಹಾಗೂ ರಾಜ್ಯದಲ್ಲಿ ಜಾರಿಗೆ ತರಲು ಉದ್ದೇಶಿಸಿರುವ ಎಫ್ ಐಡಿ ನಿಯಮದಿಂದ ರೈತರಿಗೆ ಮತ್ತು ವ್ಯಾಪಾರಿಗಳಿಗೆ ತೊಂದರೆಯಾಗುತ್ತಿದ್ದು ಮತ್ತು ಅನಗತ್ಯ ವಿಧಾನಗಳಿಂದ ರಸಗೊಬ್ಬರಗಳ ಸಾರಿಗೆ ವೆಚ್ಚದ ಹೊರೆಯನ್ನು ವ್ಯಾಪಾರಿಗಳ ಮೇಲೆ ಹಾಕುತ್ತಿರುವುದನ್ನು ಖಂಡಿಸಿ ಹಮ್ಮಿಕೊಂಡಿರುವ ಮುಷ್ಕರಕ್ಕೆ ಇಲ್ಲಿನ ಕೃಷಿ ಪರಿಕರಗಳ ಮಾರಾಟಗಾರರು, ತಮ್ಮ ಅಂಗಡಿ ಮುಚ್ಚುವ ಮೂಲಕ ಬಂದ್‌ಗೆ ಸಂಪೂರ್ಣವಾಗಿ ಸಹಕರಿಸಿದರು. ಕೃಷಿ ಪರಿಕರ ಮಾರಾಟ ಅಂಗಡಿಗಳು ಬಂದ್ ಆಗಿದ್ದರಿಂದ ಸುತ್ತಮುತ್ತಲಿನ ಹಳ್ಳಿಗಳಿಂದ ಗೊಬ್ಬರ, ಕೀಟನಾಶಕ ಹಾಗೂ ಇನ್ನಿತರ ಕೃಷಿ ಪರಿಕರಗಳ ಖರೀದಿಸಲು ಬಂದ ರೈತರು ತೊಂದರೆ ಅನುಭವಿಸುವಂತಾಯಿತು.

ಬನವಾಸಿ ವ್ಯವಸಾಯ ಸೇವಾ ಸಹಕಾರಿ ಸಂಘ ಹಾಗೂ ಪ್ರತಿಷ್ಠಿತ ಟಿ.ಎಮ್. ಎಸ್ ಗ್ರಾಹಕರಿಗೆ ಯಾವುದೇ ರೀತಿಯ ಗೊಬ್ಬರ, ಕೀಟನಾಶಕ ಹಾಗೂ ಕೃಷಿ ಪರಿಕರ ವಿತರಣೆ ಮಾಡದೇ ಮುಷ್ಕರಕ್ಕೆ ಬೆಂಬಲಿಸಿದರು. ಶ್ರೀ ಕುಮಾರೇಶ್ವರ ಕೃಷಿ ಕೇಂದ್ರ, ಶಿವಶಕ್ತಿ , ಪಿ.ಆರ್ ಹಾದಿಮನೆ, ರೈತ ಮಿತ್ರ, ಅಗ್ರೋ ಎಜೇನ್ಸಿ ಸೇರಿದಂತೆ ಬಹುತೇಕ ಕೃಷಿ ಪರಿಕರ ಮಾರಾಟಗಾರರು ತಮ್ಮ ಕೃಷಿ ಕೇಂದ್ರಗಳನ್ನು ಮುಚ್ಚಿ ಬಂದ್ ಗೆ ಬೆಂಬಲ ನೀಡಿದರು.



ಗಾಯಗೊಂಡ ಪೂರ್ಣಿಮಾ ಆಚಾರಿ ಸಾವು

ಅಂಕೋಲಾ: ತಾಲೂಕಿನ ಕುಂಬಾರಕೇರಿ ಬಳಿ ಸ್ಕೂಟರಿಗೆ ಕಾರು ಡಿಕ್ಕಿ ಹೊಡೆದುಗಂಭೀರವಾಗಿ ಗಾಯಗೊಂಡಿದ್ದ ತೆಂಕಣಕೇರಿಯ ನಿವಾಸಿ ಪೂರ್ಣಿಮಾ ರಾಜು ಆಚಾರಿ ಮಣಿಪಾಲದ ಖಾಸಗಿ ಆಸ್ಪತ್ರೆಯಲ್ಲಿ ಸೋಮವಾರ ಮೃತ ಪಟ್ಟಿದ್ದಾಳೆ. ಇವರುಪಟ್ಟಣದ ಲಕ್ಷ್ಮೇಶ್ವರ ಶ್ರೀಮಹಾಕಾಳಿ ದೇವಾಲಯದಲ್ಲಿ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದರು. ಏ. 25ರಂದು ರಾತ್ರಿ 8 ಗಂಟೆ ಸುಮಾರಿಗೆ ತನ್ನ ಕೆಲಸ ಮುಗಿಸಿ ತನ್ನ ಕೆ.ಎ30 ಎಸ್ 6901ನಲ್ಲಿ ಸವಾರಳಾಗಿ ಹಿಂಬದಿಯಲ್ಲಿ ತನ್ನ ನಾದಿನಿ ಭವಾನಿ ರವಿ ಆಚಾರಿ ಎನ್ನುವವರನ್ನು ಕರೆದುಕೊಂಡುಮನೆಗೆ ಹೋಗುತ್ತಿದ್ದ ಸಂದರ್ಭದಲ್ಲಿ ಅಂಕೋಲಾದಿಂದ ಗೋಕರ್ಣ ಕಡೆ ತೆರಳುತ್ತಿದ್ದ ಕೆ.ಎ 47ಎ04886 ನೋಂದಣಿ ಸಂಖ್ಯೆಯ ಕಾರಿನ ಚಾಲಕ ಅತಿ ವೇಗ ಮತ್ತು ನಿರ್ಲಕ್ಷ್ಯದಿಂದ ಕಾರು ಚಲಾಯಿಸಿ ಕುಂಬಾರಕೇರಿಯ ಬಸವನಕಲ್ಲಿನ ಬಳಿ ಸ್ಕೂಟರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರಿನಲ್ಲಿದ್ದ ಇಬ್ಬರೂ ತೀವ್ರವಾಗಿ ಗಾಯಗೊಂಡಿದ್ದರು.ಗಂಭೀರವಾಗಿ ಮುಖ ಮತ್ತು ತಲೆಗೆ ಏಟು ಬಿದ್ದ ಪೂರ್ಣಿಮಾಳನ್ನು ಮಣಿಪಾಲದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಗಂಭೀರ ಗಾಯಗಳಿಂದ ಚಿಕಿತ್ಸೆಗೆ ಸ್ಪಂದಿಸದ ಆಕೆ ಸೋಮವಾರ ಮಧ್ಯಾಹ್ನ ಮೃತಪಟ್ಟಿರುವುದಾಗಿ ತಿಳಿದು ಬಂದಿದೆ.ಪೂರ್ಣಿಮಾಳ ಅಗಲುವಿಕೆ ಬಡ ಕುಟುಂಬಕ್ಕೆ ಆಘಾತ ನೀಡಿದ್ದು ವಿಶ್ವಕರ್ಮ ಸಮಾಜ, ಮಹಾಕಾಳಿ ದೇವಾಲಯದ ಭಕ್ತ ಜನರು,ತೆಂಕಣಕೇರಿ ಸುತ್ತ ಮುತ್ತಲಿನ ಜನರು ಶೋಕ ವ್ಯಕ್ತಪಡಿಸಿದ್ದಾರೆ ಅಪಘಾತಪಡಿಸಿ ಸ್ಥಳದಲ್ಲಿ ನಿಲ್ಲದೇ ಪರಾರಿಯಾಗಿದ್ದ ವಾಹನವನ್ನು ಅಂಕೋಲಾ ಪೊಲೀಸರು ವಶಕ್ಕೆ ಪಡೆದಿದ್ದು ಆರೋಪಿಯನ್ನು ಬಂಧಿಸಬೇಕಿದೆ.



ಕಿರುಸುದ್ದಿ

ವಿಮಾನ-ರೈಲ್ವೆ ನಿಲ್ದಾಣ ನಡುವೆ ಬಸ್ ವ್ಯವಸ್ಥೆ

ಹುಬ್ಬಳ್ಳಿ: ಪ್ರಯಾಣಿಕ ಬೇಡಿಕೆ ಹಾಗೂ ಅನುಕೂಲತೆ ಸಲುವಾಗಿ ವಿಮಾನ ನಿಲ್ದಾಣದಿಂದ ರೈಲ್ವೆ ನಿಲ್ದಾಣನ ನಡುವೆ ಸಾರಿಗೆ ಬಸ್ ಸೌಲಭ್ಯ ಏ.28ರಿಂದ ಆರಂಭಿಸಲಾಗುತ್ತಿದ್ದು, ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗ್ ಎಂ. ಚಾಲನೆ ನೀಡಲಿದ್ದಾರೆ. ವಿಮಾನಗಳ ಆಗಮನದ ವೇಳಗೆ ಅನುಗುಣವಾಗಿ ಕಾರ್ಯಾಚರಣೆಗೊಳಿಸಲಾಗಿತ್ತಿದ್ದು, ಪ್ರತಿದಿನ ಬೆಳಗ್ಗೆ 8.5ಕ್ಕೆ, 11.45, ಸಂಜೆ 5.5, 6.35, ಹಾಗೂ ರಾತ್ರಿ 7.10, 8.5 ಮತ್ತು 8. 50 ಗಂಟೆಗೆ ಬಸ್ ಸಂಚಾರ ಇರಲಿದೆ. ನಗರ ಸಾರಿಗೆ ಸಂಪರ್ಕ ಇನ್ನಷ್ಟು ಬಲಪಡಿಸುವ ಉದ್ದೇಶ ಹೊಂದಲಾಗಿದೆ. ಪ್ರಾಯೋಗಿಕವಾಗಿ ಆರಂಭಗೊಳ್ಳುತ್ತಿದ್ದು, ನಗರ ಸಾರಿಗೆ ವಿಭಾಗೀಯ ನಿಯಂತ್ರಣಾಧಿಕಾರಿಗಳಾದ ಎಂ.ಸಿದ್ದಲಿಂಗೇಶ, ವಿಭಾಗೀಯ ಸಾರಿಗೆ ಅಧಿಕಾರಿ ಎಸ್. ಆರ್.ಮಾಟೋಳಿ, ವಿಭಾಗೀಯ ತಾಂತ್ರಿಕ ಶಿಲ್ಪಿ ಪ್ರವೀಣ ಈಡೂರ ಹಾಗೂ ಹುಬ್ಬಳ್ಳಿ ನಗರ ಸಾರಿಗೆ ಘಟಕ ವ್ಯವಸ್ಥಾಪ ವಿನಾಯಕ ಸಾಲಿಮಠ ಸಂಸ್ಥೆ ಅಧಿಕಾರಿಗಳು ಉಪಸ್ಥಿತರಿರುವರು ಎಂದು ಪ್ರಕಟಣೆಗೆ ತಿಳಿಸಿದ್ದಾರೆ.

ಅಪಾರ ಮೌಲ್ಯದ ಚಿನ್ನಾಭರಣ ಕಳವು

ಹಾವೇರಿ: ಚಿನ್ನಾಭರಣ ಹಾಗೂ ನಗದು ಹಣವಿದ್ದ ಮಹಿಳೆಯೊಬ್ಬರ ವ್ಯಾನಿಟಿ ಬ್ಯಾಗ್‌ನ್ನು ಕಳ್ಳರು ಎಗರಿಸಿರುವ ಘಟನೆ ನಡೆದಿದೆ. ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲೂಕು ಹಿರೇಹಡಗಲಿ ಗ್ರಾಮದ ಅರ್ಚಿತಾ ನಾಗರಾಜ ಜ್ಯೋತಿ ಎಂಬುವವರಿಗೆ ಸೇರಿದ ವ್ಯಾನಿಟಿ ಬ್ಯಾಗ್ ಕಳುವಾಗಿದೆ. ದೂರುದಾರ ಮಹಿಳೆ ಅರ್ಚಿತಾ, ರಾಣೇಬೆನ್ನೂರ ಬಸ್ ನಿಲ್ದಾಣದಲ್ಲಿ ಗಂಗಾವತಿಗೆ ತೆರಳುವ ಬಸ್‌ನ್ನು ಹತ್ತಿದ್ದಾಳೆ. ಈ ಬಸ್ಸು ಗುತ್ತಲದಿಂದ ಮೈಲಾರ ಕಡೆಗೆ ಹೋಗುವಾಗ ಹಾವನೂರ ಕ್ರಾಸ್ ಬಳಿ ಮಹಿಳೆ ವ್ಯಾನಿಟಿ ಬ್ಯಾಗ್‌ನ್ನು ನೋಡಿಕೊಂಡಾಗ ಬ್ಯಾಗ್‌ನಲ್ಲಿದ್ದ ಚಿನ್ನಾಭರಣ ಹಾಗೂ ನಗದು ಹಣ ಕಳುವಾಗಿರುವುದು ಬೆಳಕಿಗೆ ಬಂದಿದೆ. ಬ್ಯಾಗ್‌ನಲ್ಲಿ 4ಲಕ್ಷ ಮೌಲ್ಯದ 42 ಗ್ರಾಂ ಚಿನ್ನದ ಸರ, 1.20ಲಕ್ಷ ಮೌಲ್ಯದ ಚೈನ್ ಸರ, 1 ಲಕ್ಷ ರೂ.ಮೌಲ್ಯದ 2 ಬಂಗಾರದ ಉಂಗುರ, 50 ಸಾವಿರ ಕಿಮ್ಮತ್ತಿನ ಹ್ಯಾಂಗಿಂಗ್ಸ್, ಬೆಳ್ಳಿ ಆಭರಣ, ನಗದು ಸೇರಿದಂತೆ ಒಟ್ಟು 6,81,300 ರೂ.ಮೌಲ್ಯದ ಸ್ವತ್ತು ಕಳುವಾಗಿದೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೂತನ ಪದಾಧಿಕಾರಿಗಳ ಅವಿರೋಧ ಆಯ್ಕೆ

ಹಾವೇರಿ: ನಗರದ ಭಗವಾನ 1008 ನೇಮಿನಾಥ ದಿಗಂಬರ ಜೈನ ಮಂದಿರ ಕಮೀಟಿಯ ನೂತನ ಪದಾಧಿಕಾರಿಗಳನ್ನು ಮುಂದಿನ 3 ವರ್ಷದ ಅವಧಿಗೆ ಅಂದರೆ 2026-28 ವರೆಗೆ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ನಗರದ ಭಗವಾನ ನೇಮಿನಾಥ ದಿಗಂಬರ ಜೈನ ಮಂದಿರದಲ್ಲಿ ಜರುಗಿದ ಸಭೆಯಲ್ಲಿ ಅಧ್ಯಕ್ಷರಾಗಿ ಮಂಜುನಾಥ ಬಾಳಕ್ಕನವರ, ಉಪಾಧ್ಯಕ್ಷರಾಗಿ ಪ್ರಶಾಂತ ಹೊಳಗಿ, ಕಾರ್ಯದರ್ಶಿಯಾಗಿ ಮಂಜುನಾಥ ಉಪಾಧ್ಯ, ಸಹ ಕಾರ್ಯದರ್ಶಿಯಾಗಿ ರಾಹುಲ ರೊಟ್ಟಿ, ಖಜಾಂಚಿಯಾಗಿ ಸಂಜೀವಕುಮಾರ ಇಂಡಿ, ಸದಸ್ಯರುಗಳಾಗಿ ಧನಂಜಯ ಕಳಸೂರ, ಭರತ ಬೋಗಾರ, ವಿಮಲಕುಮಾರ ಬೋಗಾರ, ಬಾಹುಬಲಿ ಪಾಟೀಲ, ಶೀತಲ ಹನುಮಕ್ಕನವರ, ಸಾಗರ ಕಳಸೂರ ಆಯ್ಕೆಯಾಗಿದ್ದಾರೆ.

ಸಭೆಯಲ್ಲಿ ನಿಕಟಪೂರ್ವ ಚಂದ್ರನಾಥ ಕಳಸೂರ ಅವರು ಅಧಿಕಾರ ಹಸ್ತಾಂತರ ಮಾಡಿದರು. ಮಹಾವೀರ ಉಪಾಧ್ಯೆ, ಭರತರಾಜ ಹಜಾರಿ, ಮಾಣಿಕಚಂದ ಲಾಡರ, ಶ್ರೀಧರ ವರೂರ, ಸುಭಾಷ ಪಾಟೀಲ, ಮಹಾವೀರ ಕಳಸೂರ, ಮಂಜುನಾಥ ಗುಡಿ. ಮದನಕುಮಾರ ಶೆಟ್ಟರ, ದೇವೇಂದ್ರ ಹಳ್ಳಿಯವರ, ಪ್ರಶಾಂತ ಮುರಗಿ, ಬ್ರಹ್ಮಕುಮಾರ ಹೊಸೂರ, ರತ್ನಾಕರ ಕಳಸೂರ, ಪಾರ್ಶ್ವನಾಥ ರಣದಿವೆ, ಬಾಬು ರೊಟ್ಟಿ, ಅನಂತರಾಜ ಹೊಸಮನಿ, ಪದ್ಮರಾಜ ಕಳಸೂರ ಇತರರು ಇತರರು ಹಾಜರಿದ್ದರು.



ಹಾವೇರಿ: ಇಲ್ಲಿನ ವಾಲ್ಮೀಕಿ ವೃತ್ತದಲ್ಲಿ ಮಹರ್ಷಿ ವಾಲ್ಮೀಕಿ ಅವರ ಪುತ್ಥಳಿಯನ್ನು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಮಹರ್ಷಿ ವಾಲ್ಮೀಕಿ ಗುರುಪೀಠದ ಡಾ. ಪ್ರಸನ್ನಾನಂದ ಸ್ವಾಮೀಜಿ ಅನಾವರಣಗೊಳಿಸಿದರು. ಈ ವೇಳೆ ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ, ಹೊಸಮಠದ ಬಸವಶಾಂತಲಿಂಗ ಸ್ವಾಮೀಜಿ, ವಿಧಾನ ಪರಿಷತ್ ಮುಖ್ಯಸಚೇತಕ ಸಲೀಂ ಅಹ್ಮದ್, ಉಪಸಭಾಪತಿ ರುದ್ರಪ್ಪ ಲಮಾಣಿ, ಶಾಸಕರಾದ ಬಸವರಾಜ ಶಿವಣ್ಣನವರ, ಮಾಜಿ ಸಚಿವ ರಾಜುಗೌಡ, ವಾಲ್ಮೀಕಿ ಸಮಾಜದ ಜಿಲ್ಲಾಧ್ಯಕ್ಷ ರಮೇಶ ಆನವಟ್ಟಿ ಇತರರಿದ್ದರು.


ಹಾವೇರಿಯಲ್ಲಿ ಮಹಿಳಾ ಪದವಿ ಪೂರ್ವ ಕಾಲೇಜು ಆರಂಭ

ಹಾವೇರಿ: ಜಿಲ್ಲೆಯಲ್ಲಿ 2026-27ನೇ ಸಾಲಿಗೆ ಹೊಸದಾಗಿ ಅಲ್ಪಸಂಖ್ಯಾತರ ಮಹಿಳಾ ಪದವಿ ಪೂರ್ವ ಕಾಲೇಜು ಹಾವೇರಿ ನಗರದ ಮುನ್ಸಿಪಲ್ ಹೈಸ್ಕೂಲ್ ಶಾಲೆಯಲ್ಲಿ ಪ್ರಾರಂಭಿಸಲಾಗುತ್ತಿದೆ.

ಪ್ರಸಕ್ತ ಶೈಕ್ಷಣಿಕ ವರ್ಷ 2026-27ನೇ ಸಾಲಿನಿಂದ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳನ್ನು ಪ್ರಾರಂಭಿಸಲಾಗುತ್ತಿದೆ. ಪ್ರಥಮ ವರ್ಷದಲ್ಲಿ 180 (ಪ್ರತಿ ವಿಭಾಗಕ್ಕೆ 60 ರಂತೆ) ಸಂಖ್ಯಾಬಲದ ಪದವಿಪೂರ್ವ ಕಾಲೇಜು ಪ್ರಾರಂಭಿಸಲು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಅರ್ಜಿ ನಮೂನೆಯನ್ನು ಕರ್ಜಗಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜು ಹಾಗೂ ಹಾವೇರಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಚೇರಿಯಲ್ಲಿ ಪಡೆದು ಅಗತ್ಯ ದಾಖಲೆಯೊಂದಿಗೆ ಭರ್ತಿಮಾಡಿದ ಅರ್ಜಿ ನಮೂನೆಯನ್ನು ಅದೇ ವಿಳಾಸಕ್ಕೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮತ್ತು ತಾಲ್ಲೂಕು ಮಾಹಿತಿ ಕೇಂದ್ರಗಳನ್ನು, ಹಾವೇರಿ-08375-234505 ಮತ್ತು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜು ಹಾವೇರಿ ಈ ವಿಳಾಸದಲ್ಲಿ ಸಂಪರ್ಕಿಸಬಹುದಾಗಿದೆ.



ಹಾವೇರಿ: ನಗರದಭಗವಾನ ನೇಮಿನಾಥ ದಿಗಂಬರ ಜೈನ ಮಂದಿರದಲ್ಲಿ ಜರುಗಿದ ಸಭೆಯಲ್ಲಿ ಮುಂದಿನ 3 ವರ್ಷದ ಅವಧಿಗೆ ಅಂದರೆ 2026-28 ವರೆಗೆ ಭಗವಾನ 1008 ನೇಮಿನಾಥ ದಿಗಂಬರ ಜೈನ ಮಂದಿರ ಕಮೀಟಿಯ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಸರ್ಕಾರಿ ಆಸ್ಪತ್ರೆಗೆ ಶೀಘ್ರ ಅಗತ್ಯ ಸಾಮಗ್ರಿ ಪೂರೈಕೆ: ಗುಂಡೂರಾವ್

ಶಿಗ್ಗಾವಿ: ಸ್ಥಳೀಯ ತಾಲೂಕು ಸರ್ಕಾರಿ ಆಸ್ಪತ್ರೆಗೆ ಅಗತ್ಯವಾದ ಸಾಮಗ್ರಿಗಳ ಪೂರೈಕೆಗೆ 14 ಕೋಟಿ ಹಣವನ್ನು ಕರ್ನಾಟಕ ಮೆಡಿಕಲ್ ಸಪ್ಲಾಯ್ ಕಾರ್ಪೋರೇಷನ್‌ಗೆ ಕೊಟ್ಟಿದ್ದೇವೆ. ಈ ಟೆಂಡರ್ ಪ್ರಕ್ರಿಯೆ ಮುಗಿದ ಬಳಿಕ ಪೂರೈಕೆಗೆ ಕ್ರಮ ಕೈಗೊಳ್ಳಲಿದ್ದೇವೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ ಗುಂಡೂರಾವ್ ತಿಳಿಸಿದರು.

ಸೋಮವಾರ ತಾಲೂಕು ಸರ್ಕಾರಿ ಆಸ್ಪತ್ರೆ ಉದ್ಘಾಟಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದೆ ಬಸವರಾಜ ಬೊಮ್ಮಾಯಿ ಅವರು 250 ಆಸ್ಪತ್ರೆ ನಿರ್ಮಾಣಕ್ಕೆ ಚಾಲನೆ ನೀಡಿದ್ದರು. ಈಗಾಗಲೇ ಶೇ.65 ರಷ್ಟು ನೂತನ ಆಸ್ಪತ್ರೆಯ ಕೆಲಸ ಮುಗಿದಿದ್ದು, ಇನ್ನುಂದೆ ಹಳೇ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದವರು ಇನ್ನುಂದೆ ಹೊಸ ಆಸ್ಪತ್ರೆಯ ಕಟ್ಟಡದಲ್ಲಿ ಕಾರ್ಯನಿರ್ವಹಣೆ ಮಾಡಲಿದ್ದಾರೆ. ಇದರ ಪಕ್ಕದ ಹಳೇ ಆಸ್ಪತ್ರೆಯ ನವೀಕರಣಕ್ಕೂ ಕ್ರಮಕೈಗೊಳ್ಳಲಾಗುತ್ತದೆ ಎಂದರು.



ಸವಣೂರ ಪಟ್ಟಣದಲ್ಲಿನ 90 ವರ್ಷದ ಹಳೇ ಕಟ್ಟಡವನ್ನು ನೆಲಸಮಗೊಳಿಸಿ 100 ಬೆಡ್ ತಾಲೂಕು ಆಸ್ಪತ್ರೆ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡುತ್ತಿದ್ದೇವೆ. ಶಿಗ್ಗಾವಿ ತಾಲೂಕಿಗೆ ಮೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿದ್ದೇನೆ. ತಾಲೂಕಿಗೆ ಈ ಹಿಂದೆ ಬೊಮ್ಮಾಯಿ ಅವರು ಅತ್ಯುತ್ತಮ ಕೆಲಸ ಮಾಡಿದ್ದಾರೆ. ಈಗ ಶಾಸಕ ಯಾಸೀರಖಾನ್ ಪಠಾಣ ಅವರು ಸಹ ಮಾಡುತ್ತಿದ್ದಾರೆ. ಒಟ್ಟಾರೆ, ತಾಲೂಕಿನ ಜನರಿಗೆ ಆರೋಗ್ಯ ಸೇವೆ ಸಿಗಬೇಕು ಈ ನಿಟ್ಟಿನಲ್ಲಿ ಸಿದ್ದರಾಮಯ್ಯನವರ ನೇತೃತ್ವದ ರಾಜ್ಯ ಸರ್ಕಾರ ಕೆಲಸ ಮಾಡುತ್ತಿದೆ.

ಅಧಿಕಾರಿಗಳಿಗೆ ಸೂಚನೆ

ಜಿಲ್ಲೆಯಲ್ಲಿ ನಕಲಿ ವೈದ್ಯರ ಹಾವಳಿ ಹೆಚ್ಚಾಗಿರುವ ಕುರಿತು ಈಗಾಗಲೇ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಕ್ರಮವಹಿಸಲು ಸೂಚಿಸಲಾಗಿದೆ. ಕೆಲವು ಕಡೆಗಳಲ್ಲಿ ಪಾರಂಪರಿಕವಾಗಿ ಆಯುರ್ವೇದಿಕ್ ವೈದ್ಯಕೀಯ ಸೇವೆಯನ್ನು ನೀಡುತ್ತಿದ್ದಾರೆ. ಕೆಲವರು ಆಯುರ್ವೇದಿಕ್ ಹೆಸರಿನಲ್ಲಿ ವೈದ್ಯಕೀಯ ಸೇವೆ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಅಂತಹವರ ವಿರುದ್ಧ ಇಲಾಖೆ ಕಠಿಣ ಕ್ರಮಕೈಗೊಳ್ಳಲಿದೆ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಆಸ್ಪತ್ರೆ ಉದ್ಘಾಟನೆ ವೇಳೆ ಘೋಷಣೆ ಭರದಲ್ಲಿ ನೂಕಾಟ

ಶಿಗ್ಗಾವಿ: ಕಾಂಗ್ರೆಸ್-ಬಿಜೆಪಿ ಕಾರ್ಯಕರ್ತರು ತಮ್ಮ, ತಮ್ಮ ಆಡಳಿತ ಅವಧಿಯಲ್ಲಿ ಆಸ್ಪತ್ರೆ ನಿರ್ಮಾಣವಾಗಿದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ತಮ್ಮ, ತಮ್ಮ ನಾಯಕರ ಪರ ಘೋಷಣೆ ಕೂಗುವ ಭರದಲ್ಲಿ ಕೈ-ಕೈ ಮಿಲಾಯಿಸುವ ಹಂತಕ್ಕೆ ತಲುಪಿ, ತಳ್ಳಾಟ, ನೂಕಾಟಕ್ಕೆ ಸಾಕ್ಷಿಯಾದ ಪ್ರಸಂಗ ಸೋಮವಾರ ನಡೆಯಿತು.

ಸ್ಥಳೀಯ 250 ಬೆಡ್‌ಗಳ ತಾಲೂಕು ಸರ್ಕಾರಿ ನೂತನ ಆಸ್ಪತ್ರೆ ಉದ್ಘಾಟನೆಗೆ ಆಗಮಿಸಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ ಗುಂಡುರಾವ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರನ್ನು ಅದ್ದೂರಿಯಾಗಿ ಭರ ಮಾಡಿಕೊಂಡಿದ್ದಾದರೂ,ಉದ್ಘಾಟನೆ ವೇಳೆ ಬಿಜೆಪಿ ಕಾರ್ಯಕರ್ತರು, ಬಸವರಾಜ ಬೊಮ್ಮಾಯಿ ಅವರ ಪರ ಘೋಷಣೆಗಳು ಮೊಳುಗಿಸುತ್ತಿದ್ದಂತೆ ಶಾಸಕ ಯಾಸಿರಖಾನ್ ಪಠಾಣ ಪರ ಕಾಂಗ್ರೆಸ್ ಕಾರ್ಯಕರ್ತರು ಘೋಷಣೆಗಳ ಅಬ್ಬರಗೊಳಿಸಿದರು.

ಇವುಗಳಿಗೆ ತಲೆ ಕೆಡಿಸಿಕೊಳ್ಳದ ಸಚಿವರು, ಶಾಸಕರು ಆಸ್ಪತ್ರೆಯಲ್ಲಿರುವ ಒಂದೊಂದು ಕೋಠಡಿಗಳ ಉದ್ಘಾಟನೆ ಜತೆಗೆ ವೀಕ್ಷಣೆ ಮಾಡುತ್ತಿದ್ದರು. ಆದರೆ, ಅವರವರ ಹಿಂಬಾಲಕರ ಮಾತ್ರ ತಮ್ಮ ನಾಯಕರಗಳ ಪರವಾಗಿ ಘೋಷಣೆಗಳನ್ನು ಮುಂದುವರೆಸಿದ್ದರು. ಒಂದು ಹಂತದಲ್ಲಿ ಎರಡು ಪಕ್ಷದ ಕಾರ್ಯಕರ್ತರ ನಡುವೆ ಪರಸ್ಪರ ತಳ್ಳಾಟ, ನೂಕಾಟ ಶುರುವಾಯ್ತು. ಇದನ್ನು ತಡೆಯಲು ಪೊಲೀಸ್‌ರು ಹರ ಸಾಹಸಪಡುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಉದ್ಘಾಟನೆ, ವೀಕ್ಷಣೆ ಮುಗಿಸಿ ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಸಚಿವರು, ಶಾಸಕರು ಮಾತ್ರ ಕಾರ್ಯಕರ್ತರ ಸಮಾಧಾನಪಡಿಸಲು ಮುಂದಾಗಲಿಲ್ಲ, ಬುದ್ದಿವಾದ ಹೇಳಲಿಲ್ಲ ಈ ಪ್ರಸಂಗ ನೋಡಿಗರನ್ನು ಮೂಕ ವಿಸ್ಮಿತರನ್ನಾಗಿಸಿದ್ದು ಗಮನಾರ್ಹ.

ವಾಸವಿ ಜಯಂತಿ ಆಚರಣೆ

ಬ್ಯಾಡಗಿ: ವಾಸವಿ ಜಯಂತಿ ಅಂಗವಾಗಿ ಪಟ್ಟಣದ ಆರ್ಯ ವೈಶ್ಯ ಸಮಾಜದವರು ಕುಡಿಯುವ ನೀರಿನ ಹೊಂಡಕ್ಕೆ ತೆರಳಿ ಗಂಗಾ ದೇವಿಯ ಪೂಜೆ ಮಾಡಿ, ಜಲವನ್ನು ತಂದು ಆಂಜನೇಯ ದೇವಸ್ಥಾನದಲ್ಲಿ ವಾಸವಿ ದೇವಿಯ ಪೂಜೆ ಮಾಡುವ ಮೂಲಕ ವಾಸವಿ ಜಯಂತಿ ಆಚರಣೆ ಮಾಡಿದರು. ಈ ವೇಳೆ ಸಮಾಜದ ಹಿರಿಯರಾದ ಬಾಬಣ್ಣ ಮೇಲಗಿರಿ ಮಾತನಾಡಿ, ವಾಸವಿ ಜಯಂತಿ ಆಚರಣೆ ಮಾಡುವ ಮೂಲಕ ಎಲ್ಲ ಸಮಾಜದ ಜನರ ಜೊತೆಗೆ ಭಾವೈಕ್ಯತೆಯಿಂದ ಜೀವಿಸುವದು ಹಾಗೂ ಬಡವರ ಸೇವೆ ಮಾಡುವದು ಸಂದೇಶ ಆಗಿದೆ. ಇಂದಿನ ಆಧುನಿಕ ಕಾಲದಲ್ಲಿಯು ನಮ್ಮ ಪರಂಪರೆ ಹಾಗೂ ಉತ್ತಮ ಗುಣಗಳನ್ನು ಮರೆಯಬಾರದು ಎಂದರುಸಮಾಜದ ಮುಖಂಡರಾದ ಗೋಪಾಲ ಶೆಟ್ರ, ರಾಮಲಿಂಗಣ್ಣ ಬಿಜಾಪುರ, ರಾಮಣ್ಣ ಆಗಡಿ, ಮನೋಹರ ರಟ್ಟೀಹಳ್ಳಿ, ಶ್ರೀನಿವಾಸ ಆಗಡಿ, ಪಾಂಡುರಂಗ ಕುಪ್ಪಾ, ರಾಘವೇಂದ್ರ ಗುತ್ತಲ, ಗೋಪಿ ಶೆಟ್ರ, ಹಾಗೂ ಸಮಾಜದ ಮಹಿಳೆಯರು ಉಪಸ್ಥಿತರಿದ್ದರು.



ಬ್ಯಾಡಗಿ: ವಾಸವಿ ಜಯಂತಿ ಅಂಗವಾಗಿ ಪಟ್ಟಣದ ಆರ್ಯ ವೈಶ್ಯ ಸಮಾಜದವರು ಗಂಗಾ ದೇವಿಯ ಪೂಜೆ ಮಾಡಿ, ಜಲವನ್ನು ತಂದು ಆಂಜನೇಯ ದೇವಸ್ಥಾನದಲ್ಲಿ ವಾಸವಿ ದೇವಿಗೆ ಪೂಜೆ ಸಲ್ಲಿಸಿದರು.

ಮತದಾನ ಹಕ್ಕು ಕಸಿಯುವ ಹುನ್ನಾರ: ಶಾಸಕ ಮಾನೆ

ಹಾನಗಲ್ಲ: ಎಸ್‌ಐಆರ್ ಸೇರಿದಂತೆ ಹೊಸ ಹೊಸ ಪ್ರಯೋಗಗಳ ಮೂಲಕ ಬಿಜೆಪಿ ಮತದಾನದ ಹಕ್ಕು ಕಸಿಯುವ ಹುನ್ನಾರ ನಡೆಸಿದೆ. ಸಂವಿಧಾನದ ಪರ ಇರುವ ಜಾತ್ಯಾತೀತರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕುವುದೇ ಎಸ್‌ಐಆರ್‌ನ ಮೂಲ ಉದ್ದೇಶವಾಗಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಕಿಡಿಕಾರಿದರು.

ತಾಲೂಕಿನ ನಾಲ್ಕರ ಕ್ರಾಸ್ ಬಳಿಯ ರೋಶನಿ ವ್ಯಸನಮುಕ್ತಿ ಕೇಂದ್ರದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ, ಹಾನಗಲ್ಲ ಮತ್ತು ಅಕ್ಕಿ ಆಲೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಬೂತ್ ಏಜೆಂಟರಿಗೆ ಆಯೋಜಿಸಿದ್ದ ಎಸ್‌ಐಆರ್ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷ ತನ್ನ ಸಿದ್ಧಾಂತ, ಜನಪರ ಕಾರ್ಯಕ್ರಮ, ಅಭಿವೃದ್ಧಿಯ ಮೇಲೆ ರಾಜಕಾರಣ ಮಾಡುತ್ತಾ ಬಂದಿದೆ ವಿನಃ ವಾಮಮಾರ್ಗಗಳಿಂದಲ್ಲ. ಪ್ರತಿಯೊಬ್ಬ ಬೂತ್ ಏಜೆಂಟರು ಸಹ ಈ ಬಗ್ಗೆ ಜಾಗೃತಿ ವಹಿಸಿ ಎಸ್‌ಐಆರ್ ಮೇಲೆ ನಿಗಾ ವಹಿಸಿ ಅರ್ಹ ಮತದಾರರು ಪಟ್ಟಿಯಿಂದ ಹೊರಹೋಗದಂತೆ ಗಮನ ನೀಡಬೇಕಿದೆ ಎಂದರು.

ಜಾಗೃತ ಕರ್ನಾಟಕದ ಆದಂ ಖಾನ್, ವಿನಯಕುಮಾರ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ ಮಾತನಾಡಿದರು.

ವಿಧಾನ ಪರಿಷತ್ ಪಶ್ಚಿಮ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮೋಹನ್ ಲಿಂಬಿಕಾಯಿ ಮಾತನಾಡಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಂಕರ ಮೆಹರವಾಡೆ, ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತಪ್ಪ ಮರಗಡಿ, ಮಂಜು ಗೊರಣ್ಣನವರ, ನಗರ ಕಾಂಗ್ರೆಸ್ ಅಧ್ಯಕ್ಷ ಮತೀನ್ ಶಿರಬಡಗಿ ಇದ್ದರು.



ಪರಿಸರ ರಕ್ಷಣೆ ಎಲ್ಲರ ಕರ್ತವ್ಯ: ಪುರಾಣಿಕ್

ಬ್ಯಾಡಗಿ: ನೈಸರ್ಗಿಕ ಸಂಪತ್ತನ್ನು ಮಿತವಾಗಿ ಬಳಸುವುದರ ಜೊತೆಗೆ ಭೂಮಿಯ ಪರಿಸರವನ್ನು ಸಂರಕ್ಷಿಸಬೇಕು ಎಂದು ಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯದ ಸಿವಿಲ್ ನ್ಯಾಯಾಧೀಶೆ ರಾಜೇಶ್ವರಿ ಜೆ.ಪುರಾಣಿಕ್ ಅಭಿಪ್ರಾಯಪಟ್ಟರು.

ವಿಶ್ವ ಭೂ ದಿನದ ಅಂಗವಾಗಿ ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ ಹಾಗೂ ವಕೀಲರ ಸಂಘ ಅರಣ್ಯ ಇಲಾಖೆ ಹಾಗೂ ನ್ಯಾಯಾಂಗ ಇಲಾಖೆ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ



ನೀಡಿ ಮಾತನಾಡಿದರು.

ನೈಸರ್ಗಿಕ ಸಂಪನ್ಮೂಲವನ್ನು ಅನವಶ್ಯಕವಾಗಿ ಬಳಕೆ ಮಾಡಿದರೆ ಮುಂದಿನ ಪೀಳಿಗೆಯ ಜನರಿಗೆ ಕೊರತೆಯಾಗಬಹುದು ಪ್ರಸ್ತುತ ದಿನದಲ್ಲಿ ಭೂಮಿಯ ಮಹತ್ವ ಪ್ರತಿಯೊಬ್ಬರ ತಿಳಿಯುವ ಅಗತ್ಯವಿದೆ ಗಿಡಗಳನ್ನು ನೆಟ್ಟು ಪರಿಸರನ್ನು ಉಳಿಸುವ ಕೆಲಸ ಮಾಡೋಣ ಎಂದರು.

ಸಿವಿಲ್ ನ್ಯಾಯಾಧೀಶರು ಸುರೇಶ್ ವಗ್ಗನವರ್ ಮಾತನಾಡಿ, ಮಣ್ಣಿನ ರಕ್ಷಣೆ ಮಾಡಬೇಕಾದರೆ ನಾವು ಮರ ಗಿಡಗಳನ್ನು ನೆಡಬೇಕು ಮರಗಳ ಕಡಿತವನ್ನು ತಪ್ಪಿಸಬೇಕು ಪರಿಸರ ಸ್ನೇಹಿ ಉತ್ಪನ್ನಗಳನ್ನು ಬಳಸಬೇಕು ಎಂದರು.

ಅರಣ್ಯ ಇಲಾಖೆ ಅಧಿಕಾರಿ ಲೋಕೇಶ್ ಚವಾಣ್ ಮಾತನಾಡಿ ನೈಸರ್ಗಿಕ ಸಂಪನ್ಮೂಲಗಳ ಅತಿಯಾದ ಬಳಕೆ ನಮ್ಮ ಮುಂದಿನ ಪೀಳಿಗೆಯ ಬದುಕನ್ನು ಅಪಾಯಕ್ಕೆ ದೂಡುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಹಾಯಕ ಅಭಿಯೋಜಕರು ಕೆಆರ್ ಲಮಾಣಿ, ಸರ್ಕಾರಿ ವಕೀಲರಾದ ಪಿ.ಸಿ.ಸೀಗೆಹಳ್ಳಿ, ವಕೀಲರ ಸಂಘದ ಉಪಾಧ್ಯಕ್ಷರಾದ ಜಿಬಿ ಯಲಗಚ್ಚ, ಕಾರ್ಯದರ್ಶಿ ಎಚ್.ಜಿ ಮುಳುಗುಂದ, ಸಹ ಕಾರ್ಯ ದರ್ಶಿ ಎಂ.ಎಸ್. ಕುಮ್ಮೂರ, ನ್ಯಾಯಾಂಗ ಇಲಾಖೆ ಶಿರಸ್ತೇದಾರ್ ಜನಾರ್ಧನ್ ಬಾರ್ಕಿ ಹಾಗೂ ವಕೀಲ ಸಂಘದ ಸದಸ್ಯರು ನ್ಯಾಯಾಂಗ ಇಲಾಖೆ ಅಧಿಕಾರಿಗಳುಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಜಿಲ್ಲೆಯ ಶಿಕ್ಷಕರಿಗೆ ಬಡ್ತಿ ಭಾಗ್ಯ

ಹಾವೇರಿ: ಶಿಕ್ಷಕರ ಸಂಘದ ನಿರಂತರ ಹೋರಾಟ, ಪ್ರಯತ್ನದ ಫಲವಾಗಿ ಹಲವಾರು ವರ್ಗಗಳಿಂದನನೆಗುದಿಗೆ ಬಿದ್ದಂತಹಸಹಶಿಕ್ಷಕರ ಹುದ್ದೆಯಿಂದಮುಖ್ಯ ಶಿಕ್ಷಕರ 302 ಹುದ್ದೆಗಳಿಗೆ ಬಡ್ತಿ ನೀಡುವ ಕಾರ್ಯ ರಾಜ್ಯಾದ್ಯಂತ ಎಪ್ರಿಲ್ 29ರಂದು ನಡೆಯುತ್ತಿದೆ. ಅದರಂತೆ ಹಾವೇರಿ ಜಿಲ್ಲೆಯಲ್ಲಿ ಶಿಕ್ಷಕರ ಅನುಕೂಲತೆಗಾಗಿ ಮುನಸಿಪಲ್ ಪ್ರೌಢಶಾಲೆಯ ಸಭಾಂಗಣದಲ್ಲಿ ನಡೆಯುತ್ತಿದೆ ಎಂದು ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷ ಬಿ.ಪಿ. ಶಿಡೇನೂರ ಮತ್ತು ಪ್ರಧಾನ ಕಾರ್ಯದರ್ಶಿ ಬಿ.ಎಸ್. ಚಳ್ಳಾಳ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು,ರಾಜ್ಯಸಂಘದಮಾರ್ಗದರ್ಶನದೊಂದಿಗೆ ಟಿಇಟಿಯನ್ನು ರದ್ದುಗೊಳಿಸಿ ಬಡ್ತಿ ಕೊಡಿಸುವ ಕಾರ್ಯವನ್ನು ಈಗಾಗಲೇ ಹಿರಿಯ ಮುಖ್ಯ ಗುರುಗಳ ಬಡ್ತಿಯಲ್ಲಿ ಮಾಡಲಾಗಿದೆ. ಈಗಲೂ ಟಿಇಟಿ ಇಲ್ಲದೇ ಸಹಶಿಕ್ಷಕರ ಹುದ್ದೆಯಿಂದ ಮುಖ್ಯಶಿಕ್ಷಕರ ಹುದ್ದೆಗೆ ಬಡ್ತಿ ಕೊಡಿಸುತ್ತಿದ್ದೇವೆ. ಸುದೀರ್ಘ ಸೇವೆ ಸಲ್ಲಿಸಿದ ಜಿಲ್ಲೆಯ ಶಿಕ್ಷಕರಿಗೆ ಬಡ್ತಿ ಭಾಗ್ಯವನ್ನು ಕೊಡಿಸುವ ಪ್ರಯತ್ನ ಮಾಡುತ್ತಿದ್ದೇವೆ. ರಾಜ್ಯದ ಶಿಕ್ಷಕರ ಸಮಸ್ಯೆಗಳಿಗೆ ಶಿಕ್ಷಕರ ಸಂಘವೇ ರಾಮಬಾಣ ಎಂದು ತಿಳಿಸಿದ್ದಾರೆ.

> **ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರ ವೃಂದದ ಸಹ ಶಿಕ್ಷಕರಿಗೆ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವ ಪ್ರಕ್ರಿಯೆಗೆ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆ ಸಿದ್ಧತೆ ನಡೆಸಿದೆ. ಬಡ್ತಿ ಪ್ರಕ್ರಿಯೆಯಿಂದ ಯಾವುದೇ ಲೋಪಗಳಾಗದಂತೆ ವ್ಯವಸ್ಥೆ ಮಾಡಲಾಗಿದೆ. ಬಡ್ತಿ ಪಡೆಯಲು ಅರ್ಹರಾದ ಅಥವಾ ಮುಂದೂಡಲು ಬಯಸುವ ಶಿಕ್ಷಕರು ಕಡ್ಡಾಯವಾಗಿ ಮುಚ್ಚಳಿಕೆ ಪತ್ರ ನೀಡಬೇಕಾಗುತ್ತದೆ. ಸುಳ್ಳು ಮಾಹಿತಿಗಳನ್ನು ನೀಡಿ ಬಡ್ತಿ ಪಡೆದರೆ ಅಂತಹ ಶಿಕ್ಷಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.**
>
> ■ **ಮೋಹನ ದಂಡಿನ,** ಡಿಡಿಪಿಐ, ಹಾವೇರಿ.

ನಿಧನಸುದ್ದಿ

ಪರಸಪ್ಪ ಗೋಪಾಳಿ

ಹಾವೇರಿ: ತಾಲೂಕಿನ ಹನುಮನಹಳ್ಳಿ ಗ್ರಾಮದ ನಿವಾಸಿ ಪರಸಪ್ಪ ಮರಿಯಪ್ಪ ಗೋಪಾಳಿ (84) ಸೋಮವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವಿದೆ.



ವ್ಯವಸ್ಥಿತ ಪಾರದರ್ಶಕ ಪರೀಕ್ಷೆ ನಡೆಸಿ: ಎಡಿಸಿ ಡಾ.ನಾಗರಾಜ

ಹಾವೇರಿ: ದ್ವಿತೀಯ ಪಿಯುಸಿ ಪರೀಕ್ಷೆ-2 ಇದೇ ಎಪ್ರಿಲ್ 30ರಿಂದ ಮೇ 13ರವರೆಗೆ ಜಿಲ್ಲೆಯ 7 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು, ಯಾವುದೇ ಲೋಪವಾಗದಂತೆ ವ್ಯವಸ್ಥಿತವಾಗಿ ಹಾಗೂ ಪಾರದರ್ಶಕವಾಗಿ ಪರೀಕ್ಷೆ ನಡೆಸಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್. ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಏ.30ರಿಂದ ದ್ವಿತೀಯ ಪಿಯುಸಿ ಪರೀಕ್ಷೆ-2

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-2ರ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಲ್ಲರೂ ಪರೀಕ್ಷಾ ಗೌಪ್ಯತೆ ಕಾಪಾಡಿಕೊಳ್ಳಬೇಕು ಹಾಗೂ ಪರೀಕ್ಷಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಸೂಚಿಸಿದರು.

ಈಪರೀಕ್ಷಾಕಾರ್ಯಕ್ಕೆನಿಯೋಜಿಸಲಾದವಿವಿಧ ಇಲಾಖೆ ಅಧಿಕಾರಿಗಳು, ಮಾರ್ಗಾಧಿಕಾರಿಗಳು, ವೀಕ್ಷಕರು, ಕೊಠಡಿ ಮೇಲ್ವಿಚಾರಕರು ತಮ್ಮ ಕರ್ತವ್ಯಗಳಲ್ಲಿ ಯಾವುದೇ ಲೋಪವಾಗದಂತೆ ಜವಾಬ್ದಾರಿಯಿಂದ ಹಾಗೂ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.



200 ಮೀಟರ್ ಪ್ರದೇಶ ನಿಷೇಧ

ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್‌ವರೆಗೆ ನಿಷೇಽತ ಪ್ರದೇಶವೆಂದು ಘೋಷಿಸಲಾಗಿದೆ. ನಿಷೇಽತ ವಲಯದಲ್ಲಿ ಝರಾಕ್ಸ್ ಹಾಗೂ ಸೈಬರ್ ಕೆಫೆಗಳನ್ನು ಮುಚ್ಚಲು ಆದೇಶಿಸಲಾಗಿದೆ ಎಂದು ಡಿಡಿಪಿಐ ತಿಳಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡಬಾರದು. ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿತಗೊಂಡ ಅಧಿಕಾರಿಗಳು, ಉಪನ್ಯಾಸಕರು ಪರೀಕ್ಷಾ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಪರೀಕ್ಷಾ ಕೇಂದ್ರದ ಹೊರ ವಲಯ ಹಾಗೂ ಕೊಠಡಿಯ ಒಳಗೆ ಶಿಸ್ತುಬದ್ಧವಾಗಿ ಪರೀಕ್ಷಾ ನಿಯಮಗಳ ಉಲ್ಲಂಘನೆಯಾಗದಂತೆ ಎಚ್ಚರಿಕೆಯಿಂದ ಕಾರ್ಯನಿರ್ವಸಬೇಕು. ವಿದ್ಯಾರ್ಥಿಗಳು ನಿರ್ಭಯವಾಗಿ ಪರೀಕ್ಷೆ ಬರೆಯುವ ವಾತಾವರಣವಿರಬೇಕು ಎಂದು ನಿರ್ದೇಶನ ನೀಡಿದರು.

ತ್ರಿ ಸದಸ್ಯ ಕಮೀಟಿ: ಪ್ರಶ್ನೆ ಪತ್ರಿಕೆ ಬಂಡಲ್ ತೆಗೆದುಕೊಂಡುಹೋಗಲು ಪ್ರತಿ ತಾಲೂಕಿಗೂ ತಹಶೀಲ್ದಾರ, ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಪ್ರಿನ್ಸಿಪಾಲ್ ಒಳಗೊಂಡ ತ್ರಿ ಸದಸ್ಯ ಸಮಿತಿ ರಚಿಸಲಾಗಿದೆ. ಪ್ರಶ್ನೆ ಪತ್ರಿಕೆ ತೆಗೆದು ಕೊಂಡು ಹೋಗುವ ವಾಹನಕ್ಕೆ ಜಿಪಿಎಸ್ ಕಡ್ಡಾಯಗೊಳಿಸಲಾಗಿದೆ. ಪೊಲೀಸ್ ಬಂದೋಬಸ್ತ್‌ನಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಆಯಾ ತಾಲೂಕಿಗೆ ನಿಗದಿಪಡಿಸಿದ ಸಮಯಕ್ಕೆ ಅನುಗುಣವಾಗಿ ತೆಗೆದುಕೊಂಡು ಹೋಗಬೇಕು ಎಂದು ಸೂಚನೆ ನೀಡಿದರು.

ಪರೀಕ್ಷಾ ಕೊಠಡಿಗಳಲ್ಲಿ ಸ್ವಚ್ಛತೆಗೆ ಅದ್ಯತೆ ನೀಡಬೇಕು, ಗಡಿಯಾರ, ಫ್ಯಾನ್, ಬೆಳಕಿನ ವ್ಯವಸ್ಥೆ ಇರಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯ ಸೇರಿದಂತೆ ಮೂಲಭೂತ ಸೌಕರ್ಯ ಹೊಂದಿರಬೇಕು. ಕೊಠಡಿ ಮೇಲ್ವಿಚಾಕರನ್ನು ನೇಮಕಮಾಡುವಾಗ ವಿಜ್ಞಾನ ಉಪನ್ಯಾಸಕರನ್ನು ಕಲಾ-ವಾಣಿಜ್ಯ ವಿಷಯಗಳಿಗೆ ಹಾಗೂ ಕಲಾ - ವಾಣಿಜ್ಯ ವಿಭಾಗದ ಉಪನ್ಯಾಸಕರನ್ನು ವಿಜ್ಞಾನ ವಿಷಯದ ಪರೀಕ್ಷೆಗೆ ನಿಯೋಜಿಸಬೇಕು ಎಂದು ತಿಳಿಸಿದರು.

ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಅಶೋಕ ಶಾಸ್ತ್ರೀ ಅವರು ಪರೀಕ್ಷಾ ಮಾರ್ಗಸೂಚಿಗಳನ್ನು ವಿವರಿಸಿದರು ಹಾಗೂ ಜಿಲ್ಲೆಯಲ್ಲಿ 6,230 ವಿದ್ಯಾರ್ಥಿಗಳು ಪರೀಕ್ಷೆ ನೋಂದಾಯಿಸಿಕೊಂಡಿದ್ದಾರೆ ಎಂದು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಡಿವೈಎಸ್‌ಪಿ ಗಿರಿಮಲ್ಲ ತಳಕಟ್ಟಿ, ವಿವಿಧ ತಾಲೂಕುಗಳ ತಹಶೀಲ್ದಾರರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಪುರಸಭೆ ಆಶ್ರಯ ಸಮಿತಿ ಸಭೆಯಲ್ಲಿ ಶಾಸಕರ ಸೂಚನೆ

ಹಕ್ಕುಪತ್ರ ವಿತರಣೆಗೆ ಕ್ರಮ ಕೈಗೊಳ್ಳಿ

ಹಾನಗಲ್ಲ: ಪುರಸಭೆವ್ಯಾಪ್ತಿಯಲ್ಲಿ ಕೆಲ ವಸತಿ ಫಲಾನುಭವಿಗಳಿಗೆ ಈ ಹಿಂದೆ ನೀಡಿರುವ ಹಕ್ಕುಪತ್ರಗಳಲ್ಲಿ ಹೆಸರು ವ್ಯತ್ಯಾಸವಾಗಿದ್ದು, ಪರಿಶೀಲಿಸಿ ಪರಿಷ್ಕೃತ ಹಕ್ಕುಪತ್ರ ವಿತರಣೆಗೆ ಕ್ರಮ ಕೈಗೊಳ್ಳುವಂತೆ ಮುಖ್ಯಾಧಿಕಾರಿ ವೈ.ಕೆ.ಜಗದೀಶ್ ಅವರಿಗೆ ಶಾಸಕ ಶ್ರೀನಿವಾಸ ಮಾನೆ ಸೂಚಿಸಿದರು.

ಇಲ್ಲಿನ ಪುರಸಭೆಯ ಆಶ್ರಯ ಸಮಿತಿ ಸಭೆ ನಡೆಸಿದ ಅವರು ನಿವೇಶನ ಹಂಚಿಕೆಗೆ ಕಾಯ್ದಿರಿಸಿದ ಜಾಗದಲ್ಲಿ ನಿವೇಶನ ರಹಿತರಿಗೆ ಹಂಚಿಕೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದಷ್ಟು ಬೇಗ ಪ್ರಸ್ತಾವನೆಗೆ ಮಂಜೂರಾತಿ ಪಡೆದು ಅರ್ಹರಿಗೆ ನಿವೇಶನ ಹಂಚಲು ಕ್ರಮ ಕೈಗೊಳ್ಳಬೇಕು ಎಂದರು.

ಈಗಾಗಲೇ ಮೂಲೆ ನಿವೇಶನಗಳ ಹರಾಜಿನಿಂದ ಒಂದೂವರೆ ಕೋಟಿ



ಹಣ ಸಂಗ್ರಹವಾಗಿದ್ದು, ಅದನ್ನು ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಲು ಕಾಯ್ದಿರಿಸಬೇಕು. ಇನ್ನುಳಿದ ನಿವೇಶನಗಳನ್ನು ಹರಾಜು ಮಾಡಿ ಆದಾಯ ಸಂಗ್ರಹಿಸಿಕೊಳ್ಳುವಂತೆ ಸೂಚಿಸಿದರು. ಇಸ್ವತ್ತು ವಿಳಂಬವಾಗುತ್ತಿರುವ ಬಗ್ಗೆ ದೂರು ಕೇಳಿ ಬರುತ್ತಲೇ ಇವೆ. ತಾಂತ್ರಿಕ ಲೋಪದೋಷ ಸರಿಪಡಿಸಿ ಸಾರ್ವಜನಿಕರಿಗೆ ಅನಾನುಕೂಲ ಉಂಟಾಗದಂತೆ ಕ್ರಮ ವಹಿಸುವಂತೆ ಶಾಸಕ ಮಾನೆ ಸೂಚಿಸಿದರು.

ಆಶ್ರಯ ಸಮಿತಿ ಸದಸ್ಯರಾದ ಮಾಲತೇಶ ಕಾಳೇರ, ನಿಯಾಜ್ ಅಹ್ಮದ್ ಸರ್ವಿಕೇರಿ, ಮೇಘಾ ಸುಲಾಖೆ, ವಿನಾಯಕ ಬಂಕನಾಳ ಸೇರಿದಂತೆ ಪುರಸಭೆ ಅಧಿಕಾರಿಗಳು ಇದ್ದರು.

ಕಿರುಸುದ್ದಿ

ಮಾರುತೇಶ್ವರ ದೇವರ ಓಕುಳಿ ಎ.30ರಂದು

ಹಳ್ಳೂರ: ಸಮೀಪದ ಖಾನಟ್ಟಿ ಗ್ರಾಮದಲ್ಲಿ ಪ್ರತಿ ವರ್ಷದಂತೆ ಈ ವರ್ಷವು ಕೂಡಾ ಸಾವಳಗಿ-ಗೋಕಾಕದ ಸಿದ್ದ ಸಂಸ್ಥಾನ ಪೀಠ ಶ್ರೀ ಶೂನ್ಯ ಸಿಂಹಾಸನಾಧೀಶ ಶಿವಲಿಂಗೇಶ್ವರ ಕುಮಾರೇಂದ್ರ ಮಹಾಸನ್ನಿಧಿ ಸಾನ್ನಿಧ್ಯದಲ್ಲಿ ಶ್ರೀ ಮಾರುತೇಶ್ವರ ದೇವರ ಓಕಳಿಯನ್ನು ಎ.30 ರಂದು ಬೆಳಿಗ್ಗೆ 6 ಗಂಟೆಗೆ ಅಭಿಷೇಕ ಜರುಗುವುದು. ನಂತರ ಬೆಳಿಗ್ಗೆ 11 ಗಂಟೆಗೆ ಕೊಂಡ ಪೂಜೆ ಜರುಗುವುದು. ಮೇ 1ರಂದು ಸಂಜೆ 6 ಗಂಟೆಗೆ ನಡು ಓಕುಳಿ, ಮೇ 2ರಂದು ಸಂಜೆ 6 ಗಂಟೆಗೆ ಕಡೆ ಓಕಳಿ, ನಂತರ ಶ್ರೀ ಮಾರುತೇಶ್ವರ ದೇವರ ಪಲ್ಲಕ್ಕಿ ಉತ್ಸವ ಜರುಗುವುದು, ವಿವಿಧ ವಾಧ್ಯಮೇಳಗಳೊಂದಿಗೆ ಹಲವಾರು ಕಲಾ ತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳುವವು ಎಂದು ಖಾನಟ್ಟಿ ಗ್ರಾಮದ ಜಾತ್ರಾ ಮಹೋತ್ಸವ ಸಂಘಟಕರು ತಿಳಿಸಿದ್ದಾರೆ.

ಮೇ 10ರಂದು ರಾಜ್ಯ ಮಟ್ಟದ ಭಜನಾ ಸ್ಪರ್ಧೆ

ಯಮಕನಮರಡಿ: ಬೆಳಗಾವಿಯ ಮಹಿಳಾ ಕಲ್ಯಾಣ ಸಂಸ್ಥೆಯ ನಮ್ಮೂರ ಬಾನುಲಿ ಸಮುದಾಯ ರೇಡಿಯೋ ಕೇಂದ್ರದ ವತಿಯಿಂದ ಬಸವ ಜಯಂತಿ ಅಂಗವಾಗಿ ಯಲ್ಲಾಪೂರ ಗ್ರಾಮದ ನಮ್ಮೂರ ಬಾನುಲಿ ಸಮುದಾಯ ರೇಡಿಯೋ ಕೇಂದ್ರದಲ್ಲಿ ಮೇ 10 ರಂದು ಬೆಳಿಗ್ಗೆ 10ಗಂಟೆಗೆ ರಾಜ್ಯಮಟ್ಟದ ಭವ್ಯ ಭಜನಾ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನ 10,001, ದ್ವಿತೀಯ ಬಹುಮಾನ 7,001, ತೃತೀಯ ಬಹುಮಾನ 5,001 ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವವರು 9164577143 ಸಂಪರ್ಕಿಸಲು ಕೋರಲಾಗಿದೆ ಎಂದು ಗೌರವ ಕಾರ್ಯದರ್ಶಿಗಳು ಮಹಿಳಾ ಕಲ್ಯಾಣ ಸಂಸ್ಥೆ ಬೆಳಗಾವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾರಿಹಾಳ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಉತ್ತಮ ಸಾಧನೆ





ಚನ್ನಮ್ಮನ ಕಿತ್ತೂರು: ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಇಲ್ಲಿಯ ಸರೋಜಾತಾಯಿ ಬಸವರಾಜ ಮಾರಿಹಾಳ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಉತ್ತಮ ಸಾಧನೆ ಮಾಡಿದ್ದು, ಅಪ್ಸರಾ ದೇಗಲೊಳ್ಳಿ ಶೇ 99.04 ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. 97.28 ಅಂಕಗಳಿಸಿ ಭುವನೇಶ್ವರಿ ಬುಚಡಿ ದ್ವಿತೀಯ, ಶೇ 97.12 ಅಂಕ ಪಡೆದು ಪೂಜಾ ಪರಸನಟ್ಟಿ ತೃತೀಯ ಹಾಗೂ ಶೇ 95.04 ಅಂಕ ಪಡೆದು ಶ್ವೇತಾ ಮುರಸಿದ್ದಿ ಚತುರ್ಥ ಸ್ಥಾನ ಪಡೆದಿದ್ದಾರೆ. 145 ವಿದ್ಯಾರ್ಥಿನಿಯರು ಪರೀಕ್ಷೆಗೆ ಹಾಜರಾಗಿದ್ದರು. 142 ವಿದ್ಯಾರ್ಥಿನಿಯರು ಪಾಸ್ ಆಗಿದ್ದಾರೆ. ಡಿಸ್ಟಿಂಕ್ಷನ್‌ನಲ್ಲಿ 34 ವಿದ್ಯಾರ್ಥಿನಿಯರು, ಪ್ರಥಮ ದರ್ಜೆಯಲ್ಲಿ 83 ವಿದ್ಯಾರ್ಥಿನಿಯರು, ದ್ವಿತೀಯ ದರ್ಜೆಯಲ್ಲಿ 15 ವಿದ್ಯಾರ್ಥಿನಿಯರು, ಸಾಮಾನ್ಯ ವರ್ಗದಲ್ಲಿ 10 ವಿದ್ಯಾರ್ಥಿನಿಯರು ಪಾಸಾಗಿದ್ದಾರೆ. ಪರೀಕ್ಷೆಗೆ ಹಾಜರಾದ 22 ವಿದ್ಯಾರ್ಥಿನಿಯರು ಶೇ 90ಕ್ಕೂ ಹೆಚ್ಚಿನ ಅಂಕ ಪಡೆದಿದ್ದಾರೆ. ಉತ್ತಮ ಸಾಧನೆಗೈದ ವಿದ್ಯಾರ್ಥಿನಿಯರಿಗೆ ಶಾಸಕ ಬಾಬಾ ಸಾಹೇಬ ಪಾಟೀಲ, ಎಸ್‌ಡಿಎಂಸಿ ಅಧ್ಯಕ್ಷ ಮಂಜುನಾಥ ದೊಡ್ಡಣ್ಣವರ ಮತ್ತು ಸದಸ್ಯರು, ಶಾಲಾ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

ನಿಧನ ಸುದ್ದಿ

ಲಕ್ಷ್ಮಣ ಹುಚ್ಚನಟ್ಟಿ



ಮೂಡಲಗಿ : ಕರೆಮ್ಮದೇವಿ ವೃತ್ತದ ಹತ್ತಿರದ ನಿವಾಸಿ. ಗಂಗಾಪರಮೇಶ್ವರಿ ಕೋ ಆಪ್ ಕ್ರೆಡಿಟ್ ಸೊಸಾಯಿಟಿಯ ಸಿಬ್ಬಂದಿ ಲಕ್ಷ್ಮಣ ಬಸಪ್ಪ ಹುಚ್ಚನಟ್ಟಿ (27) ಭಾನುವಾರ ನಿಧನರಾಗಿದ್ದಾರೆ. ಮೃತರು ತಂದೆ, ತಾಯಿ ಸಹೋದರ, ಓರ್ವ ಸಹೋದರಿಯನ್ನು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಬೆಳಗಾವಿ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಚೇರಿ ಸಭಾಂಗಣದಲ್ಲಿ ಜಗಜ್ಯೋತಿ, ಬಸವೇಶ್ವರ ಜಯಂತಿಯನ್ನು ಆಚರಿಸಲಾಯಿತು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಆಯ್.ಪಿ.ಗಡದ ಅವರು ಸಾಂಸ್ಕೃತಿಕ ನಾಯಕ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಮರ್ಪಿಸಿದರು.

ಬೈಲಾಟ ಕಲಾವಿದನಿಗೆ ಗೌರವ ಡಾಕ್ಟರೇಟ್

ಹುಕ್ಕೇರಿ: ತಾಲೂಕಿನ ಹುಲ್ಲೋಳಿ ಹಟ್ಟಿ ಗ್ರಾಮದ ರಂಗಭೂಮಿ ಬೈಲಾಟ ಕಲಾವಿದ ಭೀಮಪ್ಪಹುದ್ದಾರ ಅವರು ಏಷ್ಯಾ ಇಂಟರ್‌ನ್ಯಾಷನಲ್ ಕಲ್ಚರ್ ರಿಸರ್ಚ್ ಯೂನಿವರ್ಸಿಟಿಯ ಗೌರವ ಡಾಕ್ಟರೇಟ್ ಪದವಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಚೆನ್ನೈನ ಹೊಸೂರದಲ್ಲಿ ಏ.25ರಂದು ಐಜಿಐ ಗ್ರ್ಯಾಂಡ್ ಫಾರ್ಚುನಾ ಹೋಟೆಲ್‌ದಲ್ಲಿ ನಡೆದ ಪ್ರಶಸ್ತಿ ಪ್ರಧಾನ ಸಮಾರಂಭದ ಘಟಿಕೋತ್ಸವದಲ್ಲಿ ಥಿಯೇಟರ್ ಅಂಡ್ ಪರ್ಫಾರ್ಮಿಂಗ್ ಆರ್ಟ್ಸ್ ವಿಭಾಗದಲ್ಲಿ ಈ ಗೌರವ ಪದವಿಯನ್ನು ನೀಡಿ ಗೌರವಿಸಿದರು.ಎಸ್ಟಾಬ್ಲಿಶಿಂಗ್ ಏಷ್ಯಾ ಇಂಟರ್‌ನ್ಯಾಷನಲ್ ಕಲ್ಚರ್ ವಿಷಯದ ಕುರಿತು ಎಐಸಿಎ ಸಂಸ್ಥೆಯು ಏಷ್ಯಾ ಇಂಟರ್‌ನ್ಯಾಷನಲ್ ಕಲ್ಚರ್ ಅಕಾಡೆಮಿ ಸಹಯೋಗದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭೀಮಪ್ಪ ಹುದ್ದಾರ ಅವರು ಸಕ್ರಿಯವಾಗಿ ಭಾಗವಹಿಸಿದ್ದರು. ವಿಶ್ವಸಂಸ್ಥೆಯ ಯುನೈಟೆಡ್ ನೇಷನ್ಸ್ ಅಕಾಡೆಮಿಕ್ ಇಂಪ್ಯಾಕ್ಟ್ ಜಾಗತಿಕ ಮಿಷನ್‌ಗೆ ನೀಡಿದ ಅತ್ಯುತ್ತಮ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ. ದಶಕಗಳಿಂದ ರಂಗಭೂಮಿ, ಜಾನಪದ ಕಲೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಭೀಮಪ್ಪ ಹುದ್ದಾರ ಅವರು ನೂರಾರು ಕಲಾವಿದರಿಗೆ ಮಾರ್ಗದರ್ಶನ ನೀಡಿದ್ದಾರೆ. ಗ್ರಾಮೀಣ ಭಾಗದ ಕಲೆಯನ್ನು ರಾಷ್ಟ್ರಮಟ್ಟಕ್ಕೆ ಪರಿಚಯಿಸಿದ ಕೀರ್ತಿ ಇವರದ್ದಾಗಿದೆ. ಈ ಗೌರವಕ್ಕೆ ಹುಕ್ಕೇರಿ ಭಾಗದ ಕಲಾವಿದರು, ಸಾಹಿತಿಗಳು ಹಾಗೂ ಸಾರ್ವಜನಿಕರು ಹರ್ಷ ವ್ಯಕ್ತಪಡಿಸಿದ್ದಾರೆ. ಇಂಟರ್‌ನ್ಯಾಷನಲನ್ ಕಲ್ಚರ ರಿಸರ್ಚ ಅಕಾಡೆಮಿ ಅಧ್ಯಕ್ಷ ಡಾ. ಕೃಷ್ಣಮೂರ್ತಿ, ಉದ್ಯಮಿ ಡಾ. ಎ. ಶ್ರೀಧರ, ಡಾ. ಸುಬ್ರಮಣ್ಯಂ, ಡಾ. ಬಿ.ಎಸ್. ಬಳ್ಳಾರಿ ಮತ್ತಿತರರಿದ್ದರು.



ಹುಕ್ಕೇರಿ: ತಾಲೂಕಿನ ಹುಲ್ಲೋಳಿ ಹಟ್ಟಿ ಗ್ರಾಮದ ರಂಗಭೂಮಿ ಬೈಲಾಟ ಕಲಾವಿದ ಭೀಮಪ್ಪ ಹುದ್ದಾರ ಅವರು ಏಷ್ಯಾ ಇಂಟರ್‌ನ್ಯಾಷನಲ್ ಕಲ್ಚರ್ ರಿಸರ್ಚ್ ಯೂನಿವರ್ಸಿಟಿಯ ಗೌರವ ಡಾಕ್ಟರೇಟ್ ಪದವಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ. ಮೂರ್ತಿ ಎಲ್. ಸೂಚನೆ

ನಕಲಿ ಜಾತಿ ಪ್ರಮಾಣ ಪತ್ರ, ಭೂ ಕಬಳಿಕೆ ವಿರುದ್ಧ ಕಠಿಣ ಕ್ರಮ

ಬೆಳಗಾವಿ: ಜಿಲ್ಲೆಯಲ್ಲಿ ನಕಲಿ ಜಾತಿ ಪ್ರಮಾಣ ಪತ್ರ ಹಾಗೂ ಭೂ ಕಬಳಿಕೆ ವಿರುದ್ಧ ಸಾಕಷ್ಟು ದೂರುಗಳು ಕೇಳಿ ಬಂದಿದ್ದು, ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದು ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ಆಯೋಗದ ಅಧ್ಯಕ್ಷರಾದ ಡಾ. ಮೂರ್ತಿ ಎಲ್. ಅವರು ತಿಳಿಸಿದರು.

ಸುವರ್ಣ ವಿಧಾನ ಸೌಧದಲ್ಲಿ ಸೋಮವಾರ ಜರುಗಿದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಆಯೋಗದ ಮುಂದೆ ಪ್ರಸ್ತುತ 4,500 ಅರ್ಜಿಗಳು ಬಾಕಿ ಇವೆ. ಇದರಲ್ಲಿ ಸುಮಾರು 3,850 ಪ್ರಕರಣಗಳು ವಿಚಾರಣಾ ಹಂತದಲ್ಲಿವೆ. ಅಚ್ಚರಿಯ ವಿಷಯವೆಂದರೆ, ಎಸ್ಸಿ, ಎಸ್ಟಿ ಸಮುದಾಯದ ಜನರಿಗೆ ಸರ್ಕಾರದಿಂದ ವಿತರಿಸಲಾದ ಜಮೀನುಗಳು ಹೆಚ್ಚಾಗಿ 'ಲಿಟಿಗೇಶನ್ ಪ್ರಾಪರ್ಟಿ' (ಕಾನೂನು ಸಂಘರ್ಷವಿರುವ ಆಸ್ತಿ) ಗಳಾಗಿವೆ. ಇದರಿಂದ ಬಡವರು ನ್ಯಾಯಾಲಯ ಅಲೆಯುವಂತಾಗಿದೆ.

ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಬಿಡುಗಡೆಯಾದ ಹಣವನ್ನು ಸಮರ್ಪಕವಾಗಿ ಬಳಸಲಾಗಿಲ್ಲ. ಪೌರಕಾರ್ಮಿಕರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವಲ್ಲಿ ಸ್ಥಳೀಯ ಸಂಸ್ಥೆಗಳು ವಿಫಲವಾಗಿವೆ. ಅಲ್ಲದೆ, ಪರಿಶಿಷ್ಟ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳ ಸಂಖ್ಯೆ ತೀರಾ ಕಡಿಮೆ ಇರುವುದನ್ನು ಗಮನಿಸಲಾಗಿದೆ ಎಂದರು.



ಪ.ಜಾತಿ, ಪ.ಪಂಗಡದ ಜನರ ಅಹವಾಲುಗಳನ್ನು ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಸ್ಪಂದಿಸದೆ ಇರುವ ಕುರಿತು ಹಾಗೂ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ದೂರುಗಳು ದಾಖಲಾತಿಯಲ್ಲಿ ವಿಳಂಬವಾಗುತ್ತಿರುವ ಕುರಿತು ದೂರುಗಳು ಬಂದಿದ್ದು, ಈ ಕುರಿತು ಆಯೋಗವು ಗಂಭಿರವಾಗಿ ಪರಿಗಣಿಸಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದರು.

ಜಿಲ್ಲೆಯಲ್ಲಿ ನಕಲಿ ಜಾತಿ ಪ್ರಮಾಣಪತ್ರ ಪಡೆಯುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಎಸ್‌ಸಿಪಿ. ಟಿಎಸ್‌ಪಿ ಯೋಜನೆಯಡಿ ಬಿಡುಗಡೆಯಾದ ಅನುದಾನ ವ್ಯರ್ಥವಾಗದಂತೆ ಸೂಚಿಸಿ ಈ ಅನುದಾನದಡಿ ಕೈಗೊಳ್ಳಲಾದ ಕಾಮವಾರಿಗಳ ವಿಸ್ತøತ ವಿವರಗಳನ್ನು ಫಲಕದಲ್ಲಿ ಅಳವಡಿಸಲು ಹಾಗೂ ಸರಕಾರದ ಆದೇಶದನ್ವಯ ವಿವಿಧ ಕಾಮಗಾರಿಗಳಲ್ಲಿ ಪರಿಶಿಷ್ಟರಿಗೆ ಗುತ್ತಿಗೆ ನೀಡಲು ಸೂಚಿಸಲಾಗುವುದು.

ಹಕ್ಕಿ-ಪಿಕ್ಕಿ ಸಮುದಾಯಕ್ಕೆ ಮೂಲಭೂತ ಸೌಕರ್ಯ ಒದಗಿಸುವ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು. ಪ್ರವಾಹದಿಂದ ಸಂಕಷ್ಟಕ್ಕೀಡಾದ ದಲಿತ ಕುಟುಂಬಗಳ ನೆರವಿಗೆ ವಿಶೇಷ ಪ್ಯಾಕೇಜ್ ಕೋರಲಾಗುವುದು ಎಂದರು.

ಮುಂದಿನ 15 ದಿನಗಳಲ್ಲಿ ಇಡೀ ರಾಜ್ಯ ಪ್ರವಾಸ ಮುಗಿಸಿ, ಸಮುದಾಯದ ಅಭಿವೃದ್ಧಿಗೆ ಪೂರಕವಾದ ಸಮಗ್ರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು. ಜಿಲ್ಲೆಯ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಿನ ಅನುದಾನ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡುವುದಾಗಿ ಡಾ. ಮೂರ್ತಿ ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಆಯೋಗದ ಸದಸ್ಯರುಗಳಾದ ದಿವಾಕರ ಎನ್, ಸುನೀಲ ಉಕ್ಕಲಿ, ಗೀತಾ ಥಾವಂಶಿ, ಕಾರ್ಯದರ್ಶಿ ಡಾ.ಶಿವರಾಮು ಎಚ್.ಎಸ್. ಸಂಶೋಧನಾ ಅಧಿಕಾರಿ ಸಿಂಧೂ ಎಚ್. ಎಸ್. ಉಪಸ್ಥಿತರಿದ್ದರು.

ರಂಗಾಭಿನಯ ಕಾರ್ಯಾಗಾರ ಸಂಪನ್ನ

ಬೆಳಗಾವಿ: ಬೆಳಗಾವಿಯಲ್ಲಿ ರಂಗ ಸಂಪದವು ಹಮ್ಮಿಕೊಂಡಿದ್ದ ರಂಗಾಭಿನಯ ಕಾರ್ಯಾಗಾರವು ಯಶಸ್ವಿಯಾಗಿ ಸಂಪನ್ನ ಗೊಂಡಿತು.

ಎರಡು ದಿನಗಳ ಕಾರ್ಯಾಗಾರದಲ್ಲಿ ಬೆಳಿಗ್ಗೆಯ 10.30 ರಿಂದ ಸಂಜೆ 6.30 ರ ವರೆಗೆ 25 ಪ್ರಶಿಕ್ಷಣಾರ್ಥಿಗಳು ರಂಗಭೂಮಿಯ ವಿವಿಧ ಆಯಾಮಗಳನ್ನು ಪ್ರಾತ್ಯಕ್ಷಿತವಾಗಿ ಮತ್ತು ವಾಚಿಕವಾಗಿ ರಂಗಭೂಮಿಯಲ್ಲಿ ಸತತ 40-50 ವರ್ಷದ ಅನುಭವದ ಡಾ.ಪ್ರಕಾಶ ಮತ್ತು ರಜನಿ ಗರುಡ ಅವರಿಂದ ಅತ್ಯುತ್ತಮವಾಗಿ ಶಿಕ್ಷಣ ಪಡೆದರು.

ಸಂಜೆ 5.30 ರಿಂದ ನಡೆದ ಸಮಾರೋಪ ಸಮಾರಂಭದಲ್ಲಿ ಧಾರವಾಡದ ರಂಗಾಯಣದ ನಿರ್ದೇಶಕರಾಗಿ ಸಾರಥ್ಯವಹಿಸುತ್ತಿರುವ ಖ್ಯಾತ ನಟ ನಿರ್ದೇಶಕ ಲೇಖಕ ಝುಕೀರ ನದಾಫ ಅವರು ಕಾರ್ಯಾಗಾರದಲ್ಲಿ ಭಾಗವಹಿಸಿದ ಎಲ್ಲ 25 ಅಭ್ಯರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಿಸಿ ರಂಗಭೂಮಿಯ ಬಗ್ಗೆ ತಮ್ಮ ಅನುಭವಗಳನ್ನು ರೋಚಕವಾಗಿ ಹಂಚಿಕೊಂಡರು.

ಇದೇ ಸಂದರ್ಭದಲ್ಲಿ ಝುಕೀರ ನದಾಫ ಅವರನ್ನು ಸತ್ಕರಿಸಲಾಯಿತು. ಆರು ಜನ ತರಬೇತಿ ಪಡೆದವರು ತಮ್ಮ ಅನುಭವ ಹಂಚಿಕೊಂಡು ರಂಗಸಂಪದಕ್ಕೆ ಧನ್ಯವಾದ ಅರ್ಪಿಸಿದರು.

ಸಂಪನ್ಮೂಲ ದಂಪತಿಗಳಾದ ರಜನಿ ಮತ್ತು ಡಾ.ಪ್ರಕಾಶ ಗರುಡ ಅವರು ಈ ರೀತಿಯ ಕಾರ್ಯಾಗಾರದ ಆಯೋಜನೆ ಮಾಡಬೇಕಾದ ಸರ್ಕಾರಿ ಸಂಸ್ಥೆಗಳು ಮಾಡದೇ ಇರುವುದರಿಂದ ರಂಗಸಂಪದ ಬೆಳಗಾವಿಯ ತಂಡದವರು ಮಾಡುತ್ತಿರುವುದು ಮತ್ತು ಇದಕ್ಕೆ ಇಷ್ಟು 25 ಅಭ್ಯರ್ಥಿಗಳು ಹಾಜರಿರುವುದು ಅಭಿನಂದನೀಯ ಎಂದರು.

ಎಲ್.ಎಸ್. ಶಾಸ್ತ್ರೀ ಅವರು ಹಳೆಯ ವೃತ್ತಿ ರಂಗಭೂಮಿಯ ಮತ್ತು ಇಂದಿನ ಹವ್ಯಾಸಿ ರಂಗಭೂಮಿಯ ಬಗ್ಗೆ ಹೇಳಿದರು ಪ್ರಸಾದ ಕಾರಜೋಳ ಸ್ವಾಗತಿಸಿದರು. ಚಿದಾನಂದ ವಾಳಕೆ ವಂದಿಸಿದರು. ಪದ್ಮಾ ಕುಲಕರ್ಣಿಯವರು ಅತಿಥಿಗಳ ಪರಿಚಯ ನೀಡಿದರು.

ಡಾ.ಅರವಿಂದ ಕುಲಕರ್ಣಿಯವರು ಕಾರ್ಯಾಗಾರದ ಸಾಫಲ್ಯತೆ ಮತ್ತು ಮುಂದಿನ ರಂಗಪಯಣದ ಬಗ್ಗೆ ಮನದಾಳದ ಮಾತು ಹೇಳಿದರು. ವೀಣಾ ಹೆಗಡೆ ನಿರೂಪಿಸಿದರು. ರಾಮಚಂದ್ರ ಕಟ್ಟಿ, ಬಸವರಾಜ ಹುಣಶೀಕಟ್ಟಿ, ಶಿವಾನಂದ ಮಾರೀಹಾಳ, ಚಂದ್ರಶೇಖರ ನವಲಗುಂದ, ಮುದೇನೂರ, ಆನಂದ ಪುರಾಣಿಕ, ನದಾಫ್ ಸೇರಿದಂತೆ ಇತರರು ಇದ್ದರು.



80 ಮೊಬೈಲ್ ಫೋನ್ ಪತ್ತೆ ಹಚ್ಚಿದ ಪೊಲೀಸರು

ರಾಮದುರ್ಗ: ಕಳೆದ ಮೂರು ವರ್ಷಗಳಲ್ಲಿ ಕಳ್ಳರ ಕೈಚಳಕದಿಂದ ಮೊಬೈಲ್ ಕಳೆದುಕೊಂಡಿದ್ದ ರಾಮದುರ್ಗ ತಾಲೂಕಿನ ರಾಮದುರ್ಗ, ಕಟಕೋಳ ಮತ್ತು ಸುರೇಬಾನ ಪೊಲೀಸ್ ಠಾಣೆ ವ್ಯಾಪ್ತಿಯ ಮೊಬೈಲ್ ಮಾಲೀಕರಿಗೆ ಡಿಎಸ್‌ಪಿ ಚಿದಂಬರ ಮಡಿವಾಳರ ಭಾನುವಾರ ವಿತರಿಸಿದರು.

ವಾರಸದಾರರಿಗೆ ಮೊಬೈಲ್ ವಿತರಿಸಿ ಮಾತನಾಡಿದ ಡಿಎಸ್‌ಪಿ ಚಿದಂಬರ ಮಡಿವಾಳರ, ಮೊಬೈಲ್ ಕಳೆದುಕೊಂಡು ಪ್ರತಿಯೊಬ್ಬರೂ ಪೊಲೀಸ್ ಠಾಣೆಗೆ ದೂರು ನೀಡಬೇಕು. ಪೊಲೀಸರು ಅದನ್ನು ಇಲಾಖೆ ಜಾರಿ ಮಾಡಿರುವ ಸಿಇಐಆರ್ ಆ್ಯಪ್‌ನಲ್ಲಿ ಅಪಲೋಡ್ ಮಾಡುತ್ತಾರೆ. ಪೊಲೀಸರು ಸುಮ್ಮನಿದ್ದರೂ ಸಾಫ್ಟವೇರ್ ಮಾತ್ರ ನಿರಂತರ ಅನ್ವೇಷಣೆಯಲ್ಲಿ ತೊಡಗಿ ಮೊಬೈಲ್ ಇರುವಿಕೆಯನ್ನು ಪತ್ತೆ ಮಾಡುತ್ತದೆ ಎಂದು ತಿಳಿಸಿದರು.

ಇಂಥ ಮೊಬೈಲ್ ಆ್ಯಪ್ ಇಲಾಖೆ ಬಳಕೆ ಮಾಡಿಕೊಳ್ಳುತ್ತಿರುವುದು ಮಾನವೀಯ ಕೆಲಸಗಳು ಕಡಿಮೆಯಾಗುತ್ತಿವೆ. ಕಳುವಾದ ವಸ್ತುಗಳನ್ನು ಸಲೀಸಾಗಿ ಪತ್ತೆ ಹಚ್ಚಲು ಸಾಧ್ಯವಾಗುತ್ತಿದೆ. ಮೊಬೈಲ್ ಕಳೆದುಕೊಂಡವರು ನಿರ್ಲಕ್ಷ್ಯ ವಹಿಸದೇ ತಕ್ಷಣವೇ ದೂರು ನೀಡಿ ಮರಳಿ ಪಡೆಯಬೇಕು ಎಂದು ಹೇಳಿದರು.

> **ಸಿಇಐಆರ್ ಆ್ಯಪ್ ನಿರ್ವಹಣೆಯನ್ನು ರಾಮದುರ್ಗದಲ್ಲಿ ಮಹಿಳಾ ಮುಖ್ಯ ಪೇದೆ ಬಿ.ಎಚ್. ಮುನವಳ್ಳಿ ಅವರು ನೋಡಿಕೊಳ್ಳುತ್ತಿದ್ದಾರೆ. ಅವರ ನಿರಂತರ ಪ್ರಯತ್ನದ ಫಲವಾಗಿ ಫೋನ್ ಕಳೆದುಕೊಂಡವರಿಗೆ ಮರಳಿ ದೊರೆಯುತ್ತಿವೆ. ಪೊಲೀಸ್ ಇಲಾಖೆಯಲ್ಲಿ ಅವರ ಸೇವೆ ಅಸ್ಮರಣೀಯ.**
> ■ ವಿನಾಯಕ ಬಡಿಗೇರ, ಸಿಪಿಐ

» ರಾಮದುರ್ಗ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 51, ಸುರೇಬಾನ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 7 ಮತ್ತು ಕಟಕೋಳ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 22 ಮೊಬೈಲ್ ಸೇರಿದಂತೆ ಒಟ್ಟು 80 ಮೊಬೈಲ್‌ಗಳನ್ನು ವಾಪಸ್ ಪಡೆದುಕೊಂಡ ಮೊಬೈಲ್ ವಾರಸುದಾರರು ಸಂತಸ ವ್ಯಕ್ತಪಡಿಸಿದರು.



'ಸೈಕಲ್ ಫಾರ್ ಗೋಲ್ಡ್' ಸಾಧಕರಿಗೆ ಸನ್ಮಾನ

ರಾಯಬಾಗ: ಕ್ಯಾನ್ ಕಿಡ್ ಸಂಸ್ಥೆ, ಮುಂಬೈ, Our Social Good ಕಾರವಾರ, ರಾಯಬಾಗ ಸೈಕ್ಲಿಂಗ್ ಕ್ಲಬ್ ಹಾಗೂ ಬಾಗಿ ಸೋಶಿಯಲ್ ಕ್ಲಬ್ ಇವರ ಸಂಯುಕ್ತ ಆಶ್ರಯದಲ್ಲಿ ಸೈಕಲ್ ಫಾರ್ ಗೋಲ್ಡ್' ಕಾರ್ಯಕ್ರಮದಲ್ಲಿ ಭಾಗವಹಿಸಿದ ಸೈಕ್ಲಿಸ್ಟ್‌ಗಳಿಗೆ ಅಭಿನಂದನಾ ಸಮಾರಂಭವನ್ನು ಆಯೋಜಿಸಲಾಗಿತ್ತು.

ಬಾಗಿ ಸೋಶಿಯಲ್ ಕ್ಲಬ್ ನ ಅಧ್ಯಕ್ಷ ರಾಜು ಅಳಾಜ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗೋವಾ ರಾಜ್ಯದ ಕಾಲ್ವನ್ ಗೊಮೆಜ್, ಎನ್.ಜಿ. ನಾಯಿಕ, ಪ್ರೀತಿ ಸಾವಂತ, ಪವನ ಸಾವಂತ ಹಾಗೂ ಸಂತೋಷ ಕೆ ಉಪಸ್ಥಿತರಿದ್ದರು.



Our Social Good ಸಂಸ್ಥೆಯ ಅಧ್ಯಕ್ಷ ಪವನ ಸಾವಂತ ಮಾತನಾಡಿ, ಕ್ಯಾನ್ ಕಿಡ್ ಸಂಸ್ಥೆಯು ಆಯೋಜಿಸಿದ ಸೈಕಲ್ ಫಾರ್ ಗೋಲ್ಡ್' ಕಾರ್ಯಕ್ರಮದಲ್ಲಿ ರಾಯಬಾಗದ 17 ಮಂದಿ ಸದಸ್ಯರು ಭಾಗವಹಿಸಿ ಸುಮಾರು 19 ಸಾವಿರ ಕಿಲೋಮೀಟರ್ ಸೈಕಲ್ ಸವಾರಿ ಮಾಡಿರುವುದು ಪ್ರಶಂಸನೀಯ ಸಾಧನೆ. ಈ ಸವಾರಿಯ ಮೂಲಕ ಕ್ಯಾನ್ಸರ್ ಪೀಡಿತ ಮಕ್ಕಳ ನೆರವಿಗಾಗಿ ಪ್ರತೀ ಕಿಲೋಮೀಟರ್‌ಗೆ 50ರಂತೆ, ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ನಿಧಿಯಿಂದ ಸುಮಾರು 9 ಲಕ್ಷ ಸಂಗ್ರಹವಾಗಲು ಕಾರಣರಾಗಿದ್ದಾರೆ ಎಂದು ಹೇಳಿದರು.

ಈ ಸಾಧನೆಯಿಂದ ರಾಷ್ಟ್ರಮಟ್ಟದಲ್ಲಿ Our Social Good ಸಂಸ್ಥೆಗೆ ದ್ವಿತೀಯ ಸ್ಥಾನ ಲಭಿಸಲು ಸಹಕಾರಿಯಾಗಿದ್ದು, ಭಾಗವಹಿಸಿದ ಎಲ್ಲ ಸೈಕ್ಲಿಸ್ಟ್‌ಗಳಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು ಎಂದು ತಿಳಿಸಿದರು.

ವೀರಭದ್ರ ಅಂಬಿ ಪ್ರಾರ್ಥಿಸಿದರು. ಮಹಾದೇವ ಪಾಟೀಲ ಸ್ವಾಗತಿಸಿ ಸತ್ಕರಿಸಿದರು. ಶಂಕರ ಕೊಡತೆ ವಂದಿಸಿದರು. ಸಂಜು ಟೆಳೆ ನಿರೂಪಿಸಿದರು.

ವಾರ್ಷಿಕ 7 ಸಾವಿರ ಅರ್ಜಿಗಳ ಇತ್ಯರ್ಥಕ್ಕೆ ಗುರಿ: ಪ್ರಕಾಶ ಚನ್ನಾಳ

ಬೆಳಗಾವಿ: ಮಾಹಿತಿ ಹಕ್ಕು ಕಾಯ್ದೆ ಜನಪರ ಮತ್ತು ಪ್ರಜಾಪ್ರಭುತ್ವದ ಭದ್ರ ಬುನಾದಿಯಾಗಿದೆ. ಸ್ವತಂತ್ರ ಭಾರತದಲ್ಲಿ ಅತ್ಯಂತ ಕ್ರಾಂತಿಕಾರಕ ಕಾಯ್ದೆಯಾಗಿದೆ. ಸಾಮಾನ್ಯ ಜನರಿಗೆ ಸರ್ಕಾರದ ಮಾಹಿತಿ ಸುಲಭವಾಗಿ ತಲುಪಬೇಕೆಂಬ ಉದ್ದೇಶದಿಂದ ಮಾಹಿತಿ ಹಕ್ಕು ಕಾಯ್ದೆಯು 2005 ರ ಅಕ್ಟೋಬರ್ 12 ರಂದು ಜಾರಿಗೆ ಬಂದಿದೆ. ಕರ್ನಾಟಕ ರಾಜ್ಯವು ಈ ಕಾಯ್ದೆಯನ್ನು ಅನುಷ್ಠಾನಗೊಳಿಸಿದ ಪ್ರಥಮ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಕರ್ನಾಟಕ ಮಾಹಿತಿ ಆಯೋಗದ ಬೆಳಗಾವಿ ಪೀಠದ ರಾಜ್ಯ ಮಾಹಿತಿ ಆಯುಕ್ತ ಪ್ರಕಾಶ ನಾರಾಯಣ ಚನ್ನಾಳ ತಿಳಿಸಿದ್ದಾರೆ.



ಕರ್ನಾಟಕ ಮಾಹಿತಿ ಹಕ್ಕು ಆಯೋಗವು ಕಳೆದ ಒಂದು ವರ್ಷದಲ್ಲಿ ರಾಷ್ಟ್ರದಲ್ಲಿಯೇ ದಾಖಲೆ ಪ್ರಮಾಣದಲ್ಲಿ 40 ಸಾವಿರ ದ್ವಿತಿಯ ಮೇಲ್ಮನವಿ ಪ್ರಕರಣಗಳನ್ನು ಇತ್ಯರ್ಥ ಮಾಡಿದೆ. ಕರ್ನಾಟಕ ಮಾಹಿತಿ ಆಯೋಗ ಬೆಳಗಾವಿ ಪೀಠದಲ್ಲಿ ಪ್ರತಿದಿನ ಸುಮಾರು 40-60 ಅರ್ಜಿಗಳ ವಿಚಾರಣೆ ಆಫ್ಲೈನ್ ಮತ್ತು ಆನ್ಲೈನನಲ್ಲಿ ನಡೆಯುತ್ತಿದ್ದು, ಗ್ರಾಮೀಣ ಭಾಗದ ಜನರ ಅರ್ಜಿಗಳಿಗೆ ಹೆಚ್ಚಿನ ಒತ್ತು ನೀಡಿ ಗ್ರಾಮೀಣ ಭಾಗದ ಸಮಸ್ಯೆಗಳಾದ ಕುಡಿಯುವ ನೀರು, ರಸ್ತೆ, ವಿದ್ಯುತ್ ಸರಬರಾಜು, ಸ್ವಚ್ಚತೆ, ಆರೋಗ್ಯ ಮತ್ತು ಇತ್ಯಾದಿ ಮೂಲ ಸೌಕರ್ಯಗಳ ಸಮಸ್ಯೆಗಳ ವಿಚಾರಣೆಗಳು ಇತ್ಯರ್ಥವಾಗುತ್ತಿದ್ದು, ಮಾಹಿತಿ ನೀಡದೇ ಇರುವ ಅಧಿಕಾರಿಗಳಿಗೆ ಕಡ್ಡಾಯವಾಗಿ ಮಾಹಿತಿ ನೀಡಲು ಶಿಸ್ತು ಕ್ರಮ ಜರುಗಿಸಿ, ವಿಚಾರಣೆ ಸಮಿತಿಯ ಶಿಫಾರಸ್ಸು, ದಂಡ ಮತ್ತು ಅರ್ಜಿದಾರರಿಗೆ ಪರಿಹಾರದ ಆದೇಶಗಳನ್ನು ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಬೆಳಗಾವಿ ಪೀಠಕ್ಕೆ ಬರುವ ಅರ್ಜಿಗಳ ಪ್ರಮಾಣ ಹೆಚ್ಚಳ ಇದ್ದಿದ್ದರಿಂದ ವರ್ಷಕ್ಕೆ 6000 ರಿಂದ 7000 ವಿಚಾರಣೆಗಳ ಇತ್ಯರ್ಥಕ್ಕಾಗಿ ಯೋಜನೆಯನ್ನು ಹಾಕಿಕೊಳ್ಳಲಾಗಿದೆ ಮತ್ತು ಜಿಲ್ಲಾವಾರು ಕಾರ್ಯಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಯ ಪಾಲನೆ, ಸ್ಪಷ್ಟ ಯೋಜನೆ ಹೊಂದಿ



ರಾಮದುರ್ಗ: ಭಾರತದ ಆರ್ಥಿಕತೆ ಅಭಿವೃದ್ಧಿಗೆ ಸುಸ್ಥಿರ ಏಳ್ಗೆ ಮನೆಯಿಂದಲೇ ಪ್ರಾರಂಭವಾದರೆ ಮಾತ್ರ ಸಾಧ್ಯವೆಂದು ನಿವೃತ್ತ ಪ್ರಾಚಾರ್ಯ ಎಸ್. ಎಂ. ಸಕ್ರಿ ಹೇಳಿದರು. ನಗರದ ವಿದ್ಯಾ ಪ್ರಸಾರಕ ಸಮಿತಿಯ, ಸಿ..ಎಸ್. ಬೆಂಬಳಗಿ ಕಲಾ, ಶ್ರೀ.ಎಂ.ಆರ್. ಪಾಲರೇಶಾ ವಿಜ್ಞಾನ ಹಾಗೂ ಜಿ.ಎಲ್.ರಾಠಿ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಅರ್ಥಶಾಸ್ತ್ರ ವಿಭಾಗದ ಯೋಜನಾ ವೇದಿಕೆ ಅಡಿಯಲ್ಲಿ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಜರುಗಿದ ಭಾರತದ ಆರ್ಥಿಕ ಪ್ರಗತಿಗೆ ಸುಸ್ಥಿರ ಅಭಿವೃದ್ಧಿಯೇ ಮುಖ್ಯ ಅಂಶ ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮಯಪಾಲನೆ, ಸ್ಪಷ್ಟ ಯೋಜನೆ ಮತ್ತು ನಿರಂತರ ಅಧ್ಯಯನ ಅಧ್ಯಾಪನ ಹೊಂದಬೇಕು ಎಂದರು. ಈ ವೇಳೆ ಅಧಿಕ ಅಂಕಗಳಿಸಿದ ವಿದ್ಯಾರ್ಥಿನಿ ರತ್ನಾ ಹಿರೇಮಠ ಹಾಗೂ ಮಹಾದೇವಿ ಗೋವನಕಪ್ಪ ಇವರನ್ನು ಸನ್ಮಾನಿಸಲಾಯಿತು. ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಪಿ.ಬಿ.ತೆಗ್ಗಿಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ಎಸ್. ಜಿ.ತೋಟದ ಸ್ವಾಗತಿಸಿದರು. ಡಾ.ಜಿ.ಬಿ.ಮುರಗೋಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಐ.ಕ್ಯೂ.ಎ.ಸಿ. ಸಂಯೋಜಕರು ಹಾಗೂ ಮಹಾವಿದ್ಯಾಲಯದ ಸಿಬ್ಬಂದಿವರ್ಗ, ವಿದ್ಯಾರ್ಥಿ-ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ತನುಶ್ರೀ ಮತ್ತು ಅಜುಮಾ ಕಾರ್ಯಕ್ರಮ ನಿರೂಪಿಸಿದರು. ಭೀಮಪ್ಪ ಜಾಡಿ ವಂದಿಸಿದರು.

ನಿಸರ್ಗಾ ಹುದ್ದಾರಗೆ ಸನ್ಮಾನ

ನೇಸರಗಿ: ಬೈಲಹೊಂಗಲ ತಾಲೂಕಿಗೆ ತೃತೀಯ ಸ್ಥಾನ ಪಡೆದ ಮಲ್ಲಾಪುರ-ಗ್ರಾಮದ ಶ್ರೀ ರೇವಣಸಿದ್ದೇಶ್ವರ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ವಿದ್ಯಾರ್ಥಿ ನಿಸರ್ಗಾ ಮಹೇಶ ಹುದ್ದಾರ ಅವರನ್ನು ಚಿದಾನಂದ ಸ್ವಾಮೀಜಿ ಹಾಗೂ ಪ್ರಭಾರಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಬಿ. ಡಿ. ಹಿರೇಮಠ, ಕ್ಷೇತ್ರ ಸಮನ್ವಯ ಅಧಿಕಾರಿ, ಸಿಬ್ಬಂದಿಯವರಿಂದ ಮತ್ತು ಶ್ರೀ ಗಾಳೇಶ್ವರ ಶಿಕ್ಷಣ ಸಂಸ್ಥೆಯ ವತಿಯಿಂದ ವಿದ್ಯಾರ್ಥಿನಿಗೆ ಸನ್ಮಾನಿಸಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಮಹೇಶ ಯರಗಟ್ಟಿ, ಗಂಗಾಧರ ಕಾಮಕರ, ರಾಜು ಹಕ್ಕಿ, ಎಮ್ ಎನ್ ಕಾಂಬಳೆ, ಮಂಜುನಾಥ ಕಾಜಗಾರ, ವಿಜಯ ಯರಗಟ್ಟಿ, ಭಾಗವಹಿಸಿ, ಗ್ರಾಮೀಣ ಭಾಗದಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿರುವ ರೇವಣಸಿದ್ದೇಶ್ವರ ಶಾಲೆಯ ಫಲಿತಾಂಶಕ್ಕೆ ಮೆಚ್ಚುಗೆವ್ಯಕ್ತಪಡಿಸಿ ಅಭಿನಂದನೆ ತಿಳಿಸಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಚೇರ್ಮನ್ನರಾದ ಶಿವನಗೌಡ ಪಾಟೀಲ, ಶಂಕರಗೌಡ ಗುರನಗೌಡರ, ವೈ.ಬಿ.ಬಂದ್ರಾಮ, ಆರ್.ಬಿ.ಪಾಟೀಲ, ವೀರಭದ್ರಪ್ಪ ತಲ್ಲೂರ, ಬಸವರಾಜ ಗಡೆನ್ನವರ, ಚಂದ್ರಗೌಡ ಪಾಟೀಲ, ಚನಬಸಯ್ಯ ಪೂಜೇರಿ, ಚನಗೌಡ ಗೌಡರ, ರವಿ ಹೊನ್ನಯ್ಯನವರ, ದುರಗಪ್ಪ ಚಿಕ್ಕಬಸಣ್ಣವರ, ಮತ್ತು ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪಾಲಕರು ಭಾಗವಹಿಸಿದ್ದರು.



ಎಸ್ಸೆಸ್ಸೆಲ್ಸಿ: ಶೇ 93.27ರಷ್ಟು ಫಲಿತಾಂಶ

ಹುಕ್ಕೇರಿ: ಪ್ರಸಕ್ತ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ 6447 ವಿದ್ಯಾರ್ಥಿಗಳು ಹಾಜರಾಗಿದ್ದು, ಅವರಲ್ಲಿ 6013 ಮಕ್ಕಳು ಉತ್ತೀರ್ಣರಾಗಿದ್ದಾರೆ. ಶೇ 93.27 ಫಲಿತಾಂಶ ಬಂದಿದೆ ಎಂದು ಬಿಇಒ ಪ್ರಭಾವತಿ ಪಾಟೀಲ ತಿಳಿಸಿದರು.



ಸೋಮವಾರದಂದು ಪಟ್ಟಣದ ಬಿಇಒ ಕಾರ್ಯಾಲಯದಲ್ಲಿ ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಪ್ರತಿ ವರ್ಷಕ್ಕಿಂತ ಈ ವರ್ಷ ಉತ್ತಮ ಫಲಿತಾಂಶ ಬಂದಿದೆ. ಇದಕ್ಕೆ ಪ್ರಮುಖವಾಗಿ ಶಿಕ್ಷಕರಿಂದ ಮನೆ ಪಾಠ, ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುವ ಪದ್ಧತಿ, ವಾರಕ್ಕೊಂದು ದಿನ ಮನೆಗೆ ಬಂದ ಗುರು ಕಾರ್ಯಕ್ರಮ ಹಾಗೂ ಪರೀಕ್ಷೆ ಮುಂಚಿನ 3 ತಿಂಗಳು ಬೆಳಗಿನ ಜಾವ ಮಕ್ಕಳಿಗೆ ಹಾಗೂ ಪಾಲಕರಿಗೆ ಫೋನ್ ಮಾಡಿ ಓದಿಸುವ ಪ್ರಕ್ರಿಯೆ ಸೇರಿದಂತೆ ಹತ್ತು ಹಲವು ವಿನೂತನ ಕಾರ್ಯಗಳನ್ನು ಹಮ್ಮಿಕೊಂಡಿದ್ದರಿಂದ ಶೇಕಡಾವಾರು ಫಲಿತಾಂಶ ಹೆಚ್ಚಾಗಿದೆ ಎಂದರು.

ಮುಂಬರುವ ದಿನಗಳಲ್ಲಿ ಇನ್ನಷ್ಟು ವಿನೂತನ ಯೋಜನೆ ಹಮ್ಮಿಕೊಳ್ಳುವ ಮೂಲಕ ತಾಲೂಕಿನ ಫಲಿತಾಂಶ ಹೆಚ್ಚಿಸುವುದರ ಜತೆಗೆ ಚಿಕ್ಕೋಡಿ ಜಿಲ್ಲೆಯ ಮೊದಲ 3 ಸ್ಥಾನಗಳಲ್ಲಿ ಹೆಸರಿಸಿಕೊಳ್ಳುವ ಚಿಂತನೆ ನಮ್ಮದಾಗಿದೆ. ಇದಕ್ಕೆ ಪಾಲಕರ ಸಹಕಾರ ಅವಶ್ಯ. ಮುಂಬರುವ ಶೈಕ್ಷಣಿಕ ಶಾಲಾ ಪ್ರಾರಂಭದಿಂದಲೇ ಪರೀಕ್ಷಾ ತಯಾರಿ ಮಾಡಿಕೊಳ್ಳಲು ಶಿಕ್ಷಕ ವರ್ಗ ಸಿದ್ಧರಾಗಿದ್ದಾರೆ ಎಂದರು.

ತಾಲೂಕಿನ ಹೆಬ್ಬಾಳ ಸರ್ಕಾರಿ ಕೆಪಿಎಸ್ ಪ್ರೌಢಶಾಲೆಯ ರೋಹಿಣಿ ದುಂಡಪ್ಪಾ ಜರಳಿ 622 ಅಂಕ ಪಡೆದು ಪ್ರಥಮ, ಹುಕ್ಕೇರಿ ಜಿಮುಖಾನ ಆಂಗ್ಲಮಾಧ್ಯಮ ಪ್ರೌಢ ವಿಭಾಗದ ನಿಖಿತಾ ಶ್ರೀಕಾಂತ ಮುದವೀರ 621 ಅಂಕ ಗಳಿಸಿ ದ್ವಿತೀಯ ಹಾಗೂ ಕೋಚರಿ ಸರ್ಕಾರಿ ಪ್ರೌಢಶಾಲೆಯ ನಾಗರಾಜ ಮಂಜುನಾಥ ಕುರಬರ 620 ಅಂಕ ಪಡೆದು ತಾಲೂಕಿಗೆ ಮೊದಲ 3 ಸ್ಥಾನ ಪಡೆದಿದ್ದಾರೆಂದು ಹೇಳಿದರು.

ಗೋ ಮಾತೆ ರಕ್ಷಣೆಗೆ ಅಭಿಯಾನ ಗೋ ಹತ್ಯೆ ನಿಷೇಧಕ್ಕೆ ಒತ್ತಾಯ



ರಾಯಬಾಗ: ಗೋಮಾತೆಯ ಗೌರವದ ಅಭಿಯಾನ ನಿಮಿತ್ತ ಪಟ್ಟಣದಲ್ಲಿ ಶ್ರೀರಾಮ ಸೇನಾ, ಹಿಂದೂ ಜನಜಾಗೃತಿ ಸಮಿತಿ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ ವತಿಯಿಂದ ಪಟ್ಟಣದ ಎಲ್ಲಾ ಹಿಂದೂ ಕಾರ್ಯಕರ್ತರು ಉಪ ತಹಶೀಲ್ದಾರ್ ಅವರ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಮೇಘರಾಜ, ಮಾಳಗೆ ಮಾತನಾಡಿ, ಗೋ ಮಾತೆಯನ್ನು ರಾಷ್ಟ್ರ ಮಾತೆ ಅಂತಾ ಘೋಷಣೆ ಮಾಡಬೇಕು, ಗೋ ಸೇವೆಗಾಗಿ ಕೇಂದ್ರೀಯ ಕಾನೂನು ಜಾರಿಗೆ ತರಬೇಕು, ಭಾರತದಲ್ಲಿ ಗೋಹತ್ಯೆ ಸಂಪೂರ್ಣವಾಗಿ ನಿಷೇಧಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಪ್ರಾಮುಖರಾದ - ಜೈದೀಪ್ ದೇಸಾಯಿ, ಶಿವು ಬಂತೆ,ಅಪ್ಪು ಪವಾರ್, ಅಮಿತ್ ಹೊಂಕಳೆ, ಶ್ರೀನಾಥ್ ಜಾಧವ, ವಿನಯ ಚೌಗಲೇ, ಸೂರಜ್ ಬಾಕರೆ, ರಮೇಶ್ ತೇಲಿ, ಹಾಗೂ ಇನ್ನುಳಿದ ಹಿಂದೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಿರುಸುದ್ದಿ



ಗೋವಾ ಸಿಎಂ ಪ್ರಮೋದ ಸಾವಂತ ಅವರ ಜನ್ಮದಿನದ ಅಂಗವಾಗಿ ಗೋವಾ, ಪಣಜಿಯ ಅವರ ನಿವಾಸದಲ್ಲಿ ಸೋಮವಾರ ಖಾನಾಪುರ ಶಾಸಕ ವಿಠ್ಠಲ ಹಲಗೇಕರ ಹಾಗೂ ಅವರೊಳ್ಳಿ-ಬಿಳಕಿ ರುದ್ರಸ್ವಾಮಿ ಮಠದ ಚನ್ನಬಸವದೇವರು ಸತ್ಕರಿಸಿ ಅಭಿನಂದಿಸಿದರು.

ಸೆಕೆಂಡ್ ಹ್ಯಾಂಡ್ ಸದಾಶಿವ ಹಾಸ್ಯ ನಾಟಕ ಇಂದು

ಬೆಳಗಾವಿ : ರಂಗಭೂಮಿ ಚಟುವಟಿಕೆಗಳಿಗೆ ಮತ್ತಷ್ಟು ಚೈತನ್ಯ ತುಂಬುವ ನಿಟ್ಟಿನಲ್ಲಿ ಬೆಳಗಾವಿಯ ರಂಗಸೃಷ್ಟಿ ಸಾಂಸ್ಕೃತಿಕ ಸಂಘದಿಂದ ಏಪ್ರಿಲ್ 28ರಂದು ಹಾಸ್ಯ ನಾಟಕ ಪ್ರದರ್ಶನವನ್ನು ಆಯೋಜಿಸಲಾಗಿದೆ.

ಸೆಕೆಂಡ್ ಹ್ಯಾಂಡ್ ಸದಾಶಿವ ಎಂಬ ಜನಪ್ರಿಯ ಹಾಸ್ಯ ನಾಟಕವನ್ನು ಏಪ್ರಿಲ್ 28ರಂದು ಸಂಜೆ 6.30ಕ್ಕೆ ಕನ್ನಡ ಭವನ (ರಾಮದೇವ ಹೋಟೆಲ್ ಹತ್ತಿರ)ದಲ್ಲಿ ಪ್ರದರ್ಶಿಸಲಾಗುತ್ತಿದೆ.ಎಂ. ಎಸ್. ನರಸಿಂಹಮೂರ್ತಿ ರಚಿಸಿರುವ ಈ ನಾಟಕವನ್ನು ಶರಣಗೌಡ ಪಾಟೀಲ ಅವರು ನಿರ್ದೇಶಿಸಿದ್ದಲ್ಲದೆ, ಸಂಗೀತನಿರ್ದೇಶನ, ರಂಗವಿನ್ಯಾಸ ಮತ್ತು ಬೆಳಕಿನ ವಿನ್ಯಾಸವನ್ನೂ ಮಾಡಲಿದ್ದಾರೆ. ಉದ್ಘಾಟನೆಯನ್ನು ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರವೀಣ ಹುಲಜಿ ನೆರವೇರಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಸಮಾಜ ಸೇವಕರಾದ ಬಸವರಾಜ ಕಾಮಗಾರಕರ ಹಾಗೂ ಆಕ್ಮೆ ಇಂಜಿನಿಯರಿಂಗ್ ವರ್ಕ್ಸ್‌ನ ಪುಂಡಲೀಕ್ ಅವರು ಭಾಗವಹಿಸಲಿದ್ದಾರೆ. ಇದೇ ವೇಳೆ ರಂಗಾಯಣದ ನಿರ್ದೇಶಕ ಝೂಕೀರ್ ನದಾಫ್ ಅವರನ್ನು ಸನ್ಮಾನಿಸಲಾಗುವುದು. ಅಧ್ಯಕ್ಷತೆಯನ್ನು ರಂಗಸೃಷ್ಟಿ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾದ ರಮೇಶ ಜಂಗಲ್ ವಹಿಸಲಿದ್ದಾರೆ.ಈ ಹಾಸ್ಯ ನಾಟಕವು ಕುಟುಂಬ ಮೌಲ್ಯಗಳು, ಸಾಮಾಜಿಕ ಪರಿಸ್ಥಿತಿಗಳು ಹಾಗೂ ಮನರಂಜನೆಯನ್ನು ಒಳಗೊಂಡ ಕಥಾವಸ್ತುವಿನ ಮೂಲಕ ಪ್ರೇಕ್ಷಕರಿಗೆ ಮನರಂಜನೆ ನೀಡಲಿದ್ದು, ಸ್ಥಳೀಯ ಕಲಾವಿದರಾದ ವಾಮನ ಮಳಗಿ, ಶಾಂತಾ ಆಚಾರ್ಯ, ಶಿರೀಶ್ ಜೋಶಿ, ವಿಶ್ವನಾಥ ದೇಸಾಯಿ, ಅನುಶ್ರೀ ರಘುವೀರ, ಶರಣಯ್ಯ ಮಠಪತಿ ಅಭಿನಯ ವಿಶೇಷ ಆಕರ್ಷಣೆಯಾಗಲಿದೆ. ನಾರಾಯಣ ಗಣಾಚಾರಿ ತಬಲಾ ಸಾಥ್ ನೀಡಲಿದ್ದಾರೆ. ಕನ್ನಡ ಭವನ ಕಾರ್ಯಕ್ರಮಕ್ಕೆ ಸಹಯೋಗ ನೀಡಿದೆ.ಉಚಿತ ಪ್ರದರ್ಶನವಿದ್ದು, ಇಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ನಾಟಕವನ್ನು ಆಸ್ವಾದಿಸುವಂತೆ ರಂಗಸೃಷ್ಟಿಯ ಉಪಾಧ್ಯರಾದ ಎಂ.ಕೆ.ಹೆಗಡೆ ಮತ್ತು ಶೈಲಜಾ ಭಿಂಗೆ, ಕನ್ನಡಭವನದ ಕಾರ್ಯದರ್ಶಿ ಯ.ರು.ಪಾಟೀಲ ಹಾಗೂ ಎರಡೂ ಸಂಘಟನೆಗಳ ಪದಾಧಿಕಾರಿಗಳು ಮನವಿ ಮಾಡಿದ್ದಾರೆ.

ಕ್ಯಾನ್ಸರ್ ತಪಾಸಣಾ ಶಿಬಿರ

ಯಮಕನಮರಡಿ : ಹಿಂಡಾಲ್ಕೋ,ಇಟಡಿಯನ್ ಕ್ಯಾನ್ಸರ್ ಸೋಸೈಟಿ ಹಾಗೂ ಮಹಿಳಾ ಕಲ್ಯಾಣ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ಕೆಎಲ್ಇ ಸಂಸ್ಥೆಯ ಡಾ.ಸಂಪತ್ ಕುಮಾರ .ಎಸ್ ಶಿವಣಗಿ ಆಸ್ಪತ್ರೆಯ ಸಹಯೋಗದಲ್ಲಿ ಹುಕ್ಕೇರಿ ತಾಲೂಕಿನ ಹಿಡಕಲ್ ಡ್ಯಾಮ್ ಗ್ರಾಮದ ಶಿವಾಲಯ್ ಮಂದಿರದಲ್ಲಿ ಕ್ಯಾನ್ಸರ್ ತಪಾಸಣಾ ಶಿಬಿರ ಜರುಗಿತು.

ತಪಾಸಣಾ ಶಿಬಿರದಲ್ಲಿ ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಪ್ರಾಂತೀಯ ವ್ಯವಸ್ಥಾಪಕರಾದ ಸಂತೇನಿ ದಂಡಿನ ಮಹಿಳಾ ಕಲ್ಯಾಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ವೈಜಯಂತಿ ಚೌಗಲಾ, ಉಪಸ್ಥಿತರಿದ್ದರು.

ಶಿಬಿರದಲ್ಲಿ ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಪ್ರಾಂತೀಯ ವ್ಯವಸ್ಥಾಪಕರಾದ ಸಂತೇನಿ ದಂಡಿನ ಶಿಬಿರಕ್ಕೆ ಆಗಮಿಸಿದ ಜನರಿಗೆ ಕ್ಯಾನ್ಸರ್ ಹೇಗೆ ಬರುತ್ತದೆ, ಕ್ಯಾನ್ಸರ್ ಗುಣ ಲಕ್ಷಣಗಳು, ಕ್ಯಾನ್ಸರ್ ತಡೆಗಟ್ಟಲು ಮುಂಜಾಗ್ರತಾ ಕ್ರಮಗಳು ಹಾಗೂ ಕ್ಯಾನ್ಸರ್ ಬಂದ ನಂತರ ಅದಕ್ಕೆ ಪರಿಹಾರ ಉಪಾಯಗಳನ್ನು ತಿಳಿಸಿದರು

ಕೆ ಎಲ್ ಇ ಆಸ್ಪತ್ರೆಯ ವೈದ್ಯರಾದ ಸ್ನೇಹಲ್ ಹಾಗೂ ನುರಿತ ತಜ್ಞರಿಂದ ಬಾಯಿ, ಸ್ತನ ಹಾಗೂ ಗರ್ಭಕಂಠ ಕ್ಯಾನ್ಸರ್ ತಪಾಸಣೆ ಜರುಗಿತು ಶಿಬಿರದಲ್ಲಿ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಉಪಸ್ಥಿತರಿದ್ದರು. ಸುಮಾರು 109 ಕ್ಕೂ ಹೆಚ್ಚು ಜನರು ಆಗಮಿಸಿ ಆರೋಗ್ಯ ತಪಾಸಣೆಯ ಸದುಪಯೋಗ ಪಡೆದುಕೊಂಡರು.



ಚಿಕ್ಕೋಡಿ: ತಾಲೂಕಿನ ಕೇರೂರ ಗ್ರಾಮದಲ್ಲಿ ಶಾಸಕ ಗಣೇಶ ಹುಕ್ಕೇರಿ ಹಾಗೂ ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಪ್ರಯತ್ನದಿಂದ ಮಂಜೂರಾದ 70 ಲಕ್ಷ ರೂ. ಅನುದಾನದಲ್ಲಿ ಸೋಮವಾರ ವಿವಿಧ ಕಾಮಗಾರಿಗಳಿಗೆ ಕೇರೂರ ಗ್ರಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ ಭೂಮಿಪೂಜೆ ನೆರವೇರಿಸಿದರು. ಗ್ರಾಪಂ ಮಾಜಿ ಅಧ್ಯಕ್ಷ ವಿರೇಂದ್ರ ಪಾಟೀಲ, ಚನಗೌಡ ಪಾಟೀಲ, ವಿಠ್ಠಲ ವಾಳಕೆ, ರವಿ ಪಾಟೀಲ, ಸಹಾಯಕ ಅಭಿಯಂತರ ಮುಕುಂದ ಸಿಂಧೆ, ಗುತ್ತಿಗೆದಾರ ಎಸ್ ಪಿ ಭೋಸಲೆ ಇತರರು ಇದ್ದರು.

ಮಹಾತ್ಮರ ಆದರ್ಶ ರೂಢಿಸಿಕೊಳ್ಳಿ : ಕುಂಬಾರ

ಚಿಕ್ಕೋಡಿ: ದೈಹಿಕ ಮತ್ತು ಮಾನಸಿಕ ಆರೋಗ್ಯ ಗೌರವಾಧಾರಗಳ ಮೂಲಕ ಆದರ್ಶವಾದವನ್ನು ರೂಪಿಸಲು ಸಾಧ್ಯವಿದೆ. ವಿಶ್ವ ಶಾಂತಿಯನ್ನು ಸ್ಥಾಪಿಸುವುದೇ ಇಂದಿನ ಅವಶ್ಯಕತೆಯಾಗಿದೆ ಎಂದು ಚಿಕ್ಕೋಡಿ ಎ ಎ ಪಾಟೀಲ ಮಹಿಳಾ ಮಹಾವಿದ್ಯಾಲಯದ ಉಪನ್ಯಾಸಕಿ ರೋಹಿಣಿ ಕುಂಬಾರ ಹೇಳಿದರು. ನಗರದ ಕೆಎಲ್ಇ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ವಿಶ್ವಶಾಂತಿಗಾಗಿ ಆದರ್ಶವಾದ ವಿಚಾರಗೋಷ್ಠಿಯ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದ ಅವರು, ಜಾಗತಿಕ ಮಟ್ಟದ ತತ್ವಜ್ಞಾನಿ ಪ್ಲೇಟೋ, ಅರಿಸ್ಟಾಟಲ್, ಜಾನ್ ಡ್ಯೂಯಿ, ಭಾರತದ ತತ್ವಜ್ಞಾನಿಗಳಾದ ಶಂಕರಾಚಾರ್ಯ, ರವೀಂದ್ರನಾಥ ಟ್ಯಾಗೋರ್, ಸ್ವಾಮಿ ವಿವೇಕಾನಂದ, ಮಹಾತ್ಮಾ ಗಾಂಧೀಜಿ ಆದರ್ಶಗಳನ್ನು ಹಾಗೂ ವಿಚಾರಧಾರೆಗಳನ್ನು ನಾವು ರೂಢಿಸಿಕೊಳ್ಳಬೇಕು. ವಿಶ್ವದಲ್ಲಿರುವ ಅಂತಾರಾಷ್ಟ್ರೀಯ ಸಂಘಟನೆಗಳು ಜ್ಞಾನಿಗಳ ವಿಚಾರಗಳನ್ನು ಅಳವಡಿಸಿಕೊಂಡು ಜಗತ್ತಿನಲ್ಲಿ ಶಾಂತಿಯನ್ನು ನೆಲೆಸುವಂತೆ ಮಾಡಬಹುದಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನಿಪ್ಪಾಣಿ ಕೆಎಲ್ಇ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಬಿ ಬಿ ಪೊಲೀಸಪಾಟೀಲ ಮಾತನಾಡಿ, ಇಂದಿನ ಯುಗವನ್ನು ರಾಕೆಟ್ ಯುಗ, ವಿಜ್ಞಾನ ಯುಗ ಎಂದು ಕರೆಯುವ ಬದಲಾಗಿ 'ಅತ್ಯವಸರದ ಯುಗ' ಎಂದು ಕರೆಯಬಹುದು. ಜೀವನದ ಮೌಲ್ಯಗಳ ಕುರಿತು ಆಲೋಚಿಸಲು ಪುರುಸೊತ್ತು ಇಲ್ಲದಂತಾಗಿದೆ ಎಂದು ಖೇದ ವ್ಯಕ್ತಪಡಿಸಿದರು.



ಚಿಕ್ಕೋಡಿ: ನಗರದ ಕೆಎಲ್ಇ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯದಲ್ಲಿ ವಿಶ್ವಶಾಂತಿಗಾಗಿ ಆದರ್ಶವಾದ ವಿಚಾರಗೋಷ್ಠಿ ನಡೆಯಿತು. ಉಪನ್ಯಾಸಕರಾದ ಎಂ ಎ ಮಹಾಜನ, ಜೆ ಬಿ ಬಡಚಿ, ಎಂ. ಎಸ್. ವಾರೆಪ್ಪನವರ, ನಿಖಿತಾ ದಡ್ಡನವರ ಸೇರಿದಂತೆ ಮಹಾವಿದ್ಯಾಲಯದ ನೂರಾರು ಜನ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

ಅಧಿಕಾರಿಗಳ ಸಭೆ | ಶಾಸಕ ದುರ್ಯೋಧನ ಐಹೊಳೆ ಸೂಚನೆ

ಟ್ಯಾಂಕರ್ ಮೂಲಕ ನೀರು ಪೂರೈಸಿ

ಚಿಕ್ಕೋಡಿ: ನಾಗರಮುನ್ನೋಳಿ ಹೋಬಳಿ ವ್ಯಾಪ್ತಿಯ ಬಹುತೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಅವಶ್ಯವಿದ್ದಲ್ಲಿ ಕೊಳವೆಬಾವಿ ಕೊರೆಯಿಸಬೇಕು. ಇನ್ನುಳಿದೆಡೆ ಟ್ಯಾಂಕರ್ ಮೂಲಕ ಜನರಿಗೆ ನೀರು ಪೂರೈಸಬೇಕು ಎಂದು ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ಮಿನಿವಿಧಾನಸೌಧದ ಸಭಾಭವನದಲ್ಲಿ ತಾಲ್ಲೂಕಿನನಾಗರಮುನ್ನೋಳಿ ಹೋಬಳಿ ವ್ಯಾಪ್ತಿಯ ಕುಡಿಯುವ ನೀರು, ಮೇವು ಪೂರೈಕೆ ಹಾಗೂ ಹವಾಮಾನ ವೈಪರಿತ್ಯ ಕುರಿತು ಸೋಮವಾರ ಕರೆದ ಅಧಿಕಾರಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಹೋಬಳಿ ವ್ಯಾಪ್ತಿಯ ಜೈನಾಪೂರ ಹಾಗೂ ನಾಗರಮುನ್ನೋಳಿ ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆಗಳನ್ನು ಅಧಿಕಾರಿಗಳು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಬೇಸಿಗೆಯಲ್ಲಿ ಜನ ಜಾನುವಾರುಗಳಿಗೆ ತೊಂದರೆಯಾಗದಂತೆ ನಿಗಾ ವಹಿಸಬೇಕು. ಹೆಸ್ಕಾಂ ಅಧಿಕಾರಿಗಳ ವಿದ್ಯುತ್ ಪರಿವರ್ತಕಗಳ ದಾಸ್ತಾನು ಹೊಂದಬೇಕು ಎಂದರು.

ಕೊಟಬಾಗಿ ಏತ ನೀರಾವರಿ ಯೋಜನೆಯ ಜಾಕವೆಲ್ ರಿಪೇರಿ ಮಾಡಿ ನಾಗರಮುನ್ನೋಳಿ ಹೋಬಳಿ ವ್ಯಾಪ್ತಿಯ ಗ್ರಾಮಗಳಿಗೆ ಕಾಲುವೆ ಮೂಲಕ ನೀರು ಪೂರೈಕೆ ವ್ಯವಸ್ಥೆಯಾಗಬೇಕು. ಅಪೂರ್ಣಗೊಂಡ ಜಲಜೀವನ ಮಿಷನ್ ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ಟ್ಯಾಂಕರ್ ಮೂಲಕ ನೀರು ಪೂರೈಕೆಗೂ ಮೊದಲು ಟ್ಯಾಂಕರ್ ಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಹೋಬಳಿ ವ್ಯಾಪ್ತಿಯಲ್ಲಿ 40 ಶುದ್ಧ ಕುಡಿಯುವ ನೀರಿನ ಘಟಕಗಳಿದ್ದು, ಇವುಗಳಲ್ಲಿ 13 ಘಟಕಗಳು ಸ್ಥಗಿತಗೊಂಡಿವೆ. ಶೀಘ್ರದಲ್ಲಿ ಇವುಗಳನ್ನು ರಿಪೇರಿ ಮಾಡಿ, ಆಯಾ ಗ್ರಾಮ ಪಂಚಾಯತಿಗಳು ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಬೇಕು ಎಂದರು.

ನಾಗರಮುನ್ನೋಳಿ ಹೋಬಳಿ ವ್ಯಾಪ್ತಿಯಲ್ಲಿ ಮಮದಾಪೂರ ಕೆಕೆ. ಮೀರಾಪೂರಹಟ್ಟಿ, ಚನ್ಯಾನದಡ್ಡಿ, ಖಜಗೌನಡನಟ್ಟಿ, ಉಮರಾಣಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಕುಡಿಯುವ ನೀರಿನಸಮಸ್ಯೆ ತಲೆತೋರಿದ್ದು, ಟ್ಯಾಂಕರ್ ಮೂಲಕ ನೀರು ಪೂರೈಕೆ ನೀರು ಪೂರೈಕೆ ಮಾಡಬೇಕಾದ ಅವಶ್ಯಕತೆ ಇದೆ. ಕೆಲವೊಂದು ತೋಟದ ವಸತಿ ಪ್ರದೇಶಗಳಲ್ಲಿಯೂ ನೀರಿನ ಸಮಸ್ಯೆ ತಲೆ ತೋರಿದ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಕುಡಿಯುವ ನೀರು ಪೂರೈಕೆ ಸಮಸ್ಯೆ ನಿವಾರಣೆ ಜವಾಬ್ದಾರಿಯನ್ನು ಆಯಾ ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿಗಳು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಜವಾಬ್ದಾರಿ ಹೊರಬೇಕು ಎಂದು ಉಪವಿಭಾಗಾಧಿಕಾರಿ ಸುಭಾಷ ಸಂಪಗಾವಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸಭೆಯಲ್ಲಿ ತಹಶೀಲ್ದಾರ ರಾಜೇಶ ಬುರ್ಲಿ, ಗ್ರಾಮೀಣ ಕುಡಿಯುವ ನೀರು ಪೂರೈಕೆ ಹಾಗೂ ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರ ಪಾಂಡುರಂಗರಾವ್, ತಾಲ್ಲೂಕು ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯದ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಬಿ ಆರ್ ಜಂಬಗಿ, ತಾಂತ್ರಿಕ ಸಹಾಯಕ ಮಹಾಂತೇಶ ಹಿಂಗ್ಲಜೆ, ನರೇಗಾ ವಿಭಾಗದ ಸಹಾಯಕ ನಿರ್ದೇಶಕ ಶಿವಾನಂದ ಶಿರಗಾಂವೆ ಇದ್ದರು.



> ಕೆಟ್ಟು ಹೋದ ಮೋಟಾರ್ ಪಂಪಸೆಟ್ ಗಳನ್ನು ರಿಪೇರಿ ಮಾಡಿಟ್ಟುಕೊಳ್ಳಬೇಕು. ಬಿಸಿಲ ಬೇಗೆಯನ್ನು ತಡೆಯುವ ಕುರಿತು ಆರೋಗ್ಯ ಇಲಾಖೆಯ ಅಧಿಕಾರಿಗಳು ಸಾರ್ವಜನಿಕರ ಗಮನಕ್ಕೆ ಮಾಹಿತಿ ನೀಡಬೇಕು.
> ■ ಸುಭಾಷ ಸಂಪಗಾವಿ, ಉಪವಿಭಾಗಾಧಿಕಾರಿ

ರಕ್ಷಣಾ ಪಡೆಗಳ ತಾಂತ್ರಿಕ ಸಶಕ್ತೀಕರಣ ಯುವ ಎಂಜಿನಿಯರ್‌ಗಳ ಹೊಣೆ

ಚಿಕ್ಕೋಡಿ: ದೇಶದ ರಕ್ಷಣೆಯ ಹೊಣೆ ಹೊತ್ತ ಸೈನಿಕರ ತ್ಯಾಗ ಬೆಲೆ ಕಟ್ಟಲಾಗದಂತದು. ದೇಶದ ರಕ್ಷಣಾ ಪಡೆಗಳನ್ನು ತಾಂತ್ರಿಕವಾಗಿ ಸಶಕ್ತಗೊಳಿಸುವ ಹೊಣೆಗಾರಿಕೆ ಯುವ ಎಂಜಿನಿಯರುಗಳ ಮೇಲಿದೆ ಎಂದು ಬೆಂಗಳೂರಿನ ಹೆಚ್ಎಎಲ್ ನಿರ್ವಾಹಕ (ವಿನ್ಯಾಸ) ಮಹಾದೇವ ನಾಗರಾಳ ಹೇಳಿದರು.

ಪಟ್ಟಣದ ಕೆಎಲ್ಇ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಏರೋಸ್ಪೇಸ್ ಉತ್ಪನ್ನ ವಿನ್ಯಾಸ ಮತ್ತು ಅಭಿವೃದ್ಧಿಯಲ್ಲಿ ಯುವ ಎಂಜಿನಿಯರ್ ಪಾತ್ರ ವಿಷಯ ಕುರಿತು ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಉದ್ದೇಶಿಸಿ ಮಾತನಾಡಿದ ಅವರು, ಹಿಂದುಸ್ತಾನ ಏರೊನಾಟಿಕಲ್ ಲಿಮಿಟೆಡ್ ಸಂಸ್ಥೆಯು ದೇಶದ ರಕ್ಷಣಾ ಪಡೆಗಳಿಗೆ ಯುದ್ಧ ವಿಮಾನಗಳನ್ನು ನೀಡುತ್ತಿದೆ. ಯಾವುದೇ ವಸ್ತುವಿನ ವಿನ್ಯಾಸದಲ್ಲಿ ಕ್ಯಾಡ್, ಕ್ಯಾಟಿಯಾ, ಸಾಲಿಡ್ ಎಡ್ಜ್ ಸಾಫ್ಟವೇರ್ ಜ್ಞಾನ ಮುಖ್ಯ. ವಿಮಾನಗಳ ಇಂಜಿನ್ ತಯಾರಿಕೆಯಲ್ಲಿ ಭಾರತ ದೇಶದಲ್ಲಿ ಸಾಕಷ್ಟು ಅವಕಾಶಗಳಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕೆಎಲ್ಇ ಎಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ದರ್ಶನ ಬಿಳ್ಳೂರ ಮಾತನಾಡಿ, ದೇಶದ ಪ್ರತಿಷ್ಠಿತ ಸಂಸ್ಥೆಗಳಾದ ಡಿಆರ್‌ಡಿಓ, ಎಚ್ಎಎಲ್ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಬೇಕೆಂದರೆ ಮೂಲ ಪರಿಕಲ್ಪನೆಗಳನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕು. ಅವುಗಳ ಅಳವಡಿಕೆಯ ಜ್ಞಾನ ಹೊಂದಿರಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ವೀರಣ್ಣಾ ಮೋದಿ, ಪ್ರಸಾದ ರಾಯನ್ನವರ, ಸಂಗೀತಾ ವಾಟೆಗಾಂವಕರ, ಕುಮಾರ ಚೌಗಲಾ, ಸುನೀಲ ಹೆಬ್ಬಾಳೆ, ಸಂಜಯ ಪೂಜಾರಿ, ಸಚಿನ ಮೆಕ್ಕಳಕಿ, ಚೇತನಕುಮಾರ ಯಾದಗುಡೆ, ಸಾನಿಕಾ ಕಾಮೇರಿ, ಭೂಮಿಕಾ ಪುರೋಹಿತ, ಪ್ರದೀಪ ಹೊದ್ಲೂರ, ಸಂಜಯ ಅಂಕಲಿ ಇತರರು ಇದ್ದರು.



ಸತತ ಪ್ರಯತ್ನದಿಂದ ಸಾಧನೆ: ಪೋತದಾರ

ಕಾಗವಾಡ: ಸಾಧನೆಗೆ ಬಡತನ, ಜಾತಿ, ಅಡ್ಡಿಯಲ್ಲ, ಸಾಧಿಸುವ ಛಲ, ಸತತ ಪ್ರಯತ್ನವಿದ್ದರೆ ಸಾಧನೆ ಸುಲಭವಾಗುತ್ತದೆ ಎಂದು ಸಂಸ್ಥೆಯ ಕಾರ್ಯದರ್ಶಿ ರಾಜೇಂದ್ರ ಪೋತದಾರ ಹೇಳಿದರು.

ಅವರು ತಾಲೂಕಿನ ಐನಾಪುರ ಪಟ್ಟಣದಲ್ಲಿ ಸೋಮವಾರ ಸಂಸ್ಥೆಯ ಸಭಾಭವನದಲ್ಲಿ ಕೆ ಆರ್ ಇ ಎಸ್ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ 2025-26ಸಾಲಿನ ಎಸೆಸೆಲ್ಸಿ ಹಾಗೂ ದ್ವಿತೀಯ ಪಿಯುಸಿಪ್ರತಿಭಾವಂತವಿದ್ಯಾರ್ಥಿಗಳಿಗೆಪ್ರತಿಭಾ ಪುರಸ್ಕಾರ ಮತ್ತು ಸತ್ಕಾರ ಸಮಾರಂಭವನ್ನು ಶ್ರೀ ಶಾರದಾದೇವಿ ಭಾವಚಿತ್ರಕ್ಕೆ ಪೂಜೆ ಸಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ನಿರ್ದಿಷ್ಟವಾದ ಗುರಿಯನ್ನು ಇಟ್ಟುಕೊಂಡು ವಿದ್ಯಾಭ್ಯಾಸ ಮಾಡಬೇಕು. ಶಿಸ್ತು, ಸಮಯ ಪಾಲನೆ, ಕಠಿಣ ಪರಿಶ್ರಮ, ನಿರಂತರ ಅಧ್ಯಯನದಿಂದ ಹೆಚ್ಚಿನ ಜ್ಞಾನವನ್ನು ಸಂಗ್ರಹಿಸುವ ಮೂಲಕ ನಿಮ್ಮ ಗುರಿ ಮುಟ್ಟಲು ಸಾಧ್ಯವಿದೆ ಎಂದರು.

ಈ ಸಂದರ್ಭದಲ್ಲಿ 2025-26ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೈಸ್ಕೂಲ ವಿಭಾಗದಿಂದ ಐನಾಪುರ ಕ್ಲಸ್ಟರ್ ಮಟ್ಟದಲ್ಲಿ ಪ್ರಥಮ ಹಾಗೂ ಕಾಗವಾಡ ವಲಯಯಕ್ಕೆ ದ್ವಿತೀಯ ಸ್ಥಾನ ಪಡೆದ ಐಶ್ವರ್ಯ ಉಮರಾಣಿ, ಶ್ರೇಯಾ ಪಾಟೀಲ, ಪ್ರಿಯಾ ಕದ್ದು ಸೃಷ್ಟಿ ಖೋತ, ಅಂಕಿತಾ ನರೋಟೆ, ವೈಷ್ಣವಿ ಕಾಗಲಿ, ಆಂಗ್ಲ ಮಾಧ್ಯಮ ಶಾಲೆಯ ಪ್ರತಿಕ್ಷಾ ನಾಮದಾರ, ಅಶ್ವಿನಿ ಭಿರಡಿ, ಸಿದ್ದಾಂತ ಸತ್ತಿಕರ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಲಾ ವಿಭಾಗದ ಜೋತಿ ಸಂಜಯ ಮಾಂಗ, ಗಾಯತ್ರಿ ಅಪ್ಪಾಸಾಬ ಮಾದರ, ಸೌಮ್ಯಾ ತಾನಾಜಿ ಸಾಳುಂಕೆ, ವಾಣಿಜ್ಯ ವಿಭಾಗದಲ್ಲಿ ಸವಿತಾ ರಾಮು ಹಾಲಾರೊಟ್ಟಿ , ಅರ್ಚನಾ ಪ್ರಕಾಶ ಬ್ರಿಷ್ಠಾಣಿ, ವರ್ಷಾ ಶಿವಾಜಿ ಪವಾರ ಅವರನ್ನು ಸನ್ಮಾನಿಸಲಾಯಿತು.

ಸಂಸ್ಥೆಯ ಉಪಾಧ್ಯಕ್ಷ ಸಂಜು ಭಿರಡಿ ಅಧ್ಯಕ್ಷತೆ , ವಹಿಸಿದರು. ಉಪ ಪ್ರಾಚಾರ್ಯ ಎ ಎಂ ಹುಲ್ಲೆನ್ನವರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಸಂಸ್ಥೆ ನಿರ್ದೇಶಕರಾದ ,ತಮ್ಮಣ್ಣಾ ಪಾರಶೆಟ್ಟಿ, ಪ್ರವೀಣ ಕುಲಕರ್ಣಿ,ಉದಯ ನಿಡಗುಂದಿ, ಮಯೂರ ಪಟವರ್ಧನ,ಎ.ಎಸ್ ಮಗದುಮ್ಮ ಎಸ್. ಎಂ ಸೋಂದಕರ,ವಿಶ್ವನಾಥ ನಾಮದಾರ, ಹಾಗೂ,ಸಂಸ್ಥೆ ಯ ಎಲ್ಲ ಸದಸ್ಯರು ಶಿಕ್ಷಕರು ವಿದ್ಯಾರ್ಥಿಗಳು ಪಾಲಕರು ಇತರರು ಇದರು. ಉಪ್ರಾಚಾರ್ಯರಾದ ಎ.ಎಂ.ಹುಲ್ಲೆನ್ನವರ ಸ್ವಾಗತಿಸಿದರು. ಶಿಕ್ಷಕರಾದ. ಎಸ್ ಎಸ್ ಚೌಗಲಾನಿರೂಪಿಸಿದರು.ಪ್ರಾಚಾರ್ಯರಾದ ಡಾ.ಬಿ.ಪ್ರೇಮಾನಂದ ವಂದಿಸಿದರು.



ಅಂಬೇಡ್ಕರ್ ಸಮುದಾಯ ಭವನ ಅಭಿವೃದ್ಧಿಗೆ ಬದ್ಧ: ತಮ್ಮಣ್ಣವರ

ಮುಗಳಖೋಡ: ಪಟ್ಟಣದ 5 ಹಾಗೂ 6ನೆಯ ವಾರ್ಡಿನ ಪರಿಶಿಷ್ಟ ಜಾತಿ ಜನರಿಗೆ ಅನುಕೂಲವಾಗುವಂತೆ ಅಂಬೇಡ್ಕರ್ ಸಮುದಾಯ ಭವನಕ್ಕೆ 75 ಲಕ್ಷ ಹಾಗೂ ಸ್ಮಶಾನ ಅಭಿವೃದ್ಧಿಗೆ 10 ಲಕ್ಷ, ಕೆರೆ ಅಭಿವೃದ್ಧಿ ಪಡಿಸಲು ಹಂತ ಹಂತವಾಗಿ ಅನುದಾನ ಬಿಡುಗಡೆಗೊಳಿಸಲಾಗುವುದೆಂದು ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಹೇಳಿದರು.

ಅವರು ರವಿವಾರ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತ್ಯುತ್ಸವ ಅಂಗವಾಗಿ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ ಭವ್ಯ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು. ಶಾಸಕ ಮಹೇಂದ್ರ ತಮ್ಮಣ್ಣವರ ಅವರನ್ನು ಸಮುದಾಯದ ಮುಖಂಡರು ಸತ್ಕರಿಸಿದರು. ಅಂಬೇಡ್ಕರರ ಭವನದಿಂದ ವಿವಿಧ ಓಣಿಗಳಲ್ಲಿ ರಥದಲ್ಲಿ ಬುದ್ಧ ಹಾಗೂ ಡಾ. ಬಿ ಆರ್ ಅಂಬೇಡ್ಕರ ಮೂರ್ತಿ ಹಾಗೂ ಭಾವಚಿತ್ರದ ಭವ್ಯ ಮೆರವಣಿಗೆಯು ಜರುಗಿತು.

ಜಿಪಂ ಮಾಜಿ ಸದಸ್ಯ ಡಾ. ಸಿ ಬಿ ಕುಲಗೋಡ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಂಡು ಸುಶಿಕ್ಷಿತರಾಗಿ ಉತ್ತಮ ಸಮಾಜ ನಿರ್ಮಾಣಮಾಡಬೇಕು ಎಂದರು . ಪುರಸಭೆ ಸದಸ್ಯರಾದ ಪರಪ್ಪಗೌಡ ಖೇತಗೌಡರ , ರಮೇಶ ಯಡವನ್ನವರ, ಮಹಾವೀರ ಕುರಾಡೆ, ರಾವಸಾಬ ಗೌಲತ್ತಿನವರ, ಹಣಮಸಾಬಗೌಡ ನಾಯಿಕ , ಆನಂದ ತುಳಜಪ್ಪಗೋಳ, ಕರೆಪ್ಪ ಮಂಟೂರ, ಮುಪ್ಪಯ್ಯ ಹಿರೇಮಠ , ವರ್ಧಮಾನ ಶಿರಹಟ್ಟಿ, ರಾಮಚಂದ್ರ ಕುರಾಡೆ ,ಅಶೋಕ ಸಣ್ಣತಿಪ್ಪಗೋಳ , ನಿರ್ಮಲ ನಡುವಿನಕೇರಿ, ಸುಖದೇವ ಕರಿಭೀಮಗೋಳ, ಸಚಿನ ಹುಣಸಿಕಟ್ಟಿ, ಆನಂದ ಯರಡೆತ್ತಿ, ಚೇತನ ನಡುವಿನಕೇರಿ, ಭೀಮರಾವ ಕರಿಭೀಮಗೋಳ, ಕೆಂಚಪ್ಪ ಹಳಿಂಗಳಿ ಚಂದ್ರಕಾಂತ ಗೌಲತ್ತಿನವರ ಸೇರಿದಂತೆ ದಲಿತ ಮುಖಂಡರು ಹಾಗೂ ಇತರರು ಇದ್ದರು.



ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ

ಬೆಳಗಾವಿ: ಬೆಳಗಾವಿ ಆಗ್ರೋ ಟೆಡರ್ಸ್ ಅಸೋಸೊಯೇಷನ್ ಸಂಘಟನೆ ನೇತೃತ್ವದಲ್ಲಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸೋಮವಾರ ಕೃಷಿ ಇಲಾಖೆಯಿಂದ ಬೃಹತ್ ಪ್ರತಿಭಟನೆ ನಡೆಸಿದರು.

ಆಗ್ರೋ ಟೇಡರ್ಸ್ ಅಸೋಯೇಷನ್ ನೇತೃತ್ವದಲ್ಲಿ ಸೋಮವಾರ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಭಾರತ್ ಬಂದ್‌ಗೆ ಕರೆ ನೀಡಲಾಗಿತ್ತು. ಅದರ ಪ್ರಕಾರ ಬೆಳಗಾವಿಯಲ್ಲಿ ಕೃಷಿ ಇಲಾಖೆ ಕಚೇರಿ ಎದುರು ಆಗ್ರೋ ಟೇಡರ್ಸ್ ಅಸೋಯೇಷನ್ ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆಯನ್ನು ನಡೆಸಿದರು.

ಯೂರಿಯಾ ರಸಗೊಬ್ಬರದ ಜೊತೆ ಟ್ಯಾಗಿಂಗ್ ಬಂದ್ ಮಾಡಬೇಕು, ಯೂರಿಯಾ ಮತ್ತು ಇನ್ನಿತರ ರಸಗೊಬ್ಬರಗಳನ್ನು ಎಫ್ ಓ ಎಲ್ ಮೂಲಕ ವಿತರಿಸಬೇಕು. ಕೃಷಿ ಪರಿಕರಗಳು ಮಾದರಿ ಕಳಪೆ ಮಟ್ಟದ್ದು ಕಂಡುಬಂದಲ್ಲಿ ಉತ್ಪಾದಕರನ್ನು ಹೊಣೆಗಾರರನ್ನಾಗಿ ಮಾಡಬೇಕು. ಕೃಷಿ ಪರಿಕರ ಮಾರಾಟಗಾರರನ್ನು ಕೇವಲ ಸಾಕ್ಷಿಯನ್ನಾಗಿ ಮಾಡಬೇಕು. ಎಲ್ಲಾ ರಾಸಾಯನಿಕ ಗೊಬ್ಬರದ ಮಾರಾಟದ ಮೇಲೆ ಲಾಭಾಂಶ 8% ಪ್ರತಿಶತ ನೀಡಬೇಕು. ಬೀಜದ ಸಾತಿ-ಪೋರ್ಟಲ ಮಾರಾಟ ಸ್ನೇಹಿಯನ್ನಾಗಿ ಮಾಡಬೇಕು. ರೈತರಿಗೆ ರಸಗೊಬ್ಬರ ವಿತರಣೆ ಮಾಡಲು ಎಫ್ ಐ ಡಿ ಕೆ ಕಿಸಾನ ತಂತ್ರಾಂಶದ ಮೂಲಕ ವಿತರಿಸುವದಕ್ಕೆ ಕಾಲಾವಕಾಶ ನೀಡಬೇಕು. ಅಧಿಕಾರಿಗಳು ತಪಾಸಣೆಗಾಗಿ ಅಂಗಡಿಗಳಿಗೆ ಭೇಟಿ ಕೊಟ್ಟ ನಂತರ ಮಾಧ್ಯಮಗಳಿಗೆ ಹೇಳಿಕೆಗಳನ್ನು ಕೊಡುವಾಗ ದಾಳಿ ಎನ್ನುವ ಪದದ ಬದಲು ತಪಾಸಣೆ ಮತ್ತು ಅಂಗಡಿಗಳ ಫೋಟೋ ಬಳಸಬಾರದು ಎಂದು ಪ್ರತಿಭಟನೆಯಲ್ಲಿ ಆಗ್ರಹಿಸಿದರು. ಈ ವೇಳೆ ಆಗ್ರೋ ಟೇಡರ್ಸ್ ಅಸೋಸೊಯೇಷನ್ ಸಂಘಟನೆಯ ಮಲ್ಲಿಕಾರ್ಜುನ ಬೆಳ್ಳೇರಿ, ಗುರುಪುತ್ರ ಬಳ್ಳಿ, ಸಿ ಆರ್ ಪಾಟೀಲ ಸೇರಿದಂತೆ ಸಂಘಟನೆಯ ವಿವಿಧ ಕಾರ್ಯಕರ್ತರು ಪಾಲ್ಗೊಂಡಿದ್ದರು.



ಕಾಂಗ್ರೆಸ್ ಮಿತ್ರಪಕ್ಷಗಳ ವಿರುದ್ಧ ಆಕ್ರೋಶ

ಯರಗಟ್ಟಿ: ನಾರೀಶಕ್ತಿ ಪೋರಣದಿಂದ ನಾರಿ ಶಕ್ತಿ ವಂದನ್ ಅಧಿನಿಯಮ (ಮಹಿಳಾ ಮೀಸಲಾತಿ ಮಸೂದೆ) ಜಾರಿಯಾಗದಂತೆ ತಡೆದ ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳ ವಿರುದ್ಧ ಬಿಜೆಪಿ ಮಹಿಳಾ ಮೋರ್ಚಾ ಹಾಗೂ ಬಿಜೆಪಿ ಮಂಡಳಿದಿಂದ ಜನಾಕ್ರೋಶ ಜಾಥಾ ನಡೆಸಿದರು.

ಶೇ 33 ರಷ್ಟು ಮಹಿಳಾ ಮೀಸಲಾತಿ ಬೇಕೆ, ಬೇಕು, ನಾರಿ ಶಕ್ತಿ ದೇಶದ ಶಕ್ತಿ ಸೇರಿದಂತೆ ಹಲವು ಘೋಷಣೆಗಳ ಫಲಕ ಹಿಡಿದ ಮಹಿಳೆಯರು, ಅದರಲ್ಲೂ ಅಲ್ಪ ಸಂಖ್ಯಾತರು, ತೃತೀಯ ಲಿಂಗಿಗಳು,ಸಮಾಜದವಿವಿಧಕ್ಷೇತ್ರಗಳಲ್ಲಿನಮಹಿಳೆಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪಟ್ಟಣದ ಮಹಾಂತ ದುರದುಂಡೇಶ್ವರ ಮಠದದಿಂದ ಆರಂಭಗೊಂಡ ಜಾಥಾ ಸಂಗೊಳ್ಳಿ ರಾಯಣ್ಣ ಸರ್ಕಲ್ ಗೆ ಆಗಮಿಸಿ ಮಾನವ ಸರಪಳಿ ನಿರ್ಮಿಸಿ ನಾರಿಯರು ತಮ್ಮ ಶಕ್ತಿ ಪ್ರದರ್ಶನ ಮಾಡಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷ ಡಾ.ನಯನಾ ಭಸ್ಮೆ ಪ್ರಧಾನಿ ನರೇಂದ್ರ ಮೋದಿ ಅವರು ಈ ದೇಶದ ಮಹಿಳೆಯರಿಗೆ ರಾಜಕೀಯವಾಗಿ ಹೆಚ್ಚಿನ ಶಕ್ತಿ ತರಲು ನಡೆಸುದ ಪ್ರಯತ್ನಕ್ಕೆ ವಿರೋಧ ಪಕ್ಷಗಳು ವಿರೋದ ಮಾಡಿರುವುದನ್ನು ನಾವು ಖಂಡಿಸುತ್ತೇವೆ ಎಂದರು.

ಬಿಜೆಪಿ ಮಹಿಳಾ ಅಧಕ್ಷ ಜ್ಯೋತಿ ಅಣ್ಣಿಗೇರಿ ಮಾತನಾಡಿ, ದೇಶದ ರಾಷ್ಟ್ರಪತಿ, ಹಣಕಾಸು ಸಚಿವೆ, ಅಷ್ಟೇ ಏಕೆ ಆಪರೇಷನ್ ಸಿಂದೂರವನ್ನು ಮುನ್ನಡೆಸಿದವರು ಮಹಿಳಾ ಶಕ್ತಿಯೇ ಹೀಗಿರುವಾಗ ಪ್ರತಿಪಕ್ಷಗಳು ನಾರಿ ಶಕ್ತಿ ರಾಜಕೀಯವಾಗಿ ಮೀಸಲಾತಿ ಪಡೆಯುವುದನ್ನು ವಿರೋಧಿಸುವುದು ಸರಿಯಲ್ಲ ಎಂದರು.

ಮಾಜಿ ಮಂಡಳ ಅಧ್ಯಕ್ಷ ಈರಣ್ಣಾ ಚಂದರಗಿ ಅವರು ಮಾತನಾಡಿ, ಮಹಿಳಾ ಮೀಸಲಾತಿಯನ್ನು ಮಹಿಳೆಯರ ಹಕ್ಕಾಗಿ ನೀಡಿ, ಈಗಾಗಲೇ ಸಂಸತ್ ನಲ್ಲಿ ಮಸೂದೆ ಅನುಮೋದನೆಗೊಂಡಿದೆ ಅದನ್ನು ಕ್ಷೇತ್ರ ಮರುವಿಂಗಡಣೆ ಮೂಲಕ ಜಾರಿಗೆ ತನ್ನಿ ಎಂದರು.

ಪ್ರತಿಭಟನೆಯಲ್ಲಿ ಬಿಜೆಪಿ ಮಹಿಳಾ ಮೋರ್ಚಾದ ಅನುರಾಧ ಬೆಟಗೇರಿ, ಶೇಖವ್ವ ನಾವಿ, ಮೈತ್ರಾ ಹೊಂಗಲ, ಯಶೋದಾ ಕಾಶಪ್ಪನವರ, ಲಕ್ಷ್ಮೀ ಪಾಟೀಲ, ಕಸ್ತೂರಿ ಹೊಸೂರ, ಮಾಜಿ ಮಂಡಳ ಅಧ್ಯಕ್ಷ ಈರಣ್ಣಾ ಚಂದರಗಿ, ಮಂಡಳ ಉಪಾಧ್ಯಕ್ಷ ಸಂಜೀವಕುಮಾರ ನವಲಗುಂದ, ಮಾಜಿ ಸೈನಿಕ ಕುಮಾರಹಿರೇಮಠ,ಪ್ರಕಾಶನರಿ,ಮಂಡಳಪ್ರಧಾನ ಕಾರ್ಯದರ್ಶಿ ಮಹಾದೇವ ಮುರಗೋಡ, ಯುವ ಮೋರ್ಚಾ ಅಧ್ಯಕ್ಷ ಕೃಷ್ಣಮೂರ್ತಿ ತೊರಗಲ್, ವೆಂಕಟೇಶ ದೇವರಡ್ಡಿ, ಶೇಖಪ್ಪ ಹರಳಿ, ಮಲ್ಲೇಶ್ವರ ಸುಳೇಬಾವಿ, ಆನಂದ ಬಾಗೋಡಿ ಮೊದಲಾದವರು ಪಾಲ್ಗೊಂಡಿದ್ದರು.



ತೊಂಡಿಕಟ್ಟಿ ಗ್ರಾಮದೇವಿ ಜಾತ್ರಾ ಮಹೋತ್ಸವ ಏ.29ರಿಂದ

ರಾಮದುರ್ಗ: ತಾಲೂಕಿನ ಸುಕ್ಷೇತ್ರ ತೊಂಡಿಕಟ್ಟಿ ಗ್ರಾಮದ ಗ್ರಾಮದೇವಿ ಜಾತ್ರಾ ಮಹೋತ್ಸವ ಏ.29 ರಿಂದ ಮೇ 7ರವರೆಗೆ 9 ದಿನಗಳ ಕಾಲ ಸ್ಪರ್ಧೆಗಳೊಂದಿಗೆ ವಿವಿಧ ಧಾರ್ಮಿಕ ಕಾರ್ಯಕ್ರಮ ಮಠಾಧೀಶರ ಸಾನ್ನಿಧ್ಯದಲ್ಲಿ ಜರುಗಲಿದೆ ಎಂದು ಜಾತ್ರಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಏ.29 ರಂದು ಪ್ರಾತಃ ಕಾಲದಲ್ಲಿ ಗಣಪತಿ ಪೂಜೆ, ಸಕಲ ವಾದ್ಯಮೇಳದೊಂದಿಗೆ ಗ್ರಾಮದಲ್ಲಿ ದೇವಿಯ ಮೆರವಣಿಗೆ ಜರುಗುವುದು. ಸಂಜೆ ಚೌಡಕಿ ಪದ ಜರುಗುವವು.

ಏ.30ರಂದು ಬೆಳಗ್ಗೆ ಶ್ರೀಗಳ ಸಮ್ಮುಖದಲ್ಲಿ ಎಚ್.ವಿ.ಪಾಟೀಲ ಕುಟುಂಬದಿಂದ ಹಾಗೂ ದೈವದ ವತಿಯಿಂದ ಗ್ರಾಮದೇವಿಗೆ ಉಡಿ ತುಂಬುವುದು. ಸಂಜೆ 6ಕ್ಕೆ ಹೊಸಕೋಟಿ ಸತ್ಯ ಸಾಯಿ ಸಮಿತಿಯಿಂದ ಸಾಯಿ ಭಜನಾ, ರಾತ್ರಿ 10 ಕ್ಕೆ ಶ್ರೀಕೃಷ್ಣ ಪಾರಿಜಾತ ನಾಟಕ ಜರುಗುವುದು.

ಮೇ 1ರಂದು ಬೆಳಿಗ್ಗೆ ದೇವಿಗೆ ಹಾಗೂ ಗ್ರಾಮದ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ, ರಾತ್ರಿ 10ಕ್ಕೆ ಗಂಡು ಭೂಮಿಯಲ್ಲಿ ಪುಂಡ ಹುಲಿ ಸಾಮಾಜಿಕ ನಾಟಕ ಜರುಗಲಿದೆ.ಮೇ 2ರಂದು ದೇವಿಗೆ ಉಡಿ ತುಂಬುವುದು. ರಾತ್ರಿ 7.30ಕ್ಕೆ ವಿವಿಧ ಮಠಾಧೀಶರಸಾನ್ನಿಧ್ಯದಲ್ಲಿಮತ್ತು ಜನಪ್ರತಿನಿದಿಗಳ ಉಪಸ್ಥಿತಿಯಲ್ಲಿ ಪ್ರವಚನ ಜರುಗುವುದು.

ಮೇ 3ರಂದು ಗ್ರಾಮಸ್ಥರಿಂದ ದೇವಿಗೆ ಉಡಿ ತುಂಬುವುದು. ರಾತ್ರಿ 7.30ಕ್ಕೆ ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ ಮತ್ತು ಜನಪ್ರತಿನಿದಿಗಳ ಉಪಸ್ಥಿತಿಯಲ್ಲಿ ಪ್ರವಚನ ಜರುಗುವುದು. ಮೇ 4ರಂದು ದೇವಿಗೆ ಉಡಿ ತುಂಬುವುದು. ರಾತ್ರಿ 10.30ಕ್ಕೆ ರಸಮಂಜರಿ ಜರುಗುವುದು.

ಮೇ 5ರಂದು ಬೆಳಗ್ಗೆ ಲಕ್ಷ್ಮೀ ದೇವಿಗೆ ಹೋಮ, ಗ್ರಾಮಸ್ಥರಿಂದ ಉಡಿ ತುಂಬುವುದು. ಸಂಜೆ 6ಕ್ಕೆ ಸಾಯಿ ಭಜನಾ ಮತ್ತು ರಾತ್ರಿ ಸಂಗ್ಯಾ ಬಾಳ್ಯಾ ನಾಟಕ ಜರುಗುವುದು. ಮೇ 6ರಂದು ದುರ್ಗಾಪರಮೇಶ್ವರಿ ದೇವಿಗೆ ದುರ್ಗಾ ಹೋಮ ಹಾಗೂ ಗ್ರಾಮಸ್ಥರಿಂದ ದೇವಿಗೆ ಉಡಿ ತುಂಬುವುದು, ರಾತ್ರಿ 10.30ಕ್ಕೆ ತಾಯಿಯ ಋಣ ಮಣ್ಣಿನ ಗುಣ ನಾಟಕ ಪ್ರದರ್ಶನ. ಮೇ 7ರಂದು ಅರಳಿಮರದಮ್ಮ ದೇವಿಗೆ ನಾರಾಯಣಿ ಹೋಮ, ಗ್ರಾಮಸ್ಥರಿಂದ ದೇವಿಗೆ ಉಡಿ ತುಂಬುವುದು ನಂತರ ಹೊನ್ನಾಟದೊಂದಿಗೆ ಗ್ರಾಮದಲ್ಲಿ ಗ್ರಾಮದೇವಿ ಮೆರವಣಿಗೆ , ಸಂಜೆ ದೇವಿಯು ಸಿಮಿಗೆ ಹೋಗುವಳು. ಮೇ 8ರಂದು ಚಂಡಿಕಾ ಹೋಮ ನಂತರ ಗ್ರಾಮದೇವಿ ಗದ್ದುಗೆಗೊಳಿಸುವ ಕಾರ್ಯಕ್ರಮ ಜರುಗುವುದು.

ವಿವಿಧ ಸ್ಪರ್ಧೆಗಳು: ತೊಂಡಿಕಟ್ಟಿ ಗ್ರಾಮದೇವಿ ಜಾತ್ರಾಮಹೋತ್ಸವ ನಿಮಿತ್ತ ಏ.30ರಂದು ಬೆಳಗ್ಗೆ 11ಕ್ಕೆ ನಾಲ್ಕು ಗಾಲಿಯ ಟೇಲರ್ ಜಗ್ಗುವ ಸ್ಪರ್ಧೆ ಜರುಗುವುದು. ಮೇ 2ರಂದು ಬೆಳಗ್ಗೆ 10ಕ್ಕೆ ರಾಜ್ಯ ಮಟ್ಟದ ತೆರಬಂಡಿ ವೈಭವ ಸ್ಪರ್ಧೆ ಜರುಗುವುದು. ಮೇ 5ರಂದು ಬೆಳಗ್ಗೆ 10ಕ್ಕೆ ರಾಜ್ಯ ಮಟ್ಟದ ಟಗರಿನ ಕಾಳಗ ಸ್ಪರ್ಧೆ ಜರುಗುವುದು.



ಕಿರುಸುದ್ದಿ



ಲೋಕಾಪುರ: ಪಟ್ಟಣದಲ್ಲಿ ನಡೆಯುತ್ತಿರುವ ಜನಗಣತಿ ಕಾರ್ಯದ ಮಾಹಿತಿಯನ್ನು ಜಿಲ್ಲಾಧಿಕಾರಿ ಸಂಗಪ್ಪ ಎಂ. ಪಡೆದುಕೊಂಡರು. ತಹಶೀಲ್ದಾರ್ ಡಾ.ಚಿಕ್ಕಪ್ಪ ನಾಯ್ಕ, ಕಂದಾಯ ನಿರೀಕ್ಷಕ ಸತೀಶ ಬೇವೂರ, ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಸಾಬಣ್ಣಾ ಪೂಜಾರ, ಗಣತಿದಾರರಾದ ಪ್ರದೀಪ ಗಂಗಣ್ಣವರ ಇತರರು ಇದ್ದರು.

ಸುಮಿತ್ರಾ ಪತ್ತಾರಗೆ ಕಾಳಿಕಾ ಸೇವಾ ಭೂಷಣ ಪ್ರಶಸ್ತಿ

ಗುಳೇದಗುಡ್ಡ: ಪಟ್ಟಣದ ಸಂಗೀತ ಶಿಕ್ಷಕಿ ಸುಮಿತ್ರಾ ಅಖಂಡೇಶ್ವರ ಪತ್ತಾರ ಅವರ ಸಂಗೀತ ಸಾಧನೆ ಪರಿಗಣಿಸಿ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆಯಿಂದ ಇತ್ತೀಚೆಗೆ ನಡೆದ ಕಾಳಿಕಾದೇವಿ ಜಾತ್ರಾ ಮಹೋತ್ಸವದ ನೂತನ ರಥೋತ್ಸವ ಹಾಗೂ ಧಾರ್ಮಿಕ ಸಮಾರಂಭದಲ್ಲಿ ರಾಜ್ಯ ಮಟ್ಟದ ಕಾಳಿಕಾ ಸೇವಾ ಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ. ಅಫಜಲಪುರ ಮಠದ ಪ್ರಣವ ನಿರಂಜನ ಸ್ವಾಮೀಜಿ, ತಡವಲಗಾ ಆಶ್ರಮದ ವಿಜಯಾನಂದ ಮಹಾರಾಜರು, ಅಡಳಖೇಡ ಮಠದ ಪ್ರಭುಲಿಂಗೇಶ್ವರ ಸ್ವಾಮೀಜಿ, ಹಿಕ್ಕನಗುತ್ತಿ ಲಿಂಗಾಯತ ಮಠದ ಪ್ರಭುಲಿಂಗ ಸ್ವಾಮಿಜಿ, ಇಂಡಿ ಬ್ರಹ್ಮಕುಮಾರಿ ಈಶ್ವರ ವಿಶ್ವವಿದ್ಯಾಲಯದ ಬಿ.ಕೆ.ಯಮುನಾ ಅಕ್ಕನವರು, ಮೌನೇಶ್ವರ ದೇವಸ್ಥಾನದ ಅಧ್ಯಕ್ಷ ಭೀಮರಾಯ ಬಡಿಗೇರ, ದೇವಸ್ಥಾನದ ಟ್ರಸ್ಟ ಕಮೀಟಿ ಅಧ್ಯಕ್ಷ ಶಿವಪ್ಪ ಪರಪ್ಪ ಬಡಿಗೇರ ಮತ್ತಿತರು ಇದ್ದರು.



ಸನ್ಮಾನ ಕಾರ್ಯಕ್ರಮ ಇಂದು

ಲೋಕಾಪುರ: ಸಮೀಪದ ಕಿಲ್ಲಾಹೊಸಕೋಟಿ ಗ್ರಾಮದಲ್ಲಿ ನಡೆಯುತ್ತಿರುವ ಶತಮಾನೋತ್ಸವ ಸಂಭ್ರಮದಲ್ಲಿ ಗ್ರಾಮೀಣ ಬ್ಯಾಂಕ್ ಸಿಬ್ಬಂದಿಗಳಿಗೆ ಏ.28ರಂದು ಬೆಳಗ್ಗೆ 12.30ಕ್ಕೆ ಮಂಗಳವಾರ ಸನ್ಮಾನ ಹಮ್ಮಿಕೊಳ್ಳಲಾಗಿದೆ. ಪಾಂಡುರಂಗ ದೇವಸ್ಥಾನ ಟ್ರಸ್ಟ ಕಮೀಟಿ ಮತ್ತು ವಿಶ್ವಭಾರತಿ ಯುವಕ ಮಂಡಳ ಹಾಗೂ ಗ್ರಾಮಸ್ಥರಿಂದ 1985ರಿಂದ ಇಲ್ಲಿಯವರೆಗೆ ಕರ್ನಾಟಕ ಗ್ರಾಮೀಣ ಬ್ಯಾಂಕಿನಲ್ಲಿ ಶಾಖಾಧಿಕಾರಿಗಳಾಗಿ ಹಾಗೂ ಸಿಬ್ಬಂದಿಗಳಾಗಿ ಸೇವೆ ಸಲ್ಲಿಸಿ ಇತ್ತೀಚೆಗೆ ನಿವೃತ್ತಿಯಾಗಿರುವ ಸುಮಾರು 20ಕ್ಕೂ ಹೆಚ್ಚು ಜನರನ್ನು ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ ಕಮೀಟಿಯವರು ತಿಳಿಸಿದ್ದಾರೆ.

ಮೇ 24ರಂದು ಅಖಿಲ ಭಾರತ ವೀರಶೈವ ಮಹಾಸಭಾ ಚುನಾವಣೆ

ಬೀಳಗಿ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಬೀಳಗಿ ತಾಲೂಕು ಘಟಕಕ್ಕೆ ಚುನಾವಣೆ ಘೋಷಣೆಯಾಗಿದೆ ಎಂದು ಸಹಾಯಕ ಚುನಾವಣಾ ಅಧಿಕಾರಿ, ನಿವೃತ್ತ ಮುಖ್ಯ ಶಿಕ್ಷಕ ವಿ.ಎಸ್.ಕುಂಬಾರ ತಿಳಿಸಿದ್ದಾರೆ. ತಾಲೂಕು ಘಟಕದ ಅಧ್ಯಕ್ಷರು ಹಾಗೂ ಕಾರ್ಯ ನಿರ್ವಾಹಕ ಸಮಿತಿ ಸದಸ್ಯರ ಆಯ್ಕೆಗಾಗಿ ಚುನಾವಣೆ ನಡೆಯಲಿದ್ದು, ಏ.29ರಂದು ಬೆಳಗ್ಗೆ 10.30ರಿಂದ ನಾಮಪತ್ರ ಸ್ವೀಕರಿಸಲಾಗುವುದು. ನಾಮಪತ್ರ ಸಲ್ಲಿಸಲು ಮೇ 6ರಂದು ಮಧ್ಯಾಹ್ನ 3 ಗಂಟೆಯ ವರೆಗೆ ಅವಕಾಶ ಇದೆ. ನಾಮಪತ್ರ ಪರಿಶೀಲನೆ ಮೇ 7 ರಂದು ನಡೆಯಲಿದೆ. ನಾಮಪತ್ರ ಹಿಂದಕ್ಕೆ ಪಡೆಯಲು ಮೇ 10ರಂದು ಮಧ್ಯಾಹ್ನ 3 ಗಂಟೆಯ ವರೆಗೆ ಕೊನೆಯ ದಿನವಾಗಿದ್ದು, ಮೇ 24ರಂದು ಬೆಳಗ್ಗೆ 8 ರಿಂದ ಸಂಜೆ 4ರ ವರೆಗೆ ಮತದಾನ ನಡೆಯಲಿದೆ. ಮತದಾನದ ಬಳಿಕ ಮತ ಎಣಿಕೆ ಕಾರ್ಯ ಜರುಗಲಿದೆ. ಹೆಚ್ಚಿನ ಮಾಹಿತಿಗಾಗಿ ಮಾತೃಭೂಮಿ ಶಿಕ್ಷಣ ಸಂಸ್ಥೆಯ ಬಾಪೂಜಿ ಪ್ರಾಥಮಿಕ ಶಾಲೆಯಲ್ಲಿ ತೆಗೆಯಲಾಗಿರುವ ಸಹಾಯಕ ಚುನಾವಣಾಧಿಕಾರಿಗಳ ಕಾರ್ಯಾಲಯವನ್ನು ಸಂಪರ್ಕಿಸಬಹುದೆಂದು ಎಂದು ತಿಳಿಸಿದ್ದಾರೆ.

ಅಪಘಾತ: ಚಾಲಕ ಪಾರು

ಜಮಖಂಡಿ: ನಗರದ ಟಿಪ್ಪು ಸುಲ್ತಾನ್ ವೃತ್ತಕ್ಕೆ ಭಾರಿ ವಾಹನ ಢಿಕ್ಕಿ ಹೊಡೆದ ಪರಿಣಾಮ ಸಂಪೂರ್ಣವಾಗಿ ಹಾಳಾಗಿದೆ. ವೇಗವಾಗಿ ಬರುತ್ತಿದ್ದ 18 ಚಕ್ರದ ಟ್ರಕ್ ಚಾಲಕನ ನಿಯಂತ್ರಣ ತಪ್ಪಿ ವೃತ್ತಕ್ಕೆ ನೇರವಾಗಿ ಡಿಕ್ಕಿ ಹೊಡೆದಿದೆ. ಟ್ರಕ್ ಚಾಲಕ ವಾಹನದ ಒಳಗಡೆ ಸಿಲುಕಿಕೊಂಡಿದ್ದು, ಸ್ಥಳೀಯರು ಹಾಗೂ ಪೊಲೀಸರು ತಕ್ಷಣ ರಕ್ಷಣಾ ಕಾರ್ಯಾಚರಣೆ ನಡೆಸಿ ಚಾಲಕನನ್ನು ಸುರಕ್ಷಿತವಾಗಿ ಹೊರ ತಗೆದಿದ್ದಾರೆ. ಬಳಿಕ ಗಾಯಗೊಂಡ ಚಾಲಕನನ್ನು ತಕ್ಷಣ ಜಮಖಂಡಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮಾಹಿತಿ ಲಭ್ಯವಾಗಿದೆ.



ಬಾದಾಮಿ: ತಾಲೂಕಿನ ಚಿಕ್ಕಮುಚ್ಚಳಗುಡ್ಡ ಗ್ರಾಮದ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿನಿ ಸಂಪ್ರೀತಾ ಗಾರವಾಡ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 618 ಅಂಕಗಳನ್ನು (98.88)ತಾಲೂಕಿಗೆ ದ್ವಿತೀಯ ಸ್ಥಾನ ಪಡೆದ ಹಿನ್ನೆಲೆ ಅವರ ಮನೆಗೆ ತೆರಳಿ ವಿದ್ಯಾರ್ಥಿಯನ್ನು ಸನ್ಮಾನಿಸಲಾಯಿತು. ಬಿಇಒ ಕೇಶವ್ ಪೆಟ್ಲೂರ, ಮುಖ್ಯೋಪಾಧ್ಯಾಯ ಶಂಕರ್ ರಾವ್ ಕುಲಕರ್ಣಿ, ದೈಹಿಕ ಶಿಕ್ಷಣ ಪರಿವೀಕ್ಷಕ ಬಿ.ಎಚ್.ಹಳಗೇರಿ, ಶಿಕ್ಷಣ ಸಂಯೋಜಕ ಬಿ.ಕೆ. ಚಿಮಲ್, ಎಸ್‌ಡಿಎಂಸಿ ಅಧ್ಯಕ್ಷ ಶಿವಯ್ಯ ಹಿರೇಮಠ, ಶ್ರೀಕಾಂತ ಚಿಮಲ, ಬಸವರಾಜ ಸಿಂದಗಿಮಠ, ಸಿದ್ದು ಕೆ., ಬಸವರಾಜ ಚಿಕ್ಕಣ್ಣವರ, ರಮೇಶ ಕತ್ತಿಕೈ, ಸಂತೋಷ ಪಟ್ಟಣಶೆಟ್ಟಿ, ಶಿವು ಗಾರವಾಡ, ಉಜ್ವಲ್ ಬಸರಿ, ಎಸ್.ಎಸ್.ಹಾವರಗಿ, ಪ್ರಭು ಎಚ್ ಇದ್ದರು.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಸನ್ಮಾನ

ಲೋಕಾಪುರ: ಪಟ್ಟಣದ ದಾನೇಶ್ವರಿ ಶಿಕ್ಷಣ ಸಂಸ್ಥೆಯ ಅಂಗ ಸಂಸ್ಥೆಗಳಾದ ಎಕ್ಸಲಂಟ್ ಪಬ್ಲಿಕ್ ಸ್ಕೂಲ್ ಹಾಗೂ ಸಿ.ಎಂ.ಪಂಚಕಟ್ಟಿಮಠ ಸ್ವತಂತ್ರ ಪದವಿ ಪೂರ್ವ ಕಾಲೇಜು, ಲೋಕಾಪುರ ಸಹಯೋಗದಲ್ಲಿ 2025-26ನೇ ಶೈಕ್ಷಣಿಕ ಸಾಲಿನಲ್ಲಿ ಅತ್ಯುತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಎಕ್ಸಲಂಟ್ ಪಬ್ಲಿಕ್ ಸ್ಕೂಲ್‌ನ ಬನಶ್ರೀ ಯರಗಣಿ 94.2%, ಅಂಕಗಳೊಂದಿಗೆ ಪ್ರಥಮ ಸ್ಥಾನ, ಶ್ರದ್ಧಾ ಪತ್ತೇಪುರ 92.6% ಅಂಕಗಳೊಂದಿಗೆ ದ್ವಿತೀಯ ಸ್ಥಾನ ಹಾಗೂ ಕೀರ್ತಿ ದಾಸನಗೌಡ್ರ 92.2% ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದರು. ಸಿ.ಎಂ.ಪಂಚಕಟ್ಟಿಮಠ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಕಲಾ ವಿಭಾಗದಲ್ಲಿ ಕವಿತಾ ವಿಭೂತಿ 97% ಅಂಕಗಳೊಂದಿಗೆ ಪ್ರಥಮ ಸ್ಥಾನ, ಅನ್ನಪೂರ್ಣ ವಿಭೂತಿ 95.16% ದ್ವಿತೀಯ ಸ್ಥಾನ ಹಾಗೂ ಪೂಜಾ ಅಗಸದವರ 94.83% ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದರು. ವಾಣಿಜ್ಯ ವಿಭಾಗದಲ್ಲಿ ಅಪೂರ್ವ ಪಾಟೀಲ 96%, ಅಂಕಗಳೊಂದಿಗೆ ಪ್ರಥಮ ಸ್ಥಾನ, ಸ್ಫೂರ್ತಿ ಮುದ್ದಾಪುರ 94.5%, ದ್ವಿತೀಯ ಸ್ಥಾನ ಹಾಗೂ ಅರುಣ ಸಿಂಗಾರಗೊಪ್ಪ 93.83% ತೃತೀಯ ಸ್ಥಾನ ಪಡೆದರು.ವಿಜ್ಞಾನ ವಿಭಾಗದಲ್ಲಿ ಅಬೂಬಕರ್ ತುಂಬರಮಟ್ಟಿ 96% ಅಂಕಗಳೊಂದಿಗೆ ಪ್ರಥಮ ಸ್ಥಾನ, ಸುಪ್ರಿತಾ ನ್ಯಾಮಗೌಡ್ರ 92.16% ದ್ವಿತೀಯ ಸ್ಥಾನ ಹಾಗೂ ಪ್ರತಿಭಾ ಕಡಕೋಳ 90.66% ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳನ್ನು ಸಂಸ್ಥೆಯ ಉಪಾಧ್ಯಕ್ಷ ಮಲ್ಲಿಕಾರ್ಜುನ ಆರ್.ಪಂಚಕಟ್ಟಿಮಠ ಸನ್ಮಾನಿಸಿ ಗೌರವಿಸಿ ಪ್ರಶಂಶಿಸಿದರು.ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು, ಪ್ರಾಂಶುಪಾಲ ಟಿ.ವಿ.ಹಳ್ಳಿ ಹಾಗೂ ಮದನ್ ದೇಶಪಾಂಡೆ, ಉಪನ್ಯಾಸಕರು ಮತ್ತು ಸಿಬ್ಬಂದಿ ವಿದ್ಯಾರ್ಥಿಗಳಿಗೆ ಅಭಿನಂದಿಸಿದರು.



ಲೋಕಾಪುರ: ಪಟ್ಟಣದ ದಾನೇಶ್ವರಿ ಶಿಕ್ಷಣ ಸಂಸ್ಥೆಯ ಅಂಗ ಸಂಸ್ಥೆಗಳಾದ ಎಕ್ಸಲಂಟ್ ಪಬ್ಲಿಕ್ ಸ್ಕೂಲ್ ಹಾಗೂ ಸಿ.ಎಂ.ಪಂಚಕಟ್ಟಿಮಠ ಸ್ವತಂತ್ರ ಪದವಿ ಪೂರ್ವ ಕಾಲೇಜು, ಲೋಕಾಪುರ ಸಹಯೋಗದಲ್ಲಿ 2025-26ನೇ ಶೈಕ್ಷಣಿಕ ಸಾಲಿನಲ್ಲಿ ಅತ್ಯುತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಉಪಾಧ್ಯಕ್ಷ ಮಲ್ಲಿಕಾರ್ಜುನ ಆರ್.ಪಂಚಕಟ್ಟಿಮಠ ಸನ್ಮಾನಿಸಿ ಗೌರವಿಸಿ ಪ್ರಶಂಶಿಸಿದರು.ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು, ಪ್ರಾಂಶುಪಾಲ ಟಿ.ವಿ.ಹಳ್ಳಿ ಹಾಗೂ ಮದನ್ ದೇಶಪಾಂಡೆ, ಉಪನ್ಯಾಸಕರು ಇದ್ದರು.

ದೇವರ ಕುದುರೆಯ ಆಕರ್ಷಕ ಕುಣಿತ | ಭಕ್ತರಿಂದ ಹರ್ಷೋದ್ಗಾರ

ತುಳಸಿಗಿರೀಶನ ಓಕುಳಿ ಸಂಪನ್ನ

ಕಲಾದಗಿ: ಸಮೀಪದ ಐತಿಹಾಸಿಕ ಗ್ರಾಮವಾದ ತುಳಸಿಗಿರಿಯಲ್ಲಿ ಕಳೆದ ಮೂರು ದಿನಗಳಿಂದ ನಡೆಯುತ್ತಿದ್ದ ಮಾರುತೇಶ್ವರನ ಓಕುಳಿ ಸೋಮವಾರ ಸಂಜೆ ಸಂಭ್ರಮೋಲ್ಲಾಸದಿಂದ ಸಂಪನ್ನಗೊಂಡಿತು.

ಮೂರು ದಿನಗಳಿಂದ ನಡೆದ ಓಕಳಿ ಉತ್ಸವ ಸಾಂಪ್ರದಾಯಕವಾಗಿ ಬಾಬುದಾರರ ಸಮ್ಮುಖದಲ್ಲಿ ದೇವಾಲಯದ ಪೂಜಾರರು ಸೋಮವಾರ ಸಂಜೆ ಹೊಂಡದ ಪೂಜೆಯನ್ನು ನೆರವೇರಿಸುತ್ತಿದ್ದಂತೆ ಕಾತುರದಿಂದ ಕಾಯುತ್ತಿದ್ದ ಭಕ್ತರು ಓಡಿಬಂದು ಪುಟ್ಟ ಹೊಂಡದಲ್ಲಿ ಜಿಗಿದು ಓಕುಳಿಯಾಡುತ್ತಿದ್ದರು. ಸಾವಿರಾರು ಸಂಖ್ಯೆಯಲ್ಲಿ ನೆರದಿದ್ದ ಭಕ್ತಸಮೂಹ ಹರ್ಷೋದ್ಗಾರ ಮಾಡುತ್ತಾ ಗೋವಿಂದ ಗೋವಿಂದ ಎನ್ನುತ್ತಾ ಸಂಭ್ರಮಿಸಿದರು. ನೀರಬೂದಿಹಾಳ ಗ್ರಾಮದ ದೇಸಾಯಿ ಮನೆತನದ ಪ್ರಮೂಖರು, ದೇವಸ್ಥಾನದ ಅರ್ಚಕರು, ಬಾಬುದಾರರು ಮತ್ತು ಗ್ರಾಮದ ಪಕ್ಕದೂರುಗಳ ಹಿರಿಯರು ಓಕಳಿಗೆ ಸಾಕ್ಷಿಯಾದರು.

ನೀರಬೂದಿಹಾಳ ದೇಸಾಯರ ಮನೆತನದ ದೇವರ ಕುದುರೆ ಪಂಚಕಲ್ಯಾಣಿಯ ಆಕರ್ಷಕ ಕುಣಿತ ನೆರದ ಜನಸ್ತೋಮದ ಗಮನಸೆಳೆಯಿತು.





ಆಕರ್ಷಕ ಬಣ್ಣದ ಕವಚ ತೊಟ್ಟು ಕಾಲಿಗೆ ಗೆಜ್ಜೆ ಹಾಕಿ ಪಲ್ಲಕ್ಕಿ ಮಹೋತ್ಸವದ ಮುಂದೆ ಮೆರವಣಿಗೆಯಲ್ಲಿ, ದೇವಸ್ಥಾನದಲ್ಲಿ ನಡೆದ ಪೂಜೆಯಲ್ಲಿ ಸಂಪ್ರದಾಯದಂತೆ ಪಾಲ್ಗೊಂಡಿದ್ದ ಮಾರುತೇಶ್ವರ ದೇವರ ಕುದುರೆ ಭಾರಿ ಜನಸ್ತೋಮದ ನಡುವೆ ಹುಮ್ಮಸ್ಸಿನಿಂದ ಹೆಜ್ಜೆ ಹಾಕಿ ವಾದ್ಯಕ್ಕೆ ತಕ್ಕಂತೆ ಕುಣಿದಿದ್ದು ಎಲ್ಲರ ಗಮನಸೆಳೆಯಿತು. ಮೂರು ದಿನಗಳಕಾಲ ನಡೆದ ಓಕುಳಿಯ ಎಲ್ಲಾ ವ್ಯವಸ್ಥೆಗಳನ್ನು ಊರ ಹಿರಿಯರು ಮುಂಚೂಣಿಯಲ್ಲಿದ್ದುಕೊಂಡು ಯುವಕರಿಗೆ ಮಾರ್ಗದರ್ಶನ ಮಾಡುತ್ತಾ ಇಡೀ ಊರ ಮಂದಿ ಓಕಳಿಯ ವ್ಯವಸ್ಥಿತ ಆಚರಣೆಗೆ ಟೊಂಕಕಟ್ಟಿ ನಿಂತು ಓಕಳಿಯನ್ನು ಸಂಭ್ರಮದಿಂದ ಸಂಪನ್ನಗೊಳಿಸಲಾಯಿತು.

ಸರ್ವತೋಮುಖ ಶಿಕ್ಷಣದಿಂದ ಆದರ್ಶ ವ್ಯಕ್ತಿತ್ವ

ಬಾಗಲಕೋಟೆ: ತಂತ್ರಜ್ಞಾನದ ಯುಗದಲ್ಲಿರುವ ಪದವಿ ಯುವ ಸಮೂಹವು ನಮ್ಮ ದೇಶದ ಸಂಪತ್ತಾಗಿದ್ದು, ಸದೃಢ ದೇಶ ನಿರ್ಮಾಣ ಮಾಡಲು ಸದೃಢ ಯುವಪಡೆ ನಿರ್ಮಾಣವಾಗಬೇಕು. ಸರ್ವತೋಮುಖ ಶಿಕ್ಷಣದಿಂದ ಆದರ್ಶ ವ್ಯಕ್ತಿತ್ವ ಸಾಧ್ಯವಿದೆ ಎಂದು ಲೆಫ್ಟಿನೆಂಟ್ ಎಸ್.ಬಿ.ಚಳಗೇರಿ ಹೇಳಿದರು.

ನವನಗರದಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ನಡೆದ 2025-26 ನೇ ಸಾಲಿನ ಕ್ರೀಡಾ, ಸಾಂಸ್ಕೃತಿಕ, ರೆಡ್ ಕ್ರಾಸ್, ಎನ್.ಸಿ.ಸಿ, ಎನ್.ಎಸ್.ಎಸ್, ಸ್ಕೌಟ್ಸ್-ಗೈಡ್ಸ್ ಹಾಗೂ ಇತರೆ ಚಟುವಟಿಕೆಗಳ ಸಮಾರೋಪ ಹಾಗೂ ಬಿಎ, ಬಿ.ಕಾಂ, ಬಿಎಸ್ಸಿ, ಬಿಸಿಎ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದಲ್ಲಿ ಮಾತನಾಡಿದರು. ಪದವಿ ವಿದ್ಯಾರ್ಥಿಗಳ ತಮ್ಮ ಜೀವನದಲ್ಲಿ ಶಿಸ್ತು, ಪ್ರಾಮಾಣಿಕತೆ, ಉತ್ತಮ ನಡೆನುಡಿ, ಅನುಸರಿಸಿಕೊಂಡು ಸಮಾಜದಲ್ಲಿರುವ ಗುರು ಹಿರಿಯರಿಗೆ ತಂದೆ ತಾಯಿಯವರಿಗೆ ಗೌರವ ತರುವಂತ ವ್ಯಕ್ತಿತ್ವ ಕಟ್ಟಿಕೊಂಡು ಸಮಾಜದಲ್ಲಿ ಆದರ್ಶ ನಾಗರಿಕರ ಬದುಕು ಕಟ್ಟಿಕೊಳ್ಳಿರಿ ಎಂದರು.

ಸಿಡಿಸಿ ಸದಸ್ಯ ಟಿ.ಎಲ್.ಗಂಗೂರ ಮಾತನಾಡಿ, ಸರ್ಕಾರಿ ಕಾಲೇಜಿನಲ್ಲಿ ಅತ್ಯುತ್ತಮ ಭೋಧಕ ಬೋಧಕೇತರ ಸಿಬ್ಬಂದಿ ಇದೆ. ಪ್ರಾಚಾರ್ಯ ಡಾ.ಅರುಣಕುಮಾರ ಗಾಳಿಯವರು ಗುಣಮಟ್ಟದ ಶಿಕ್ಷಣದ ನೀಡುವುದರ ಜೊತೆಗೆ ವಿದ್ಯಾರ್ಥಿಗಳ ಉತ್ತಮ ಬದುಕು ಕಟ್ಟಿಕೊಳ್ಳಲು ಬೇಕಾಗಿರುವ ಅಮೂಲ್ಯವಾದ ವಿಚಾರಗಳನ್ನು ನಿತ್ಯ ಕಾಲೇಜಿನ ಪ್ರಾರ್ಥನೆಯ ಸಮಯದಲ್ಲಿ ತಿಳಿಹೇಳುತ್ತಿರುವುದು ಶ್ಲಾಘನೀಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ಅರುಣಕುಮಾರ ಗಾಳಿ ಮಾತನಾಡಿ, ನಮ್ಮ ಮಹಾವಿದ್ಯಾಲಯದಲ್ಲಿ ನಮ್ಮ ಕಾಲೇಜಿನ ಸಾವಿರಾರು ವಿದ್ಯಾರ್ಥಿಗಳಿಗೆ ಮೂಲಭೂತ ಸೌಲಭ್ಯ ಒದಗಿಸಿದ್ದೇವೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಸುಮಾರು 30 ಕ್ರೀಡಾಪಟುಗಳು ವಿಶ್ವವಿದ್ಯಾಲಯದ ಬ್ಲ್ಯೂ ಆಗಿ ಆಯ್ಕೆಯಾಗಿದ್ದಾರೆ ಸೇರಿದಂತೆ ವಿವಿಧ ರಂಗಗಳಲ್ಲಿ ವಿದ್ಯಾರ್ಥಿಗಳು ಕಾಲೇಜಿನ ಕೀರ್ತಿ ಬೆಳಗಿಸಿಸದ್ದಾರೆ ಎಂದರು. ಸಾಂಸ್ಕೃತಿಕ ವಿಭಾಗದ ಸಂಚಾಲಕ ಡಾ.ಸುಮಂಗಲಾ ಮೇಟಿ, ಪ್ರೊ. ಶಿವಶಂಕರ, ಡಾ.ಚಂದ್ರಶೇಖರ ಕಾಳನ್ನವರ, ಪ್ರೊ.ಸಂಪತ್ತ ಲಮಾಣಿ ಕಾವೇರಿ ಹಿರೇಮಠ ಇದ್ದರು.





ಬಾಗಲಕೋಟೆ: ಬಾಗಲಕೋಟೆ ತಾಲೂಕಿನ ರಾಂಪೂರದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ ಸನ್ಮಾನಿಸಿ ಅಭಿನಂದನೆ ಸಲ್ಲಿಸಿದರು. ತಹಶೀಲ್ದಾರ್ ವಾಸುದೇವ ಸ್ವಾಮಿ ಸೇರಿದಂತೆ ಇತರರು ಇದ್ದಾರೆ.

ಜೀವನದಲ್ಲಿ ಶಿಕ್ಷಣವೆಂಬ ಅವಕಾಶ ಕಲ್ಪಿಸಿ

ಕಲಾದಗಿ: ನಮ್ಮ ಜೀವನದಲ್ಲಿ ದಾರಿಗಳು ನೂರಾದರೂ ನಾವುಗಳು ಶಿಕ್ಷಣವೆಂಬ ಬೆಳಕಿನ ಕಡೆಗೆ ಸಾಗಬೇಕಾಗಿದ್ದು ಅತೀ ಮುಖ್ಯ. ಮಕ್ಕಳ ಭವಿಷ್ಯದಲ್ಲಿ ಬೆಳ್ಳಿ ರೇಖೆ ಪಡೆಯಬೇಕಾದಲ್ಲಿ ಶಿಕ್ಷಣವೆಂಬ ಅವಕಾಶವನ್ನು ನಾವುಗಳು ಕಲ್ಪಿಸಬೇಕು ಎಂದು ಖ್ಯಾತ ಶಿಕ್ಷಣ ತಜ್ಞ ಎಸ್.ಆರ್. ಮನಹಳ್ಳಿ ಹೇಳಿದರು.

ಗ್ರಾಮದ ಗುರುಲಿಂಗೇಶ್ವರ ಶಾಲೆಯಲ್ಲಿ ರವಿವಾರದಂದು ನಡೆದ 1997-98ನೇ ಸಾಲಿನ ಹಳೇ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯದ ಸಮಯದಲ್ಲಿ ಭಾರತದ ಸಾಕ್ಷರತಾ ಪ್ರಮಾಣ ಕೇವಲ 16ರಷ್ಟಿತ್ತು ಆವಾಗ ಸಂಘ ಸಂಸ್ಥೆಗಳು ಶಿಕ್ಷಣಕ್ಕೆ ಒತ್ತು ಒಟ್ಟು ಶಾಲೆಗಳನ್ನು ತೆರೆದಿದ್ದರಿಂದ ನಾವು ನೀವೆಲ್ಲ ಶಿಕ್ಷಣವಂತರಾಗಿದ್ದೇವೆ. ಸಮಾಜದಿಂದ ನಾವು ಏನಾದರೂ ಪಡೆದುಕೊಳ್ಳುವುದಕ್ಕಿಂತ ಮೊದಲು ಸಮಾಜಕ್ಕೆ ನಾವೇನು ಕೊಟ್ಟಿದ್ದೇವೆ ಎಂಬುವುದನ್ನು ಮೊದಲು ಅರಿಯಬೇಕು. ಸಮಾಜಕ್ಕೆ ಸದಾ ಒಳಿತಾಗುವ ಕಾರ್ಯಗಳನ್ನೇ ಮಾಡಿ ಆದರ್ಶ ವ್ಯಕ್ತಿಗಳಾಗಿ ಬಾಳಬೇಕು. ಕಾರಂತರ ಮಾತಿನಂತೆ ಆರ್ಥಿಕ ಉನ್ನತಿಗೆ ಎರುತ್ತಿರುವ ನಾವು ನೈತಿಕ ಅಧಃಪತನಕ್ಕೆ ಇಳಿಯುತ್ತಿದ್ದೇವೆ ಎಂದು ಹೇಳಿದರು.

ಮುಖ್ಯೋಪಾಧ್ಯಾಯ ಎಸ್.ವಿ.ಲಮಾಣಿ ಮಾತನಾಡಿ, ಗುರು ಹಾಗೂ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿದಾಗ ಮಾತ್ರ ಗುರು ಶಿಷ್ಯರಲ್ಲಿ ಭಾಂಧವ್ಯ ವೃದ್ಧಿಯಾಗುತ್ತದೆ ಗುರು ಶಿಷ್ಯರ ನಡುವಿನ ಪ್ರೀತಿ ವಿಶ್ವಾಸ ಗೌರವವೇ ಇಂದು ನಡೆಯುತ್ತಿರುವ ಗುರುವಂದನಾ ಕಾರ್ಯಕ್ರಮ ಗುರುಶಿಷ್ಯರ ಸಮಾಗಮಕ್ಕೆ ಮೂಲ ಕಾರಣ ಎಂದು ಹೇಳಿದರು.

ಗುರುಲಿಂಗೇಶ್ವರ ಶಾಲೆಯ 1997-98ನೇ ಸಾಲಿನ ಹಳೇ ವಿದ್ಯಾರ್ಥಿಗಳು ಅಕ್ಷರ ಕಲಿಸಿದ ಗುರುಗಳನ್ನು ಸನ್ಮಾನಿಸಿ ಗೌರವಿಸಿ ಸವಿನೆನಪಿನ ಕಾಣಿಕೆಗಳನ್ನು ನೀಡಿದರು. ಹಿರಿಯ ಶಿಕ್ಷಕರಾದ ಎಸ್.ಎನ್.ಹೂಗಾರ, ಎಂ.ಬಿ.ಹೂಗಾರ, ಬಿ.ಎ.ಬಾಗವಾನ, ಎಸ್.ಬಿ.ಹೊಸಮಠ, ಎಫ್.ಎ.ಶಿರೋಳಕರ, ಎಲ್.ಆರ್.ಗುದುಗೆನವರ, ಎಂ.ಆರ್. ಘಾಟೆ, ಎಚ್.ಎನ್.ನಾಯನೇಗಲಿ, ಬಿ.ಎಸ್.ಹೂಗಾರ, ಹಿರಿಯ ಪತ್ರಕರ್ತ ದ.ರಾ.ಪುರೋಹಿತ ಇದ್ದರು.



ಎಸ್ಸೆಸ್ಸೆಲ್ಸಿ ಪರೀಕ್ಷೆ: ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

ಇಳಕಲ್: ನಗರದ ಪ್ರತಿಷ್ಠಿತ ಎಸಿಓ ಸಂಸ್ಥೆಯಲ್ಲಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಗೈದು ಶಾಲೆಗೆ ಪ್ರಥಮ, ದ್ವಿತೀಯ ಮತ್ತು ತೃತಿಯ ಸ್ಥಾನಪಡೆದ ವಿದ್ಯಾರ್ಥಿಗಳಿಗೆ ಗೌರವಿಸಿ ಸತ್ಕರಿಸಲಾಯಿತು.

ಶಾಲೆಯು ಶೇಕಡಾ 98% ಫಲಿತಾಂಶ ಪಡೆದಿದ್ದಾರೆ. ಕನ್ನಡ ಮಾಧ್ಯಮದಲ್ಲಿ ಸ್ವಪ್ನಾ ಬುದಾರಪುರ 607 ಅಂಕ(ಪ್ರಥಮ) ಅನನ್ಯ ನೀಲಪ್ಪಗೋಳ 594 ಅಂಕ (ದ್ವಿತೀಯ) ಶ್ವೇತಾ ಜುಮ್ಮಾಪೂರ 552 ಅಂಕ (ತೃತೀಯ) ಸ್ಥಾನಪಡೆದಿದ್ದಾರೆ. ಆಂಗ್ಲ ಮಾಧ್ಯಮ ದಲ್ಲಿ ಹರ್ಷಿತಗೌಡ ಕೋಟಿ 603 ಅಂಕ (ಪ್ರಥಮ) ಮಹೇಶ ತಳವಾರ 602 ಅಂಕ (ದ್ವಿತೀಯ) ನಿವೇದಿತಾ ಧೋತ್ರೆ ಹಾಗೂ ವಹೀಯಾ ಓತಗೇರಿ ಇರ್ವರೂ 592 ಅಂಕ (ತೃತೀಯ) ಸ್ಥಾನ ಪಡೆದು ಶಾಲೆಗೆ ಮತ್ತು ಸಂಸ್ಥೆಗೆ ಕೀರ್ತಿ ತಂದಿದ್ದಾರೆ.ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷ ವಿಜಯಕುಮಾರ ಹಂಚಾಟೆ, ಉಪಾಧ್ಯಕ್ಷ ಬಿ.ಎಂ.ಮುದಗಲ್ಲ ಕಾರ್ಯದರ್ಶಿ ಎಚ್.ಎಚ್.ದಿವಟೆ ಹಾಗು ಎಲ್ಲ ವಿಭಾಗದ ಚೇರಮನ್ನರು, ಆಡಳಿತ ಮಂಡಳಿಯ ಸದಸ್ಯರು , ಮುಖ್ಯ ಗುರುಗಳು, ಶಿಕ್ಷಕರು ಸನ್ಮಾನಿಸಲಾಯಿತು. ಸಿ.ಎಂ.ನಾಯ್ಕ ನಿರೂಪಿಸಿದರು. ಭಾಗ್ಯಶ್ರೀ ಸಜ್ಜಿ ವಂದಿಸಿದರು.



ವಿದ್ಯಾರ್ಥಿನಿ ಹಿರೇಮನಿಗೆ ಸನ್ಮಾನ




ಬೀಳಗಿ: ತಾಲೂಕಿನ ಅರಕೇರಿ ಗ್ರಾಮದ ಮಲ್ಲವ್ವ ಮಲ್ಲಪ್ಪ ಸಾವಕಾರ ಸರ್ಕಾರಿ ಪ್ರೌಢ ಶಾಲೆ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿನಿ ಗಿರಿಜಾ ಹಿರೇಮನಿ ಶಾಲೆಗೆ ಪ್ರಥಮ ಸ್ಥಾನ ಪಡೆದಿರುವದಕ್ಕಾಗಿ ವಿದ್ಯಾರ್ಥಿನಿ ಮನೆಗೆ ಮುಖ್ಯೋಪಾಧ್ಯಾಯ ರಾಮಚಂದ್ರ ಕಟ್ಟಿ ಮತ್ತು ಸಿಬ್ಬಂದಿ ತೆರಳಿ ಸನ್ಮಾನಿಸಿ ಗೌರವಿಸಿದರು.

ಶಿಕ್ಷಕರಾದ ಕೆ.ಪಿ.ಗಾಣಗೇರ, ಕೆ.ಟಿ.ದೊಡ್ಯಾಳ, ಸಂತೋಷ ಪವಾರ, ಹನಮವ್ವ ಕೋಟಿ, ಗೀತಾ ಪಾಟೀಲ, ಲಕ್ಷ್ಮೀ ಕೆಂಚಣ್ಣವರ, ಹಿರಗಪ್ಪ ಹಿರೇಮನಿ, ಮರಗವ್ವ ಹಿರೇಮನಿ, ಈರಪ್ಪ ಹಿರೇಮನಿ ಮತ್ತು ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

ಪೂರ್ಣಿಮಾಗೆ ಪಿಎಚ್‌ಡಿ ಪದವಿ

ರಬಕವಿ-ಬನಹಟ್ಟಿ: ಕರ್ನಾಟಕ ವಿಶ್ವವಿದ್ಯಾಲಯದ ಗಾಂಧಿ ಭವನದಲ್ಲಿ ಆಯೋಜಿಸಲಾದ 75ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಬನಹಟ್ಟಿಯ ಪೂರ್ಣಿಮಾ ಕೆ. ನಾಯ್ಕ ಅವರಿಗೆ ಪಿಎಚ್‌ಡಿ ಪ್ರದಾನ ಮಾಡಲಾಯಿತು. ರಾಜ್ಯಪಾಲರು ಡಾ.ಪೂರ್ಣಿಮಾ ಕೆ. ನಾಯ್ಕ ಅವರಿಗೆ ಪಿಎಚ್‌ಡಿ ಪದವಿ ನೀಡಿ ಗೌರವಿಸಿದರು. ಪ್ರಸ್ತುತ ಬೆಳಗಾವಿಯ ಸರ್ಕಾರಿ ಚಿಂತಾಮಣಿರಾವ ಪಿಯು ಕಾಲೇಜಿನಲ್ಲಿ ಭೂಗೋಳಶಾಸ್ತ್ರ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಪೂರ್ಣಿಮಾ ಇವರು ತಮ್ಮ ಸಂಶೋಧನಾ ಕಾರ್ಯವನ್ನು ಡಾ. ಎಲ್. ಎಸ್. ನಾಯಕ್, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ಕರ್ನಾಟಕ ಸೈನ್ಸ್ ಕಾಲೇಜು, ಧಾರವಾಡ ಅವರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ.ವಿಶ್ವವಿದ್ಯಾಲಯದ ಕುಲಪತಿಗಳು, ಪ್ರಾಧ್ಯಾಪಕರು ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದರು. ಅವರ ಸಾಧನೆಗೆ ಕುಟುಂಬಸ್ಥರು, ಸ್ನೇಹಿತರು ಹಾಗೂ ಸಹೋದ್ಯೋಗಿಗಳು ಹರ್ಷವ್ಯಕ್ತಪಡಿಸಿದ್ದಾರೆ.



ಭಗವಂತನಿಗೆ ಪಾಪ-ಪುಣ್ಯಗಳು ಸಮಾನ

ಜಮಖಂಡಿ: ಅನುಕೂಲ ಎನ್ನುವುದೆಲ್ಲವೂ ಸುಖ. ಪ್ರತಿಕೂಲ ಎನ್ನುವುದೆಲ್ಲವೂ ದುಃಖ. ಸುಖ-ದುಃಖಗಳು ಪುಣ್ಯ-ಪಾಪಗಳ ಫಲ. ಪುಣ್ಯದ ಫಲವೇ ಸುಖ. ಪಾಪದ ಫಲವೇ ದುಃಖ. ಸುಖ-ದುಃಖವನ್ನು ಬೇರೆಯವರಿಗೆ ಕೊಡಲು ಸಾಧ್ಯದಿಲ್ಲ ಎಂದು ಹಿಪ್ಪರಗಿ ಸಿದ್ಧಾರೂಢ ಶರಣರು ಹೇಳಿದರು.

ತಾಲೂಕಿನ ಹುಲ್ಯಾಳ ಗ್ರಾಮದ ಗುರುದೇವಾಶ್ರಮದ ಶ್ರೀಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಪ್ರತಿ ತಿಂಗಳು 4ನೇ ಭಾನುವಾರ ಹಮ್ಮಿಕೊಳ್ಳುವ ಗುರುದೇವ ಸತ್ಸಂಗ ಮಾಸಿಕ ಕಾರ್ಯಕ್ರಮ ಹಾಗೂ ಪ್ರತಿಭಾ ಪುರಸ್ಕಾರದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಕೋಟಿ ಕೋಟಿ ಜಪ-ತಪ ಮಾಡಿದರೂ ಗುರುವಿನ ಬೋಧೆ ಪಡೆಯದಿದ್ದರೆ ವಾಸ್ತವಿಕ ಸುಖ ಲಭಿಸದು. ಸದ್ರೂಪ ಸುಖ ಎಲ್ಲ ಕಾಲದಲ್ಲೂ ಇರುವಂತಹದ್ದು. ಪುಣ್ಯದಷ್ಟು ಸುಖ, ಪಾಪದಷ್ಟು ದುಃಖ ಇರುತ್ತದೆ. ಭಗವಂತನ ತಕ್ಕಡಿಯಲ್ಲಿ ಪಾಪ-ಪುಣ್ಯಗಳು ಹೆಚ್ಚು-ಕಡಿಮೆ ಆಗುವುದಿಲ್ಲ ಎಂದರು.

ಕಾಜಿಬೀಳಗಿಯ ಮಲ್ಲಿಕಾರ್ಜುನ ಶರಣರು ಸಾನ್ನಿಧ್ಯ ವಹಿಸಿ, ಗುರುದೇವಾಶ್ರಮದ ಹರ್ಷಾನಂದ ಸ್ವಾಮಿಗಳು ಮಾತನಾಡಿದರು. ಹೊಸೂರಿನ ಶಂಕರಾನಂದ ಮಠದ ಪರಮಾನಂದ ಸ್ವಾಮಿಗಳು, ಸಿದ್ದಾಪುರದ ಅಡವಿ ಸಿದ್ಧೇಶ್ವರ ಮಠದ ಮಾತೋಶ್ರೀ ಅಕ್ಕಮಹಾದೇವಿ ತಾಯಿ ಸಾನ್ನಿಧ್ಯ ವಹಿಸಿದ್ದರು. ವಿಜಯಪುರ-ಬಾಗಲಕೋಟೆ ಅವಳಿ ಜಿಲ್ಲೆಯ ಕೆಎಂಎಫ್ ಅಧ್ಯಕ್ಷರಾಗಿ ಆಯ್ಕೆಯಾದ ಲಿಂಗರಾಜ ಪಾಟೀಲ, ಮಹಾಪ್ರಸಾದದ ದಾಸೋಹ ಸೇವೆಗೈದ ಆಲಬಾಳ ಗ್ರಾಮದ ಸಂಗಮೇಶ ತೇಲಿ-ಸಾವಿತ್ರಿ ತೇಲಿ ದಂಪತಿಯನ್ನು ಸನ್ಮಾನಿಸಲಾಯಿತು.



2025-26ನೇ ಶೈಕ್ಷಣಿಕ ವರ್ಷದ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 90ಕ್ಕೂ ಅಧಿಕ ಅಂಕ ಪಡೆದ ಹುಲ್ಯಾಳ ಸುತ್ತಲಿನ ಗ್ರಾಮಗಳ ಪ್ರತಿಭಾವಂತ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ನೆರವೇರಿಸಲಾಯಿತು. ಗುರುಬಸಗೌಡ ಪಾಟೀಲ, ಪರಮೇಶ್ವರ ತೇಲಿ, ಅಕ್ಷಯ ಹೂಗಾರ, ಸಿದ್ದು ಉಪ್ಪಲದಿನ್ನಿ ಸಂಗೀತ ಸೇವೆ ಸಲ್ಲಿಸಿದರು. ನಿವೃತ್ತ ಶಿಕ್ಷಕ ಗುರುನಾಥ ಸುತಾರ ಸ್ವಾಗತಿಸಿದರು. ಉಪನ್ಯಾಸಕ ಸಂಗಮೇಶ ತೆಲಸಂಗ, ಶಿಕ್ಷಕ ಎಸ್.ಐ.ಚನಪನ್ನವರ ನಿರೂಪಿಸಿದರು.

ಕರಡಿಗುಡ್ಡ ಶಾಲೆಗೆ ಉತ್ತಮ ಫಲಿತಾಂಶ

ಬಾದಾಮಿ: ತಾಲೂಕಿನ ಕರಡಿಗುಡ್ಡ ಎಸ್.ಎನ್ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ100 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ.

ನಾಗರಾಜ ಸೋಮಲಿಂಗಪ್ಪ ತುಡಬಿನ(93.12%) ಪ್ರಥಮ, ಮಹೇಶ ಹಣಮಂತಪ್ಪ ತುಡುಬಿನ (92.80%)ದ್ವಿತೀಯ, ಮಂಜುಳಾ ಬೀರಪ್ಪ ತುಡಬಿನ. (91.84%) ತೃತೀಯ ಸ್ಥಾನ ಪಡೆದಿದ್ದಾರೆ.

ಒಟ್ಟು 56 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದು 56 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ ಎಂದು ಪ್ರಭಾರಿ ಮುಖ್ಯಶಿಕ್ಷಕ ಉಜ್ವಲ ಬಸರಿ ತಿಳಿಸಿದ್ದಾರೆ.

ಮುಖ್ಯೋಪಾಧ್ಯಾಯ ಉಜ್ವಲಕಾತ ಬಸರಿ, ಎಸ್‌ಡಿಎಂಸಿ ಅಧ್ಯಕ್ಷ ಗೂಳಪ್ಪ ಮಣ್ಣೂರ, ಎಂ.ಎಚ್.ನರಿ, ವೈ.ಎಚ್.ಮಣ್ಣೂರ, ಕನಕಪ್ಪ ಮಣ್ಣೂರ, ಭೀಮಸಿ ಶಾಟ್ಟೆಪ್ಪನವರ, ಶೇಖಪ್ಪ ನರಿ, ಮಾರುತಿ ಪೂಜಾರ, ಬಸವರಾಜ ತಳವಾರ, ಫಕೀರಪ್ಪ ಖ್ಯಾತನ್ನವರ, ಫಕೀರಪ್ಪ ನರಿ, ಶೇಖಪ್ಪ ನರಿ, ನಿವೃತ್ತ ನರಿ ಶಿಕ್ಷಕರು, ಶಂಕ್ರಪ್ಪ ಮಣ್ಣೂರ, ತುಕಾರಾಂ ಹಿರಿಯನ್ನವರ, ಹನುಮಂತ ದಾಸರ, ಮಲಿಕಾಂತ ಬಿಲೆಬಾಳ ಶಿಕ್ಷಕರು, ವಿದ್ಯಾರ್ಥಿಗಳಿಗೆ ಅಭಿನಂದಿಸಿದ್ದಾರೆ.



ಮಾನಸಿಕ ಸದೃಢತೆಗೆ ಕ್ರೀಡೆ ಅವಶ್ಯ: ಸಲೀಂಶೇಖ

ಕಲಾದಗಿ: ಇಂದಿನ ಯುವಕರು ದುಶ್ಚಟಗಳಿಂದ ದೂರವಿದ್ದು, ಶರೀರವನ್ನು ಆಟಗಳನ್ನು ಆಡುವ ಮೂಲಕ ಸದೃಢಪಡಿಸಿಕೊಳ್ಳಿ, ಆರೋಗ್ಯಯುತ ಜೀವನ ಶೈಲಿಗೆ ಮನುಷ್ಯನ ಮಾನಸಿಕ ಸದೃಢತೆಗೆ ನಿತ್ಯ ದಿನಚರಿಯಲ್ಲಿ ಆಟಕ್ಕೆ ಸಮಯ ಮೀಸಲಿಡಬೇಕು ಎಂದು ತಾಪಂ ಮಾಜಿ ಉಪಾಧ್ಯಕ್ಷ ಸಲೀಂಶೇಖ್ ಹೇಳಿದರು.

ಗ್ರಾಮದಲ್ಲಿ ನಡೆಯುತ್ತಿರುವ ಪೆಂಡಾರಿ ಕ್ರಿಕೇಟ್ ಲೀಗ ಸೀಸನ್-01 ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದ ಅವರು, ಆದುನಿಕ ಜೀವನ ಶೈಲಿಯ ಒತ್ತಡದಲ್ಲಿ ದೇಹದ ಶಕ್ತಿ ವರ್ದನೆಗಾಗಿ ನಿತ್ಯ ಕನಿಷ್ಠ 2ಗಂಟೆಗಳಾದರೂ ಆಟ ಆಡಬೇಕು, ಕ್ರಿಕೇಟ ಪಂದ್ಯಾವಳಿ ಆಯೋಜಿಸುವುದರಿಂದ ಯುವಕರಲ್ಲಿ ಸಂಘಟಿತ ಪ್ರಯತ್ನದಿಂದ ಗೆಲ್ಲಬೇಕೆಂಬ ಛಲ ನಿರ್ಮಾಣವಾಗುತ್ತದೆ. ಈ



ಮೊದಲು ಟೆಸ್ಟ ಕ್ರಿಕೇಟಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿತ್ತು, ಈಗ ದಿನ ಕಳೆದಂತೆ 50 ಓವರನ ಪಂದ್ಯಗಳು ಹಾಗೂ ಟಿ20 ಕ್ರಿಕೆಟ್‌ಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತಿತ್ತು. ಈಗ ಅದನ್ನು ಹೊರತು ಪಡಿಸಿ ಹೊಡಿ ಬಡಿ ಆಟದಿಂದಾಗಿ ಕಡಿಮೆ ಓವರಗಳ ಆಟಕ್ಕೆ ಮಹತ್ವ ನೀಡಲಾಗುತ್ತಿದೆ. ಇಲ್ಲಿ ಆಡುತ್ತಿರುವ ಎಲ್ಲ ತಂಡಗಳು ಪ್ರಾಮಾಣಿಕತೆಯಿಂದ ಆಡಿ ಕ್ರೀಡಾ ಸ್ಪೂರ್ತಿ ಮೆರೆಯಿರಿ ಸೋಲು ಗೆಲುವು ಎಲ್ಲವನ್ನು ಸಮನಾಗಿ ಸ್ವೀಕರಿಸಿ ಎಂದು ಹೇಳಿದರು.

ಗ್ರಾಪಂ ಮಾಜಿ ಸದಸ್ಯ ಹಸನಅಹ್ಮದ ರೋಣ ಅಧ್ಯಕ್ಷತೆ ವಹಿಸಿದ್ದರು. ಬಂದೇನವಾಜ ಸೌದಾಗರ, ಹಾರೂನ ಸೌದಾಗರ, ಇಬ್ರಾಹೀಂ ಸೋಲ್ಜರ, ಸಾಧೀಕ ಶೇಖ, ಅಬೀದ ಸೈಯದ, ಬಾಬು ತೇಲಿ, ಶ್ರೀಧರ ಮಾದರ, ರಿಯಾಜ ಪೀರಜಾದೆ, ಹಾರೂಣ ಪಠಾಣ, ಮಸ್ತಾನ ಜಲಗೇರಿ, ಆಸೀಫ ರೋಣ, ಅಜೀಮ ರೋಣ, ಆನಂದ ಮಾದರ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ಎ.30ರಂದು ಬಿಎಲ್‌ಡಿ ಸೌಹಾರ್ದ ಸಂಘದ 12ನೇ ಶಾಖೆ ಉದ್ಘಾಟನೆ

ವಿಜಯಪುರ: ಬಿಜಾಪುರ ಲಿಂಗಾಯತ ಡೆವಲೆಪಮೆಂಟ್ (ಬಿಎಲ್‌ಡಿ) ಸೌಹಾರ್ದ ಸಹಕಾರಿ ಸಂಘ ಗ್ರಾಹಕರ ವಿಶ್ವಾಸ ಗಳಿಸಿ, ಬಾಗಲಕೋಟೆ ಜಿಲ್ಲೆಯ ಮುಧೋಳ ನಗರದಲ್ಲಿ ಎ.30ರಂದು ಬೆಳಗ್ಗೆ 10 ಗಂಟೆಗೆ 12ನೇ ಶಾಖೆಯನ್ನು ಆರಂಭಿಸಲಿದೆ ಎಂದು ಅಧ್ಯಕ್ಷ, ವಿಧಾನಪರಿಷತ್ ಸದಸ್ಯ ಸುನೀಗೌಡ ಪಾಟೀಲ ಹೇಳಿದ್ದಾರೆ.
ಈ ಕುರಿತು ಪ್ರಕಟಣೆ ನೀಡಿದ ಅವರು, ಪರಮಪೂಜ್ಯ ಸಿದ್ಧೇಶ್ವರಸ್ವಾಮಿಜಿವರು ಮತ್ತು ಪಪೂ ಕತ್ನಳ್ಳಿ ಶಿವಯ್ಯ ಮಹಾಸ್ವಾಮಿಗಳವರಿಂದ ಆರಂಭಗೊಂಡ ಬಿಎಲ್‌ಡಿ ಸೌಹಾರ್ದವು ಕಳೆದ ಮೂರುವರೆ ವರ್ಷದಲ್ಲಿ ಗ್ರಾಹಕರ ವಿಶ್ವಾಸ ಗಳಿಸಿ, 1000 ಕೋಟಿಗೂ ಅಧಿಕ ವಹಿವಾಟು ನಡೆಸಿದೆ. ಆಕರ್ಷಕ ಬಡ್ಡಿ ದರಗಳೊಂದಿಗೆ 300 ಕೋಟಿಗೂ ಅಧಿಕ ಸಾಲಗಳನ್ನು ನೀಡಲಾಗಿದೆ. ಹಿರಿಯ ನಾಗರಿಕರಿಗೆ, ಮಾಜಿ ಸೈನಿಕರಿಗೆ, ಅಂಗವಿಕಲರಿಗೆ ಹಾಗೂ ವಿಧವೆಯರಿಗೆ ಶೇ. 0.5 ಹೆಚ್ಚಿನ ಬಡ್ಡಿದರ ನೀಡಲಾಗುತ್ತಿದೆ.
ಮುಧೋಳ ನಗರದ ರೂಗಿ ಹೈಟ್ಸ್ ಕಟ್ಟಡ ಮೊದಲನೇ ಮಹಡಿಯಲ್ಲಿ ಆರಂಭವಾಗಲಿರುವ ಶಾಖೆಯನ್ನು ಸಚಿವ ಆರ್.ಬಿ.ತಿಮ್ಮಾಪುರ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಎಂಆರ್‌ಎನ್ ಸಮೂಹ ಸಕ್ಕರೆ ಸಂಸ್ಥೆ ಸಿಇಒ ಸಂಗಮೇಶ ನಿರಾಣಿ, ಭಕ್ತಿಶಿರೋಮಣಿ ಕರ್ಮಯೋಗಿ ಹೇಮರೆಡ್ಡಿ ಮಲ್ಲಮ್ಮ ಶೈಕ್ಷಣಿಕ ಮತ್ತು ಧಾರ್ಮಿಕ ಸಂಸ್ಥೆ ಅಧ್ಯಕ್ಷ ದಯಾನಂದ ಪಾಟೀಲ ಮತ್ತು ಮುಧೋಳ ಘಟಪ್ರಭಾ ಪತ್ತಿನ ಸೌಹಾರ್ದ ಸಹಕಾರಿ ಉದಯ ಸಾರವಾಡ ಹಾಗೂ ಸ್ಥಳೀಯ ಸಲಹಾ ಸಮಿತಿ ಅಧ್ಯಕ್ಷ ಡಾ.ಮೋಹನ ಬಿರಾದಾರ ಪಾಲ್ಗೊಳ್ಳಲಿದ್ದಾರೆ.

ನಂದಿಕೋಲಗೆ ಪಿಎಚ್‌ಡಿ



ಸಿಂದಗಿ: ನಗರದ ಶ್ರೀ ಪದ್ಮರಾಜ ವಿದ್ಯಾವರ್ಧಕ ಸಂಸ್ಥೆ ಸಾರಂಗಮಠದ ಪದ್ಮರಾಜ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯೆ ಜೆ.ಸಿ.ನಂದಿಕೋಲ ಅವರಿಗೆ ವಿಜಯಪುರದ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ತಂತ್ರಜ್ಞಾನ ವಿಷಯದಲ್ಲಿ ಡೆವಲ್‌ಮೆಂಟ್ ಆಂಡ್ ವೆಲಿಡೆಷನ್ ಆಫ್ ಮಲ್ಟಿಮೀಡಿಯಾ ರಿಸೋರ್ಸ್ ಮ್ಯಾನೇಜ್‌ಮೆಂಟ್ ಪ್ರೋಗ್ರಾಮ್ ಫಾರ್ ಟೀಚರ್ಸ್ ಎಂಬ ವಿಷಯದ ಮೇಲೆ ಸಂಶೋಧನಾ ಪ್ರಬಂಧ ಮಂಡಿಸಿದ್ದಾರೆ. ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ಪ್ರಕಾಶ ಬಡಿಗೇರ ಅವರ ಮಾರ್ಗದರ್ಶನದಲ್ಲಿ ಪೂರ್ಣಗೊಳಿಸಿದ್ದಾರೆ. ಪ್ರಾಚಾರ್ಯೆ ಜೆ.ಸಿ.ನಂದಿಕೋಲ ಅವರ ಈ ಸಾಧನೆಗೆ ಸಂಸ್ಥೆಯ ಚೇರಮನ್ನ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು, ಉತ್ತರಾಧಿಕಾರಿ ಡಾ.ವಿಶ್ವಪ್ರಭುದೇವ ಶಿವಾಚಾರ್ಯರು, ಆಡಳಿತ ಮಂಡಳಿ ಸದಸ್ಯರು ಸೇರಿದಂತೆ ಅಭಿನಂದಿಸಿದ್ದಾರೆ.

ಪವಿತ್ರಾಗೆ ಪಿಎಚ್‌ಡಿ



ವಿಜಯಪುರ: ಇಲ್ಲಿನ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ಪವಿತ್ರಾ ಎನ್. ಅವರು ಸಲ್ಲಿಸಿದ್ದ ಇನ್ಫುಲಯೆನ್ಸ್ ಆಫ್ ಮಾರ್ಫಲಜಿಕಲ್ ಕ್ಯಾರೆಕ್ಟರ್‌ಸ್ಟಿಕ್ಸ್ ಆನ್ ಸೆಲೆಕ್ಟೆಡ್ ಫಸಿಕಲ್ ಆ್ಯಂಡ್ ಫಿಜಿಯೋಲಾಜಿಕಲ್ ವೇರಿಯಬಲ್ಸ್ ಆಫ್ ಸ್ಪೋರ್ಟ್ಸ್ ವುಮನ್ ಕುರಿತ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ. ಪವಿತ್ರಾ ಎನ್. ಅವರು ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗದ ಪ್ರೊ.ಸಕ್ಪಾಲ್ ಹೂವಣ್ಣ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಡಾಕ್ಟರೇಟ್ ಪದವಿ ಪಡೆದಿರುವ ಪವಿತ್ರಾ ಎನ್. ಅವರನ್ನು ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್. ಲಕ್ಕಣ್ಣನವರ ಅಭಿನಂದಿಸಿದ್ದಾರೆ.

ಸೌಜನ್ಯಗೆ ಪಿಎಚ್‌ಡಿ



ವಿಜಯಪುರ: ಇಲ್ಲಿನ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ಸೌಜನ್ಯ ಎಂ. ಅವರು ಸಲ್ಲಿಸಿದ್ದ ಎ ಕಂಪ್ಯಾರಿಟಿವ್ ಸ್ಟಡಿ ಆನ್ ಸೆಲೆಕ್ಟೆಡ್ ಮೋಟಾರ್ ಫಿಟ್ನೆಸ್ ಕಾಂಪೋನೆಂಟ್ಸ್ ಸೈಕಾಲಾಜಿಕಲ್ ವೇರಿಯಬಲ್ಸ್ ಆ್ಯಂಡ್ ಹಾಕಿ ಪ್ಲೇಯರ್ಸ್ ಕುರಿತ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ.

ಶಾಂತಾಬಾಯಿ ನಿಧನ



ನಿಡಗುಂದಿ: ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಡಿ ಗ್ರುಪ್ ನೌಕರರಾಗಿದ್ದ ಶಾಂತಾಬಾಯಿ ಮಲ್ಲಪ್ಪ ಚಿಕ್ಕಬೇವನೂರ(68) ಸೋಮವಾರ ನಿಧನರಾಗಿದ್ದಾರೆ. ಮೃತರಿಗೆ ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗ ಇದ್ದಾರೆ. ಬಸವರಾಜ ಚಿಕ್ಕಬೇವನೂರ ಜಿಲ್ಲಾ ಆರೋಗ್ಯ ನಿರೀಕ್ಷಣಾಧಿಕಾರಿ ಜಿಲ್ಲಾ ಕ್ಷಯ ನಿರ್ಮೂಲನಾ ಕೇಂದ್ರ ವಿಜಯಪುರ ಮೃತರ ಮಕ್ಕಳಲ್ಲಿ ಒಬ್ಬರಾಗಿದ್ದಾರೆ.



ಸಿಂದಗಿ: ಇಂಡಿ ತಾಲೂಕು ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ ವತಿಯಿಂದ ಜಗನ್ಮಾತೆ ಕಾಳಿಕಾದೇವಿ ಜಾತ್ರಾ ಮಹೋತ್ಸವ ಹಾಗೂ ನೂತನ ರಥೋತ್ಸವ ಕಾರ್ಯಕ್ರಮದಲ್ಲಿ ಸಿಂದಗಿಯ ಶಾಂಭವಿ ಡಿಜಿಟಲ್ ಪೋಟೋ ಸ್ಟುಡಿಯೋದ ಮಾಲೀಕ ಸಿದ್ಧಲಿಂಗ ಬಡಿಗೇರ ಅವರ ಗಣನೀಯ ಸೇವೆ ಗುರುತಿಸಿ ಕಾಳಿಕಾ ಸೇವಾಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ವಿದ್ಯಾರ್ಥಿಗಳು ಉದ್ಯೋಗಾವಕಾಶ ಬಳಸಿಕೊಳ್ಳಲಿ

ವಿಜಯಪುರ: ವಿದ್ಯಾರ್ಥಿನಿಯರು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿವಿಧ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಂಡು ಲಭ್ಯವಿರುವ ಉದ್ಯೋಗಾವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಮಹಿಳಾ ವಿಶ್ವವಿದ್ಯಾನಿಲಯದ ಮೌಲ್ಯಮಾಪನ ಕುಲಸಚಿವ ಪ್ರೊ. ಬಿ.ಎಲ್.ಲಕ್ಕಣ್ಣನವರ ಹೇಳಿದರು.
ಇಲ್ಲಿನ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಉದ್ಯೋಗ ಮತ್ತು ವೃತ್ತಿ ಸಮಾಲೋಚನ ಕೋಶ ಹಾಗೂ ದೈಹಿಕ ಶಿಕ್ಷಣ ಅಧ್ಯಯನ ಮತ್ತು ಕ್ರೀಡಾ ವಿಜ್ಞಾನ ವಿಭಾಗ ಮತ್ತು ಟನ್ವಿಕ್ ಎಜುಕೇಶನ್ ಪ್ರವೇಟ್ ಲಿಮಿಟೆಡ್ ಆಶ್ರಯದಲ್ಲಿ ಇತ್ತೀಚಿಗೆ ಹಮ್ಮಿಕೊಂಡಿದ್ದ ಒಂದು ದಿನದ ಉದ್ಯೋಗ ಮೇಳ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.
ಕಾರ್ಯಕ್ರಮದಲ್ಲಿ ಬೆಂಗಳೂರಿನ ಟನ್ವಿಕ್ ಎಜುಕೇಶನ್ ಪ್ರವೇಟ್ ಲಿಮಿಟೆಡ್‌ನ ರವಿ ಪಿಳ್ಳೈ ಮತ್ತು ಸಂತೋಷ, ದೈಹಿಕ ಶಿಕ್ಷಣ ಅಧ್ಯಯನ ಮತ್ತು ಕ್ರೀಡಾ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ಹನುಮಂತಯ್ಯ ಪೂಜಾರಿ, ಉದ್ಯೋಗ ಮತ್ತು ವೃತ್ತಿ ಸಮಲೋಚನಾ ಕೋಶದ ಸಂಯೋಜಕ ಡಾ.ಚಂದ್ರಶೇಖರ್ ಮಠಪತಿ, ದೈಹಿಕ ಶಿಕ್ಷಣ ವಿಭಾಗದ ಪ್ರಾಧ್ಯಾಪಕರಾದ, ಡಾ.ರಾಜಕುಮಾರ ಮಾಲಿಪಾಟೀಲ್ ಡಾ.ಜ್ಯೋತಿ ಉಪಾಧ್ಯಾಯ, ಡಾ. ಕಿರಣ ಇದ್ದರು. ವಿಭಾಗದ ವಿದ್ಯಾರ್ಥಿನಿಯರಾದ ದೀಪಾ ಸಂತಿಪೂರ ಸ್ವಾಗತಿಸಿದರು. ಸಂಧ್ಯಾ ಪರಿಚಯಿಸಿದರು. ಮಹಾದೇವಿ ಮತ್ತು ಲಕ್ಷ್ಮಿ ನಾಯಕ್ ಪ್ರಾರ್ಥಿಸಿದರು. ಅಶ್ವಿನಿ ಆರ್.ಎಸ್.ನಿರೂಪಿಸಿದರು, ಲಕ್ಷ್ಮಿದೇವಿ ವಂದಿಸಿದರು.



ವಿಜಯಪುರ: ಇಲ್ಲಿನ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಉದ್ಯೋಗ ಮತ್ತು ವೃತ್ತಿ ಸಮಾಲೋಚನ ಕೋಶ ಹಾಗೂ ದೈಹಿಕ ಶಿಕ್ಷಣ ಅಧ್ಯಯನ ಮತ್ತು ಕ್ರೀಡಾ ವಿಜ್ಞಾನ ವಿಭಾಗ ಮತ್ತು ಟನ್ವಿಕ್ ಎಜುಕೇಶನ್ ಪ್ರವೇಟ್ ಲಿಮಿಟೆಡ್ ಆಶ್ರಯದಲ್ಲಿ ಇತ್ತಿಚಿಗೆ ಹಮ್ಮಿಕೊಂಡಿದ್ದ ಒಂದು ದಿನದ ಉದ್ಯೋಗ ಮೇಳ ನಡೆಯಿತು. ಮಹಿಳಾ ವಿಶ್ವವಿದ್ಯಾನಿಲಯದ ಮೌಲ್ಯಮಾಪನ ಕುಲಸಚಿವ ಪ್ರೊ. ಬಿ.ಎಲ್.ಲಕ್ಕಣ್ಣನವರ, ಬೆಂಗಳೂರಿನ ಟನ್ವಿಕ್ ಎಜುಕೇಶನ್ ಪ್ರವೇಟ್ ಲಿಮಿಟೆಡ್‌ನ ರವಿ ಪಿಳ್ಳೈ, ಸಂತೋಷ, ಡಾ.ಹನುಮಂತಯ್ಯ ಪೂಜಾರಿ ಸೇರಿದಂತೆ ಇತರರು ಇದ್ದರು.

ಗುಣಮಟ್ಟದ ಶಿಕ್ಷಣ ಒದಗಿಸಲು ಮಾದರಿ ಶಿಕ್ಷಣ ಸಂಸ್ಥೆಗಳ ಘೋಷಣೆ

ಸರ್ಕಾರಿ ಪದವಿ ಕಾಲೇಜ್ ಆಯ್ಕೆ

ರವೀಂದ್ರ, ನಂದೆಪ್ಪನವರ

ಮುದ್ದೇಬಿಹಾಳ: ಉನ್ನತ ಶಿಕ್ಷಣ ಮೇಲ್ದರ್ಜೆಗೇರಿಸಲು ಮತ್ತು ಗುಣಮಟ್ಟದ ಶಿಕ್ಷಣ ಒದಗಿಸಲು ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಅಡಿಯಲ್ಲಿ ಉನ್ನತ ಶಿಕ್ಷಣ ಇಲಾಖೆ ಕೈಗೆತ್ತಿಕೊಂಡಿರುವ ಉತ್ಕೃಷ್ಟತಾ ಮತ್ತು ಸಂಶೋಧನಾ ಕೇಂದ್ರವಾಗಿ (ಸೆಂಟರ್ ಆಫ್ ಎಕ್ಸಲೆನ್ಸ್) ಸ್ಥಳೀಯ ಶಾಹ ಸೋಗಮಲ್ ಪಿರಾಜಿ ಓಸ್ವಾಲ್ ಸರ್ಕಾರಿ ಪದವಿ ಕಾಲೇಜು ಆಯ್ಕೆಯಾಗಿದೆ.
ರಾಜ್ಯ ಸರ್ಕಾರ 2025-26ನೇ ಆಯವ್ಯಯದಲ್ಲಿ ಘೋಷಿಸಿದಂತೆ ರಾಜ್ಯದ ಒಟ್ಟು 39 ಪದವಿ ಕಾಲೇಜುಗಳನ್ನು ಮಾದರಿ ಶಿಕ್ಷಣ ಸಂಸ್ಥೆಗಳು (ಮಾಡೆಲ್ ಪದವಿ ಕಾಲೇಜ್) ಎಂದು ಘೋಷಣೆ ಮಾಡಿದ್ದು, ಸ್ಥಳೀಯ ಸರ್ಕಾರಿ ಪದವಿ ಕಾಲೇಜು ಕೂಡ ಆಯ್ಕೆಯಾಗಿದೆ. ಇದರಲ್ಲಿ ಮುಂದಿನ ನಾಲ್ಕು ವರ್ಷದಲ್ಲಿ ಆಯ್ಕೆಯಾದ ಪದವಿ ಕಾಲೇಜುಗಳ ಸಂಶೋಧನಾ ಸಾಮರ್ಥ್ಯ ಹೆಚ್ಚಿಸುವ ಸಂಬಂಧ, ಪ್ರತಿಯೊಂದು ಮಾದರಿ ಕಾಲೇಜಿಗೆ 15 ಕೋಟಿ ರೂ.ಅನುದಾನದಲ್ಲಿ ಕಲಿಕಾ ಉಪಕರಣಗಳು, ಪ್ರಯೋಗಾಲಯಗಳು, ಕಂಪ್ಯೂಟರ್ ಕೇಂದ್ರ, ಅಂತರ್ಜಾಲ ಗ್ರಂಥಾಲಯ ಹಾಗೂ ಸಂಶೋಧನಾ ಕೇಂದ್ರಗಳನ್ನು ತೆರೆಯಲು ಅವಕಾಶ ಸಿಗುತ್ತದೆ. ಈ ಸಂಬಂಧ ಕ್ರಿಯಾ ಯೋಜನೆ ತಯಾರಿಸಲು ಇಲಾಖೆ ಸೂಚಿಸಿದೆ.
ಕಳೆದ ಎರಡು ದಶಕಗಳಲ್ಲಿ ಪ್ರತಿ ವರ್ಷ ಈ ಕಾಲೇಜಿನಲ್ಲಿ ಸಾವಿರಾರು ಬಡ ಮತ್ತು ಗ್ರಾಮೀಣ ವಿದ್ಯಾರ್ಥಿಗಳ ಪದವಿ ವ್ಯಾಸಂಗಕ್ಕೆ ಬರುತ್ತಿದ್ದು, ಉನ್ನತ ದರ್ಜೆಯ ಶಿಕ್ಷಣಕ್ಕೆ ಹೆಸರಾಗಿದೆ. ಜೊತೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಐ) ಅಡಿಯಲ್ಲಿ ಕಂಪ್ಯೂಟರ್ ಮತ್ತು ವ್ಯವಹಾರ (ಬಿಬಿಎ, ಬಿಸಿಎ) ಅಧ್ಯಯನ ಕೇಂದ್ರ ಪ್ರಸ್ತಾವನೆಯೂ ಇದೆ. ಈಗಾಗಲೇ ಕೇಂದ್ರ ಸರ್ಕಾರ ಉನ್ನತ ಶಿಕ್ಷಣ ಅಭಿಯಾನ (ಉಷಾ ಯೋಜನೆ) ಅಡಿಯಲ್ಲಿ 5 ಕೋಟಿ ಅನುದಾನದಲ್ಲಿ ಒಳಾಂಗಣ ಕ್ರೀಡಾಂಗಣ, ಕಂಪ್ಯೂಟರ್ ಕೇಂದ್ರ ಹಾಗೂ ಸಭಾಂಗಣ ನಿರ್ಮಾಣ ನಡೆಯುತ್ತಿದೆ. ರಾಜ್ಯ ಸರ್ಕಾರ ಮಾದರಿ ಕೇಂದ್ರವಾಗಿ ಆಯ್ಕೆ ಮಾಡಿರುವುದು ಭವಿಷ್ಯದಲ್ಲಿ ಉನ್ನತ ಶಿಕ್ಷಣ ಒಂದೇ ಕೇಂದ್ರದಲ್ಲಿ ದೊರೆಯುವುದಕ್ಕೆ ಅನುಕೂಲವಾಗುವುದು.



> ವಿಜಯಪುರ ಜಿಲ್ಲೆಯಲ್ಲಿ ಹೆಚ್ಚು ವಿದ್ಯಾರ್ಥಿಗಳ ನೋಂದಣಿಯಿರುವ ಕಾಲೇಜಿನಲ್ಲಿ ಮಾದರಿ ಕೇಂದ್ರ ತೆರೆಯಲು ಸರ್ಕಾರ ಮುಂದಾಗಿದೆ. ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗೆ ವಿಶ್ವವಿದ್ಯಾಲಯಮಟ್ಟದ ಕಲಿಕಾ ಸೌಲಭ್ಯಗಳು ನಗರದಲ್ಲಿ ದೊರೆಯುತ್ತವೆ. ವಿದ್ಯಾರ್ಥಿಗಳು ಕಡಿಮೆ ಖರ್ಚಿನಲ್ಲಿ ಉತ್ಕೃಷ್ಟವಾಗಿ ಅಭ್ಯಾಸ ಮಾಡಲು ಅನುಕೂಲವಾಗುತ್ತದೆ.
> ■ ಡಾ.ಎಚ್.ಎ.ಕಟಗೂರು, ಪ್ರಾಂಶುಪಾಲ

> ಮಾದರಿ ಕೇಂದ್ರ ಆಯ್ಕೆ ಆಗಿರುವುದು ತಾಲೂಕು, ಸುತ್ತಲಿನ ಜಿಲ್ಲೆ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ಅನುಕೂಲ ಆಗುತ್ತದೆ. ರಾಜ್ಯ ಶಿಕ್ಷಣ ನೀತಿ ಅಡಿಯಲ್ಲಿ ಬಿಎಡ್, ಸ್ನಾತಕೋತ್ತರ ಕೇಂದ್ರವಾಗಿ ನಾಲ್ಕು ವರ್ಷದ ಪದವಿ ಶಿಕ್ಷಣ ಬೇಡಿಕೆ ಇದೆ. ಬಿಸಿಎ, ಬಿಬಿಎ ವಿಭಾಗಕ್ಕೆ ವಿಟಿಯು ಮಾನ್ಯತೆ ದೊರೆಯುವ ಪ್ರಸ್ತಾವನೆ ಬಾಕಿ ಇದೆ.
> ■ ರವೀಂದ್ರ ಬಿರಾದಾರ, ಎಬಿವಿಪಿ ಕಾರ್ಯಕರ್ತ


ರಾಜಕೀಯ ಲಾಭಕ್ಕಾಗಿ ಕ್ಷೇತ್ರ ಮರು ವಿಂಗಡನೆ, ಮಹಿಳಾ ಮೀಸಲಾತಿ ಬಿಲ್: ನಾಯಕ ಆರೋಪ



ವಿಜಯಪುರ: ಮಹಿಳಾ ಮೀಸಲಾತಿ ಹಾಗೂ ಕ್ಷೇತ್ರ ಮರು ವಿಂಗಡನೆ ಬೇರೆ-ಬೇರೆ ವಿಷಯ. ಆದರೆ, ಸದ್ಯ ಪಂಚ ರಾಜ್ಯ ಚುನಾವಣೆಗಳ ಸಮಯದಲ್ಲಿ ರಾಜಕೀಯ ಲಾಭಕ್ಕಾಗಿ ಬಿಜೆಪಿ ಸರ್ಕಾರ ಏಕಾಏಕಿ ಕ್ಷೇತ್ರ ಮರು ವಿಂಗಡನೆ ಮಸೂದೆಯೊಂದಿಗೆ ಮಹಿಳಾ ಮೀಸಲಾತಿ ಬಿಲ್ ತಂದಿತ್ತು ಎಂದು ಕಾಂಗ್ರೆಸ್ ನಾಯಕಿ ಕಾಂತಾ ನಾಯಕ ಆರೋಪಿಸಿದರು.
ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ಮೀಸಲಾತಿ ಹೆಸರಿನಲ್ಲಿ ಕೇಂದ್ರ ಸರ್ಕಾರ ಮೋಸದ ಮೂರು ಮಸೂದೆ ತಂದಿತ್ತು. ಮಹಿಳಾ ಮೀಸಲಾತಿ ಹೆಸರಿನಲ್ಲಿ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಉದ್ದೇಶವೇ ಬೇರೆಯಾಗಿತ್ತು. ಆದ್ದರಿಂದ ಕಾಂಗ್ರೆಸ್ ಸೇರಿ ಎಲ್ಲ ವಿರೋಧ ಪಕ್ಷಗಳು ತಕ್ಕ ಉತ್ತರ ಕೊಟ್ಟಿವೆ ಎಂದರು.
ಶೇ.33ರಷ್ಟು ಮಹಿಳಾ ಮೀಸಲಾತಿ ಬಗ್ಗೆ ನಿರಂತರವಾಗಿ ಕಾಂಗ್ರೆಸ್ ಧ್ವನಿ ಎತ್ತಿದಾಗ ಇದೇ ಬಿಜೆಪಿಯವರು ವಿರೋಧಿಸುತ್ತಲೇ ಬಂದಿದ್ದರು. 2023 ರಲ್ಲಿ ನಾರಿ ಶಕ್ತಿ ಅಭಿವಂದನ್ ಮಸೂದೆಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಹೊಸ ಜನಸಂಖ್ಯೆ ಆಧಾರದ ಮೇಲೆ ಇದನ್ನು ಜಾರಿಗೆ ತರಲು ನಿರ್ಧಾರ ಮಾಡಲಾಗಿತ್ತು ಎಂದರು.
ಕಾಂಗ್ರೆಸ್ ನಾಯಕಿ ಸಂಯುಕ್ತಾ ಪಾಟೀಲ ಮಾತನಾಡಿ, ಮಹಿಳಾ ಮೀಸಲಾತಿ ಮಸೂದೆಯನ್ನು 2023ರಲ್ಲಿ ಸರ್ಕಾರ ಹಾಗೂ ಪ್ರತಿಪಕ್ಷಗಳು ಒಗ್ಗೂಡಿ ಅಂಗೀಕಾರ ಮಾಡಿದ್ದವು. ಅಂದು ಸಹ ತಕ್ಷಣವೇ ಜಾರಿ ಮಾಡಿ, 2024ರ ಲೋಕಸಭಾ ಚುನಾವಣೆಗೆ ಅನುಷ್ಠಾನ ಆಗಲಿ ಎಂಬ ಬೇಡಿಕೆಯನ್ನು ಕಾಂಗ್ರೆಸ್ ಮಂಡಿಸಿತ್ತು. ಆದರೆ, ಈಗ ಕ್ಷೇತ್ರ ಮರು ವಿಂಗಡನೆ ಹಾಗೂ ಮಹಿಳಾ ಮೀಸಲಾತಿ ಜೋಡಣೆ ಮಾಡುವ ಅವಶ್ಯಕತೆ ಇರಲಿಲ್ಲ. ಕ್ಷೇತ್ರ ಮರು ವಿಂಗಡನೆ ವಿಷಯವು ರಾಜಕೀಯವಾಗಿ ಜಟಿಲವಾದ ವಿಷಯವಾಗಿದೆ. ಹೀಗಾಗಿ ಎಲ್ಲರೂ ಒಮ್ಮತದಿಂದ ಒಪ್ಪುವ ಮಹಿಳಾ ಮೀಸಲಾತಿಯನ್ನು ಅದರೊಂದಿಗೆ ತಂದಿದ್ದು ಸರಿಯಾದ ಕ್ರಮವಾಗಿರಲಿಲ್ಲ ಎಂದರು.
ಮಹಿಳೆಯರನ್ನು ಗುರಾಣಿಯಾಗಿ ಪ್ರಧಾನಿ ಮೋದಿ ಉಪಯೋಗಿಸಿದರು. ಕ್ಷೇತ್ರ ಮರು ವಿಂಗಡನೆ ಈ ಹಿಂದೆ ಅನೇಕ ಬಾರಿ ಮಾಡಲಾಗಿದೆ. ಇಂದಿರಾ ಗಾಂಧಿ, ವಾಜಪೇಯಿ ಅವರ ಕಾಲದಲ್ಲೂ ದಕ್ಷಿಣ ಭಾರತದ ರಾಜ್ಯಗಳ ಹಿತಕಾಪಾಡುವ ನಿರ್ಧಾರ ಮಾಡಿದ್ದರು. ಆದರೆ, ಈಗಿರುವ ಆಡಳಿತ ಪಕ್ಷ ಮಹಿಳಾ ಮೀಸಲಾತಿ ಹೆಸರಲ್ಲಿ ಷಡ್ಯಂತ್ರಕ್ಕೆ ಮುಂದಾಗಿತ್ತು ಎಂದರು.
ರುಕ್ಸಾನಾ, ವಿದ್ಯಾರಾಣಿ ತುಂಗಳಾ, ಲಲಿತಾ ಅಂಕಲಗಿ, ಮಹಾದೇವಿ ಗೋಕಾಕ, ಆರತಿ ಶಹಾಪುರ ಇದ್ದರು.

ವಿಶ್ವಾದ್ಯಂತ ಹೆಚ್ಚು ಮನ್ನಣೆ ಪಡೆದ ಯೋಗ

ವಿಜಯಪುರ: ಮಾನವನ ಸರ್ವತೋಮುಖಿ ಅಭಿವೃದ್ಧಿಯನ್ನೇ ಮುಖ್ಯ ಗುರಿ ಹೊಂದಿರುವ ಯೋಗ ವಿಶ್ವಾದ್ಯಂತ ಹೆಚ್ಚು ಮನ್ನಣೆ ಪಡೆದಿದೆ ಎಂದು ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯ ಸಂಶೋಧನ ಕೇಂದ್ರದ ಸಂಯೋಜಕಿ ಡಾ.ನಿರ್ಮಲಾ ಕೆ.ಜಿ. ಹೇಳಿದರು.
ನಗರದ ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಕಾಲೇಜು, ಆಸ್ಪತ್ರೆ ಮತ್ತು ವೈದ್ಯಕೀಯ ಕೇಂದ್ರದಲ್ಲಿ ಕೇಂದ್ರ ಸರ್ಕಾರದ ಆಯುಷ್ ಸಚಿವಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುವ ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆಯ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ- 2026ರ ನಿಮಿತ್ತ ಸೋಮವಾರ ಯೋಗ ಮಹೋತ್ಸವ- 2026, 55 ದಿನಗಳ ಕೌಂಟ್‌ಡೌನ್ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಈ ಕಾರ್ಯಕ್ರಮ ಕೇವಲ ಒಂದು ದಿನಕ್ಕೆ ಸೀಮಿತವಾಗಬಾರದು. ಪ್ರತಿಯೊಬ್ಬರೂ ಪ್ರತಿದಿನ ಯೋಗ ಮಾಡುವ ಮೂಲಕ ಆರೋಗ್ಯ ವೃದ್ಧಿಸಿಕೊಂಡು ನಿರೋಗಿಯಾಗಿ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು.
ಜ್ಞಾನಯೋಗಾಶ್ರಮದ ಬಸವರಾಜೀಯ ಸ್ವಾಮಿಗಳು, ಕಾಲೇಜಿನ ಪ್ರಾಚಾರ್ಯ ಡಾ. ಅಶೋಕ ಪಾಟೀಲ, ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಸಂಜಯ ಕಡ್ಲಿಮಟ್ಟಿ, ನ್ಯಾಯವಾದಿ ಡಾ. ರಂಜಿತಾ ಕೆ.ಆರ್., ಡೀಮ್ಡ್ ವಿವಿಯ ಫಿಜಿಯಾಲಜಿ ವಿಭಾಗದ ಡಾ. ಜ್ಯೋತಿ ಖೋದ್ನಾಪುರ, ಕಾರ್ಯಕ್ರಮದ ನೋಡಲ್ ಅಧಿಕಾರಿ ಡಾ. ಸತೀಶ ಪಾಟೀಲ, ಪ್ರಾಧ್ಯಾಪಕ ಡಾ. ಡಿ.ಎನ್. ಧರಿ, ಸಹ ಪ್ರಾಧ್ಯಾಪಕಿ ಡಾ.ಭುವನೇಶ್ವರಿ ಪಾಟೀಲ, ಯೋಗ ತರಬೇತುದಾರ ಚೇತನ ವಿಶ್ವಕರ್ಮಾರ ಇದ್ದರು.
ಬೆಳಗಾವಿಯ ಯೋಗ ತರಬೇತುದಾರ ಅಮೋಲ ಜೈನ್ ಅವರು ಅಗ್ನಿಹೋತ್ರ ಹೋಮದೊಂದಿಗೆ ಯೋಗ ಪ್ರಾರಂಭಿಸಿದರು. ಕಾರ್ಯಕ್ರಮದ ನಿಮಿತ್ತ ಯೋಗ ಕೇಂದ್ರದ ಸದಸ್ಯರು ಹಾಗೂ ಬಿಎಲ್‌ಡಿಇ ಎವಿಎಸ್ ಆಯುರ್ವೇದ ಮಹಾವಿದ್ಯಾಲಯದ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಂದ ಎರಡು ನೃತ್ಯ ಯೋಗ ಪ್ರದರ್ಶನಗಳು ನಡೆದವು.
ಕಾಮನ್ ಯೋಗ ಪ್ರೋಟೋಕಾಲ್ ಅಧಿವೇಶನವನ್ನು ಪತಂಜಲಿ ಯೋಗ ಸಮಿತಿಯ ಯೋಗ ಶಿಕ್ಷಕಿ ಸುನಿತಾ ಬಿರಾದಾರ ಹಾಗೂ ಬಿಎಲ್‌ಡಿಇ ಎವಿಎಸ್ ಆಯುರ್ವೇದ ಮಹಾವಿದ್ಯಾಲಯದ ಸ್ವಸ್ಥವೃತ್ತ ಮತ್ತು ಯೋಗ ವಿಭಾಗದ ಯೋಗ ತರಬೇತುದಾರ ಚೇತನ ವಿಶ್ವಕರ್ಮಾರ ನಡೆಸಿಕೊಟ್ಟರು.
ವಿವಿಧ ಯೋಗ ಕೇಂದ್ರಗಳ ಸಂಚಾಲಕರು ಹಾಗೂ ಸದಸ್ಯರು, ವಿಜಯಪುರ ಸೈಕ್ಲಿಂಗ್ ತಂಡ, ವೃಕ್ಷೋತ್ಥಾನ ಹೆರಿಟೇಜ್ ತಂಡ, ಆಶಾ ಕಾರ್ಯಕರ್ತೆಯರು, ಯೋಗಾಸಕ್ತರು ಭಾಗವಹಿಸಿದ್ದರು.



ಜೀವ ಸಂಕುಲ ಉಳಿಸುವುದು ನಮ್ಮೆಲ್ಲರ ಕರ್ತವ್ಯ: ಆಶಾ ಹಿರೇಮಠ

ಸಿಂದಗಿ: ಪ್ರಕೃತಿಯಲ್ಲಿರುವ ಜೀವ ಸಂಕುಲ ಉಳಿಸಲು ಪಕ್ಷಿಗಳ ದಾಹ ತೀರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಜ್ಞಾನ ವಿಕಾಸ್ ಸಮಾನ್ವಯಾಧಿಕಾರಿ ಆಶಾ ಹಿರೇಮಠ ಹೇಳಿದರು.
ತಾಲೂಕಿನ ಹೊನ್ನಳ್ಳಿ ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಬಿವೃದ್ಧಿ ಸಂಸ್ಥೆಯ, ಗಂಗಾ ಜ್ಞಾನ ವಿಕಾಸ್ ಕೇಂದ್ರದ ಹಾಗೂ ಧರ್ಮಸ್ಥಳ ಸಂಘದ ಪದಾಧಿಕಾರಿಗಳ ಸಂಯುಕ್ತಾಶ್ರಯದಲ್ಲಿ ಪಕ್ಷಿಗಳಿಗೆ ನೀರುಣಿಸುವ ಸಲುವಾಗಿ ಅರವಟ್ಟಿಗೆಯನ್ನು ಮರದಲ್ಲಿ ಅಳವಡಿಸಿ ಮಾತನಾಡಿದ ಅವರು, ಪ್ರತಿಯೊಬ್ಬರೂ ತಮ್ಮ ಮನೆಯ ಮುಂದಿನ ಗಿಡ ಮರಗಳ ಹಾಗೂ ಮನೆಯ ಮೇಲೆ ಒಂದು ಪಾತ್ರೆ ಅಥವಾ ಪ್ಲಾಸ್ಟಿಕ್ ಬಾಟಲ್‌ಗಳಲ್ಲಿ ನೀರು ಇಟ್ಟರೆ ಸಾವಿರಾರು ಪಕ್ಷಿಗಳ ಜೀವ ಉಳಿಸಬಹುದು ಎಂದರು.
ಸ್ಥಳೀಯ ಸೇವಾ ಪ್ರತಿನಿಧಿ ಭೀಮಾಭಾಯಿ ಗೌಂಡಿ, ಸಂಘದ ಪ್ರತಿನಿಧಿ ಲೈಲಾಬಿ ನಾಯ್ಕೋಡಿ, ಬಿಬಿಜಾನ್ ಅಗಿಸಿಮನಿ, ನಜಾಮಾ ಅಗಿಸಿಮನಿ, ರೋಶಾ ಬಾಗೇವಾಡಿ, ರಸೂಲಬಿ ಗಡಗಂಚ್, ಸಲೀಮಾ ಬಾಗೇವಾಡಿ ಸೇರಿದಂತೆ ಅನೇಕರು ಇದ್ದರು.



ಡಾ.ಅಂಬೇಡ್ಕರ್ ಕೊಡುಗೆ ಅಪಾರ




ಝಳಕಿ: ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಕೊಡುಗೆ ಅಪಾರವಾದದ್ದು ಎಂದು ರಾಜ್ಯ ಬಿಎಸ್‌ಪಿ ಪ್ರಧಾನ ಕಾರ್ಯದರ್ಶಿ ಯಶವಂತ ಪೂಜಾರಿ ಹೇಳಿದರು.
ಸ್ಥಳೀಯ ಡಾ.ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆದ ಡಾ.ಅಂಬೇಡ್ಕರ ಅವರ 135ನೇ ಜಯಂತಿ ಆಚರಣೆ ಪ್ರಯುಕ್ತ ಬಾಬಾಸಾಹೇಬ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು
ಡಾ.ಅಂಬೇಡ್ಕರ್ ಅವರು ಸಮಾನತೆ ಏಕತಗಾಗಿ ಹೋರಾಡಿದವರು. ಎಲ್ಲರಿಗೂ ಒಂದೇ ಕಾನೂನಿನ ಅರಿವು ಮೂಡಿಸಿದರು ಎಂದು ಹೇಳಿದರು.
ಯುವ ಮುಖಂಡ ರಾಜು ಬನಸೋಡೆ, ಮಾಜಿ ಗ್ರಾಪಂ ಅಧ್ಯಕ್ಷ ಸಣ್ಣಪ್ಪ ತಳವಾರ, ಸಿದ್ದಾರಾಮ (ಲೋಣಿ)ಅರ್ಜನಾಳ, ಪರಸಪ್ಪ ಚಲವಾದಿ,ಭೀಮಾಶಂಕರ ಝಳಕಿ, ಯಲ್ಲಪ್ಪ ಬನಸೋಡೆ, ರಾಜು ಗಾಯಕವಾಡ, ಸಿದ್ದು ನಾವಿ, ಕಾರ್ಯಕರ್ತರು ಉಪಸ್ಥಿತರಿದ್ದರು.

ಸುಳ್ಳು ಸುದ್ದಿಗೆ ಕಿವಿಗೊಡಬೇಡಿ: ಚೌಧರಿ

ವಿಜಯಪುರ: ಶಾಸಕ ಬಸನಗೌಡ ಪಾಟೀಲ ಯತ್ನಾಳ ನಗರದಲ್ಲಿ ಈಗಾಗಲೇ ಮಾಡಿರುವ ಹಾಗೂ ಪ್ರಸ್ತುತ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ಸಹಿಸದೆ, ಕೆಲವು ಅಭಿವೃದ್ಧಿ ವಿರೋಧಿಗಳು ರಾಜಕೀಯ ದುರುದ್ದೇಶದಿಂದ ಸಾರ್ವಜನಿಕರಿಗೆ ವಿನಾಕಾರಣ ಸುಳ್ಳು ಮಾಹಿತಿ ನೀಡುತ್ತಿರುವುದು ಖಂಡನೀಯ ಎಂದು ಬಿಜೆಪಿ ನಗರ ಮಂಡಲ ಮಾಜಿ ಅಧ್ಯಕ್ಷ ಶಂಕರ ಹೂಗಾರ, ಸ್ವಾಮಿ ವಿವೇಕಾನಂದ ಸೇನೆ ಅಧ್ಯಕ್ಷ ಚಂದ್ರಶೇಖರ ಚೌಧರಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತು ಜಂಟಿ ಪತ್ರಿಕಾ ಪ್ರಕಟಣೆ ನೀಡಿದ ಅವರು, ನಗರದ ವಾರ್ಡ್ ನಂ.9ರಲ್ಲಿ ಬರುವ ಸರಾಫ್ ಬಜಾರ್ ದಿಂದ ರಾಮಮಂದಿರ ಮಾರ್ಗವಾಗಿ ಮಠಪತಿಗಲ್ಲಿ ಕ್ರಾಸ್‌ವರೆಗಿನ ಸಿಸಿ ರಸ್ತೆ ಕಾಮಗಾರಿಯು ಮಾ. 25 ರಂದು ಪ್ರಾರಂಭಗೊಂಡಿದ್ದು, ಈ ಕಾಮಗಾರಿ ಪೂರ್ಣಗೊಳ್ಳಲು 4 ತಿಂಗಳ ಕಾಲಾವಕಾಶ ಇರುತ್ತದೆ. ಜುಲೈವರೆಗೆ ಸಮಯವಿದ್ದರೂ ಸಹ ನಗರದ ಸಮಗ್ರ ಅಭಿವೃದ್ಧಿಗೆ ವಿರೋಧಿಗಳು ಎಂಬಂತೆ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ ಎಂಬ ನೆಪ ಮಾಡಿಕೊಂಡು ಪ್ರತಿಭಟನೆ ನಡೆಸಿ, ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದನ್ನು ನೋಡಿದರೆ ಇವರು ಯಾರೂ ಅಭಿವೃದ್ಧಿಗೆ ಸಹಕಾರ ನೀಡದ ಅನಾಗರಿಕರು ಸಿಸಿ ರಸ್ತೆ ಮಾಡಬೇಕಾದರೆ ಈ ರಸ್ತೆಯ ಒಳಚರಂಡಿ, ತೆರೆದ ಚರಂಡಿ, ಕುಡಿಯುವ ನೀರಿನ ಪೈಪ್ ಹಾಗೂ ಕೇಬಲ್ ಡಕ್ಟ್ ಅಳವಡಿಸಿಕೊಂಡು ರಸ್ತೆ ನಿರ್ಮಾಣ ಮಾಡಬೇಕಾಗುತ್ತದೆ. ಹೇಗೆ ನಮ್ಮ ಮನೆಯ ಆರ್‌ಸಿಸಿ ಕ್ಯೂರಿಂಗ್ ಮಾಡುತ್ತೇವೆ. ಈ ರಸ್ತೆ ಅಭಿವೃದ್ಧಿ ಸಂಚಾರದ ನೆಪವೊಡ್ಡಿ ವಿರೋಧಿಸುವ ಮನೋಭಾವನೆ ಇಟ್ಟುಕೊಳ್ಳಬಾರದು. ಬದಲಾಗಿ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ತಿಳಿಸಿದ್ದಾರೆ.

ದುರಸ್ತಿ ಕಾಣದ ಇಂಗಳೇಶ್ವರ, ಬಿಸನಾಳ ರಸ್ತೆಗಳು: ಆರೋಪ

ಬಸವನಬಾಗೇವಾಡಿ: ತಾಲೂಕಿನ ಇಂಗಳೇಶ್ವರದಿಂದ ಬಿಸನಾಳಕ್ಕೆ ಹೋಗುವ ಸರಕಾರಿ ರಸ್ತೆ ಹಿಂದಿನ ಕಾಲದಿದ್ದು, ಆದರೆ ಇದು ಯಾವ ಇಲಾಖೆಯ ವ್ಯಾಪ್ತಿಗೆ ಬರುತ್ತದೆ ಎಂಬುದು ಅಧಿಕಾರಿಗಳಿಗೆ ಗೊತ್ತಿಲ್ಲದಿರುವುದು ಸೋಜಿಗದ ಸಂಗತಿಯಾಗಿದೆಂದು ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ದೂರಿದರು.
ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಇಂಗಳೇಶ್ವರದಿಂದ ಬಿಸನಾಳಕ್ಕೆ ಹೋಗುವ ರಸ್ತೆ ಯಾವ ಇಲಾಖೆಗೆ ಸಂಭಂದಿಸಿದೆ ಎಂದು ಲೋಕೋಪಯೋಗಿ, ಜಿಲ್ಲಾ ಪಂಚಾಯತಿ ಎಂಜನಿಯರಿಂಗ್ ಇಲಾಖೆಯ, ಭೂಸೇನಾ ನಿಗಮದ ಅಧಿಕಾರಿಗಳನ್ನು ಕೇಳಿದರೆ ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಸಂಬಂದಿಸಿದ ಇಲಾಖೆಯವರು ನಮಗೆ ರಸ್ತೆ ಸುಧಾರಣೆ ವಹಿಸಿಕೊಟ್ಟರೆ ಅದನ್ನು ರಿಪೇರಿ ಮಾಡುವದು ಅಥವಾ ಡಾಂಬರೀಕರಣ ಮಾಡುವುದಷ್ಟೆ ನಮ್ಮ ಜವಬ್ದಾರಿ ಅದು ಬಿಟ್ಟರೆ ರಸ್ತೆ ನಮ್ಮ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಈ ರಸ್ತೆ ಸಂಪೂರ್ಣ ಹದಗೆಟ್ಟಿದ್ದು ಮಳೆಗಾಲದಲ್ಲಿ ಸಂಪೂರ್ಣ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ, ಸರ್ಕಾರಿ ರಸ್ತೆ ಇದ್ದರು ಅಕ್ಷರ ಸಹ ಇದು ಅನಾಥವಾಗಿದೆ, ಇಂಗಳೇಶ್ವರದಿಂದ ಬಿಸನಾಳಕ್ಕೆ ಹೋಗುವ ರಸ್ತೆಯ ಅಡ್ಡಲಾಗಿ ಹಳ್ಳ ಇದ್ದು ಹಳ್ಳ ದಾಟಿದರೇ ಬಿಸನಾಳ ವ್ಯಾಪ್ತರಿಗೆ ಬರುತ್ತದೆ, ಹಳ್ಳದ ಆಚೆಗೆ ರಸ್ತೆಯನ್ನು ಈ ಮೊದಲು ದುರಸ್ತಿಗೊಳಿಸಿದ್ದಾರೆ, ಇಂಗಳೇಶ್ವರದಿಂದ ಬಿಸನಾಳದ ಹಳ್ಳದವರೆಗೆ ರಸ್ತೆ ದುರಸ್ಥಿ ಆಗಿರುವುದಿಲ್ಲ ಎಂದು ಆರೋಪಿಸಿದರು.
ಗ್ರಾಮೀಣ ಭಾಗದ ರಸ್ತೆಗಳನ್ನು ಸುಧಾರಣೆ ಮಾಡಲು ಒಳ್ಳೆಯ ಯೋಜನೆ ಜಾರಿಗೆ ತರಬೇಕೆಂದು ಅಟಲ್ ಬಿಹಾರಿ ವಾಜಪೇಯಿ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಜಾರಿಗೆ ತಂದರು. ಆದರೆ ಈ ಯೋಜನೆಯನ್ನು ನಂತರದಲ್ಲಿ ಅಧಿಕಾರಕ್ಕೆ ಬಂದ ಸರ್ಕಾರಗಳು ಅನುಷ್ಠಾನಕ್ಕೆ ತರಲಿಲ್ಲ, ಹೀಗಾಗಿ ಗ್ರಾಮೀಣ ರಸ್ತೆಗಳು ಜಮೀನುಗಳಿಗೆ ಸಂಪರ್ಕಿಸುವ ಮತ್ತು ಹಳ್ಳಿಗಳಿಗೆ ಸಂಪರ್ಕಿಸುವ ರಸ್ತೆಗಳು ಅಭಿವೃದ್ಧಿ ಕಾಣದೇ ಗ್ರಹಣ ಆವರಿಸಿಕೊಂಡಿದೆ. ಇದರಿಂದ ಗ್ರಾಮೀಣ ಪ್ರದೇಶಗಳಿಗೆ ತೆರಳಲು ರೈತರು ಹಾಗೂ ಜನಸಾಮಾನ್ಯರು ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಕೂಡಲೇ ರಸ್ತೆ ಅಗಲೀಕರಣ ಮಾಡಿ ಪುನಃ ಡಾಂಬರೀಕರಣ ಮಾಡಬೇಕೆಂದು ಆಗ್ರಹಿಸಿದರು. ರೈತರಾದ ದತ್ತಾತ್ರೆಯ ಕುಲಕರ್ಣಿ ಇದ್ದರು.




ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ವಿಜಯಪುರ: ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ನಗರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.
ನಗರ ಮತಕ್ಷೇತ್ರದ ವ್ಯಾಪ್ತಿಯ ಖಂಡಸಾರಿ ತಾಂಡಾದಲ್ಲಿ 1 ಕೋಟಿ ರೂ. ಅನುದಾನದಲ್ಲಿ ತಾಂಡಾದ ಮುಖ್ಯ ರಸ್ತೆ ಮತ್ತು ಆಂತರಿಕ ಸಿಸಿ ರಸ್ತೆ ಅಭಿವೃದ್ಧಿಪಡಿಸುವುದು ಹಾಗೂ 5 ಲಕ್ಷ ರೂ. ಅನುದಾನದಲ್ಲಿ ಸೇವಾಲಾಲ್ ದೇವಸ್ಥಾನದ ಹತ್ತಿರ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು. ಇದೇ ವೇಳೆ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ದಿಂದ ಸನ್ 2025-26ನೇ ಸಾಲಿನ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ಮಂಜೂರಿಸಲಾದ ಅನುದಾನದಲ್ಲಿ ಅಳವಡಿಸಲಾದ ಹೈಮಾಸ್ಟ್ ದೀಪ ಹಾಗೂ ಶುದ್ಧ ಕುಡಿಯುವ ನೀರಿನ ಘಟಕವನ್ನು ಉದ್ಘಾಟಿಸಿದರು.
ಇದಕ್ಕೂ ಮೊದಲು ವಾರ್ಡ್ ನಂ.1 ರಲ್ಲಿ ಬರುವ ಶಕ್ತಿ ನಗರ ರವೀಂದ್ರನಾಥ ಟ್ಯಾಗೋರ್ ಶಾಲೆ ಎದುರು ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಮಂಜೂರಾದ 2025-26ನೇ ಸಾಲಿನ ರೂ.25 ಲಕ್ಷ ಅನುದಾನದಲ್ಲಿ ಶಕ್ತಿ ನಗರ ಶಿವಶಿಂಪಿ ಸಮಾಜದ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು. ಮಹಾನಗರ ಪಾಲಿಕೆ ಸದಸ್ಯರು, ಕಾರ್ಯಕರ್ತರು, ಅಭಿಮಾನಿಗಳು, ಸ್ಥಳೀಯರು ಇದ್ದರು.



ಪೊಲೀಸ್ ಇಲಾಖೆಯ ಕಾರ್ಯ ಶ್ಲಾಘನೀಯ

ಇಂಡಿ: ಸಾರ್ವಜನಿಕರ ನೆಮ್ಮದಿ ಬದುಕಿಗೆ ಪೊಲೀಸ್ ಇಲಾಖೆಯು ಪ್ರಾಮಾಣಿಕ ಸೇವೆ ಸಲ್ಲಿಸುತ್ತಿದೆ. ಜನರ ಶಾಂತಿ, ಸಹನೆಗೆ ಪೊಲೀಸ್ ಕಾರ್ಯ ಶ್ಲಾಘನೀಯವಾಗಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.
ನಗರದ ಪೊಲೀಸ್ ಸಿಬ್ಬಂದಿಗಳಿಗಾಗಿ 12 ವಸತಿ ಗೃಹಗಳ ಸಮುಚ್ಚಯ ಕಟ್ಟಡ ನಿರ್ಮಾಣ ಕಾಮಗಾರಿ ಭೂಮಿಪೂಜೆ ಸಮಾರಂಭದಲ್ಲಿ ಮಾತನಾಡಿದ ಅವರು, ನಮಗಾಗಿ ಶ್ರಮಿಸುವವರು ಸೈನಿಕ ಗಡಿಯಲ್ಲಿ ಸೇವೆ ಸಲ್ಲಿಸಿದರೆ ಪೊಲೀಸರು ಸಹ ಜನರ ಮಧ್ಯದಲ್ಲಿ ಹಗಲು ರಾತ್ರಿ ಎನ್ನದೆ ಶ್ರಮಿಸುವ ವರ್ಗ. ಪೊಲೀಸ್ ಇಲಾಖೆ ಅಪರಾಧ ರಹಿತ ಸಮಾಜ ನಿರ್ಮಿಸುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಪೊಲೀಸ್ ಇಲಾಖೆಯ ಸಿಬ್ಬಂದಿಗೆ ಬಹು ವರ್ಷಗಳಿಂದ ವಸತಿ ಸಮುಚ್ಚಯಗಳಿಲ್ಲದೆ ಇದ್ದರು ನಾನೂ ಕೂಡಾ ಬಹುದಿನಗಳಿಂದ ಗುಣಮಟ್ಟದ ಕಟ್ಟಡ ನಿರ್ಮಿಸಿ ಕೊಡಬೇಕು ಎಂಬ ಬಯಕೆಯಾಗಿತ್ತು ಎಂದರು.
ಪೊಲೀಸ್ ಇಲಾಖೆಯ ಮೂಲ ಸಮಸ್ಯೆಗಳು ವಸತಿ ಸಮುಚ್ಚಯ ಸೇರಿದಂತೆ ಅನೇಕ ಬೇಡಿಕೆಗಳಿಗೆ ಸಕಾರಾತ್ಮಕ ಸ್ಪಂದಿಸುವ ಗೃಹ ಸಚಿವರು ಮತ್ತು ಅಧಿಕಾರಿಗಳು ನಾನು ಗೃಹ ಸಮುಚ್ಚಯಕ್ಕೆ ಅನುದಾನ ಒದಗಿಸಲು ಕೇಳಿಕೊಂಡಾಗ ಮುಕ್ತಮನಸ್ಸಿನಿಂದ ಹಣಕಾಸಿನ ಸಹಾಯ ನೀಡಿದ ಗೃಹ ಸಚಿವರಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.
ನಗರ ಸಿಪಿಐ ಪ್ರದೀಪ ಬಿಸೆ , ಗ್ರಾಮೀಣ ಠಾಣೆಯ ಸಿಪಿಐ ಸುನೀಲ ಪಾಟೀಲ ಮಾತನಾಡಿದರು. ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಭೀಮಣ್ಣಾ ಕೌಲಗಿ, ಕಂದಾಯ ಉಪವಿಬಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ತಹಶೀಲ್ದಾರ್ ಬಿ.ಎಸ್.ಕಡಕಭಾವಿ, ಡಿವೈಎಸ್‌ಪಿ ಸದಾಶಿವ ಕಟ್ಟಿಮನಿ ಇದ್ದರು.
ಜಾವೇದ ಮೋಮಿನ, ರಾಜು ಪತಂಗೆ, ಧರ್ಮರಾಜ ಮುಜ ಗೊಂಡ, ಧರ್ಮರಾಜ ವಾಲಿಕಾರ, ನಗರ ಹಾಗೂ ಗ್ರಾಮೀಣ ಪೊಲೀಸ್ ಠಾಣೆಯ ಪೊಲೀಸ್ ಸಿಬ್ಬಂದಿ ಹಾಗೂ ಗಣ್ಯರು ಇದ್ದರು.



ಕಿರುಸುದ್ದಿ

ಕನಕಗಿರಿ ಉತ್ಸವದ ಲೋಗೋ ಬಿಡುಗಡೆ

ಕೊಪ್ಪಳ: ಮೇ 16 ಮತ್ತು 17ರಂದು ಐತಿಹಾಸಿಕ ಹಾಗೂ ಸಾಂಸ್ಕೃತಿಕ ವೈಭವವನ್ನು ಒಳಗೊಂಡ ಕನಕಗಿರಿ ಉತ್ಸವವನ್ನು ಅತ್ಯಂತ ವೈಭವದಿಂದ ಆಚರಿಸಲು ಸಕಲ ಸಿದ್ಧತೆಗಳು ಆರಂಭಗೊಂಡಿದ್ದು, ಇದರ ಅಂಗವಾಗಿ ಸೋಮವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಉತ್ಸವದ ಅಧಿಕೃತ ಲೋಗೋವನ್ನು ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ್ ಎಸ್. ತಂಗಡಗಿ ಅವರು ಬಿಡುಗಡೆಗೊಳಿಸಿದರು. ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ, ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಉಪ ವಿಭಾಗಾಧಿಕಾರಿ ಕ್ಯಾ.ಮಹೇಶ ಮಾಲಗಿತ್ತಿ, ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು, ಎಲ್ಲ ತಾಲೂಕುಗಳ ತಹಶೀಲ್ದಾರರು, ತಾಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಉಪಸ್ಥಿತರಿದ್ದರು.

ತಾಲೂಕಿಗೆ ಪ್ರಥಮ ಸ್ಥಾನ ಪಡೆದ ಸುಸ್ಮಿತಾಗೆ ಸನ್ಮಾನ



ಮಸ್ಕಿ: ಮಸ್ಕಿ ತಾಲೂಕಿಗೆ ಪ್ರಥಮ ಸ್ಥಾನವನ್ನು ಗಳಿಸಿಕೊಂಡಿದೆ. 2025-26ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಉತ್ತಮ ಫಲಿತಾಂಶ ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ ಕು.ಸುಸ್ಮಿತಾ (97.44%), ದ್ವಿತೀಯ ಸ್ಥಾನ ಪಡೆದ ವಿದ್ಯಾರ್ಥಿ ಕು. ಸಿದ್ಧಾರ್ಥ.ಡಿ (97.28%) ಮತ್ತು ಶಾಲೆಗೆ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿ ರಾಘವ ಪ್ರಸಾದ್ (96.96%) ಸಾಧನೆಗೈದು ಶಾಲೆಗೆ ಕೀರ್ತಿಯನ್ನು ತಂದಿದ್ದಾರೆ. ಈ ಮಕ್ಕಳಿಗೆ ಎನ್.ಎಂ.ಎಸ್ ಶಾಲೆಯ ಅಧ್ಯಕ್ಷ ಪ್ರತಾಪ ಗೌಡ ಪಾಟೀಲ, ಕಾರ್ಯದರ್ಶಿಗಳು, ಆಡಳಿತ ಮಂಡಳಿ ಸದಸ್ಯರು, ಮುಖ್ಯಗುರುಗಳಾದ ಮಂಜುನಾಥ ವಡ್ಡೆ ಹಾಗೂ ಶಿಕ್ಷಕರ ವತಿಯಿಂದ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಸುಸ್ಮಿತಾಳ ತಂದೆ ಶರಣಪ್ಪ ಕುಂಬಾರ ಬಳಗಾನೂರು, 3ನೇ ತರಗತಿಯಿಂದ ನನ್ನ ಮಗಳು ಶ್ರದ್ಧೆಯಿಂದ ಅಭ್ಯಾಸ ಮಾಡುತ್ತಿದ್ದಳು, ಪ್ರತಿ ದಿನ ಬಳಗಾನೂರಿನಿಂದ ಮಸ್ಕಿಗೆ ಸರ್ಕಾರಿ ಬಸ್ಸಿನಲ್ಲಿ ಹೋಗಿ ಕಠಿಣ ಅಭ್ಯಾಸ ಮಾಡುತ್ತಿದ್ದಳು. ಶಾಲೆಯಲ್ಲಿ ಹೇಳಿಕೊಟ್ಟಿದ್ದನ್ನು ನಿರಂತರವಾಗಿ ಅಭ್ಯಾಸ ಮಾಡಿದ ಕಾರಣ ಸಾಧನೆ ಮಾಡಲು ಸಹಾಯವಾಯಿತು. ಶಾಲೆಯ ಶಿಕ್ಷಕರು ನನ್ನ ಮಗಳ ಓದಿಗೆ ಸಹಾಯ ಮಾಡಿದರು. ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ ಎಂದರು.

ಭಾರೀ ಗಾಳಿ-ಮಳೆ: ಧರೆಗುರುಳಿದ ಮರ



ಹನುಮಸಾಗರ: ಸಮೀಪದ ಸೇಬಿನಕಟ್ಟಿ ಮನ್ನೇರಾಳ ಹೂಲಗೇರಿ ಸೇರಿದಂತೆ ಸುತ್ತಲಿನ ಪ್ರದೇಶಗಳಲ್ಲಿ ಸೋಮವಾರ ಸಂಜೆ ಗುಡುಗು, ಮಿಂಚು, ಬಿರುಗಾಳಿ ಸಮೇತ ಸುರಿದ ಮಳೆಯಿಂದ ಬಿಸಿಲಿನ ತೀವ್ರತೆಯಿಂದ ಬಳಲುತ್ತಿದ್ದ ಜನರಿಗೆ ತಂಪಿನ ಅನುಭವಾಗಿದೆ. ಸೋಮವಾರ ಸಂಜೆ ಆಕಸ್ಮಿಕವಾಗಿ ಸುರಿದ ಮಳೆ ರೈತರಿಗೆ, ಜನರಿಗೆ ಸಂತಸ ಮೂಡಿಸಿತು. ಮುಂಗಾರಿನ ಮಳೆ ಭರಣಿ ಮೊದಲ ಪಾದದಲ್ಲಿ ಮಳೆ ಪ್ರಾರಂಭವಾಗಿರುವುದರಿಂದ ರೈತರಲ್ಲಿ ಆಶಾಭಾವನೆ ಚಿಗುರೊಡೆದಿದೆ. ಇದೇ ರೀತಿ ಮಳೆ ಮುಂದುವರೆಯಬೇಕೆಂದು ರೈತ ದೇವರಲ್ಲಿ ಪ್ರಾರ್ಥಿಸುತ್ತಿದ್ದಾನೆ. ಗಾಳಿಯ ಅಬ್ಬರದಿಂದ ಕೆಲವೆಡೆ ಸಣ್ಣ-ಪುಟ್ಟ ಅಡಚಣೆಗಳೂ ಉಂಟಾಗಿವೆ. ಇನ್ನೊಂದೆಡೆ, ಈ ಮಳೆಯು ಬಿಸಿಲಿನ ತೀವ್ರತೆಯನ್ನು ಕಡಿಮೆ ಮಾಡಿ ವಾತಾವರಣ ತಂಪಾಗಿಸಿದೆ ಎಂದರು. ಸೇಬಿನಕಟ್ಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿರುವ ಗಿಡ ಮುರಿದು ಬಿದ್ದಿರುವುದು ಕಂಡುಬಂದಿದೆ ಹಾಗೂ ಗ್ರಾಮದ 6 ಕ್ಕೂ ಹೆಚ್ಚು ಮನೆಗಳ ಶೀಟ್ ಹಾರಿಹೋಗಿವೆ ಎಂದು ಗ್ರಾಮಸ್ಥರು ತಿಳಿಸಿದರು. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ಪರಿಹಾರ ನೀಡಬೇಕು ಎಂದರು.



ಕೊಪ್ಪಳ: ಮೇ 16 ಮತ್ತು 17ರಂದು ಐತಿಹಾಸಿಕ ಹಾಗೂ ಸಾಂಸ್ಕೃತಿಕ ವೈಭವವನ್ನು ಒಳಗೊಂಡ ಕನಕಗಿರಿ ಉತ್ಸವವನ್ನು ಅತ್ಯಂತ ವೈಭವದಿಂದ ಆಚರಿಸಲು ಸಕಲ ಸಿದ್ಧತೆಗಳು ಆರಂಭಗೊಂಡಿದ್ದು, ಇದರ ಅಂಗವಾಗಿ ಸೋಮವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಉತ್ಸವದ ಅಧಿಕೃತ ಲೋಗೋವನ್ನು ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ್ ಎಸ್. ತಂಗಡಗಿ ಅವರು ಬಿಡುಗಡೆಗೊಳಿಸಿದರು.

ಕ್ಷೇತ್ರದ ಸಮಗ್ರ ಪ್ರಗತಿಗೆ ಆದ್ಯತೆ: ಶಾಸಕ

ಕುಷ್ಟಗಿ: ತಾಲೂಕಿನ ಗ್ರಾಮೀಣ ಭಾಗದ ಸರ್ವಾಂಗೀಣ ಅಭಿವೃದ್ಧಿಗೆ ಮೊದಲಾದ್ಯತೆ ನೀಡಲಾಗುವುದು ಎಂದು ವಿಪ ಮುಖ್ಯಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು.

ತಾಲೂಕಿನ ಗುಮಗೇರಾ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಸಿಸಿ ಕಾಮಗಾರಿ ಹಾಗೂ ಶ್ರೀದುರ್ಗಾದೇವಿ ದೇವಸ್ಥಾನ ಜೀರ್ಣೋದ್ಧಾರ ಕಾಮಗಾರಿಗೆ ಸೋಮವಾರ ಚಾಲನೆ ನೀಡಿ ಮಾತನಾಡಿದರು. ಮತ ಕ್ಷೇತ್ರದಲ್ಲಿ ಗ್ರಾಮೀಣ ಭಾಗದ ಹಳ್ಳಿಗಳಲ್ಲಿ ಸಿಸಿ ರಸ್ತೆ ಕುಡಿವ ನೀರು, ದೇವಸ್ಥಾನಗಳಿಗೆ ಅನುದಾನ ಮಂಜೂರುಗೊಳಿಸಿ ಅಭಿವೃದ್ಧಿಗೆ ಸದಾ ಕೈಜೋಡಿಸಲಾಗುವುದು. ಗ್ರಾಮದಲ್ಲಿ ಅಂದಾಜು 20 ಲಕ್ಷ ರೂ. ವೆಚ್ಚದಲ್ಲಿ ಕಾಂಕ್ರಿಟ್ ರಸ್ತೆ, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 4.95 ಲಕ್ಷ ರೂ.ದಲ್ಲಿ ಕಾಮಗಾರಿ ನಿರ್ವಹಿಸುತ್ತಿದ್ದು, ಗ್ರಾಮಸ್ಥರು ಅಭಿವೃದ್ಧಿ ಕಾಮಗಾರಿಗೆ ಸಹಕರಿಸಬೇಕು. ಕೆಲಸಗಳು ಹಂತ ಹಂತವಾಗಿ ಸಾಗುತ್ತಿದ್ದು, ಹಳ್ಳಿಗಳಿಗೆ ಅಗತ್ಯ ಮೂಲ ಸೌಲಭ್ಯ ಕಲ್ಪಿಸುವ ಮೂಲಕ ಪ್ರಾಧಾನ್ಯತೆ ನೀಡಲಾಗುವುದು ಎಂದು ತಿಳಿಸಿದರು.

ಬೇವೂರಪ್ಪ ಪೂಜಾರ್, ಶಿವಪುತ್ರಪ್ಪ ಜರಗಡ್ಡಿ, ಶರಣಪ್ಪ ಕಂಬಳಿ, ಹನ್ಮಪ್ಪ ಕಂಬಳಿ, ಬಸವರಾಜ ಚೌಡ್ಕಿ, ಮಾರುತಿ ಭಜಂತ್ರಿ, ಶರಣಪ್ಪ ರ್‍ಯಾವಣಿಕಿ ಚಂದ್ರಗೌಡ ಪೂಜಾರ್, ಹೊನ್ನಪ್ಪ ಗಂಗನಾಳ, ಸಣ್ಣಯಲ್ಲಪ್ಪ ಲೈನದ್, ಶೇಖರಪ್ಪ ಸಂಗನಾಳ, ಭೀಮಪ್ಪ ರಾಯಚೂರು, ಬಸಪ್ಪ ಕುಷ್ಟಗಿ, ಚಂದ್ರಪ್ಪ ಕತ್ತಿ, ರಾಜಪ್ಪ ಶಾಖಾಪುರ ಇತರರಿದ್ದರು.



ಕುಷ್ಟಗಿ: ತಾಲೂಕಿನ ಗುಮಗೇರಾ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಸಿಸಿ ಕಾಮಗಾರಿ ಹಾಗೂ ಶ್ರೀದುರ್ಗಾದೇವಿ ದೇವಸ್ಥಾನ ಜೀರ್ಣೋದ್ಧಾರ ಕಾಮಗಾರಿಗೆ ಶಾಸಕ ದೊಡ್ಡನಗೌಡ ಪಾಟೀಲ ಚಾಲನೆ ನೀಡಿದರು. ಭೂಸೇನೆ ನಿಗಮದ ಇಂಜಿನಿಯರ್ ಇರ್ಫಾನ್, ಬಿಜೆಪಿ ಮುಖಂಡ ಅಶೋಕ ಬಳೂಟಗಿ,ನಿರ್ಮಿತಿ ಕೇಂದ್ರದ ಅಧಿಕಾರಿ ಆದೇಶ ಗುಡಿಹಾಳ್, ಗ್ರಾಪಂ ಪಿಡಿಒ ಶಿವಸಂಗಪ್ಪ ತುಂಬದ್, ಮುಖಂಡರಾದ ಬಸವರಾಜ ಗುಂಟಮಡು ಇದ್ದರು.

ಶಾಸಕ ಅಜಯ್ ಧರ್ಮಸಿಂಗ್ ಹೇಳಿಕೆ

ತುರ್ತು ಕಾಮಗಾರಿಗೆ ಅನುದಾನ ಮೀಸಲು

ಕಲಬುರಗಿ: ಬೇಸಿಗೆಯ ಬಿಸಿಲ ತಾಪ ಏರುತ್ತಿರುವ ಹಿನ್ನೆಲೆಯಲ್ಲಿ ಜೇವರ್ಗಿ ಮತ್ತು ಯಡ್ರಾಮಿ ತಾಲೂಕುಗಳಲ್ಲಿ ತೀವ್ರಗೊಳ್ಳುತ್ತಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಆಡಳಿತ ಯಂತ್ರ ಸಜ್ಜಾಗಿದ್ದು, ತುರ್ತು ಕಾಮಗಾರಿಗಳಿಗಾಗಿ 365.80 ಲಕ್ಷ ಅನುದಾನ ಮೀಸಲಿಡಲಾಗಿದೆ ಎಂದು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ, ಜೇವರ್ಗಿ ಶಾಸಕ ಡಾ.ಅಜಯ್ ಧರ್ಮಸಿಂಗ್ ತಿಳಿಸಿದರು.

ನಗರದ ಕೆಕೆಆರ್‌ಡಿಬಿ ಮಂಡಳಿ ಸಭಾಂಗಣದಲ್ಲಿ ತುರ್ತು ಸಭೆ ನಡೆಸಿ ಮಾತನಾಡಿದ ಅವರು,ಜೇವರ್ಗಿ ತಾಲ್ಲೂಕಿನಲ್ಲಿ 49 ಕಾಮಗಾರಿಗಳಿಗೆ 217.80 ಲಕ್ಷ ರೂಪಾಯಿ ಖರ್ಚು ಮಾಡಲಾಗುತ್ತಿದೆ. ಯಡ್ರಾಮಿ ತಾಲ್ಲೂಕಿನಲ್ಲಿ 33 ಕಾಮಗಾರಿಗಳಿಗೆ ಅಂದಾಜು 148 ಲಕ್ಷ ರೂ. ವೆಚ್ಚ ಮಾಡಲಾಗುತ್ತಿದೆ. ಒಟ್ಟು 82 ಕಾಮಗಾರಿಗಳಿಗೆ 365 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗುತ್ತಿದೆ. ರಾಜ್ಯ ಸರ್ಕಾರ ಕಲಬುರಗಿ ಜಿಲ್ಲೆಗೆ 2 ಕೋಟಿ ಅನುದಾನ ಬಿಡುಗಡೆ ಮಾಡಿದ್ದು, ಇದು ಸಾಲದಾಗಿರುವುದರಿಂದ ಹೆಚ್ಚಿನ ಅನುದಾನಕ್ಕಾಗಿ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ತುರ್ತು ಕ್ರಮಗಳು ಮತ್ತು ನಿರ್ದೇಶನಗಳು: ನೀರಿನ ತೀವ್ರ ಅಭಾವವಿರುವ ಪ್ರತಿ ತಾಲ್ಲೂಕಿನ 8 ಗ್ರಾಮಗಳಲ್ಲಿ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆಯಲು ತಲಾ 6 ಲಕ್ಷ ಮೀಸಲಿಡಲಾಗಿದೆ. ಆಂದೋಲಾ,ಬಿರಾಳ ಬಿ, ಆಲೂರು ಮತ್ತು ಅರಳಗುಂಡಗಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಹೊಸ ಬೋರ್ವೆಲ್ ಕೊರೆಯಿಸಿ ಮೋಟಾರ್ ಅಳವಡಿಸಲು ನಿರ್ದೇಶನ ನೀಡಲಾಗಿದೆ.



ಶಾಶ್ವತ ಪರಿಹಾರಕ್ಕೆ ಗಡುವು

ದಶಕಗಳಿಂದ ಕಾಡುತ್ತಿರುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲು ಆಲೂರ, ಕೂಡಿ ಮತ್ತು ಯಾಳವಾರ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು 2027ರ ಫೆಬ್ರವರಿ ಅಂತ್ಯದೊಳಗೆ ಪೂರ್ಣಗೊಳಿಸಬೇಕೆಂದು ಶಾಸಕರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದರು. ಅಲ್ಲದೆ, ಮಲ್ಲಾಕ ಮತ್ತು ಇಟಗಾ ಯೋಜನೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರದ ಹಂತದಲ್ಲಿ ಅನುದಾನ ತರುವ ಭರವಸೆಯನ್ನು ನೀಡಿದರು.

ಅರಳಗುಂಡಗಿ, ಅವರಾದ ಮತ್ತು ನಂದಿಹಳ್ಳಿ ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿ ಕೈಗೊಳ್ಳಲು ಸೂಚಿಸಲಾಗಿದೆ ಎಂದರು.

> ಬೇಸಿಗೆಯಲ್ಲಿ ಯಾವುದೇ ಗ್ರಾಮ ಅಥವಾ ವಾರ್ಡ್‌ಗಳಲ್ಲಿ ನೀರಿನ ಸಮಸ್ಯೆ ಉಂಟಾಗಬಾರದು. ಅಧಿಕಾರಿಗಳು ತಮ್ಮ ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡದೆ,ಕೇಂದ್ರ ಸ್ಥಾನದಲ್ಲಿದ್ದು ಸಾರ್ವಜನಿಕರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಬೇಕು.
> ■ ಡಾ.ಅಜಯ್ ಧರ್ಮಸಿಂಗ್,ಶಾಸಕ, ಜೇವರ್ಗಿ

ಈ ಸಂದರ್ಭದಲ್ಲಿ ತಹಶೀಲ್ದಾರರು, ತಾಪಂ ಇಒಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಯ ಮುಖ್ಯ ಅಧಿಕಾರಿಗಳು ಉಪಸ್ಥಿತರಿದ್ದರು.

ತಳವಾರ ಸಮುದಾಯದಿಂದ ಪ್ರತಿಭಟನೆ

ಕಲಬುರಗಿ: ಪರಿಶಿಷ್ಟ ಪಂಗಡ (ಎಸ್‌ಟಿ) ಪ್ರಮಾಣಪತ್ರ ನೀಡುವಲ್ಲಿ ಆಗುತ್ತಿರುವ ವಿಳಂಬ ಹಾಗೂ ನಿರಾಕರಣೆ ವಿರುದ್ಧ ತಳವಾರ ಸಮುದಾಯದವರು ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ತಳವಾರ ಸಮಾಜದ ನೇತೃತ್ವದಲ್ಲಿ ಜಗತ್ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿ ತನಕ ಮೆರವಣಿಗೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮಾತನಾಡಿದ ಪ್ರತಿಭಟನಾನಿರತರು, ರಾಜ್ಯದ ಇತರ ಜಿಲ್ಲೆಗಳಲ್ಲಿ ತಳವಾರ ಸಮುದಾಯಕ್ಕೆ ಎಸ್.ಟಿ ಪ್ರಮಾಣಪತ್ರ ನೀಡಲಾಗುತ್ತಿರುವಾಗ, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಮಾತ್ರ ಉದ್ದೇಶಪೂರ್ವಕವಾಗಿ ತಡೆಹಿಡಿಯಲಾಗುತ್ತಿದೆ ಎಂದು ಆರೋಪಿಸಿದರು. 2020ರಲ್ಲಿ ರಾಜ್ಯ ಸರ್ಕಾರ ತಳವಾರ ಹಾಗೂ ಪರಿವಾರ ಸಮುದಾಯವನ್ನು ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿಸಿ ಆದೇಶ ಹೊರಡಿಸಿತ್ತು. ಆದರೆ ಕಳೆದ ಎರಡು ವರ್ಷಗಳಿಂದ ಸ್ಥಳೀಯ ಮಟ್ಟದಲ್ಲಿ ಪ್ರಮಾಣಪತ್ರ ನೀಡುವ ಪ್ರಕ್ರಿಯೆ ಸ್ಥಗಿತಗೊಂಡಂತಾಗಿದೆ ಎಂದು ಮುಖಂಡರು ದೂರಿದರು. ರಾಜಕೀಯ ಕಾರಣಗಳಿಂದ ಸಮಸ್ಯೆ ಉಂಟಾಗಿದೆ ಎಂಬ ಆರೋಪಿಸಿದರು.

ತಳವಾರ್ ಸಮಾಜದ ರಾಜ್ಯಾಧ್ಯಕ್ಷ ಸರ್ದಾರ ರಾಯಪ್ಪ ಮಾತನಾಡಿ, ಪ್ರಮಾಣಪತ್ರ ಸಿಗದೆ ಸಮುದಾಯದ ವಿದ್ಯಾರ್ಥಿಗಳು ಶಿಕ್ಷಣ ಹಾಗೂ ಉದ್ಯೋಗ ಅವಕಾಶಗಳಿಂದ ದೂರವಾಗುತ್ತಿದ್ದಾರೆ ಎಂದುಕಳವಳ ವ್ಯಕ್ತಪಡಿಸಿದರು. ಜೆಡಿಎಸ್ ಮುಖಂಡ ಶಿವಕುಮಾರ್ ನಾಟಿಕಾರ್ ಕೂಡ ಸರ್ಕಾರದ ಆದೇಶಗಳಿದ್ದರೂ ಅನುಷ್ಠಾನದಲ್ಲಿ ವಿಫಲವಾಗಿರುವುದು ಖಂಡನೀಯ ಎಂದು ಹೇಳಿದರು.

ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಶಿವಕುಮಾರ ನಾಟೀಕಾರ ಮಾತನಾಡಿದರು. ಗುರುದಾಸ ದಂಗಾಪುರ, ನಿರಂಜನ ಚೈತನ್ಯ ಬೆಂಗಳೂರು, ಬಸರಾಜ ಬೂದಿಹಾಳ, ಸಂತೋಷ ಬೆಣ್ಣೂರ, ಸಂತೋಷ ತಳವಾರ, ಶಾಂತಪ್ಪ ಕೂಡಿ, ಅನಿಲ್ ಕೂಡಿ, ಶಿವಶರಣ ಬೆಣ್ಣೂರ್, ಚಂದ್ರಕಾಂತ ಜಮಾದಾರ, ಈರಣ್ಣ ಕಿರಸಾವಳಗಿ, ಬಾಪುಗೌಡ ಮಾಲಿಪಾಟೀಲ್, ಸಿದ್ದು ಯಲಬಾ ನಾರಾಯಣಪುರ, ಅಶೋಕ ಕಂಕಿ, ಭೀಮರಾಯ ತಳವಾರ್, ಬಾಬು ಎಸ್.ಹಯ್ಯಾಳಿ, ರೇವಣಸಿದ್ದಗೌಡ ಕಮಾನಮನಿ, ಸಂಗಣ್ಣ ಇಟಗಾ, ವಸಂತರಾವ, ಚಿದಂಬರ, ವಿದ್ಯಾಧರ ಮಂಗಳೂರ, ಗುರು ಜೈನಾಪುರ, ಮೈಲಾರಿ ಗೂಡುರ, ಮಾರಾಯ ಅಗಸಿ ಇತರರಿದ್ದರು.



ಕಾಂಗ್ರೆಸ್ ವಿರುದ್ಧ ಬಿಜೆಪಿ ಬೃಹತ್ ಪ್ರತಿಭಟನೆ

ಸಿಂಧನೂರು: ನಗರದ ಪ್ರವಾಸಿ ಮಂದಿರದಿಂದ ತಾಲೂಕು ಕಚೇರಿವರೆಗೆ ಭಾರತೀಯ ಜನತಾ ಪಕ್ಷದ ವತಿಯಿಂದ ಮಹಿಳಾ ಮಂಡಲದ ಅಧ್ಯಕ್ಷರ ನೇತೃತ್ವದಲ್ಲಿ ನಾರಿ ಶಕ್ತಿ ವಂದನಾ ಅಧಿನಿಯಮವನ್ನು ಜಾರಿಯಾಗದಂತೆ ತಡೆದ ಮಹಿಳಾ ವಿರೋಧಿ (ಮಹಿಳಾ ಮೀಸಲಾತಿ ಮಸೂದೆ ವಿರೋಧಿ) ಕಾಂಗ್ರೆಸ್ ಪಕ್ಷ ಮತ್ತು ಮಿತ್ರ ಪಕ್ಷಗಳ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಈ ಪ್ರತಿಭಟನೆಯನ್ನು ಉದ್ದೇಶಿಸಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ ದೊಡ್ಡ ಬಸವರಾಜ ಮಾತನಾಡಿ ಕಾಂಗ್ರೆಸ್ ಎಲ್ಲಾ ಕಾಲದಲ್ಲೂ ಮಹಿಳಾ ಮೀಸಲಾತಿ ವಿರೋಧಿಸುತ್ತಾ ಬಂದಿದೆ.ಈಗ ಅದರ ಮುಂದುವರಿದ ಭಾಗವಾಗಿ ಲೋಕಸಭೆಯಲ್ಲಿ ನಾರೀಶಕ್ತಿ ವಂದನಾ ಮಸೂದೆಯನ್ನು ಸೋಲಿಸಿದೆ ಎಂದರು.

ನಂತರ ಬಿಜೆಪಿ ನಗರ ಮಂಡಲ ಅಧ್ಯಕ್ಷ ಸಿದ್ಧರಾಮೇಶ ಮನ್ನಾಪೂರು ಅವರು ಮಾತನಾಡಿ ಸಂಸತ್‌ನಲ್ಲಿ ಮಹಿಳಾ ಮೀಸಲಾತಿ ಕಾಯ್ದೆ ಸೋಲಿಸುವ ಮೂಲಕ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ತಾವು ಮಹಿಳಾ ವಿರೋಧಿಗಳು ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿವೆ. 60 ವರ್ಷ ಆಡಳಿತ ನಡೆಸಿದರೂ ಮಹಿಳಾ ಮೀಸಲಾತಿ ಕಲ್ಪಿಸದ ಕಾಂಗ್ರೆಸ್ ಪಕ್ಷ ಈಗ ಪ್ರಧಾನಿ ನರೇಂದ್ರ ಮೋದಿ ಅವರಿಗೂ ಕಾಯ್ದೆ ಜಾರಿಗೆ ತರಲು ಬಿಡಲಿಲ್ಲ ಎಂದು ಆರೋಪಿಸಿದರು.

ಯುವ ನಾಯಕರಾದ ಕೆ.ರಾಜಶೇಖರ, ಮುಖಂಡರಾದ ಗ್ರಾಮೀಣ ಮಂಡಲದ ಅಧ್ಯಕ್ಷರಾದ ಯಂಕೋಬ ನಾಯಕ ರಾಮತ್ನಾಳ, ಮುಖಂಡರಾದ ಸಿರಾಜ್ ಪಾಷಾ, ಜಗದೀಶ ಕೆ.ಶಿವು, ಫಕೀರಪ್ಪ ಬಾಗೋಡಿ, ಮಹಿಳಾ ಮುಖಂಡರಾದ ಸಹನ ಹಿರೇಮಠ, ಮಮತಾ ಹಿರೇಮಠ, ನಂದಿನಿ ಮೇರನಾಳ, ಶೈಲಜಾ ಷಡಕ್ಷರಪ್ಪ, ಕವಿತಾ ಹಿರೇಮಠ, ರಮೇಶ, ಚಾಂದ್ ಪಾಷಾ, ರಾಜು ಅಡವಿಭಾವಿ, ನಬಿಸಾಬ್, ರವಿ ರಾಠೋಡ ಸೇರಿದಂತೆ ಪಕ್ಷದ ಗಣ್ಯರು, ಹಿರಿಯರು, ಮಂಡಲದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಮಂಡಲ ಪದಾಧಿಕಾರಿಗಳು ಮತ್ತು ಮಹಾಶಕ್ತಿ ಕೇಂದ್ರದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ವಿವಿಧ ಮೋರ್ಚಾಗಳ ಅಧ್ಯಕ್ಷರು ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯಕರ್ತರಿದ್ದರು.



ನಿರಂತರ ಅಧ್ಯಯನದಿಂದ ಸಾಧನೆ ಸಾಧ್ಯ: ಜಿಲ್ಲಾಧಿಕಾರಿ

ರಾಯಚೂರು: ವಿದ್ಯಾರ್ಥಿಗಳು ವಿಷಯಗಳನ್ನು ಕಂಠಪಾಠ ಮಾಡಿ ಪರೀಕ್ಷೆ ಎದುರಿಸುವುದಕ್ಕಿಂತ ವಿಷಯವನ್ನು ವಿವಿಧ ಕೋನಗಳ ಮೂಲಕ ಅರ್ಥೈಸಿಕೊಂಡು ಪರೀಕ್ಷೆ ಎದುರಿಸುವುದರಿಂದ ಉನ್ನತ ಶಿಕ್ಷಣ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಿರಾಯಾಸವಾಗಿ ಎದುರಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಡಿಸಿ ನಿತೀಶ ಕೆ.ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸೋಮವಾರ ಡಿಸಿ ಕಚೇರಿಯ ಸಭಾಂಗಣದಲ್ಲಿ ಆಯೋಜಿಸಿದ್ದ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕ ಗಳಿಸಿದ ಐದು ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣ ಸಂದರ್ಭದಲ್ಲಿನೇ ವಿದ್ಯಾರ್ಥಿಗಳು ವಿಷಯುಗಳನ್ನು ಅರ್ಥೈಸಿಕೊಳ್ಳುವುದರತ್ತ ಗಮನಕೊಡಬೇಕು. ಇದರಿಂದ ಪದವಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಾಧನೆ ಮಾಡುವುದಕ್ಕೆ ಸುಲಭವಾಗುತ್ತದೆ ಎಂದು ತಿಳಿಸಿದರು.



ನಿರಂತರ ಅಧ್ಯಯನದಿಂದ ಮಾತ್ರ ಹೆಚ್ಚಿನ ಜ್ಞಾನ ಸಂಪಾದಿಸುವುದಲ್ಲದೆ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಉತ್ತಮ ಜೀವನ ನಡೆಸಲು ಸಹಕಾರಿಯಾಗುತ್ತದೆ. ಉನ್ನತ ಜ್ಞಾನ, ಉತ್ತಮ ಸ್ಥಾನಗಳನ್ನು ಸಂಪಾದಿಸುವುದರೊಂದಿಗೆ ಮಾನವೀಯಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಉತ್ತಮ ಸಾಧನೆ ಮಾಡಿದಕ್ಕೂ ಬೆಲೆ ಬರುತ್ತದೆ ಎಂದರು.

ವಿದ್ಯಾರ್ಥಿಗೆ ಶತೃವೆಂದರೇ ಅದು ಮೊಬೈಲ್ ಫೋನ್ ಆಗಿದ್ದು, ಅದನ್ನು ಒಳ್ಳೆ ಕೆಲಸಗಳಿಗೆ ಮತ್ತು ಶಿಕ್ಷಣದ ವಿಚಾರವಾಗಿ ಬಳಸಿದರೇ ಮಾತ್ರ ಉಪಯೋಗವಾಗುತ್ತದೆ. ಕೇವಲ ಸಾಮಾಜಿಕ ಜಾಲತಾಣದಲ್ಲಿ ಕಾಲಕಳೆಯುವುದರಿಂದ ಸಮಯ ಹಾಗೂ ಜೀವನ ವ್ಯರ್ಥವಾಗುತ್ತದೆ ಎಂದರು. ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕಗಳಿಸಿದ ಜಿಲ್ಲೆಯ ಮಾನ್ವಿ ತಾಲೂಕಿನ ಸುಖದೇವ (625), ಸಿಂಧನೂರಿನ ನಿಖಿಲ ಮೇಟಿ (622), ಲಿಂಗಸುಗೂರಿನ ಪ್ರವೀಣ್ (622), ದೇವದುರ್ಗದ ಮಲ್ಲಿಕಾರ್ಜುನ ಸ್ವಾಮಿ (622) ಹಾಗೂ ರಾಯಚೂರಿನ ಸೌಮ್ಯ ಪ್ಯಾಟಿ (619) ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

ಎಡಿಸಿ ಶಿವಾನಂದ ಭಜಂತ್ರಿ, ಜಿಪಂ ಮುಖ್ಯ ಲೆಕ್ಕಾಧಿಕಾರಿ ವಿಜಯ ಶಂಕರ, ರಾಯಚೂರು ತಹಶೀಲ್ದಾರ ಸುರೇಶ ವರ್ಮಾ, ಡಿಡಿಪಿಐ ಕೆ.ಡಿ.ಬಡಿಗೇರ, ಅಭಿವೃದ್ಧಿ ವಿಭಾಗದ ಉಪ ನಿರ್ದೇಶಕ ಚಂದ್ರಶೇಖರ ಭಂಡಾರಿ ಸೇರಿದಂತೆ ಇತರರಿದ್ದರು.

ಹಿಟ್ನಾಳ್‌ಗೆ ಸಚಿವ ಸ್ಥಾನ ನೀಡಲು ಕುರುಬ ಸಮುದಾಯ ಒತ್ತಾಯ

ಬಳ್ಳಾರಿ: ಕೊಪ್ಪಳ ಕ್ಷೇತ್ರದಲ್ಲಿ ಜನಪ್ರಿಯತೆ ಗಳಿಸಿರುವ, ಅಭಿವೃದ್ಧಿಯಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಶ್ರಮಿಸುತ್ತಿರುವ ಕುರುಬ ಸಮುದಾಯದ ಕೊಪ್ಪಳ ಕ್ಷೇತ್ರದ ಶಾಸಕ ರಾಘವೇಂದ್ರ ಹಿಟ್ನಾಳ್ ಅವರಿಗೆ ಸಚಿವ ಸ್ಥಾನ ನೀಡಬೇಕು. ಸಮುದಾಯದ ಒಬ್ಬರಿಗಾದರೂ ಎಮ್ಮೆಲ್ಸಿ ಸ್ಥಾನವನ್ನು ನೀಡಬೇಕು ಎಂದು ಕಾಂಗ್ರೆಸ್ ಹೈಕಮಾಂಡ್ ನಾಯಕರನ್ನು ಬಳ್ಳಾರಿ ಜಿಲ್ಲಾ ಕುರುಬ ಸಂಘದ ಅಧ್ಯಕ್ಷ ಡಾ.ಗಾದಿಲಿಂಗನಗೌಡ ಅವರು ಒತ್ತಾಯಿಸಿದರು.

ನಗರದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ನಾವು ಕಾಂಗ್ರೆಸ್ ಪಕ್ಷಕ್ಕೆ ಬಹುಪಾಲು ಬೆಂಬಲಿಸಿದರೂ ನಮ್ಮ ಸಮಾಜಕ್ಕೆ ನ್ಯಾಯಯುತವಾದ ಸೂಕ್ತ ಸ್ಥಾನ ಮಾನ ದೊರೆತಿಲ್ಲ, ಈ ಕುರಿತು ಸಾಕಷ್ಟು ಬಾರಿ ಮನವಿ ಮಾಡಿದರು ನಿರ್ಲಕ್ಷ್ಯ ಮಾಡಲಾಗುತ್ತಿದೆ, ಇದು ಸರಿಯಲ್ಲ, ಇಲ್ಲಿವರೆಗೆ ಡಿಸಿಸಿ ಅಧ್ಯಕ್ಷರಾಗಿಲ್ಲ, ಜಿ.ಪಂ.ಅಧ್ಯಕ್ಷರಾಗಿಲ್ಲ, ಕುರುಬ ಸಮುದಾಯವರನ್ನು ನಿರ್ಲಕ್ಷ್ಯ ಮಾಡುವುದು ಸರಿಯಲ್ಲ, ನಮ್ಮ ಸಮಾಜದವರೇ ಮುಖ್ಯಮಂತ್ರಿಗಳಿದ್ದಾರೆ ಎಂದು ಈ ರೀತಿ ಮಾಡುತ್ತಿದ್ದಾರೆ ಎಂಬುದು ತಿಳಿಯದಾಗಿದೆ. ಈ ಹಿಂದೆ ಬಳ್ಳಾರಿಯಿಂದ ಹಡಗಲಿಯ ಈ.ಟಿ.ಜಂಬುನಾಥ್ ಅವರಿಗೆ ಸಚಿವ ಸ್ಥಾನ ನೀಡಿದ್ದು ಬಿಟ್ಟರೆ, ಇಲ್ಲಿವರೆಗೆ ನಮಗೆ ಟಿಕೆಟ್ ನೀಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಚಿವ ಸಂಪುಟ ಪುನರ್ ರಚನೆ ಅಥವಾ ಸಚಿವ ಸಂಪುಟ ವಿಸ್ತರಣೆಯಾದರೆ ಕಲ್ಯಾಣ ಕರ್ನಾಟಕ ಭಾಗದ ಮೊದಲ ಆದ್ಯತೆ ನೀಡಿ, ಕೊಪ್ಪಳ ಕ್ಷೇತ್ರದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿರುವ ರಾಘವೇಂದ್ರ ಹಿಟ್ನಾಳ ಅವರಿಗೆ ಸಚಿವ ಸ್ಥಾನವನ್ನು ನೀಡಲೇಬೇಕು ಎಂದು ಒತ್ತಾಯಿಸಿದರು.

ಮುಖಂಡರಾದ ದಮ್ಮೂರು ಸೋಮಪ್ಪ, ಬೆಣಕಲ್ ಬಸವರಾಜ ಗೌಡ, ಬಿ.ಕೆ.ಕೆರಕೋಡಪ್ಪ, ಕೆ.ಹೊನ್ನಪ್ಪ, ಗಾದಿ ಲಿಂಗನಗೌಡ, ರಾಮಾಂಜಿನೇಯಲು, ಗುರುಪಾದ, ಓಂಕಾರಪ್ಪ, ಉಮಾಪತಿ, ಚನ್ನಬಸವರಾಜ್, ಬಿ.ಎಂ.ಪಾಟೀಲ್ ಸೇರಿದಂತೆ ಇತರರಿದ್ದರು.

ಕುಡಿಯುವ ನೀರಿನ ಸಮಸ್ಯೆಯಾದರೆ ಅಧಿಕಾರಿಗಳೇ ಹೊಣೆ

ಕೊಪ್ಪಳ: ಜಿಲ್ಲೆಯಲ್ಲಿ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲು ಸಮಗ್ರ ಯೋಜನೆ ರೂಪಿಸಿ ತ್ವರಿತವಾಗಿ ಜಾರಿಗೆ ತರಬೇಕು. ಜಿಲ್ಲೆಯ ಯಾವುದೇ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನೇ ನೇರ ಹೊಣೆ ಮಾಡಲಾಗುವುದು ಎಂದು ಸಚಿವ ಶಿವರಾಜ್ ಎಸ್.ತಂಗಡಗಿ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸೋಮವಾರ ಡಿಸಿ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ ಕುರಿತು ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬೇಸಿಗೆ ತೀವ್ರವಾಗುತ್ತಿರುವ ಹಿನ್ನೆಲೆಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕೊರತೆ ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ. ಜನರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಅಧಿಕಾರಿಗಳ ಪ್ರಮುಖ ಜವಾಬ್ದಾರಿಯಾಗಿದೆ. ತಹಶೀಲ್ದಾರರು ಹಾಗೂ ತಾಪಂಕಾರ್ಯನಿರ್ವಾಹಕ ಅಧಿಕಾರಿಗಳು ಸಮಸ್ಯಾತ್ಮಕ ಗ್ರಾಮಗಳನ್ನು ಗುರುತಿಸಬೇಕು. ಸಮಸ್ಯೆ ಇರುವ ಗ್ರಾಮಗಳಲ್ಲಿ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆದು ಅಥವಾ ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆ ಮಾಡಿ. ಪ್ರತಿ ಗ್ರಾಪಂ, ತಾಪಂ, ಪಟ್ಟಣ ಪಂಚಾಯತಿ, ಪುರಸಭೆ, ತಹಶೀಲ್ದಾರ ಕಾರ್ಯಾಲಯಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ದೂರು ನೀಡಲು ಸಹಾಯವಾಣಿಯನ್ನು ಕಡ್ಡಾಯವಾಗಿ ತೆರೆಯಬೇಕು. ಪ್ರತಿ ನಿತ್ಯ ಬಂದ ದೂರುಗಳು, ಪರಿಹಾರಕ್ಕೆ ಕೈಗೊಂಡ ಕ್ರಮಗಳ ಕುರಿತು ವರದಿ ಸಲ್ಲಿಸಬೇಕು. ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ವಿಧಾನಸಭಾ ಕ್ಷೇತ್ರವಾರು ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು, ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಿ ಎಂದು ಹೇಳಿದರು.



» ಕುಡಿವ ನೀರಿನ ಸಮಸ್ಯೆ ನಿವಾರಣೆ ಕುರಿತು ಅಧಿಕಾರಿಗಳೊಂದಿಗೆ ಸಭೆ

» ಸಚಿವ ಶಿವರಾಜ್ ತಂಗಡಗಿ ಎಚ್ಚರಿಕೆ

ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಕುಡಿಯುವ ನೀರಿನ ಲಭ್ಯತೆ ಕುರಿತು ಪ್ರತಿದಿನ ವರದಿ ಸಲ್ಲಿಸಬೇಕು. ಕೆಟ್ಟಿರುವ ಪೈಪ್‌ಲೈನ್‌ಗಳು, ಮೋಟಾರ್‌ಗಳು ಹಾಗೂ ಬೋರ್‌ವೆಲ್‌ಗಳನ್ನು ತಕ್ಷಣ ದುರಸ್ತಿ ಮಾಡಬೇಕು. ಅಗತ್ಯವಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಬೇಕು. ಯಾವುದೇ ಗ್ರಾಮ ಅಥವಾ ವಾರ್ಡ್‌ನಲ್ಲಿ ನೀರಿನ ಕೊರತೆ ಉಂಟಾದರೆ ತಕ್ಷಣ ಸ್ಪಂದಿಸಿ ಸಮಸ್ಯೆ ಪರಿಹರಿಸಬೇಕು. ಜನರು ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ಬರಬಾರದು. ನೀರಿನ ಸಮಸ್ಯೆ ಕುರಿತು ಆರಂಭಿಸಿದ ಸಹಾಯವಾಣಿಯ ಬಗ್ಗೆ ದೊಡ್ಡ ಅಕ್ಷರಗಳಲ್ಲಿ ಎಲ್ಲ ಸಂಬಂಧಿಸಿದ ಕಚೇರಿಗಳಲ್ಲಿ ಸಹಾಯವಾಣಿ ಸಂಖ್ಯೆಯನ್ನು ಒಳಗೊಂಡ ಫಲಕಗಳನ್ನು ಹಾಕಬೇಕು. ಬೇಸಿಗೆ ಮುಗಿಯುವವರೆಗೂ ಎಲ್ಲ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು ಕಾರ್ಯನಿರ್ವಹಿಸಬೇಕು ಎಂದು ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ, ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ, ಜಿಪಂ ಸಿಇಒ ವರ್ಣಿತ್ ನೇಗಿ, ಎಡಿಸಿ ಸಿದ್ರಾಮೇಶ್ವರ ಇದ್ದರು.

ಗೋಮಾತೆಗೆ ರಾಷ್ಟ್ರೀಯ ತಾಯಿ ಸ್ಥಾನ ನೀಡಲು ಆಗ್ರಹ

ರಾಷ್ಟ್ರಪತಿಗೆ 17,850 ಸಹಿ ಸಂಗ್ರಹ ಸಲ್ಲಿಕೆ

ಕಲಬುರಗಿ: ಗೋಮಾತೆಯನ್ನು ರಾಷ್ಟ್ರೀಯ ತಾಯಿ, ರಾಷ್ಟ್ರೀಯ ದೇವರು ಘೋಷಣೆ ಮಾಡಬೇಕೆಂದು ಕಲಬುರಗಿ ಗೋಮಾತೆಯ ಗೌರವದ ಅಭಿಯಾನದ ಆಹ್ವಾನ ವತಿಯಿಂದ ನಡೆಸಲಾದ 17,850 ಸಹಿ ಸಂಗ್ರಹದ ಪ್ರತಿಗಳನ್ನು ಸೋಮವಾರ ಕಲಬುರಗಿಯ ತಹಶೀಲ್ದಾರ್ ಮೂಲಕ ದೇಶದ ರಾಷ್ಟ್ರಪತಿಗಳಿಗೆ ಪ್ರಧಾನಿಗಳಿಗೆ, ರಾಜ್ಯಪಾಲರಿಗೆ ಹಾಗೂ ಮುಖ್ಯಮಂತ್ರಿಗಳಿಗೆ ನೂರಾರು ಗೋಭಕ್ತರು ಮನವಿ ಸಲ್ಲಿಸಿದರು.

ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಕಲಬುರಗಿಯ ಬಸವಾಮೃತ ಗೋರಕ್ಷಕ ಶರಣ, ದೇಶದ ಸಾಧು ಸಂತರು ತೆಗೆದುಕೊಂಡ ನಿರ್ಧಾರದಂತೆ ಕಳೆದ 6 ತಿಂಗಳಿಂದ ಸಹಿ ಸಂಗ್ರಹ ಅಭಿಯಾನ ನಡೆದಿದೆ. ದೇಶಾದ್ಯಂತ 5400 ತಹಶೀಲ್ದಾರ್ ಮೂಲಕ ಸೋಮವಾರ ಸಹಿ ಸಂಗ್ರಹದ ಮನವಿ ಪತ್ರ ಸಲ್ಲಿಸಲಾಗುತ್ತಿದ್ದು, ಅದರಂತೆ ಕಲಬುರಗಿ 10 ತಾಲೂಕಿನಿಂದ ಮನವಿ ಪತ್ರ ಸಲ್ಲಿಸಲಾಗಿದೆ. ದೇಶದಲ್ಲಿ ಗೋವಿನ ಒಂದೇ ಒಂದು ಹನಿ ರಕ್ತ ನೆಲದ ಮೇಲೆ ಬೀಳಬಾರದು ಹಾಗೂ ಗೋಮಾತೆಯನ್ನು ರಾಷ್ಟ್ರೀಯ ಮಾತೆಯನ್ನಾಗಿ ಘೋಷಣೆ ಮಾಡಬೇಕೆಂದು ಈ ಸಹಿ ಸಂಗ್ರಹ ಅಭಿಯಾನ ಕಾರ್ಯಕ್ರಮ ನಡೆಸಲಾಗಿತ್ತು ಎಂದು ಹೇಳಿದರು. ಮುಂಬರುವ ದಿನಗಳಲ್ಲಿ ಗೋಮಾತೆಯನ್ನು ರಾಷ್ಟ್ರೀಯ ಮಾತೆ ಎಂದು ಘೋಷಣೆಯ ಕಾರ್ಯ ನೆರವೇರಿಸಿದೆ ಹೋದಲ್ಲಿ ಬರುವಂತಹ ಜುಲೈ 27ರಂದು ಕಲಬುರಗಿ ಜಿಲ್ಲಾಧಿಕಾರಿಗಳಿಗೆ ಪ್ರತಿ ಮನೆ ಮನೆಯಿಂದ ಬೃಹತ್ ಪ್ರಮಾಣದಲ್ಲಿ ಮನವಿ ಪತ್ರ ಸಲ್ಲಿಸಲಾಗುವುದು ಎಂದರು.



ಅನಿಲ ಕಾಂಬಳೆ, ನಾಗೇಶ್ ನಾಗಭೂಜಂಗೆ, ಸಂತೋಷ, ರೋಹಿತ್ ಪಿಸ್ಕೆ, ದಶರಥ ಇಂಗೋಳೆ, ಸುನೀಲ್ ಶಿರ್ಕೆ, ಮಲ್ಲು ಮೊರಟಗಿ, ಚಿದಾನಂದ ಹಿರೇಮಠ, ಮುರಳಿ ಯಲಮಡಗಿ ಸೇರಿದಂತೆ ನೂರಾರು ಗೋಭಕ್ತರು ಪಾಲ್ಗೊಂಡಿದ್ದರು.

» ಗೋವಿನ ಸೇವೆಗಾಗಿ ಕೇಂದ್ರ ಕಾನೂನು ರೂಪಿಸಬೇಕು.

» ಭಾರತದಲ್ಲಿ ಗೋಹತ್ಯೆ ಸಂಪೂರ್ಣವಾಗಿ ಕೊನೆಗೊಳಿಸಬೇಕು.

ಇದಕ್ಕೂ ಮುನ್ನ ನಗರದ ಮಾಯ ಮಂದಿರದಲ್ಲಿ ಮಾರ್ವಾಡಿ ಸಮಾಜದ ಗಣ್ಯರಿಂದ ಗೋಮಾತೆಗೆ ಪೂಜೆ ನೆರವೇರಿಸಿದ ಬಳಿಕ ಹಳೆ ಚೌಕ್ ಪೋಲಿಸ್ ಠಾಣೆ, ಜನತಾ ಬಜಾರ್, ಆದರ್ಶ ಮೆಡಿಕಲ್ ಹಾಲ್ ಮುಂಭಾಗದಿಂದ ತಹಶೀಲ್ದಾರ್ ಅವರಿಗೆ 17,850 ಸಹಿ ಸಂಗ್ರಹದ ನಾಲ್ಕು ಬಂಡಲ್‌ಗಳನ್ನು ರಾಷ್ಟ್ರಪತಿ ದ್ರೌಪದಿ ಮುರಮು, ಪ್ರಧಾನಿ ನರೇಂದ್ರ ಮೋದಿ, ರಾಜ್ಯಪಾಲ ಥಾವರ್ ಚೆಂದ್ ಗೆಹ್ಲೋಟ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮುಖಾಂತರ ನೀಡಲಾಯಿತು.

ಕಿರುಸುದ್ದಿ

ಬಿರುಗಾಳಿ ಮಳೆ: ಧರೆಗುರುಳಿದ ಮರಗಳು

ಕುರುಗೋಡು: ಕುಡಿತಿನಿ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಗುಡುಗು ಸಿಡಿಲಿನ ಜೊತೆಗೆ ಬೀಸಿದ ಬಿರುಗಾಳಿ ಮಳೆಗೆ ಅನೇಕ ಮರಗಳು ಬಿದ್ದಿರುವ ಘಟನೆ ಭಾನುವಾರ ಸಂಜೆ ಜರುಗಿದೆ. ಸಂಜೆ ಸುರಿದ ಮಳೆಯಿಂದ ಬಿರು ಬಿಸಿಲಿನಲ್ಲಿ ಬೆಂದ ಜನರಿಗೆ ಹಾಗೂ ರೈತರಿಗೆ ಸ್ವಲ್ಪ ಸಮಾಧಾನದ ನೆಮ್ಮದಿ ತಂದಿದೆ. ಇನ್ನೂ ರೈತಾಪಿ ವರ್ಗದ ಜನರಿಗೆ ಭೂಮಿಗೆ ತಂಪಾಗಿದೆ ಎಮುಬ ಸಂತಸ ವ್ಯಕ್ತಪಡಿಸಿದರು. ಆದರೆ ಏಕಾಏಕಿ ಬಾರಿ ಜೋರಾಗಿ ಬೀಸಿದ ಬಿರುಗಾಳಿಗೆ ಅನೇಕ ಮರಗಳು ಬಿದ್ದಿವೆ. ಆದರೆ ಯಾರಿಗೂ ಹಾನಿಯಾಗಿಲ್ಲ. ಪಟ್ಟಣದಲ್ಲಿ ಆಂಜನೇಯ ರಥೋತ್ಸವ ಇರುವುದರಿಂದ ಸಂಜೆ ಬೀಸಿದ ಬಿರುಗಾಳಿಗೆ ಮತ್ತು ಮಳೆಗೆ ಸ್ವಲ್ಪ ಕಾಲ ಜನರಲ್ಲಿ ಆತಂಕ ಸೃಷ್ಟಿಯಾಗಿ ಅಡ್ಡಿಯುಂಟಾಗಿತ್ತು. ಸಂಜೆ 10ನಿಮಿಷಗಳ ಕಾಲ ಗುಡುಗು ಸಿಡಿಲಿನ ಜೊತೆಗೆ ಬಿರುಗಾಳಿಯಿಂದ ನಿರಂತರ ಜೋರಾದ ಮಳೆ ಸುರಿಯಿತು. ಇದರಿಂದ ಪಟ್ಟನದ ಆಂಜನೇಯ ದೇವಸ್ಥಾನದ ಮುಂದುಗಡೆ ಸೇರಿದಂತೆ ಇನ್ನಿತರ ಪ್ರದೇಶಗಳಲ್ಲಿ ಮರಗಳು ಬಿದ್ದಿರುವ ಘಟನೆ ಜರುಗಿವೆ.

ಗೌರವ ಡಾಕ್ಟರೇಟ್ ಪದವಿಗೆ ಐಜಿಪಿ ಡಾ.ಹರ್ಷಾ ಭಾಜನ

ಬಳ್ಳಾರಿ: ಕುವೆಂಪು ವಿಶ್ವವಿದ್ಯಾನಿಲಯವು ಪೊಲೀಸ್ ಮಹಾನಿರೀಕ್ಷಕರಾದ ಡಾ.ಹರ್ಷಾ ಪಿ.ಎಸ್. ಅವರಿಗೆ ವನ್ಯಜೀವಿ ಮತ್ತು ನಿರ್ವಹಣಾ ವಿಭಾಗದಲ್ಲಿನ ಸಂಶೋಧನೆಗಾಗಿ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್‌ಡಿ) ಪದವಿಯನ್ನು ಘೋಷಿಸಿದ್ದು, ಮೇ



6ರಂದು ಪಿಎಚ್‌ಡಿ ಪ್ರದಾನ ಮಾಡಲಿದೆ. ಕುವೆಂಪು ವಿಶ್ವವಿದ್ಯಾನಿಲಯದ ವನ್ಯಜೀವಿ ಮತ್ತು ನಿರ್ವಹಣಾ ವಿಭಾಗದ ಪ್ರಾಧ್ಯಾಪಕ ಡಾ.ವಿಜಯಕುಮಾರ್ ಅವರ ಮಾರ್ಗದರ್ಶನದಲ್ಲಿ ಹರ್ಷ ಪಿ.ಎಸ್. ಅವರು ಕಳೆದ 5 ವರ್ಷಗಳ ಕಾಲ ಕ್ಷೇತ್ರ ಆಧಾರಿತ ಅಧ್ಯಯನವನ್ನು ನಡೆಸಿದ್ದಾರೆ. ನಾಗರಹೊಳೆ, ಬಂಡೀಪುರ ಮತ್ತು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಹುಲಿಗಳ ಜನಸಂಖ್ಯೆಯ ಸ್ಥಿರತೆಯ ಕುರಿತು ಒಂದು ಅಧ್ಯಯನ, ಮಾನವ-ಹುಲಿ ಸಂಘರ್ಷಕ್ಕೆ ವಿಶೇಷ ಉಲ್ಲೇಖದೊಂದಿಗೆ ಎಂಬ ಶೀರ್ಷಿಕೆಯ ಅವರ ಡಾಕ್ಟರೇಟ್ ಪ್ರಬಂಧವು ಈ ಸಂರಕ್ಷಿತ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದ ಕ್ಯಾಮೆರಾ ಟ್ರ್ಯಾಪಿಂಗ್ ಮತ್ತು ವಿವರವಾದ ಸಂಘರ್ಷ ತಾಣಗಳ ವಿಶ್ಲೇಷಣೆ ಸೇರಿದಂತೆ ತೀವ್ರವಾದ ಕ್ಷೇತ್ರಕಾರ್ಯವನ್ನು ಆಧರಿಸಿದೆ. ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಔಪಚಾರಿಕವಾಗಿ ಅನುಮೋದಿಸಿ ಪದವಿ ನೀಡಿದೆ. ಮೇ 6ರಂದು ನಡೆಯಲಿರುವ ಕುವೆಂಪು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ ಪಿಎಚ್‌ಡಿ ಪ್ರಮಾಣಪತ್ರ ಪಡೆಯಲಿದ್ದಾರೆ.

ಮೌಲಾನಾ ಆಜಾದ್ ಪಬ್ಲಿಕ್ ಶಾಲೆಗೆ ನೂರಕ್ಕೆ ನೂರು ಫಲಿತಾಂಶ




ವಿಜಯನಗರ: ಕಮಲಾಪುರದ ಅಲ್ಪಸಂಖ್ಯಾತರ ಇಲಾಖೆಯ ಕರ್ನಾಟಕ ಮೌಲಾನಾ ಆಜಾದ್ ಪಬ್ಲಿಕ್ ಶಾಲೆಯ 2025-26 ನೇ ಸಾಲಿನಲ್ಲಿ ನೂರಕ್ಕೆ ನೂರು ಫಲಿತಾಂಶ ಪಡೆದುಕೊಂಡಿದೆ. ಪ್ರಜ್ವಲ್ ಹೂಗಾರ್‌ಗೆ 588 ಅಂಕ, ಎಂ.ಅಂಜುಮನ್ 549 ಅಂಕ, ಅರ್ಷಿಯಾಬಾನು 541 ಅಂಕಗಳನ್ನು ಪಡೆದುಕೊಂಡಿದ್ದಾರೆ. ಶಾಲೆಯ ಎಲ್ಲ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 3 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 10 ವಿದ್ಯಾರ್ಥಿಗಳು ಪ್ರಥಮದರ್ಜೆಯಲ್ಲಿ ಹಾಗೂ 7 ವಿದ್ಯಾರ್ಥಿಗಳು ದ್ವಿತೀಯದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಮಂಡಳಿಯು ಫಲಿತಾಂಶವನ್ನು 'ಎ' ಗ್ರೇಡ್ ಎಂದು ಗುರುತಿಸಿದೆ. ವಿದ್ಯಾರ್ಥಿಗಳ ಸಾಧನೆಗೆ ಪ್ರಾಂಶುಪಾಲರಾದ ಮಂಜುನಾಥ ಪಾಟೀಲ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.



ಹೂವಿನಹಡಗಲಿ: ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ತಾಲೂಕನ್ನು ಜಿಲ್ಲಾ ಮಟ್ಟ ಹಾಗೂ ಕಲಬುರ್ಗಿ ವಿಭಾಗದಲ್ಲಿ ಮೊದಲ ಸ್ಥಾನಕ್ಕೆ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಪೂಜಾರ ಅವರನ್ನು ತಾಲೂಕು ಪ್ರೌಢಶಾಲಾ ಮುಖ್ಯ ಗುರುಗಳ ಸಹ ಶಿಕ್ಷಕರ ಸಂಘ ಸೇರಿದಂತೆ ವಿವಿಧ ಶಿಕ್ಷಕರ ಸಂಘಟನೆಗಳ ವತಿಯಿಂದ ಸನ್ಮಾನಿಸಲಾಯಿತು.

ಭವಿಷ್ಯದ ಚಿಂತನೆ ಬೆಳೆಸಿಕೊಳ್ಳಿ: ಶಾಸಕ

ಕುರುಗೋಡು: ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಕೆ ಜೊತೆಗೆ ಭವಿಷ್ಯದ ಚಿಂತನೆ ಬೆಳೆಸಿಕೊಳ್ಳುವಲ್ಲಿ ಜಾಗೃತಿವಹಿಸಬೇಕು ಎಂದು ಶಾಸಕ ಜೆ.ಎನ್.ಗಣೇಶ್ ಹೇಳಿದರು. 2025-26ನೇ ಸಾಲಿನಲ್ಲಿ ಕ್ಷೇತ್ರದ ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿಗಳಲ್ಲಿ ಶೇ.85ಕ್ಕೂ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಪ್ರತಿಭಾ ಪುರಸ್ಕಾರದೊಂದಿಗೆ ಅಭಿನಂದಿಸುವ ಕಾರ್ಯಕ್ರಮ ಸೋಮವಾರ ಸಮೀಪದ ಕಂಪ್ಲಿಯ ವೀರಶೈವ ಭವನದಲ್ಲಿ ನಡೆಯಿತು. ವಿದ್ಯಾರ್ಥಿಗಳು ಆರಂಭದಿಂದಲೇ ಅಭ್ಯಾಸಿಸುವಲ್ಲಿ ಮುಂದಾಗಬೇಕು. ತಂದೆ, ತಾಯಿಗಳ ಆಶಯಗಳನ್ನು ಅರಿತು ಮಕ್ಕಳು ಅದನ್ನು ಈಡೇರಿಸಲು ಛಲ ತೊಡಬೇಕು. ಪ್ರಾಮಾಣಿಕತೆ, ಮಾನವೀಯತೆ, ನೈತಿಕ ಸಂಸ್ಕಾರ ಬೆಳೆಸಿಕೊಳ್ಳುವಂತೆ, ಉನ್ನತ ಶಿಕ್ಷಣದಲ್ಲಿ ಉನ್ನತ ಸಾಧನೆಗೆ ಮುಂದಾಗುವಂತೆ ಸಲಹೆ ನೀಡಿದರು. ಬಿಇಒಗಳಾದ ಟಿ.ಎಂ.ಸಿದ್ದಲಿಂಗಮೂರ್ತಿ, ಕಸ್ತೂರಿ, ಶಿಕ್ಷಣ ಸಂಯೋಜಕ ವಿಶ್ವನಾಥ, ಖಾಸಗಿ ಆಡಳಿತ ಮಂಡಳಿ ಗೌರವಾಧ್ಯಕ್ಷ ಪಿ.ನಾಗೇಶ್ವರರಾವ್, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಚ್.ದೊಡ್ಡಬಸಪ್ಪ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಹನುಮಂತಪ್ಪ, ಇಸಿಒ ಟಿ.ಎಂ.ಬಸವರಾಜ, ಎಂ.ರೇವಣ್ಣ, ಶಾಸಕರ ಪತ್ನಿ ಶ್ರೀದೇವಿ ಗಣೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಶ್ರೀನಿವಾಸರಾವ್, ಪ್ರಮುಖರಾದ ಬಿ.ಸಿದ್ದಪ್ಪ, ಬಿ.ಲಿಂಗಪ್ಪ, ಕೆ.ಷಣ್ಮುಖಪ್ಪ, ರಮೇಶ್, ಬಿ.ಜಾಫರ್ ಇತರರಿದ್ದರು. ಶೇ.85ಕ್ಕಿಂತ ಹೆಚ್ಚು ಅಂಕಗಳಿಸಿದ ಕಂಪ್ಲಿ ಕ್ಷೇತ್ರದ ವಿದ್ಯಾರ್ಥಿಗಳನ್ನು ಶಾಸಕ ಜೆ.ಎನ್.ಗಣೇಶ್ ಗೌರವಿಸಿ ಸನ್ಮಾನಿಸಲಾಗಿತು. ನಂತರ ಈ ವೇಳೆ ಕ್ಷೇತ್ರದಲ್ಲಿ 100% ಫಲಿತಾಂಶ ಪಡೆದ ಸರ್ಕಾರಿ ಶಾಲೆಯ ಮುಖ್ಯಗುರುಗಳು, ಸ್ಥಂಸೆ ಮುಖ್ಯಸ್ಥರಿಗೆ ಶಾಸಕ ಜೆ.ಎನ್.ಗಣೇಶ ಸನ್ಮಾನಿಸಿ, ಗೌರವಿಸಲಾಗಿತು.



ಕುರುಗೋಡು: 2025-26ನೇ ಸಾಲಿನಲ್ಲಿ ಕ್ಷೇತ್ರದ ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿಗಳಲ್ಲಿ ಶೇ.85ಕ್ಕೂ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಪ್ರತಿಭಾ ಪುರಸ್ಕಾರದೊಂದಿಗೆ ಅಭಿನಂದಿಸುವ ಕಾರ್ಯಕ್ರಮ ಸೋಮವಾರ ಸಮೀಪದ ಕಂಪ್ಲಿಯ ವೀರಶೈವ ಭವನದಲ್ಲಿ ನಡೆಯಿತು.

ಗೋ ಹತ್ಯಾ ನಿಷೇಧ ಬೆಂಬಲಿಸಿ ಬಳ್ಳಾರಿಯಲ್ಲಿ 26,500 ಸಹಿ ಸಂಗ್ರಹ

ಬೃಹತ್ ಮೆರವಣಿಗೆಗೆ ಚಾಲನೆ

ಬಳ್ಳಾರಿ: ಗೋಸಮ್ಮಾನ ಆಹ್ವಾನ ಅಭಿಯಾನ ಸಮಿತಿ ಬಳ್ಳಾರಿ ಆಶ್ರಯದಲ್ಲಿ ರಾಷ್ಟ್ರ ಮಟ್ಟದ ಕರೆಯಂತೆ ಸೋಮವಾರ ನಗರದಲ್ಲಿ 'ಗೋ ಗೌರವ ದಿನ' ವನ್ನು ಆಚರಿಸಲಾಯಿತು.

ನಗರದ ರಾಘವ ಕಲಾ ಮಂದಿರದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಬಳ್ಳಾರಿ ಗೋಶಾಲಾ ಅಧ್ಯಕ್ಷ ವಿನಯ್ ಭಾಯಿ ಜೀ, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ, ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ, ಶ್ರೇಷ್ಠ ಇಂಟರ್‌ನ್ಯಾಷನಲ್ ಸ್ಕೂಲ್‌ನ ಸ್ಥಾಪಕ ಬ್ರಹ್ಮಯ್ಯ ನಾಯ್ಡು, ಬಳ್ಳಾರಿ ಶೃಂಗೇರಿ ಶಾರದಾ ಮಠದ ಧರ್ಮದರ್ಶಿ ಬಿಕೆಬಿಎನ್ ಮೂರ್ತಿ ಮತ್ತು ರಾಜಸ್ಥಾನಿ ಸಮಾಜದ ಪ್ರಮುಖ ಸೂರಜ್ ಮಾಲ್‌ಜೀ ಅವರು ಭಾರತ ಮಾತೆ ಭಾವಚಿತ್ರಕ್ಕೆ ಪುಷ್ಪಗಳನ್ನು ಸಮರ್ಪಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕೊಟ್ಟೂರು ಸ್ವಾಮಿ ಮಠ ಸೋಮಸಮುದ್ರದ ನಿಯೋಜಿತ ಸ್ವಾಮೀಜಿ, ಸಿದ್ದಲಿಂಗಯ್ಯ ಸ್ವಾಮೀಜಿ ಅವರು ಗೋಪೂಜೆ ಮಾಡುವ ಮೂಲಕ ಬೃಹತ್ ಮೆರವಣಿಗೆಗೆ ಚಾಲನೆ ನೀಡಿದರು. ಸಮಿತಿ ಸಂಚಾಲಕ ಗುರುರಾಜ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಗೋ ಸಂರಕ್ಷಣಾ ಅಭಿಯಾನದ ರೂಪುರೇಷೆಗಳನ್ನು ಸಭೆಯ ಮುಂದಿಟ್ಟರು. ಗೋ ಹತ್ಯಾ ನಿಷೇಧವನ್ನು ಬೆಂಬಲಿಸಿ ಬಳ್ಳಾರಿಯಲ್ಲಿ ಸುಮಾರು 26,500 ಸಹಿ ಸಂಗ್ರಹವಾಗಿದ್ದು, ಅವನ್ನು ತಹಶೀಲ್ದಾರ್ ಮೂಲಕ ರಾಜ್ಯದ ರಾಜ್ಯಪಾಲರು ಮತ್ತು ಮುಖ್ಯಮಂತ್ರಿ ಹಾಗೂ ರಾಷ್ಟ್ರಪತಿಗಳಿಗೆ ಪ್ರಧಾನಮಂತ್ರಿಗಳಿಗೆ ಕಳುಹಿಸಲಾಗುವುದು. ನಿಗದಿತ ಸಮಯದೊಳಗೆ ಸಕಾರಾತ್ಮಕ ಸ್ಪಂದನೆ ಸಿಗದಿದ್ದಲ್ಲಿ ಮುಂದಿನ ಹಂತದ ಹೋರಾಟಕ್ಕೆ ದೇಶದೆಲ್ಲೆಡೆ ಮತ್ತೆ



> ಹೆತ್ತ ತಾಯಿ ಒಂದೆರಡು ವರ್ಷ ತನ್ನ ಮಗುವನ್ನ ಎದೆ ಹಾಲು ಕೊಟ್ಟು ಸಲಹಿದರೆ, ಗೋಮಾತೆ ಜೀವನ ಪರ್ಯಂತ ತನ್ನ ಹಾಲು ನೀಡಿ ಜಗತ್ತನ್ನೇ ಪೋಷಿಸುತ್ತಾಳೆ.
> ■ ಸೋಮಶೇಖರ್ ರೆಡ್ಡಿ, ಮಾಜಿ ಶಾಸಕ

ಸಿದ್ಧತೆಗಳು ನಡೆಯಲಿವೆ ಎಂದು ಸರ್ಕಾರವನ್ನು ಎಚ್ಚರಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ ಮಾತನಾಡಿ, ನಮ್ಮ ಹಿಂದೂ ಸಂಪ್ರದಾಯದಲ್ಲಿ ಗೋವುಗಳಿಗೆ ಪೂಜ್ಯನೀಯ ಸ್ಥಾನವನ್ನು ನೀಡಲಾಗಿದೆ, ಗೋವುಗಳು ದೇವತೆಗಳಿಗೆ ಸಮಾನ, ಗೋವುಗಳನ್ನು ರಕ್ಷಿಸಬೇಕು, ಸಂರಕ್ಷಣೆ ಮಾಡಬೇಕು ಎಂದರು. ನಂತರ, ಗೋಪೂಜೆ ಸಲ್ಲಿಸಿ ಬೃಹತ್ ಮೆರವಣಿಗೆಗೆ ಚಾಲನೆ ನೀಡಲಾಯಿತು. ಅಪಾರ ಸಂಖ್ಯೆಯಲ್ಲಿ ಜಮಾಯಿಸಿದ ಜನರು ನಾನಾ ರಸ್ತೆಗಳ ಮೂಲಕ ನಗರದ ತಾಲೂಕು ತಹಶೀಲ್ದಾರ್ ಕಚೇರಿಗೆ ತೆರಳಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ವಿವಿಧ ಬೇಡಿಕೆಗಳ ಮನವಿ ಸಲ್ಲಿಸಿದರು. ಸುಡು ಬಿಸಿಲನ್ನು ಲೆಕ್ಕಿಸದೆ ಮಹಿಳೆಯರು ಸೇರಿದಂತೆ ನೂರಾರು ಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ರಾಘವ ಕಲಾಮಂದಿರ ದಿಂದ ತಾಲೂಕು ಕಚೇರಿವರೆಗೆ ನಡೆದ ಮೆರವಣಿಗೆ, ಕಳೆದ ಒಂದು ತಿಂಗಳಿನಿಂದ ಸಂಗ್ರಹಿತ ಒಟ್ಟು ಸುಮಾರು 26,500 ಸಹಿಗಳನ್ನು ತಹಶೀಲ್ದಾರ್ ಮೂಲಕ ರಾಜ್ಯದ ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳು ಹಾಗೂ ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿಗಳಿಗೆ ಕಳಿಸಿ ಕೊಡಲಾಯಿತು.

ಬುಡಾ ಮಾಜಿ ಅಧ್ಯಕ್ಷ ಮಾರುತಿ ಪ್ರಸಾದ್ ಸರ್ವಶೆಟ್ಟಿ, ಪಾಲಿಕೆ ಸದಸ್ಯ ಕೆ.ಎಸ್.ಅಶೋಕ್, ಎಚ್.ಹನುಮಂತಪ್ಪ, ಗಣಪಾಲ್ ಐನಾಥ್ ರೆಡ್ಡಿ, ಗಾದಿ ಲಿಂಗಪ್ಪ, ಕಣೆಕಲ್ ಎರಿಸ್ವಾಮಿ, ಮಹೇಶ್ ಗೌಡ ಶರಣು ಸೇರಿದಂತೆ ನೂರಾರು ಮಹಿಳೆಯರು, ವಿವಿಧ ಮುಖಂಡರು ಭಾಗವಹಿಸಿದ್ದರು.

ಗೋವಂಶ ಸಂರಕ್ಷಣೆಗೆ ಆಗ್ರಹ

ಹುಣಸಗಿ: ಗೋವಂಶ ಸಂರಕ್ಷಣೆ, ಗೋವಧೆ ಸಂಪೂರ್ಣ ನಿಷೇಧ ಹಾಗೂ ಗೋಮಾತೆಗೆ 'ರಾಷ್ಟ್ರಮಾತೆ' ಸ್ಥಾನಮಾನ ನೀಡಬೇಕೆಂದು ಆಗ್ರಹಿಸಿ ಹುಣಸಗಿ ತಹಶೀಲ್ದಾರ್ ಕಚೇರಿಯಲ್ಲಿ ಮನವಿ ಸಲ್ಲಿಸಲಾಯಿತು.

ರಾಷ್ಟ್ರಪತಿ, ಪ್ರಧಾನಮಂತ್ರಿ, ರಾಜ್ಯಪಾಲರು ಹಾಗೂ ಮುಖ್ಯಮಂತ್ರಿಗಳಿಗೆ ಉದ್ದೇಶಿಸಿ ರಚಿಸಿದ ಮನವಿಯನ್ನು ತಹಶೀಲ್ದಾರರ ಪರವಾಗಿ ಶಿರಸ್ತೇದಾರ ರಂಗಪ್ಪನಾಯಕ ದೂದೆಕೊಂಡ ಸ್ವೀಕರಿಸಿದರು.

ಮಾತನಾಡಿದಸಾಮಾಜಿಕಕಾರ್ಯಕರ್ತ ಬಸವರಾಜ್ ಮೇಲಿನಮನಿ, ವಿಶ್ವದಾದ್ಯಂತ ನಡೆಯುತ್ತಿರುವ 'ಗೋ ಸಮ್ಮಾನ ಆಹ್ವಾನ ಅಭಿಯಾನ'ದ ಅಂಗವಾಗಿ ದೇಶದಾದ್ಯಂತ ಏಕಕಾಲದಲ್ಲಿ ಮನವಿ ಸಲ್ಲಿಸಲಾಗುತ್ತಿದೆ ಎಂದರು.

ಕರ್ನಾಟಕದ ಗ್ರಾಮೀಣ ಜೀವನ, ಕೃಷಿ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಗೋವಂಶದ ಮಹತ್ವ ಅಪಾರವಾಗಿದ್ದು, ಅದರ ಸಂರಕ್ಷಣೆ ಅತ್ಯಗತ್ಯ ಎಂದು ಅವರು ಹೇಳಿದರು.

ರಾಜ್ಯ ಸರ್ಕಾರವು ಗೋವಂಶ ಸಂರಕ್ಷಣೆಗಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಕಳುಹಿಸಬೇಕು. ಸಂವಿಧಾನದ 48ನೇ ವಿಧಿಗೆ ತಿದ್ದುಪಡಿ ತಂದು ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಗೋ ಕಳ್ಳಸಾಗಣೆ ಮತ್ತು ಹತ್ಯೆಯನ್ನು ಜಾಮೀನು ರಹಿತ ಅಪರಾಧವಾಗಿ ಪರಿಗಣಿಸಿ ಕಠಿಣ ಶಿಕ್ಷೆ ವಿಧಿಸುವ ಕಾನೂನು ತರಬೇಕು. ಪಂಚಗವ್ಯ ಸಂಶೋಧನೆಗೆ



ಉತ್ತೇಜನ ನೀಡಬೇಕು ಹಾಗೂ ಸರಕಾರಿ ಖರೀದಿ ವ್ಯವಸ್ಥೆಗೆ ಒಳಪಡಿಸಬೇಕು ಎಂದು ಸಲಹೆ ನೀಡಿದರು.

ಶಾಲೆಗಳ ಮಧ್ಯಾಹ್ನ ಊಟ (ಮಿಡ್-ಡೇ ಮೀಲ್) ಹಾಗೂ ದೇವಾಲಯಗಳ ಪ್ರಸಾದದಲ್ಲಿ ದೇಶಿ ಗೋವಿನ ಹಾಲು ಮತ್ತು ತುಪ್ಪ ಬಳಸುವುದನ್ನು ಕಡ್ಡಾಯಗೊಳಿಸಬೇಕು. ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ನಂದಿಶಾಲೆ ಸ್ಥಾಪನೆ ಹಾಗೂ ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಒಂದು ಮಾದರಿ ಗೋ ಅಭಯಾರಣ್ಯ ನಿರ್ಮಾಣ ಅಗತ್ಯವಿದೆ ಎಂದು ಅವರು ಹೇಳಿದರು.

ಹೆದ್ದಾರಿ ಅಪಘಾತಗಳಲ್ಲಿ ಗಾಯಗೊಂಡ ಗೋವಿನ ರಕ್ಷಣೆಗೆ ಪ್ರತಿ 50 ರಿಂದ 100 ಕಿಮೀ ಅಂತರದಲ್ಲಿ ಗೋ-ಆಂಬ್ಯುಲೆನ್ಸ್ ಮತ್ತು ಟ್ರಾಮಾ ಕೇಂದ್ರಗಳನ್ನು ಸ್ಥಾಪಿಸುವಂತೆ ಕೂಡ ಮನವಿ ಮಾಡಿದರು.

ಬಸವರಾಜ್ ಜಿ.ಸಜ್ಜನ್, ಶರಣಗೌಡ ಗೆಣ್ಣೂರ್, ಅಮರೇಶ ವೈಲಿ, ಬಾಲರಾಜ್ ಕುಪ್ಪಿ ಇತರರು ಉಪಸ್ಥಿತರಿದ್ದರು.

ವಿವಿಧ ಬೇಡಿಕೆ ಈಡೇರಿಸಲು ಒತ್ತಾಯ

ಹೂವಿನಹಡಗಲಿ: ಪಟ್ಟಣದ ತಾಲೂಕು ಕಚೇರಿಯಲ್ಲಿ ರಸಗೊಬ್ಬರಗಳ ಬೆಲೆ ದುಪ್ಪಟ್ಟು ಹಾಗೂ ಎಫ್‌ಐಡಿ ನಿಯಮವನ್ನು ಸಡಿಲಿಕೆ ಮಾಡುವ ಕುರಿತು ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ತಹಶೀಲ್ದಾರ್ ಕೆ.ಎಂ.ಗುರುಬಸವರಾಜ ಅವರಿಗೆ ಮನವಿ ಸಲ್ಲಿಸಲಾಯಿತು.

ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಶಿವರಾಜ ಎಂ ಹೊಳಗುಂದಿ ಮಾತನಾಡಿ, 2026-27ನೇ ಸಾಲಿನ ಮುಂಗಾರು ಹಂಗಾಮಿನ ಬಿತ್ತನೆ ರಸಗೊಬ್ಬರಗಳ ಬೆಲೆ ಕಳೆದ 2010ರಿಂದ 2026ರವರಿಗೆ 3ಪಟ್ಟು ಬೆಲೆ ಜಾಸ್ತಿ ಯಾಗಿದೆ.2010ರಲ್ಲಿ ಡಿಎಪಿ ಗೊಬ್ಬರದ ಬೆಲೆ 450ರೂ.ಗೆ ರೈತರಿಗೆ ಸಿಗುತಿತ್ತು. ಆದರೆ, ಈಗ 1350 ರೂ. ಬೆಲೆ ದಾಟಿದೆ. 20:20:0.13. ಮತ್ತು 10:26 ಪೊಟ್ಯಾಷೋ ಅಮೋನಿಯಂ ಸಲ್ಫೇಟ್ ಸೇರಿದಂತೆ ವಿವಿಧ ಗೊಬ್ಬರಗಳ ಬೆಲೆ ವರ್ಷದಿಂದ ವರ್ಷಕ್ಕೆ ಬೆಲೆಏರಿಕೆ ಆಗುತ್ತಲೇ ಬಂದಿದೆ. ಹೊರೆತು ಅದಕ್ಕೆ ಅನುಗುಣವಾಗಿ ರೈತರ ಬೆಳೆಗಳಿಗೆ ಸಮರ್ಪಕವಾದ ಬೆಲೆ ಸಿಗದೇ ರೈತರು ಆರ್ಥಿಕ ಕಷ್ಟಕ್ಕೆ ಸಿಲುಕಿದ್ದಾರೆ. ಆದ ಕಾರಣ ರೈತರಿಗೆ ಬೆಲೆ ಕಡಿಮೆ ಮಾಡಿ ಅನುಕೂಲಕ್ಕೆ ಮುಂದಾಗಬೇಕು. ಒಂದು ಎಕ್ಕರೆ ಮೆಕ್ಕೆಜೋಳ ಭತ್ತ ಬೆಳೆ ಬೆಳೆಯಲು 3ಹಂತದಲ್ಲಿ ಗೊಬ್ಬರ ಕೊಡುವುದರಿಂದ ಕನಿಷ್ಠ 3ರಿಂದ 4 ಚೀಲ ವಿತರಣೆಮಾಡಬೇಕು. ಮುಂಗಾರು ಹಂಗಾಮಿನ ಬಿತ್ತನೆ ರಸಗೊಬ್ಬರ ಖರೀದಿ ಮಾಡುತ್ತಿರುವ ರೈತರಿಗೆ ಬೈಪ್ರಾಡಾಕ್ಟ್ ಉತ್ಪನ್ನ ಗಳನ್ನು ಲಿಂಕ್ ಮಾಡುವುದನ್ನು ಕಡ್ಡಾಯವಾಗಿ ರದ್ದೂಗೊಳಿಸಬೇಕು. ರಸಗೊಬ್ಬರಗಳ ರೇಟ್ ಪಾಯಿಂಟ್ ಜಿಲ್ಲೆಯಿಂದ ಸುಮಾರು 200ರಿಂದ 300 ಕಿಮೀ. ದೂರ ಇರುವ ಕಾರಣ ಜಿಲ್ಲೆಯ ಕೊಟ್ಟೂರು ಪಟ್ಟಣದಲ್ಲಿ ಸ್ಥಾಪನೆಮಾಡಿ ಜಿಲ್ಲೆಯ ರೈತರಿಗೆ ಅನುಕೂಲ ಮಾಡಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಅಧ್ಯಕ್ಷ ಸಿದ್ದಪ್ಪ ಹೊಸಮನಿ, ಗೌರವ ಅಧ್ಯಕ್ಷ ಎಂ.ಪಕ್ಕೀರಪ್ಪ, ಜಿಲ್ಲಾ ಮಹಿಳಾ ಅಧ್ಯಕ್ಷೆ ಬಿಎಚ್‌ಎಂ ವಿಜಯಲಕ್ಷ್ಮಿ, ಜಿಲ್ಲಾ ಉಪಾಧ್ಯಕ್ಷರ ಕೆ. ಗನಿಸಾಬ್ ಬಾವಿಹಳ್ಳಿ, ಜಿಲ್ಲಾ ಯುವ ಘಟಕ ಕಾರ್ಯದರ್ಶಿ ದುರುಗಪ್ಪ ಹೊಳಗುಂದಿ, ತಾಲೂಕು ಸಂಘಟನಾ ಕಾರ್ಯದರ್ಶಿ ಗಿರೀಶ್ ಡಿ.ಬಸವರಾಜ, ಮಂಜುನಾಯಕ, ರೈತ ಮುಖಂಡರಿದ್ದರು.



ಗೋ ಸಮ್ಮಾನ ಆಹ್ವಾನ ಅಭಿಯಾನ: ಗೋರಕ್ಷಕರಿಂದ ಮನವಿ

ಸುರಪುರ: ನಗರದತಹಶೀಲ್ದಾರ್ ಕಚೇರಿ ಆವರಣದಲ್ಲಿ ಗೋರಕ್ಷಕರು, ಸಮಸ್ತ ಗೋಭಕ್ತರು, ಸಂತ ಸಮಾಜ ಮತ್ತು ಭಾರತದ ಜಾಗೃತ ನಾಗರಿಕರ ವತಿಯಿಂದ ರಾಜ್ಯಪಾಲರಿಗೆ ಬರೆದ ಮನವಿ ಪತ್ರವನ್ನು ತಹಶೀಲ್ದಾರ್‌ಗೆ ಸಲ್ಲಿಸಲಾಯಿತು.

ಈ ಕುರಿತು ಮಾತನಾಡಿದ ಗೋಸಂರಕ್ಷರು ಕರ್ನಾಟಕ ರಾಜ್ಯದಲ್ಲಿ ಗೋ ವಂಶದ ಸಂರಕ್ಷಣೆ, ಸಂವರ್ಧನೆ ಮತ್ತು ಹತ್ಯೆಯ ಮೇಲೆ ಪೂರ್ಣ ನಿಷೇಧ ಹೇರಲು ಕಠಿಣ ಕಾನೂನು ರೂಪಿಸುವ ಕುರಿತು ಮನವಿ ಮಾಡಿದರು.

ಮುಂದುವರೆದು ಕರ್ನಾಟಕದ



ಗ್ರಾಮೀಣ ಆರ್ಥಿಕತೆಯ ಮೂಲಾಧಾರವಾದ ಗೋವಂಶದ ಸಧ್ಯದ ಸ್ಥಿತಿಯ ಬಗ್ಗೆ ವಿವರಿಸಿದರು.

ಬಸವ ದರ್ಶನ ಮತ್ತು ಕರ್ನಾಟಕ ಲೋಕ ಸಂಸ್ಕೃತಿಯ ಕಲ್ಪನೆಯು ಗೋಮಾತೆಯಿಲ್ಲದೆ ಅಸಾಧ್ಯವಾಗಿದ್ದು ಇಂದು ಪಶು ಕಳ್ಳ ಸಾಗಾಣಿಕೆ ಮತ್ತು ಹತ್ಯೆಯಿಂದಾಗಿ ನಮ್ಮ ಸ್ವದೇಶಿ ಗೋ ವಂಶವು ಅಳಿವಿನ ಅಂಚಿನಲ್ಲಿರುವ ಕುರಿತು ಹಲವು ಅಂಶಗಳನ್ನು ಒಳಗೊಂಡಿರುವ 10 ಪುಟಗಳ ಮನವಿ ಪತ್ರವನ್ನು ಸಲ್ಲಿಸಿದರು.

ಪ್ರಮುಖರಾದ ಶರಣು ನಾಯಕ, ಶ್ರವಣ ಕುಮಾರ ನಾಯಕ, ಶರಣು ನಾಯಕ ತಿಮ್ಮಾಪುರ, ಲೋಕೇಶ್ ನಾಯಕ ಡೊಣ್ಣೆಗೆರೆ, ದೇವರಾಜ ದೇವತ್ಕಲ್, ಹಣಮಂತ ರುಕ್ಮಾಪುರ, ಕೃಷ್ಣಾ ಜಾಗೀರದಾರ, ಹಣಮಂತ ತೇಲ್ಕರ್, ಅಮರೇಶ ರುಕ್ಮಾಪುರ, ಭೀಮು ನಾಯಕ, ಶರಣು ಶಹಾಪುರ, ರಾಮು ನಾಯಕ ನವದುರ್ಗಾ, ರಡ್ಡಿ ದರಬಾರ, ರಾಘು ಮಂಜಲಾಪುರ, ಹಣಮಂತ ಕಬಡಗೇರಾ ಇತರರಿದ್ದರು.

ನವೀಕೃತ ಕಾಳಿಕಾದೇವಿ ಪ್ರಾಣ ಪ್ರತಿಷ್ಠಾಪನೆ: ಮೇ 3ರಂದು ಉದ್ಘಾಟನೆ

ವಿಜಯನಗರ: ಹೊಸಪೇಟೆ ನಗರ ಅಭಿವೃದ್ಧಿಗೆ ರಸ್ತೆ ಅಗಲೀಕರಣ ವೇಳೆ ತೆರವುಗೊಂಡಿದ್ದ ಕಾಳಿಕಾ ಸನ್ನಿಧಾನ 15 ವರ್ಷಗಳ ನಂತರ ನವೀ ಕೃತ ಜಗನ್ಮಾತೆ ಕಾಳಿಕಾ ದೇವಿಯ ದೇವಸ್ಥಾನ ಮೇ 3 ರಂದು ಉದ್ಘಾಟನೆಗೊಳ್ಳಲಿದೆ ಎಂದು ವಿಶ್ವಕರ್ಮ ಸಮಾಜದ ಜಿಲ್ಲಾಧ್ಯಕ್ಷ ಕೆ.ವಿ. ಪತ್ತಾರ್ ತಿಳಿಸಿದರು.

ಹೊಸಪೇಟೆಯ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯ ಉದ್ದೇಶಿಸಿ ಮಾತನಾಡಿದ ಅವರು, ನೂತನ ಗರ್ಭಗುಡಿಯ ಆಲಯ ಸಮರ್ಪಣೆ ಹಾಗೂ ಕಾಳಿಕಾದೇವಿ ಕಮಟೇಶ್ವರ ದೇವರ ಹಾಗೂ ಪರಿಹಾರ ದೇವರ ಅ ಷ್ಟಬಂದ ಪ್ರತಿಷ್ಠೆ ಬ್ರಹ್ಮಕಲಶೋತ್ಸವ ಹಾಗೂ ನವಚಂಡಿ ಯಾಗ ಸೇರಿದಂತೆ ವೈವಿಧ್ಯಮಯ ಧಾರ್ಮಿಕ ಕಾರ್ಯಕ್ರಮಗಳು ಏಪ್ರಿಲ್ 30 ರಿಂದ ಮೇ 5 ರವರೆಗೆ ಬಳ್ಳಾರಿ ರಸ್ತೆಯ ಕಾಳಿಕಾದೇವಿ ದೇವಸ್ಥಾನದಲ್ಲಿ ನಡೆಯಲಿವೆ ಎಂದರು.

ಮೇ 30ರಂದು ಕಾಳಿಕಾದೇವಿಯ ಅಷ್ಟಬಂದ ಪ್ರತಿಷ್ಠೆ ಬ್ರಹ್ಮ ಕುಂಭಾಭಿಷೇಕ ಸೇರಿದಂತೆ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಿದ್ದು ಅಂದು ಮಧ್ಯಾಹ್ನ 3 ಗಂಟೆಗೆ ಸಕಲ ಮಂಗಳವಾದ್ಯಗಳೊಂದಿಗೆ ಶೋಭಾ ಯಾತ್ರೆ ಶ್ರೀಸಿದ್ದಿ ವಿನಾಯಕ ದೇವಸ್ಥಾನದಿಂದ ಕಾಳಿಕಾದೇವಿ ದೇವಸ್ಥಾನದವರೆಗೆ ನಡೆಯಲಿದೆ.

ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಆರ್ ಗವಿಯಪ್ಪ ಸಂಸದ ತುಕಾರಾಂ, ನಗರಸಭಾ ಅಧ್ಯಕ್ಷ ಎನ್ ರೂಪೇಶ್ ಕುಮಾರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್ ಎನ್ ಎಫ್ ಇಮಾಮ್ ನಿಯಾಜಿ, ನಗರ ಸಭಾ ಸದಸ್ಯ ಜಿ ರಾಘವೇಂದ್ರ ಸೇರಿದಂತೆ ಚುನಾಯಿತ ಪ್ರತಿನಿಧಿಗಳು ಹಾಗೂ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ವಿಶ್ವಕರ್ಮ ಸಮಾಜದ ಎಲ್ಲ ಬಂಧುಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರಾಜ್, ತಾಲೂಕ ಉಪಾಧ್ಯಕ್ಷ ವಿ. ಶಂಕರಾಚಾರ್ಯ, ತಾಲೂಕ ಪ್ರಧಾನ ಕಾರ್ಯದರ್ಶಿ ಸುರೇಶ್, ಪಟ್ಟಣ ಪೊಲೀಸ್ ಠಾಣೆ ಪಿಎಸ್‌ಐ ರಾಜಶೇಖರ್, ಕುಬೇರಚಾರ್ ಸೇರಿದಂತೆ ಸಮಾಜದ ಮುಖಂಡರು ಹಾಜರಿದ್ದರು.

ರಾ.ಹೆ. 50ರ ಅವ್ಯವಸ್ಥೆ: ಅಪಘಾತ ನಿಯಂತ್ರಣಕ್ಕೆ ಒತ್ತಾಯ

ವಿಜಯನಗರ: ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಸತತವಾಗಿ ಸಂಭವಿಸುತ್ತಿರುವ ಅಪಘಾತಗಳನ್ನು ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಬೇಕು ಮತ್ತು ಕುಂಟುತ್ತಾ ಸಾಗಿರುವ ರಸ್ತೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಆಗ್ರಹಿಸಿ ಕರುನಾಡ ಕಲಿಗಳ ಕ್ರಿಯಾಶೀಲ ಸಮಿತಿ ಸದಸ್ಯರು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಈ ಕುರಿತು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ, ಕಳೆದ ಕೆಲ ತಿಂಗಳಿಂದ ರಾಷ್ಟ್ರೀಯ ಹೆದ್ದಾರಿ-50 ರ ಹೊಸಪೇಟೆ-ಮರಿಯಮ್ಮನಹಳ್ಳಿ ನಡುವೆ ಮೇಲಿಂದ ಮೇಲೆ ಅಪಘಾತಗಳು ಸಂಭವಿಸುತ್ತಿದ್ದು, ಈ ಮಾರ್ಗದಲ್ಲಿ ಸಂಚಾರ ಅಪಾಯಕರವಾಗಿದೆ. ಅದಿರು ಹೊತ್ತ ಸಾವಿರಾರು ಲಾರಿಗಳು ಸಂಚಾರ ನಿಯಮ ಗಾಳಿಗೆ ತೂರಿ ಅಡ್ಡಾದಿಡ್ಡಿಯಾಗಿ ಚಲಿಸುತ್ತಿರುವುದು ಪ್ರಮುಖ ಕಾರಣವಾಗಿದೆ. ಅಂತಹ ಲಾರಿ ಚಾಲಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಗುಂಡಾ, ವ್ಯಾಸನಕೆರೆ, ಡಣಾಪುರಮತ್ತುಮರಿಯಮ್ಮನಹಳ್ಳಿಭಾಗದಲ್ಲಿ ವಾಹನಗಳ ವೇಗವನ್ನು 20-40 ಕಿಮೀಗೆ ಮಿತಿಗೊಳಿಸಬೇಕು. ಅಗತ್ಯ ಸೂಚನಾ ಫಲಕಗಳನ್ನು ಅಳವಡಿಸಬೇಕು. ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ಡ್ರೈವಿಂಗ್ ಲೈಸನ್ಸ್ ರದ್ದುಪಡಿಸಬೇಕು. ಹೆದ್ದಾರಿ ಬದಿಯ ಡಾಬಾಗಳಲ್ಲಿ ನಡೆಯುವ ಕಾನೂನು ಬಾಹಿರ ಚಟುವಟಿಕೆಗಳನ್ನು ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು. ಅರೆಬರೆ ಕಾಮಗಾರಿ ಮತ್ತು ಲಾರಿಗಳ ಅತಿವೇಗದಿಂದಾಗಿ ಅಮಾಯಕ



ಸಾರ್ವಜನಿಕರ ಜೀವಗಳು ರಸ್ತೆಯಲ್ಲಿ ಬಲಿಯಾಗುತ್ತಿವೆ. ಕಾಮಗಾರಿಯನ್ನು ಹಗಲಿರುಳಾದರೂ ನಿರ್ವಹಿಸಿ, ಆದಷ್ಟು ಬೇಗ ಪೂರ್ಣಗೊಳಿಸಬೇಕು. ಕೂಡಲೇ ಜಿಲ್ಲಾಡಳಿತ ಮತ್ತು ಹೆದ್ದಾರಿ ಪ್ರಾಧಿಕಾರ ಎಚ್ಚೆತ್ತುಕೊಂಡು ಸಿಸಿಟಿವಿ ಅಳವಡಿಕೆ ಹಾಗೂ ವೇಗ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ಪ್ರತಿಭಟನೆ ನಡೆಸುವುದಾಗಿ ಕರುನಾಡ ಕಲಿಗಳ ಕ್ರಿಯಾ ಸಮಿತಿ ಎಚ್ಚರಿಸಿದೆ.

ಸಮಿತಿಯ ಅಧ್ಯಕ್ಷ ಪಿ.ವೆಂಕಟೇಶ ವಕೀಲರು, ಉಪಾಧ್ಯಕ್ಷ ಗುಜ್ಜಲ ಗಣೇಶ್, ಪ್ರಧಾನ ಕಾರ್ಯದರ್ಶಿ ಎಂ.ದಾದಾಖಲಂದರ್, ಸಹ ಕಾರ್ಯದರ್ಶಿ ಮಂಜುನಾಥ, ಪ್ರಮುಖರಾದ ಎಸ್.ವಾದಿರಾಜ್, ಎಚ್.ರಾಮು, ಎಚ್.ಟಿ.ಶ್ಯಾಮ್ ಪಾಲ್, ರಜಾಕ್ ನಭೀಸಾಬ್, ಬಿ.ರಾಮ್, ಎಚ್.ಈರಣ್ಣ, ಸಿ.ಮರಿಸ್ವಾಮಿ, ಗುಂಡಿ ರಮೇಶ್, ಮೆಟ್ರಿ ಶ್ರೀನಿವಾಸ ವಕೀಲರು, ಬಿ.ಪಂಪಾಪತಿ ನಾಯಕ, ರಾಘವೇಂದ್ರ ಕಟ್ಟಿಮನಿ, ಎ.ಶೇಖರಪ್ಪ, ಎ.ಮರಿಯಪ್ಪ, ಎಸ್.ಖಾದರವಲಿ ಮುತ್ತಿತರರಿದ್ದರು.

ಶಿಕ್ಷಣ ಇಲಾಖೆಯ ಮುಖ್ಯಸ್ಥರಿಗೆ ಸನ್ಮಾನ

ಹೂವಿನಹಡಗಲಿ: ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ತಾಲೂಕನ್ನು ಜಿಲ್ಲಾ ಮಟ್ಟ ಹಾಗೂ ಕಲಬುರ್ಗಿ ವಿಭಾಗದಲ್ಲಿ ಮೊದಲ ಸ್ಥಾನಕ್ಕೆ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಪೂಜಾರ ಅವರನ್ನು ತಾಲೂಕು ಪ್ರೌಢಶಾಲಾ ಮುಖ್ಯ ಗುರುಗಳ ಸಹ ಶಿಕ್ಷಕರ ಸಂಘ ಸೇರಿದಂತೆ ವಿವಿಧ ಶಿಕ್ಷಕರ ಸಂಘಟನೆಗಳ ವತಿಯಿಂದ ಸನ್ಮಾನಿಸಲಾಯಿತು.

ತಾಲ್ಲೂಕಿನ ಶೈಕ್ಷಣಿಕ ಪ್ರಗತಿಗೆ ಶ್ರಮಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಪೂಜಾರ, ಕ್ಷೇತ್ರ ಸಮನ್ವಯಾಧಿಕಾರಿ ಎ ಕೋಟೆಪ್ಪ, ತಾಲೂಕು ದೈಹಿಕ ಪರಿವೀಕ್ಷಕ ರಫಿ ಅಹಮದ್ ಖವಾಸ್, ಎಸ್ಸೆಸ್ಸೆಲ್ಸಿ ತಾಲೂಕು ನೋಡಲ್ ಅಧಿಕಾರಿ ಹಣ್ಣಿ ನರೇಶ್ ಸೇವೆಯನ್ನು ಗುರುತಿಸಿ ಸತ್ಕರಿಸಲಾಯಿತು.

ತಾಲೂಕು ಪ್ರೌಢಶಾಲಾ ಮುಖ್ಯ ಗುರುಗಳ ಸಂಘದ ಅಧ್ಯಕ್ಷ ಜಿ.ಎಂ. ಕಾಂತೇಶ್, ತಾಲೂಕು ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಎಂ ಶಿವಲಿಂಗಪ್ಪ ಮಾತನಾಡಿದರು. ತಾಲೂಕು ಪ್ರೌಢಶಾಲಾ ಮುಖ್ಯ ಗುರುಗಳ ಸಂಘದ

ಕಾರ್ಯದರ್ಶಿ ಸುರೇಶ ಅಂಗಡಿ ಕೋಶಾಧ್ಯಕ್ಷ ಎಂ.ಸೂರ್ಯಕಾಂತ್, ತಾಲೂಕು ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ರಾಜ್ಯ ಸಹ ಕಾರ್ಯದರ್ಶಿ ಗಡ್ಡಿ ಶಿವಕುಮಾರ್, ತಾಲೂಕು ಕಾರ್ಯದರ್ಶಿ ಶಿವಬಸವಲಿಂಗ ಸ್ವಾಮಿ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಜಗದೀಶ್ ಬಳ್ಳಾರಿ ಭಡ್ತಿ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಶೇಕ್ ಅಹಮದ್, ಮುಖ್ಯ ಗುರುಗಳಾದ ಎಂ.ಪರಶುರಾಮ, ಪಾಂಡ್ಯನಾಯ್ಕ, ಜಿ ಕವಿತಾ, ಬಿ.ರವೀಂದ್ರನಾಥ, ಧರ್ಮನಾಯ್ಕ್, ಕೆ.ಲಿಂಗಪ್ಪ, ಸಿದ್ದೇಶ್ವರ, ಸಣ್ಣಲಕ್ಕಪ್ಪ, ಟಿ.ಪಿ.ವೀರೇಂದ್ರ, ವೀರೇಶಪ್ಪ, ಯಂಕಾನಾಯ್ಕ, ಕೆ.ಶ್ರೀಕಾಂತ್, ಬನ್ನೆಪ್ಪ ಕೊಳಚಿ, ಕೆ.ಗುರುಬಸವರಾಜ, ಕೆ.ಬಸವರಾಜ, ಎಲ್.ಖಾದರ್ ಬಾಷಾ, ಗಡ್ಡಿ ಆನಂದ ಇತರರು ಇದ್ದರು.

12ನೇ ಶತಮಾನದ ಶರಣರ ಬದುಕು ದಾರಿದೀಪ

ಕೊಟ್ಟೂರು: 12ನೇ ಶತಮಾನದ ಶರಣರ ಜೀವನ, ಸಾಧನೆ ಮತ್ತು ಆದರ್ಶಗಳು ನಮ್ಮ ನಿತ್ಯದ ಬದುಕಿಗೆ ದಾರಿದೀಪಗಳಾಗಿವೆ ಎಂದು ಚಿತ್ರದುರ್ಗ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಕೆ.ಎಂ.ವೀರೇಶ ಹೇಳಿದರು.

ತಾಲೂಕು ಶರಣ ಸಾಹಿತ್ಯ ಪರಿಷತ್ ವತಿಯಿಂದ ನಡೆದ 'ಲಿಂಗೈಕ್ಯ ಎಚ್.ಎಂ.ಅಮೃತ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ಶರಣ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರಸಾರ ಮಾಡುವಲ್ಲಿ ಶರಣ ಸಾಹಿತ್ಯ ಪರಿಷತ್ತು ಹಾಗೂ ನಾಡಿನ ಮಠಮಾನ್ಯಗಳು ಶ್ರಮಿಸುತ್ತಿವೆ. ಇದರ ಉಪಯೋಗವನ್ನು ಜನತೆ ಪಡೆದುಕೊಂಡು ಉತ್ತಮ ಬದುಕನ್ನು ಕಟ್ಟಿಕೊಳ್ಳಬೇಕಿದೆ ಎಂದರು.ವಿಜಯನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಎನ್.ಎಂ.ರವಿಕುಮಾರ್ ಅವರು ಶರಣ ಸಾಹಿತ್ಯ ಪರಿಷತ್ತು ಸಮಾಜ ಸೇವೆಗಾಗಿ ಇರುವ ಸಂಘಟನೆಯಾಗಿದ್ದು, ಇಂದಿನ ಯುವ ಪೀಳಿಗೆ ಶರಣರ ವಚನಗಳನ್ನು ಅರ್ಥೈಸಿಕೊಂಡು, ಶರಣರ ಆದರ್ಶಗಳನ್ನು ಮೈಗೂಡಿಸಿಕೊಂಡಾಗ ಉತ್ತಮ ಸಮಾಜ ನಮ್ಮದಾಗುತ್ತದೆ ಎಂದರು.

ಶರಣ ಸಾಹಿತ್ಯ ಪರಿಷತ್ತು ನಡೆದು ಬಂದ ದಾರಿಯನ್ನು ಪ್ರಾಸ್ತಾವಿಕವಾಗಿ ಟಿ.ಕೆ.ಸಿದ್ದರಾಮೇಶ್ವರ ಮಾತನಾಡಿದರು.

ದತ್ತಿ ದಾಸೋಹಿಗಳಾದ ಡಾ.ಎಚ್.ಎಂ.ಹರೀಶ್ ಪ್ರಾಂಶುಪಾಲರು, ರಶ್ಮಿ ಆಯುರ್ವೇದ ಕಾಲೇಜು ಕೂಡ್ಲಿಗಿ ಹಾಗೂ ಎಚ್.ಎಂ.ಸುರೇಶ್ ಎಂಜಿನಿಯರ್, ಇಂದೋರ್,



ಮಧ್ಯಪ್ರದೇಶ ಅವರು ನಮ್ಮ ತಾಯಿಯವರು ನಮಗೆ ಸುಸಂಸ್ಕೃತ ಜೀವನದ ಆದರ್ಶಗಳನ್ನು ನಮಗೆ ರೂಡಿಸಿದ್ದಾರೆ, ಅವರ ಮಾರ್ಗದರ್ಶನದಲ್ಲಿ ನಾವು ಉತ್ತಮ ಬದುಕು ಕಟ್ಟಿ ಕೊಳ್ಳಲು ಸಾಧ್ಯವಾಗಿದೆ ಎಂದು ಸ್ಮರಿಸಿದರು. ಪ್ರೌಢಶಾಲಾ ಶಿಕ್ಷಕ ಸಿ.ಲೋಕೇಶ 'ಶರಣ ಸಾಹಿತ್ಯ-ಒಂದು ಚಿಂತನೆ' ಕುರಿತು ಉಪನ್ಯಾಸ ನೀಡಿದರು. ಕೊಟ್ಟೂರು ಥಿಯಸಾಫಿಕಲ್ ಲಾಡ್ಜ್ ಕಾರ್ಯದರ್ಶಿ ಜೆ.ಎಂ.ಧನಂಜಯ ಮಾತನಾಡಿದರು. ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ದೇವರ ಮನಿ ಕರಿಯಪ್ಪ, ಖಜಾಂಚಿಗಳಾದ ಅಂಗಡಿ ಚಂದ್ರಣ್ಣ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷ ಎಂ.ಸುಜಾತಾ, ಕಾರ್ಯದರ್ಶಿ ದೇವರಮನಿ ಮಂಗಳ, ಯುವ ಘಟಕದ ಅಧ್ಯಕ್ಷ ಜೆ.ಎಂ. ಸುಧೀಂದ್ರ ಮಾತನಾಡಿದರು. ಜಿ.ಮಲ್ಲಿಕಾರ್ಜುನ, ಜಿ.ಷಡಕ್ಷರಿಗೌಡ, ಜೆ.ಎಂ.ರೇವಣರಾಧ್ಯ, ಬಿ.ಹನುಮಂತಪ್ಪ, ಡಿ.ಕೊಟ್ರೇಶ, ಗಂಡಿ ವಿರೂಪಾಕ್ಷಪ್ಪ, ಟಿ.ಕೊಟ್ರೇಶಪ್ಪ, ಎಚ್.ಪೂರ್ಣಿಮಾ, ಜಲಜಾಕ್ಷಿ, ಪಿ.ಕೊಟ್ರಪ್ಪ, ದೇವೇಂದ್ರಪ್ಪ ಇತರರಿದ್ದರು. ಹೊಂಬಾಳೆ ಮಂಜುನಾಥ್ ನಿರ್ವಹಿಸಿದರು.